ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮುಕ್ತಗಂಗೋತ್ರಿ, ಮೈಸೂರು – ೫೭೦ ೦೦೬

KARNATAKA STATE OPEN UNIVERSITY
Mukthagangotri, Mysore - 570 006

## ಇತಿಹಾಸ

### ಎಂ.ಎ. (ಪ್ರಥಮ)

# ಚೀನಾ – ಜಪಾನ್ ಇತಿಹಾಸ ಹಕ್ಕೊತ್ತಾಯ ಮಿತ್ರ ಆಳ್ವಿಕೆ ಬಾಕ್ಸರ್ ದಂಗೆ ಸನ್‌ಯಾತ್ ಸೇನ್ ಮೆರಿಝ ಪುನರ್ ಸ್ಥಾಪನೆ ಮಂಚೂಕೊ

ಕೋರ್ಸ್ – 5

ಬ್ಲಾಕ್ – 4

# KSOU NATIONAL INTERNATIONAL RECOGNITION

Karnataka State Open University (KSOU) was established on 1st June 1996 with the assent of H.E. Governor of Karnataka as a full fledged University in the Academic year 1996 vide Government notification No./EDI/UOV/dated 12th February 1996 (Karnataka State Open University Act – 1992). The Act was promulgated with the object to incorporate an Open University at the State Level for the introduction and promotion of Open University and Distance Education Systems in the education pattern of the State and the Country for the Co-ordination and determination of standard of such systems.

- With the virtue of KSOU Act of 1992, Karnataka State Open University is empowered to establish, maintain or recognize Institutions, Colleges, Regional Centres and Study Centres at such places in Karnataka and also open outside Karnataka at such places as it deems fit.
- All Academic Programmes offered by Karnataka State Open University are recognized by the Distance Education Council (DEC), Ministry of Human Resource Development (MHRD), New Delhi.
- Karnataka State Open University is a regular member of the Association of Indian Universities (AIU), New Delhi, since 1999.
- Karnataka State Open University is a permanent member of Association of Commonwealth Universities (ACU), London, United Kingdom since 1999. Its member code number: ZKASOPENUINI.
- Karnataka State Open University is a permanent member of Asian Association of Open Universities (AAOU), Beijing, CHINA, since 1999.
- Karnataka State Open University has association with Commonwealth of Learning (COL), Vancouver, CANADA, since 2003. COL is an intergovernmental organization created by commonwealth Heads of Government to encourage the development and sharing of open learning distance education knowledge, resources and technologies.

Higher Education To Everyone Everywhere

ಕರ್ನಾಟಕ ರಾಜ್ಯ ಮುಕ್ತ
ವಿಶ್ವವಿದ್ಯಾನಿಲಯ
ಮಾನಸಗಂಗೋತ್ರಿ,
ಮೈಸೂರು - 570 006

ಎಂ.ಎ. (ಪ್ರಥಮ)
ಇತಿಹಾಸ
ಕೋರ್ಸ್ - 5

# ಬ್ಲಾಕ್
# 4

ಘಟಕ - 143
ಕಮ್ಯುನಿಸ್ಟ್ ಪಕ್ಷದ ಬೆಳವಣಿಗೆ

ಘಟಕ - 144
ಅಂತರ್ಯುದ್ಧ - ಕಾರಣಗಳು ಯುದ್ಧದಗತಿ ಮತ್ತು ಪರಿಣಾಮಗಳು

ಘಟಕ - 145
ಕಮ್ಯುನಿಸ್ಟ್ ಚೀನಾ - ಆಂತರಿಕ ಬೆಳವಣಿಗೆಗಳು

ಘಟಕ - 146
ಕಮ್ಯುನಿಸ್ಟ್ ಚೀನಾದ ವಿದೇಶೀ ಸಂಬಂಧಗಳು

ಘಟಕ - 147
ಭಾರತ - ಚೀನಾ ಸಂಬಂಧಗಳು

## ಪಠ್ಯಕ್ರಮವಿನ್ಯಾಸ ಮತ್ತು ಸಂಪಾದಕ ಮಂಡಳಿ


**ಪ್ರೊ. ಎಂ.ಜಿ. ಕೃಷ್ಣನ್**
ಕುಲಪತಿಗಳು ಮತ್ತು ಅಧ್ಯಕ್ಷರು
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಡಾ. ಎಂ. ಸುಶೀಲ ಅರಸ್
ಪ್ರಾಧ್ಯಾಪಕರು ಹಾಗೂ ಅಧ್ಯಕ್ಷರು
ಇತಿಹಾಸ ಅಧ್ಯಯನ ಮತ್ತು ಸಂಶೋಧನಾ ವಿಭಾಗ
ಕರಾಮುವಿ, ಮೈಸೂರು

ಪ್ರೊ. ಎಸ್. ಎನ್. ವಿಕ್ರಂ ರಾಜೇ ಅರಸ್
ಡೀನ್ (ಶೈಕ್ಷಣಿಕ) ಮತ್ತು ಸಮಾವೇಶಕರು
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

*ವಿಷಯ ಸಂಯೋಜಕರು*


## ಪಠ್ಯಕ್ರಮ ನಿರೂಪಕರು


1. *ಘಟಕ ಬರೆದವರು* — ಘಟಕಗಳು 143 ರಿಂದ 147

ಮೂಲ : ಡಾ. ಆರ್. ಸುಂದರರಾಜನ್
ಇತಿಹಾಸ ಪ್ರಾಧ್ಯಾಪಕರು,
ದೂರಶಿಕ್ಷಣ ನಿರ್ದೇಶನಾಲಯ
ಮಧುರೈ ಕಾಮರಾಜ್ ವಿಶ್ವವಿದ್ಯಾನಿಲಯ
ಮಧುರೈ (ತಮಿಳುನಾಡು).

ಅನುವಾದ : ಶ್ರೀ.ಕೆ.ಬಿ. ಚಂದ್ರ — ಘಟಕಗಳು 143 ರಿಂದ 147
ಇತಿಹಾಸ ಪ್ರಾಧ್ಯಾಪಕರು (ನಿವೃತ್ತ)
ವಿದ್ಯಾನಗರ,
ಹಾಸನ


## ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಶೈಕ್ಷಣಿಕ ವಿಭಾಗದಿಂದ ಸಿದ್ಧಪಡಿಸಲಾಗಿದೆ


ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, 2013

ಎಲ್ಲಾ ಹಕ್ಕುಗಳನ್ನು ಕಾದಿರಿಸಿದೆ. ಅಪ್ಪಣೆ ಇಲ್ಲದೆ ಈ ಕೃತಿಯನ್ನು ಪೂರ್ಣವಾಗಿ ಅಥವಾ ಭಾಗವಾಗಿ ಪುನರ್ ಮುದ್ರಿಸಬಾರದು.



ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕೋರ್ಸುಗಳ ಹೆಚ್ಚಿನ ವಿವರಣೆಗಳಿಗೆ ವಿಶ್ವವಿದ್ಯಾನಿಲಯದ ಕಾರ್ಯಾಲಯ, ಮಾನಸ ಗಂಗೋತ್ರಿ, ಮೈಸೂರು-06 ಇಲ್ಲಿಂದ ಪಡೆಯಬಹುದು.

ಮುದ್ರಕರು ಮತ್ತು ಪ್ರಕಾಶಕರು - ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು ಇವರ ಪರವಾಗಿ ಕುಲಸಚಿವರು (ಆಡಳಿತ)

# ಇತಿಹಾಸ

## ಕೋರ್ಸ್ ೬ - 5

## ಬ್ಲಾಕ್ - 4

### ಪೀಠಿಕೆ

ಆಧುನಿಕದ ಚೀನಾದ ಇತಿಹಾಸದಲ್ಲಿ ಅದರಲ್ಲೂ ವಿಶೇಷವಾಗಿ ಇಪ್ಪತ್ತನೆ ಶತಮಾನದಲ್ಲಿ ಕಮ್ಯುನಿಸ್ಟ್ ಪಕ್ಷದ ಸ್ಥಾಪನೆ, ರಾಜಕೀಯ ಶಕ್ತಿಯಾಗಿ ಅದರ ಬೆಳವಣಿಗೆ, ಕುಮಿಂಟಾಂಗ್‌ನೊಂದಿಗೆ ವಿರಸ, ನಂತರ ಅದರ ವಿರುದ್ಧ ಅಂತರ್ಯುದ್ಧ, ಗೆಲುವು ಹಾಗೂ ಕಮ್ಯುನಿಸ್ಟರ ವಿಜಯದ ನಂತರದ ಇತಿಹಾಸ ಅತ್ಯಂತ ಪ್ರಮುಖವಾದ ಘಟನೆಯಾಗಿದೆ. ಈ ಎಲ್ಲಾ ವಿಚಾರಗಳು ಈ ಬ್ಲಾಕಿನ ವಿಷಯ ವಸ್ತುವಾಗಿದೆ. ಈ ಬ್ಲಾಕ್ ಒಟ್ಟು ಐದು ಘಟಕಗಳನ್ನು ಒಳಗೊಂಡಿದೆ. ಘಟಕ -143 ಕಮ್ಯುನಿಸ್ಟ್ ಪಕ್ಷದ ಸ್ಥಾಪನೆಯಾದ ಸಂದರ್ಭ, ಪಕ್ಷ ಪ್ರಬಲವಾದ ಸಂಘಟನೆಯಾಗಿ ಬೆಳೆಯಲು ಕಾರಣವಾದ ಅಂಶಗಳು ಹಾಗೂ ಪಕ್ಷದ ಧುರೀಣರನ್ನು ನಿಮಗೆ ಪರಿಚಯಿಸುತ್ತದೆ. ಘಟಕ -144 ಕುಮಿಂಟಾಂಗ್ ಮತ್ತು ಕಮ್ಯುನಿಸ್ಟರ ನಡುವಣ ಪ್ರಾರಂಭದ ಸಂಬಂಧಗಳು, ನಂತರದ ವಿರಸ ಹಾಗೂ ಅಂತಿಮವಾಗಿ ಅಧಿಕಾರಕ್ಕೋಸ್ಕರ ನಡೆದ ಅಂತರ್ಯುದ್ಧ ಇವುಗಳನ್ನು ವಿಶ್ಲೇಷಿಸುತ್ತದೆ. ಘಟಕ -145 ಚೀನಾದಲ್ಲಿ ಕಮ್ಯುನಿಸ್ಟರ ಆಳ್ವಿಕೆಯ ಸ್ಥಾಪನೆಯಾದ ನಂತರ, ಚೀನಾದಲ್ಲಾದ ಬದಲಾವಣೆ, ಅದರಲ್ಲೂ ವಿಶೇಷವಾಗಿ ರಾಜಕೀಯ ಹಾಗೂ ಆರ್ಥಿಕ ಬದಲಾವಣೆಗಳನ್ನು ಕುರಿತಂತೆ ನಿಮಗೆ ಮಾಹಿತಿಯನ್ನು ಒದಗಿಸುತ್ತದೆ. ಘಟಕ - 146 ಕಮ್ಯುನಿಸ್ಟ್ ಚೀನಾ ಪ್ರಪಂಚದ ಇತರ ರಾಷ್ಟ್ರಗಳೊಂದಿಗೆ ಸ್ಥಾಪಿಸಿದ ಸಂಬಂಧಗಳನ್ನು ಕುರಿತಾಗಿದೆ. ಎರಡನೇ ಮಹಾಯುದ್ಧದ ನಂತರ ಶೀತಲ ಯುದ್ಧದಲ್ಲಿ ಪ್ರಬಲ ರಾಷ್ಟ್ರಗಳಾದ ಅಮೆರಿಕಾ ಹಾಗೂ ರಷ್ಯಾದೊಂದಿಗಿನ ಸಂಬಂಧಗಳು, ಏಷ್ಯಾದ ಇತರ ರಾಷ್ಟ್ರಗಳೊಂದಿಗಿನ ಸಂಬಂಧಗಳು ಇತ್ಯಾದಿಗಳ ಬಗೆಗೆ ನಿಮಗೆ ಅರಿವನ್ನು ಮೂಡಿಸುತ್ತದೆ. ಭಾರತ ಏಷ್ಯಾದ ಪ್ರಬಲ ರಾಷ್ಟ್ರಗಳಲ್ಲಿ ಒಂದಾಗಿದೆ ಹಾಗೂ ಚೀನಾದೊಂದಿಗೆ ಸಾಮಾನ್ಯ ಗಡಿಯನ್ನು ಹೊಂದಿದೆ. ಆದುದರಿಂದ ಭಾರತ ಮತ್ತು ಚೀನಾಗಳ ನಡುವೆ ಇರುವ ಸಂಬಂಧಗಳು, ಏಷ್ಯಾದ ರಾಜಕಾರಣದಲ್ಲಿ ಪ್ರಮುಖ ಸ್ಥಾನವನ್ನು ಹೊಂದಿದೆ. ಈ ಭಾರತ -ಚೀನಾ ಸಂಬಂಧದ ವಿವಿಧ ಆಯಾಮಾಗಳನ್ನು ನೀವು ಘಟಕ - 147 ರಲ್ಲಿ ಅಧ್ಯಯನ ಮಾಡುವಿರಿ.

ಅಧ್ಯಕ್ಷರು,
ಇತಿಹಾಸ ಅಧ್ಯಯನ ಮತ್ತು ಸಂಶೋಧನಾ ವಿಭಾಗ
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ,
ಮಾನಸ ಗಂಗೋತ್ರಿ, ಮೈಸೂರು.

# ಘಟಕ - 143

## ಕಮ್ಯುನಿಸ್ಟ್ ಪಕ್ಷದ ಬೆಳವಣಿಗೆ

143.0 ಉದ್ದೇಶಗಳು

143.1 ಪೀಠಿಕೆ

143.2 ಚೀನೀ ಕಮ್ಯುನಿಸ್ಟ್ ಪಕ್ಷದ ಸ್ಥಾಪನೆ

143.2.1 ಪ್ರಾರಂಭದ ಮುಖಂಡರು

143.2.2 ರಷ್ಯಾದ ನೆರವು

143.3 ಷಾಂಗೈ ದುರಂತ

143.3.1 ಷಾಂಗೈನಲ್ಲಿ ಕಮ್ಯುನಿಸ್ಟರ ಹತ್ಯೆ

143.3.2 ರಷ್ಯಾದೊಂದಿಗೆ ಮುರಿದು ಬಿದ್ದ ಕುಮಿಂಟಾಂಗ್ ಪಕ್ಷದ ಸಂಬಂಧ

143.3.3 ಕಮ್ಯುನಿಸ್ಟರಿಗೆ ಹಿನ್ನಡೆ

143.3.4 ನಾನ್‌ಚಾಂಗ್ ಚೀನೀ ಸೇನಾಪಡೆಯ ದಂಗೆ

143.4 ಕಮ್ಯುನಿಸ್ಟರ ವಿರುದ್ಧ ಐದು ಕ್ರಮಗಳು

143.5 ಕಿಯಾಂಗ್ಸಿಯನ್ನು ತ್ಯಜಿಸಲು ನಿರ್ಧಾರ

143.6 ದೂರದ ಪ್ರಯಾಣ

143.6.1 ಕಷ್ಟಗಳ ಸರಮಾಲೆ

143.7 ಆಂತರಿಕ ಶಾಂತಿ ಒಪ್ಪಂದದ ಕಾಲ

143.8 ಕಮ್ಯುನಿಸ್ಟರ ಕೊಡುಗೆ

143.8.1 ಮುರಿದು ಬಿದ್ದ ಕುಮಿಂಟಾಂಗ್ ಮತ್ತು ಕಮ್ಯುನಿಸ್ಟ್ ಮೈತ್ರಿ

143.8.2 ಆಗ್ನೇಯ ಪ್ರದೇಶಗಳಿಗೆ ಕಮ್ಯುನಿಸ್ಟರ ಮುನ್ನಡೆ

143.8.3 ಹದಗೆಟ್ಟ ಸಂಬಂಧಗಳು

143.9 ಮಾರುವೇಶದ ಒಂದು ಅನುಗ್ರಹ (ಆಶೀರ್ವಾದ)

143.9.1 ಜಪಾನೀ ವಿರೋಧಿ ಹೋರಾಟ

143.9.2 ಅಮೆರಿಕಾದ ರಾಜಿ ಪ್ರಯತ್ನ

143.9.3 ಜಪಾನಿನ ಶರಣಾಗತಿಯಿಂದ ಉದ್ಭವಿಸಿದ ಸಮಸ್ಯೆಗಳು

143.10 ಕಮ್ಯುನಿಸ್ಟರ ವಿಜಯ

143.11 ಚೀನಾದ ಜನತಾ ಗಣರಾಜ್ಯ

143.12 ಮುಕ್ತಾಯ

143.13 ಮಾದರಿ ಪ್ರಶ್ನೆಗಳು

143.14 ಹೆಚ್ಚಿನ ಅಧ್ಯಯನಕ್ಕೆ ಪುಸ್ತಕಗಳು (ಗ್ರಂಥಗಳು)

## 143.0 ಉದ್ದೇಶಗಳು

ಈ ಘಟಕದ ಅಧ್ಯಯನವು ನಿಮಗೆ ಕೆಳಗಿನ ಅಂಶಗಳನ್ನು ತಿಳಿದುಕೊಳ್ಳಲು ಸಹಾಯವಾಗಿದೆ.

1. ಕಮ್ಯುನಿಸ್ಟ್ ಪಕ್ಷದ ಮೂಲ ಮತ್ತು ಸ್ಥಾಪನೆ
2. ಪ್ರಾಬಲ್ಯಕ್ಕಾಗಿ ಕಮ್ಯುನಿಸ್ಟರು ಮತ್ತು ಚಿಯಾಂಗ್ ಕೈಶೆಕ್ ನಾಯಕತ್ವದ ಕುಮಿಂಟಾಂಗ್ ಪಕ್ಷಗಳ ನಡುವೆ ಪೈಪೋಟಿ
3. ಚೀನಾದಲ್ಲಿ ಜಪಾನಿನ ವಿಸ್ತರಣೆಯ ಪರಿಣಾಮವಾಗಿ ವಿರೋಧಿಗಳ ನಡುವೆ ಒಡಕು ಮತ್ತು ಜಪಾನನ್ನು ಹೊಡೆದೋಡಿಸಲು ಕಮ್ಯುನಿಸ್ಟರ ಕ್ರಮಗಳು, ಕಮ್ಯೂನಿಸ್ಟರಿಗೆ ಗ್ರಾಮಾಂತರ ಚೀನೀಯರ ಅನುಕಂಪದ ಲಾಭ
4. ಷಾಂಗೈಗೆ ಕಮ್ಯುನಿಸ್ಟರ ದೂರದ ಪ್ರಯಾಣ ಮತ್ತು ಕುಮಿಂಟಾಂಗ್ ಸೇನೆಯ ದೌರ್ಜನ್ಯಗಳಿಂದ ಕಮ್ಯುನಿಸ್ಟ್‌ರಿಗಾದ ಕಹಿ ಅನುಭವಗಳು
5. ಜಪಾನಿನ ಶರಣಾಗತಿಯಿಂದ ಚೀನಾದಲ್ಲಿ ಉಂಟಾದ ರಾಜಕೀಯ ಶೂನ್ಯತೆ ಮತ್ತು ಅಧಿಕಾರಕ್ಕಾಗಿ ಕುಮಿಂಟಾಂಗ್ ಮತ್ತು ಕಮ್ಯುನಿಸ್ಟ್ ಪಕ್ಷಗಳ ನಡುವೆ ನಡೆದ ನಂತರದ ಹೋರಾಟ
6. ಕಮ್ಯುನಿಸ್ಟರ ಅಂತಿಮ ವಿಜಯದ ಪರಿಣಾಮವಾಗಿ ಚೀನಾದ ಜನತಾ ಗಣರಾಜ್ಯದ ಘೋಷಣೆ

## 143.1 ಪೀಠಿಕೆ

ಕಮ್ಯುನಿಸ್ಟ್ ಸಿದ್ಧಾಂತದ ಮೂಲ ಬೆಳವಣಿಗೆ ಮತ್ತು ಪ್ರಾಬಲ್ಯ ಆಧುನಿಕ ಚೀನಾದ ಇತಿಹಾಸದ ಅತ್ಯಂತ ಆಕರ್ಶಕ ಅಧ್ಯಾಯವಾಗಿದೆ. ಚೀನಾ ಈಗ ಸಂಪೂರ್ಣವಾಗಿ ಕೆಂಪಾಗಿದೆ ಮತ್ತು ಆಧುನಿಕ ಪ್ರಪಂಚದ ಬಲಿಷ್ಠ ದೇಶಗಳಲ್ಲಿ ಒಂದಾಗಿದೆ.

1921 ರಲ್ಲಿ ಸ್ಥಾಪಿತವಾದರೂ ಚೀನಾದ ಕಮ್ಯುನಿಸ್ಟ್ ಪಕ್ಷ ಒಂದು ಸಂಘಟಿತ ರಾಜಕೀಯ ಪಕ್ಷವಾಗಿತ್ತು. ಸ್ವಲ್ಪ ಕಾಲಕ್ಕೆ ಮೊದಲು ಅದು ಸಾಮಾನ್ಯವಾಗಿಯೇ ಆರಂಭವಾಯಿತು. ಈ ದಿಸೆಯಲ್ಲಿ ನಡೆದ ಮೊದಲ ಪ್ರಯತ್ನವನ್ನು 1918 ರಲ್ಲಿ ಪೀಕಿಂಗ್‌ನಲ್ಲಿ ಸ್ಥಾಪಿಸಲಾದ ಕಾರ್ಲ್ ಮಾರ್ಕ್ಸ್‌ನ ಬೌದ್ಧಿಕ ಅಧ್ಯಯನ ಕೇಂದ್ರದೊಂದಿಗೆ ಗುರುತಿಸಬಹುದು.

ಪ್ರೊ. ಲಿ.ತಾ-ಚೊ ಪೀಕಿಂಗ್ ರಾಷ್ಟ್ರೀಯ ವಿಶ್ವವಿದ್ಯಾನಿಲಯದ ಗ್ರಂಥಪಾಲಕ ಮತ್ತು ಪ್ರಾಧ್ಯಾಪಕನಾಗಿದ್ದನು. ಅವನು 1918 ರಲ್ಲಿ ಮಾರ್ಕ್ಸ್‌ನ ಸಂಶೋಧನಾ ಸಮಾಜವನ್ನು ಸ್ಥಾಪಿಸಿದನು. ಅನೇಕ ಬುದ್ಧಿಜೀವಿಗಳು ಆಗಿಂದಾಗ್ಗೆ ಭೇಟಿಯಾಗಿ ಮಾರ್ಕ್ಸ್‌ನ ಸಿದ್ಧಾಂತದ ಮೂಲಭೂತ ತತ್ವಗಳನ್ನು ಚರ್ಚಿಸುತ್ತಿದ್ದರು. ದುರದೃಷ್ಟವಶಾತ್ ಮಂಚೂರಿಯಾದ ದಂಡನಾಯಕ ಚಾಂಗ್ ತ್ಸೊ ಲಿನ್ 1927 ರಲ್ಲಿ ಅವನಿಗೆ ಮರಣದಂಡನೆಯನ್ನು ವಿಧಿಸಿದನು. ಲಿ ಬಹಳ ಕಾಲ ಬದುಕದಿದ್ದರೂ ಅವನಿಗೆ ಒಬ್ಬ ವ್ಯಕ್ತಿ ಅತ್ಯಂತ ನಿಕಟವಾಗಿದ್ದನು. ಅವನ ಕೈಕೆಳಗೆ ಗ್ರಂಥಾಲಯ ಸಹಾಯಕನಾಗಿ ಕೆಲಸ ಮಾಡುತ್ತಿದ್ದ ಮಾವೋತ್ಸೇತುಂಗನೇ ಅವನು.

## 143.2 ಚೀನಾದ ಚೀನೀ ಕಮ್ಯುನಿಸ್ಟ್ ಪಕ್ಷದ ಸ್ಥಾಪನೆ

ಚೀನಾದ ಕಮ್ಯುನಿಸ್ಟ್ ಪಕ್ಷವನ್ನು 1921 ರಲ್ಲಿ ಸ್ಥಾಪಿಸಲಾಯಿತು. ಜುಲೈ 1921 ರಲ್ಲಿ ಷಾಂಗೈನಲ್ಲಿ ಗುಪ್ತವಾಗಿ ನಡೆದ ಅದರ ಮೊದಲ ಸಭೆಯವರೆಗೂ ಚೀನೀ ಕಮ್ಯುನಿಸ್ಟ್ ಪಕ್ಷ ಒಂದು ಸಂಘಟಿತ ಸಂಸ್ಥೆಯಾಗಿರಲಿಲ್ಲ.

### *143.2.1 ಪ್ರಾರಂಭದ ಮುಖಂಡರು*

ಕಮ್ಯುನಿಸ್ಟ್ ಪಕ್ಷದ ಮೊದಲ ಸಭೆಯು ಪಕ್ಷದಲ್ಲಿ ಎರಡು ಗುಂಪುಗಳಿದ್ದುದನ್ನು ಹೊರಗೆಡವಿತು. ಒಂದು ಗುಂಪು ಫ್ರಾನ್ಸಿನಲ್ಲಿ ತನ್ನ ಚಟುವಟಿಕೆಗಳನ್ನು ಪ್ರಾರಂಭಿಸಿದರೆ ಮತ್ತೊಂದು ಗುಂಪು ಚೀನಾದಲ್ಲಿಯೇ ತನ್ನ ಕೆಲಸವನ್ನು ಆರಂಭಿಸಿತ್ತು. ಪಕ್ಷದ ಮೊದಲ ಮುಖಂಡ ಚೆನ್ ತು ಸಿ ಪೀಕಿಂಗ್ ರಾಷ್ಟ್ರೀಯ ವಿಶ್ವವಿದ್ಯಾನಿಲಯದ ಪ್ರಸಿದ್ಧ ಪ್ರಾಧ್ಯಾಪಕನಾಗಿದ್ದನು. ಚೆನ್‌ನ ವಿಶ್ವವಿದ್ಯಾನಿಲಯದಲ್ಲಿ ಆ ವೇಳೆಗೆ ಗ್ರಂಥಾಲಯ ಸಹಾಯಕನಾಗಿದ್ದ ಮಾವೋತ್ಸೇತುಂಗ್ ಕಮ್ಯುನಿಸ್ಟ್ ಪಕ್ಷದ ಸ್ಥಾಪಕರಲ್ಲಿ ಒಬ್ಬನು. ಚೌ ಎನ್ ಲಾಯ್

ಪಕ್ಷದ ಪ್ಯಾರಿಸ್ ಗುಂಪಿನ ನಾಯಕನಾಗಿದ್ದನು. ಈ ಮುಖಂಡರ ಹಿನ್ನೆಲೆ ಭಿನ್ನವಾದುದು. ಚೆನ್ ಒಬ್ಬ ಬುದ್ಧಿಜೀವಿ. ಚೌ ಎನ್ ಲಾಯ್ ಸೆಚುವಾನ್‌ನ ಭೂಮಾಲೀಕ ಮತ್ತು ಸೈನಿಕನ ಮಗನಾಗಿದ್ದರೆ ಮಾವೊ ರೈತನ ಮಗನಾಗಿದ್ದನು. ಕಮ್ಯುನಿಸ್ಟ್ ಪಕ್ಷದ ಮೊದಲ ಸಭೆ ಚೀನೀ ಅಧಿಕಾರಿಗಳ ಗಮನಕ್ಕೆ ಬರದೆ ಷಾಂಗೈನಲ್ಲಿ ಅತ್ಯಂತ ರಹಸ್ಯವಾಗಿ ನಡೆಯಿತು. ಕಡೆಗೆ ಸಭೆಗೆ ಬಂದ ಪ್ರತಿನಿಧಿಗಳು ಪೋಲೀಸರ ಗಮವನ್ನು ಸೆಳೆದರು. ಹೆಚ್ಚಿನ ಸುರಕ್ಷತೆಯ ದೃಷ್ಟಿಯಿಂದ ಕಡೆಯ ಅಧಿವೇಶನವನ್ನು ಚೇಕಿಯಾಂಗ್ ಪ್ರಾಂತದ ಚಿಯಾಶಿಂಗ್‌ಗೆ ಸಮೀಪದ ದಕ್ಷಿಣ ಸರೋವರದ ದೋಣಿಯೊಂದರ ಮೇಲೆ ನಡೆಸಲು ತೀರ್ಮಾನಿಸಲಾಯಿತು.

### *143.2.2 ರಷ್ಯಾದ ನೆರವು*

ಯುವಾನ್ ಷಿಕಾಯ್‌ನ ಮರಣದ ನಂತರ ಡಾ. ಸನ್‌ಯಾತ್ ಸೇನ್‌ರು ಪ್ರತಿಗಾಮಿ ಶಕ್ತಿಗಳು ಮತ್ತು ಸೈನಿಕ ನಾಯಕರ ವಿರುದ್ಧ ಅತ್ಯಂತ ಕಠಿಣವಾದ ಹೋರಾಟವನ್ನು ನಡೆಸಬೇಕಾಯಿತು. ಅವರು ಅನೇಕ ಪ್ರಜಾಪ್ರಭುತ್ವ ರಾಷ್ಟ್ರಗಳನ್ನು ಸಂಪರ್ಕಿಸಿದರು. ಆದರೆ ಅವುಗಳಲ್ಲಿ ಯಾವುದೂ ಅವನ ರಕ್ಷಣೆಗೆ ಬರಲಿಲ್ಲ. ಸೋವಿಯತ್ ಒಕ್ಕೂಟ ಮಾತ್ರವೇ ಸನ್‌ಯಾತ್‌ಸೇನ್‌ಗೆ ನೆರವನ್ನು ನೀಡಿತು. ಅವರು ಮೊದಲು ಪ್ರಜ್ಞಾಪೂರ್ವಕವಾಗಿ ಕಮ್ಯುನಿಸ್ಟ್ ಸಿದ್ಧಾಂತದ ಕಡೆಗೆ ಒಲಲಿಲ್ಲ. ಬದಲಾಗಿ ರಷ್ಯಾದ ನೆರವು, ಪ್ರೋತ್ಸಾಹ, ಅನುಕಂಪ ಮತ್ತು ಸಮಾನವಾಗಿ ಕಂಡುದರಿಂದ 1921 ರಲ್ಲಿ ಸನ್‌ಯಾತ್‌ಸೇನ್ ಶಾಂಗೈನಲ್ಲಿ ಜೋಫ್ಪೆಯನ್ನು ಭೇಟಿ ಮಾಡಿದರು. ಈ ಸಮ್ಮೇಳನ ಒಪ್ಪಂದವೊಂದರೊಂದಿಗೆ ಕೊನೆಗೊಂಡಿತು. ಸನ್‌ಯಾತ್‌ಸೇನ್‌ರು ಕುಮಿಂಟಾಂಗ್ ಅಥವಾ ರಾಷ್ಟ್ರೀಯ ಪಕ್ಷವೆಂದು ಪುನರ್ ನಾಮಕರಣ ಮಾಡಲಾಗಿದ್ದ ತಮ್ಮ ಪಕ್ಷದ ಹೆಸರಿನಲ್ಲಿ ರಷ್ಯಾದ ನೆರವು ಮತ್ತು ಇನ್ನೂ ಬಾಲ್ಯಾವಸ್ಥೆಯಲ್ಲಿದ್ದ ಚೀನಾದ ಕಮ್ಯುನಿಸ್ಟ್ ಪಕ್ಷ ಮೈತ್ರಿಯನ್ನು ಒಪ್ಪಿಕೊಂಡರು. ಕುಮಿಂಟಾಂಗ್ ಪಕ್ಷವು ಕಮ್ಯುನಿಸ್ಟರನ್ನು ಅವರವರ ವೈಯುಕ್ತಿಕ ಸಾಮರ್ಥ್ಯದ ಮೇಲೆ ತನ್ನ ಸದಸ್ಯರನ್ನಾಗಿ ಸೇರಿಸಿಕೊಳ್ಳಲು ಒಪ್ಪಿತು. ಕಮ್ಯುನಿಸ್ಟರು ತಮಗೆ ದೊರೆತ ಅವಕಾಶವನ್ನು ಸದುಪಯೋಗಿಸಿಕೊಂಡರು ಮತ್ತು ಚೀನಾದ ಅನೇಕ ಭಾಗಗಳು ಮತ್ತು ವಲಯಗಳಲ್ಲಿ ತಮ್ಮ ಪ್ರಭಾವವನ್ನು ವಿಸ್ತರಿಸುವಲ್ಲಿ ಯಶಸ್ವಿಯಾದರು.

*ಷಾಂಗೈ ಘಟನೆ*

ಮೇ, 30, 1925 ರಂದು ಷಾಂಗೈನಲ್ಲಿ ಒಂದು ವಿದ್ಯಾರ್ಥಿ ಪ್ರದರ್ಶನವಿತ್ತು. ಪೋಲೀಸರ ನಿರ್ಧಯವಾದ ಗೋಲಿಬಾರ್‌ನಲ್ಲಿ ಕೆಲವರು ತೀವ್ರವಾಗಿ ಗಾಯಗೊಂಡರು. ಘಟನೆಗೆ ದೇಶವ್ಯಾಪಿ ಪ್ರತಿಭಟನೆ ವ್ಯಕ್ತವಾಯಿತು. ಚೀನಾದ ಕಮ್ಯುನಿಸ್ಟರು ಈ ವಿರೋಧಿ ಆವೇಶವನ್ನು ಸದುಪಯೋಗಪಡಿಸಿಕೊಂಡರು. ನಗರದ ಒಂದು ಭಾಗ ವಿದೇಶೀಯರ ವಶದಲ್ಲಿದ್ದ ಚೀನಾದ ಪಡೆಗಳು ಶಾಂಗೈ ಕಡೆಗೆ ಮುನ್ನುಗ್ಗಿದವು. ಚೀನಾದ ಕಮ್ಯುನಿಸ್ಟರು ಚೌ ಎನ್ ಲಾಯ್ ನಾಯಕತ್ವದಲ್ಲಿ ಚೀನಾದ ಈ ಭಾಗವನ್ನು ವಶಪಡಿಸಿಕೊಂಡರು.

## 143.3 ಷಾಂಗೈ ದುರಂತ

### *143.3.1 ಷಾಂಗೈನಲ್ಲಿ ಕಮ್ಯುನಿಸ್ಟರ ಅಮಾನುಷ ಹತ್ಯೆ*

ಈ ಘಟನೆಯ ನಂತರ ಕುಮಿಂಟಾಂಗ್ ಪಕ್ಷದ ನಾಯಕನಾಗಿದ್ದ ಜನರಲ್ ಚಿಯಾಂಗ್ ಕೈ ಷೆಕ್ ಕಮ್ಯುನಿಸ್ಟರ ವಿರುದ್ಧ ಆಕ್ರಮಣವನ್ನು ಆರಂಭಿಸಿದನು. ಚಿಯಾಂಗ್ ಕೈ ಷೆಕ್‌ನ ದಂಡನಾಯಕತ್ವದಲ್ಲಿ ರಾಷ್ಟ್ರೀಯ ಸೇನೆ ಮಾರ್ಚ್ 22, 1927 ರಂದು ಷಾಂಗೈ ಕಡೆಗೆ ಹೊರಟಿತು.

ಈ ವೇಳೆಗೆ ಷಾಂಗೈ ನಗರದಲ್ಲಿ ಜನತಾ ಸಮಿತಿಯ ಹತೋಟಿಯಲ್ಲಿತ್ತು. ಚಿಯಾಂಗ್ ಕೈ ಷೆಕ್‌ನು ಕ್ರಮೇಣ ಮತ್ತು ವ್ಯವಸ್ಥಿತವಾಗಿ ಕಮ್ಯುನಿಸ್ಟ್ ನಾಯಕರಲ್ಲಿ ಒಡಕುಂಟುಮಾಡಿದನು. ಅವನು ಷಾಂಗೈನ ಮೇಲ್ವರ್ಗದ ರೈತರು, ವರ್ತಕರು ಮತ್ತು ಕೈಗಾರಿಕೋದ್ಯಮಿಗಳನ್ನು ತನ್ನ ಕಡೆಗೆ ಒಲಿಸಿಕೊಂಡನು. "ಹೀಗೆ ಎಲ್ಲಾ ವಿಧದಿಂದಲೂ ಬಲವನ್ನು ಪಡೆದು ಹೆಚ್ಚಿಸಿಕೊಂಡು ಚಿಯಾಂಗ್ ಕೈ ಷೆಕ್ ಆಕ್ರಮಣಕ್ಕೆ ಕೈ ಹಾಕಿದನು. ಕಾರ್ಮಿಕ ಸಂಘ ಚಳುವಳಿ ಅಥವಾ ಪ್ರದರ್ಶನಗಳನ್ನು ಸಂಘಟಿಸುವುದಕ್ಕಾಗಿ ನಿಷೇಧಿಸಲಾಯಿತು. ಷಾಂಗೈನ ಕಾರ್ಮಿಕರ ಸೇನೆಯನ್ನು ನಿಶ್ಶಸ್ತ್ರಗೊಳಿಸಲಾಯಿತು. ಇದನ್ನು ಪ್ರತಿಭಟಿಸಿ ಕಾರ್ಮಿಕ ಸಂಘಗಳ ಸಾಮಾನ್ಯ ಸಮಿತಿಯು ದೇಶದಾದ್ಯಂತ ಚಳುವಳಿಗೆ ಕರೆ ನೀಡಿತು. ದಮನಕಾರಿ ಕ್ರಮಗಳ ವಿರುದ್ಧ ಪ್ರತಿಭಟನೆ ನಡೆಸಲು ಅದು ಚಿಯಾಂಗ್ ಕೈ ಷೆಕ್‌ನ ಕೇಂದ್ರ ಸ್ಥಾನಕ್ಕೆ ನಿಯೋಗವನ್ನು ಕಳುಹಿಸಿತು. ನಿಯೋಗದ ಮೇಲೆ ಗುಂಡು ಹಾರಿಸಲಾಯಿತು. ಸಾಮಾನ್ಯ ಸಮಿತಿಯನ್ನು ನ್ಯಾಯಬಾಹಿರ ಸಂಘವೆಂದು ಘೋಷಿಸಲಾಯಿತು. ಅದು ಒಂದು ಉಗ್ರ ಆಕ್ರಮಣದ ಸೂಚನೆಯಾಗಿದ್ದು ಅದರಲ್ಲಿ ನೂರಾರು ಕ್ರಾಂತಿಕಾರಿ ಕಾರ್ಮಿಕರನ್ನು ಅಮಾನುಷವಾಗಿ ಕೊಲ್ಲಲಾಯಿತು".

ಪ್ರಾಣಾಪಾಯದಿಂದ ಸ್ವಲ್ಪದಲ್ಲೇ ವ್ಯಕ್ತಿಗಳಲ್ಲಿ ಚೌ ಎನ್ ಲಾಯ್ ಒಬ್ಬನು. ಡೇವಿಡ್ ಬರ್ಗ್‌ಮನಿ ಬರೆಯುವಂತೆ "ಹೊಸ ಕಮ್ಯುನಿಸ್ಟ್ ನಗರಾಧ್ಯಕ್ಷ ಚೌ ಎನ್ ಲಾಯ್ ತಲೆ ತಪ್ಪಿಸಿಕೊಂಡನು. ಚಿಯಾಂಗನು ಚೀನಾದ ನಗರದ ನಗರಾಡಳಿತ ಸರ್ಕಾರವನ್ನು ವಶಪಡಿಸಿಕೊಂಡನು. ಏಪ್ರಿಲ್ 12, 1927 ರಲ್ಲಿ ಅವನ ಪಡೆಗಳು ಎಲ್ಲಾ ಕಮ್ಯುನಿಸ್ಟ್‌ರನ್ನು ಬೇಟಿ ಮಾಡಿದವು. ಅದು ಮಧ್ಯಾಹ್ನ ಸಾರ್ವಜನಿಕ ಚೌಕದಲ್ಲಿ 5000 ಕಮ್ಯುನಿಸ್ಟರ ತಲೆಕತ್ತರಿಸಲಾಯಿತು. ಚೌ ಎನ್ ಲಾಯ್ ಬಲೆಯಿಂದ ತಪ್ಪಿಸಿಕೊಂಡು ಪಾರಾದನು".

### *143.3.2 ಸೋವಿಯತ್ ರಷ್ಯಾದೊಂದಿಗೆ ಕುಮಿಂಟಾಂಗ್ ಸಂಬಂಧದ ಕಡಿತ*

ರಷ್ಯಾದೊಂದಿಗೆ ರಾಜತಾಂತ್ರಿಕ ಸಂಬಂಧಗಳನ್ನು ಕಡಿದು ಹಾಕಿದುದು ಕುಮಿಂಟಾಂಗ್ ಪಕ್ಷ ಕೈಗೊಂಡ ಮತ್ತೊಂದು ಕ್ರಮವಾಗಿತ್ತು. ತಕ್ಷಣವೇ ಒಂದು ನೆಪ ಸಿಕ್ಕಿತು. ರಷ್ಯಾದ ರಾಯಭಾರ ಕಛೇರಿಯ ಮೇಲೆ ಒಂದು ದಾಳಿಯನ್ನು ನಡೆಸಲಾಯಿತು ಮತ್ತು ಸೋವಿಯತ್ ರಷ್ಯ ಚೀನಾದಲ್ಲಿ ಕಮ್ಯುನಿಸ್ಟ್ ಪಿತೂರಿಯನ್ನು ವ್ಯವಸ್ಥೆಗೊಳಿಸುತ್ತಿದೆಯೆಂದು ಆಪಾದಿಸಲಾಯಿತು. ರಾಷ್ಟ್ರೀಯವಾದಿಗಳನ್ನು (ಕುಮಿಂಟಾಂಗ್ ಸರ್ಕಾರ) ಅಧಿಕಾರದಿಂದ ಇಳಿಸಲು ಸೋವಿಯತ್ ರಷ್ಯ ಕಮ್ಯುನಿಸ್ಟರಿಗೆ ಬೆಂಬಲ ನೀಡುತ್ತಿದೆ ಎಂಬುದನ್ನು ಸಮರ್ಥಿಸಲು ಸಾಕ್ಷಿಯ ಹುಡುಕಾಟ ಇದಾಗಿತ್ತು. ಆದರೆ ಸುಳ್ಳು ದಾಖಲೆಗಳನ್ನು ಸೃಷ್ಟಿಸಿದ್ದುದು ದೃಢಪಟ್ಟಿತು. ಹೀಗೆ ಜನರಲ್ ಚಿಯಾಂಗ್ ಕೈ ಷೆಕ್‌ನು ಚೀನಾದ ಕಮ್ಯುನಿಸ್ಟ್ ಪಕ್ಷವನ್ನು ಬಹಿಷ್ಕರಿಸಿದನು. ಅನೇಕ ಸಾವಿರ ಚೀನೀ ಕಮ್ಯುನಿಸ್ಟರನ್ನು ಸಾರ್ವಜನಿಕವಾಗಿ ನೇಣು ಹಾಕಲಾಯಿತು. ಸಿ.ಪಿ. ಫ್ರಿಟ್ಜರಾಲ್ಡ್ ಹೇಳಿಕೆಯಂತೆ "ಕಮ್ಯುನಿಸ್ಟ್ ಪಕ್ಷವನ್ನು ನಾಶಪಡಿಸಲಾಯಿತು. ಅಧಿಕಾರದಿಂದ ಹೊರಗಟ್ಟಿ ಬಹಿಷ್ಕರಿಸಲಾಯಿತು. ರಷ್ಯಾದ ಸಲಹೆಗಾರರನ್ನು ಮಾಸ್ಕೋಗೆ ಹಿಂದಕ್ಕೆ ಕಳುಹಿಸಲಾಯಿತು".

### *143.3.3 ಕಮ್ಯುನಿಸ್ಟರಿಗೆ ಹಿನ್ನಡೆ*

ಹೀಗೆ ಕಮ್ಯುನಿಸ್ಟರಿಗೆ ತೀವ್ರವಾದ ಹಿನ್ನಡೆಯುಂಟಾಯಿತು. ಇದರಿಂದ ಚೀನಾದಲ್ಲಿ ಕಮ್ಯುನಿಸ್ಟ್ ಸಿದ್ಧಾಂತಕ್ಕೆ ಪ್ರಾಣಾಂತಕ ಹೊಡೆತವಾದಂತೆ ಕಂಡು ಬಂದಿತು. ಆದರೆ ಈ ಹಿನ್ನಡೆ ತಾತ್ಕಾಲಿಕವಾಗಿತ್ತು. ಸಿ.ಪಿ. ಫ್ರಿಟ್ಜರಾಲ್ಡ್ ಬರೆಯುವಂತೆ ತುಳಿತಕ್ಕೊಳಗಾದ ರೈತರು ಕಮ್ಯುನಿಸ್ಟ್ ಪಕ್ಷಕ್ಕೆ ಬೆಂಬಲ ನೀಡಿದರು. ಕುಮಿಂಟಾಂಗ್ ಪಕ್ಷಕ್ಕೆ ಸಂಪೂರ್ಣ ಸಹಕಾರ ನೀಡುವಂತೆ ರಷ್ಯ ಕಮ್ಯುನಿಸ್ಟ್ ಪಕ್ಷಕ್ಕೆ ಸಲಹೆ ಮಾಡುತ್ತಾ ಬಂದಿದ್ದಿತು. ಆದರೆ ಚಿಯಾಂಗ್ ಕೈ ಷೆಕ್ ಕಮ್ಯುನಿಸ್ಟರ ಮೇಲೆ ಭಯಾನಕ ದೌರ್ಜನ್ಯವನ್ನು ಎಸಗಿದ್ರಿಂದ ರಷ್ಯನ್ನರು ಆಘಾತಗೊಂಡರು ಮತ್ತು ಒತ್ತಾಯಪೂರ್ವಕವಾಗಿ ತಮ್ಮ ನೀತಿಯನ್ನು ಬದಲಾಯಿಸಿದರು.

### *143.3.4 ನಾನ್‌ಚಂಗ್ ಚೀನೀ ಸೇನೆಯ ದಂಗೆ*

ಕಮ್ಯುನಿಸ್ಟರನ್ನು ಬಹಿರಂಗವಾಗಿ ನೇಣುಹಾಕುವ ಮೂಲಕ ಚೀನೀ ಕಮ್ಯುನಿಸ್ಟರನ್ನು ನಾಶಪಡಿಸಬಹುದೆಂಬುದು ಚಿಯಾಂಗ್ ಕೈ ಷೆಕ್‌ನ ತಪ್ಪು ಲೆಕ್ಕಾಚಾರವಾಗಿತ್ತು. ಕಮ್ಯುನಿಸ್ಟರು ತಮ್ಮ ಚಟುವಟಿಕೆಗಳನ್ನು ಸೇನೆಗೆ ವಿಸ್ತರಿಸಿದರು. ಸೈನಿಕರ ಒಂದು ಗುಂಪು ಚಿಯಾಂಗ್ ಕೈ ಷೆಕ್‌ನ ವಿರುದ್ಧ ದಂಗೆಯೆದ್ದಿತು. ನಾನ್‌ಚಂಗ್‌ನಲ್ಲಿ ಕಮ್ಯುನಿಸ್ಟ್ ಅಧಿಕಾರಿ ಚು ತೆ ನಾಯಕತ್ವದಲ್ಲಿದ್ದ ನಾಲ್ಕನೇ ತುಕಡಿ ಕೆಂಪು ಧ್ವಜವನ್ನು (ಕಮ್ಯುನಿಸ್ಟ್ ಧ್ವಜವನ್ನು) ಕಮ್ಯುನಿಸ್ಟ್ ಪಕ್ಷವನ್ನು ಹೊಸ ಹಾದಿಯಲ್ಲಿರಿಸಿತು". ಅವರು ಚಂಗ್ ಷಾದ ಮೇಲೆ ದಾಳಿ ಮಾಡಿದರು. ಆದರೆ ಅಪಾರ ನಷ್ಟದೊಂದಿಗೆ ಅವರನ್ನು ಹಿಮ್ಮೆಟ್ಟಿಸಲಾಯಿತು. ಅವರು ಯಾವುದೇ ಒಂದು ದೊಡ್ಡ ನಗರವನ್ನು ವಶಪಡಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಅವರು ಪಲಾಯನಗೈದು ಕಿಯಾಂಗ್ ಸಿ ಮತ್ತು ಹುನಾನ್ ಪ್ರಾಂತಗಳಲ್ಲಿ ಅಲೆಯುವಂತಾಯಿತು. ಅವರು ಚಿಯಾಂಗ್ ಷಾನ್‌ಗೆ ಪಲಾಯನ ಮಾಡಿದರು. ಅಲ್ಲಿ ಅವರು ಹ್ಯಾಂಕೊ ಮತ್ತು ಪದಚ್ಯುತವು ಹಾನ್ ಸರ್ಕಾರದ ನಿರಾಶ್ರಿತನಾದ ಮಾನವೋತ್ಸುತುಂಗನನ್ನು ಕಂಡರು.

### *ರೈತರ ಪ್ರೀತಿಗೆ ಪಾತ್ರರಾದ ಕಮ್ಯುನಿಸ್ಟರು*

ಅದುವರೆಗೆ ಕ್ರಾಂತಿಯನ್ನು ನಡೆಸಲು ಕಾರ್ಮಿಕರ ಬೆಂಬಲದ ಮೇಲೆ ತಮ್ಮ ಗಮನವನ್ನು ಕೇಂದ್ರೀಕರಿಸಿದ್ದರು. ಆದರೆ ಚೀನಾ ಕೈಗಾರಿಕೆಯಲ್ಲಿ ಪ್ರಗತಿ ಹೊಂದಿದ ರಾಷ್ಟ್ರವಾಗಿರಲಿಲ್ಲ. ಅದು ಬಹುಸಂಖ್ಯೆಯ ರೈತರನ್ನು ಹೊಂದಿದ ಕೃಷಿ ರಾಷ್ಟ್ರವಾಗಿತ್ತು. ಆದರೆ ಭೂಮಾಲೀಕರು ತಮ್ಮ ಬೃಹತ್ ಜಮೀನನ್ನು ರೈತರಿಗೆ ಕೊಡಲು ಇಷ್ಟವಿರಲಿಲ್ಲ. ಆದ್ದರಿಂದ ಚೀನಾದ ಕಮ್ಯುನಿಸ್ಟರು ಬಡ ರೈತರ ಸ್ಥಿತಿಯನ್ನು ಸುಧಾರಿಸುವ ಕಡೆಗೆ ತಮ್ಮ ಪ್ರಯತ್ನಗಳನ್ನು ಕೇಂದ್ರೀಕರಿಸಲು ನಿರ್ಧರಿಸಿದರು. ಸಿ.ಪಿ. ಫಿಟ್ಜರಾಲ್ಡ್ ಬರೆಯುವಂತೆ

"ಭೂಮಾಲೀಕರನ್ನು ಆಗಿಂದಾಗ್ಗೆ ಅತ್ಯಂತ ಕ್ರೂರವಾಗಿ ಸುಡಲಾಯಿತು ಮತ್ತು ಕೊಲ್ಲಲಾಯಿತು. ಕುಮಿಂಟಾಂಗ್ ಅಧಿಕಾರಿಗಳನ್ನು ಹತ್ಯೆ ಮಾಡಲಾಯಿತು. ಎಲ್ಲಾ ವಿರೋಧಿಗಳನ್ನು ಮತ್ತು ಬೆಂಬಲಿಗರಲ್ಲದವರನ್ನು ಕಠಿಣವಾಗಿ ನಡೆಸಿಕೊಳ್ಳಲಾಯಿತು. ರೈತರ ಪಾರಂಪರಿಕ ಶತೃಗಳ ವಿರುದ್ಧ ಪ್ರತೀಕಾರವನ್ನು ತೆಗೆದುಕೊಳ್ಳುವ ಮೂಲಕ ಕಮ್ಯುನಿಸ್ಟರು ತಾವು ರೈತರ ಮಿತ್ರರೆಂದು ಸಾಭೀತುಪಡಿಸಲು ನಿರ್ಧರಿಸಿದರು. ಈ ವಿಧಾನಗಳಿಂದ ಪಕ್ಷವು ರೈತರ ನಿಷ್ಠೆಯ ಬೆಂಬಲವನ್ನು ಗಳಿಸಿತು.

## 143.4 ಕಮ್ಯುನಿಸ್ಟರ ವಿರುದ್ಧದ ಐದು ಆಕ್ರಮಣಗಳು 1920-1934

1930 ಮತ್ತು 1934 ರ ನಡುವಿನ ವರ್ಷಗಳಲ್ಲಿ ಕಿಯಾಂಗ್ಸಿ ಸೋವಿಯತ್ ಮತ್ತು ಹುನಾನ್, ಹುಪೆ ಮತ್ತು ಕಾಂಗ್‌ಟುಂಗ್‌ನ ಅದರ ಶಾಖೆಗಳನ್ನು ನಾಶಪಡಿಸಲು ಅನೇಕ ಬೃಹತ್ ಪ್ರಮಾಣದ ಪ್ರಯತ್ನಗಳು ನಡೆದವು. ಕೆಲವು ಸಣ್ಣಪುಟ್ಟ ಕಮ್ಯುನಿಸ್ಟ್ ಪ್ರದೇಶಗಳನ್ನು ಸುಲಭವಾಗಿ ವಶಪಡಿಸಿಕೊಳ್ಳಲಾಯಿತು. ಆದರೆ ಮುಖ್ಯ ಕೇಂದ್ರಗಳಲ್ಲಿ ಎಲ್ಲಾ ಪ್ರಯತ್ನವೂ ವಿಫಲವಾಯಿತು.

1) ಅಕ್ಟೋಬರ್ 1930 ರಿಂದ ಜನವರಿ 1931 ರವರೆಗೆ ಕಮ್ಯುನಿಸ್ಟರ ವಿರುದ್ಧ ಮೊದಲ ದಾಳಿಯನ್ನು ಕೈಗೊಳ್ಳಲಾಯಿತು. ಆದರೆ ಕಮ್ಯುನಿಸ್ಟ್ ಸೇನೆ ಚಿಯಾಂಗದ ಪಡೆಗಳನ್ನು ಸೋಲಿಸಿತು.

2) ಎರಡನೆಯ ದಾಳಿ ಮೇ, 19, 1931 ರಂದು ಎರಡನೇ ದಾಳಿ ಆರಂಭವಾಯಿತು. ಆದರೆ ಕಮ್ಯುನಿಸ್ಟರು ಒಂದು ತಿಂಗಳಿನ ಒಳಗಾಗಿ ಮತ್ತೊಮ್ಮೆ ಅವರನ್ನು ಸೋಲಿಸಿದರು.

3) ಮೂರನೇ ದಾಳಿ. ಈ ದಾಳಿಯಲ್ಲಿಯೂ ಕುಮಿಂಟಾಂಗ್ ಸೇನೆಯನ್ನು ಸೋಲಿಸಲಾಯಿತು ಮತ್ತು ಈ ದಾಳಿಯನ್ನು ಜುಲೈ 1931 ರಿಂದ ಆಗಸ್ಟ್ 1931 ರವರೆಗೆ ನಡೆಯಿತು.

4) ನಾಲ್ಕನೆ ದಾಳಿ ಏಪ್ರಿಲ್ 1932 ರಿಂದ ಅಕ್ಟೋಬರ್ 1932 ರವರೆಗೆ ಕಮ್ಯುನಿಸ್ಟರ ನಡೆದ ಈ ದಾಳಿಯಲ್ಲಿಯೂ ಕಮ್ಯುನಿಸ್ಟರು ಚಿಯಾಂಗ್ ಕೈ ಷೆಕ್‌ನ ಸೇನೆಯನ್ನು ಸೋಲಿಸುವಲ್ಲಿ ಯಶಸ್ವಿಯಾದರು.

ಚಿಯಾಂಗ್ ಕೈ ಷೆಕ್‌ನ ಐದನೇ ದಾಳಿಯನ್ನು ಜರ್ಮನಿಯ ಸಲಹೆಗಾರರಿಂದ ಉತ್ತಮವಾಗಿ ವ್ಯವಸ್ಥೆಗೊಳಿಸಲಾಯಿತು ಮತ್ತು ಯೋಜಿಸಲಾಗಿತ್ತು. ಸುಮಾರು ಒಂದು ಮಿಲಿಯನ್ ಸೈನಿಕರನ್ನು ಸಜ್ಜುಗೊಳಿಸಲಾಗಿತ್ತು. ಎಡ್ಗರ್ ಸ್ನೋ ಈ ದಾಳಿಯ ಅನೇಕ ವಿವರಗಳನ್ನು ನೀಡಿದ್ದಾನೆ. ಅವನು ಬರೆಯುವಂತೆ "ಕಮ್ಯುನಿಸ್ಟರ ವಿರುದ್ಧ ಐದನೇ ದಾಳಿಯಲ್ಲಿ ಚಿಯಾಂಗ್ ಕೈ ಷೆಕ್‌ನು 90,000 ಸೈನಿಕರನ್ನು ಕೂಡಿಸಿದ್ದನು. ಕಮ್ಯುನಿಸ್ಟರು ಇಲ್ಲಿ 1,80,000 ಸೈನಿಕರ ಸಂಘಟಿತ ಪಡೆಯನ್ನು ಸಜ್ಜುಗೊಳಿಸಿದ್ದರು. "ಚಿಯಾಂಗನು ತನ್ನ ಎಲ್ಲಾ ಸಂಪನ್ಮೂಲಗಳನ್ನು ಸಂಪೂರ್ಣವಾಗಿ ಬಳಸಿಕೊಳ್ಳಲು ಹೊಸ ತಂತ್ರವನ್ನು ಅಳವಡಿಸಿಕೊಂಡನು. ತನ್ನ ಪ್ರಸಿದ್ಧ ಐದನೇ ದಾಳಿಯಲ್ಲಿ ಜನರಲ್ ಇಸ್ಸಿಮೊ" ಸೋವಿಯತ್ ಜಿಲ್ಲೆಗಳ ಸುತ್ತ ಒಂದು ವಿಧವಾದ ಬೃಹತ್ ಗೋಡೆಯನ್ನು ರಚಿಸಿದ್ದನು. ಅದು ಕ್ರಮೇಣ ಒಳ ಸರಿಯಿತು. ಅಂತಿಮವಾಗಿ ಕೆಂಪು ಸೈನ್ಯವನ್ನು ಸುತ್ತುವರಿದು ನಾಶಪಡಿಸುವುದು ಅದರ ಉದ್ದೇಶವಾಗಿತ್ತು.

ಈ ತೀಕ್ಷ್ಣವಾದ ದಾಳಿಯು ಕಮ್ಯುನಿಸ್ಟರಿಗೆ ಅಪಾರ ಹಾನಿಯುಂಟು ಮಾಡಿತು. ಆದರೆ ಕಮ್ಯುನಿಸ್ಟ್ ರಾಜ್ಯವನ್ನು ಕಟ್ಟುವ ಅವರ ಧೃಡ ನಿರ್ಧಾರವನ್ನು ನಾಶಪಡಿಸಲು ವಿಫಲವಾಯಿತು. ಎಡ್ಗರ್ ಸ್ನೋ ಬರೆಯಂವ್ವತೆ "ಈ ಮುತ್ತಿಗೆಯು ಕಮ್ಯುನಿಸ್ಟ್ ಜಿಲ್ಲೆಗಳ ಮೇಲೆ ತೀವ್ರ ಪರಿಣಾಮವನ್ನುಂಟು ಮಾಡಿತು. ಕಮ್ಯುನಿಸ್ಟರ ಚಿಕ್ಕ ನೆಲೆಯು ತನ್ನ ವಿರುದ್ಧ ಪ್ರಯೋಗಿಸಲಾದ ಒಂದು ಗೂಡಿದ ಸೈನಿಕ ಮತ್ತು ಆರ್ಥಿಕ ಒತ್ತಡವನ್ನು ಎದುರಿಸಲು ಅಸಮರ್ಪಕವಾಗಿತ್ತು". ಚೌ ಎನ್ ಲಾಯ್ ಅಭಿಪ್ರಾಯದಲ್ಲಿ ಈ ದಾಳಿಯಲ್ಲಿ 60,000 ಕಮ್ಯುನಿಸ್ಟರು ಮರಣ ಹೊಂದಿದರು ಮತ್ತು ಸಾರ್ವಜನಿಕ ಬಲಿದಾನ ಅತ್ಯಂತ ಭೀಕರವಾಗಿತ್ತು.

## 143.5 ಕಿಯಾಂಗ್ಸಿಯನ್ನು ತ್ಯಜಿಸುವ ನಿರ್ಧಾರ

ಕಿಯಾಂಗ್ಸಿಯಿಂದ ಚಿಯಾಂಗ್ ಕೈ ಷೆಕ್‌ನ ವಿರುದ್ಧ ಹೋರಾಟವನ್ನು ಮುಂದುವರಿಸುವುದು ಆತ್ಮಹತ್ಯಾ ಕ್ರಮವೆಂದು ಕಮ್ಯುನಿಸ್ಟರು ಅರಿತರು. ಆದ್ದರಿಂದ ಅವರು ದೂರದ ಪ್ರದೇಶವೊಂದಕ್ಕೆ ಸ್ಥಳಾಂತರಗೊಳ್ಳಲು ನಿರ್ಧರಿಸಿದರು. ಎಡ್ಗರ್ ಸ್ನೋ ಬರೆಯುವಂತೆ ಆದಾಗ್ಯೂ ಐದನೇ ದಾಳಿ ಅಪರಿಪೂರ್ಣವೆಂದು ಧೃಢಪಟ್ಟಿತು. ಅದು ಕೆಂಪು ಸೇನೆಯು ಜೀವಂತ ಶಕ್ತಿಯನ್ನು ನಾಶಪಡಿಸಲು

ವಿಫಲವಾಯಿತು. ಜೂಯಿಚಿನ್‌ನಲ್ಲಿ ನಡೆದ ಕೆಂಪು ಸೇನೆಯ ಸಮ್ಮೇಳನವು ಪ್ರಮುಖ ಕೆಂಪು ಸೇನೆಯನ್ನು ಹೊಸ ನೆಲೆಯೊಂದಕ್ಕೆ ವರ್ಗಾಯಿಸುವ ಮೂಲಕ ಹಿಂದಕ್ಕೆ ಸರಿಯಲು ನಿರ್ಧರಿಸಿತು. ಇಡೀ ಒಂದು ವರ್ಷ ನಡೆದ ಈ ಬೃಹತ್ ದಾಳಿಗೆ ರೂಪಿಸಲಾಗಿದ್ದ ಯೋಜನೆ ಪರಿಪೂರ್ಣ ಮತ್ತು ಸಮರ್ಥವಾಗಿತ್ತು. ಜನರಲ್ ಚಿಯಾಂಗ್ ಕೈ ಷೆಕ್‌ನು ಕಮ್ಯುನಿಸ್ಟ್ ಪಡೆಗಳ ಮೇಲೆ ಮುತ್ತಿಗೆ ಹಾಕಿದನು. ಈ ಬಿಗಿಯಾದ ಬೋನಿನಿಂದ ಕಮ್ಯುನಿಸ್ಟರು ಜೀವಂತವಾಗಿ ತಪ್ಪಿಸಿಕೊಳ್ಳಬೇಕಾಗಿದ್ದರೆ ಈ ತಡೆಯನ್ನು ಮುರಿಯಬೇಕಾಗಿತ್ತು. ಇದನ್ನು ಮಾಡುವಲ್ಲಿ ಕಮ್ಯುನಿಸ್ಟರು ಧೈರ್ಯವಾಗಿ ಯಶಸ್ವಿಯಾದರು.

## 143.6 ದೀರ್ಘ ಪ್ರಯಾಣ

1934 ರ ಅಕ್ಟೋಬರ್‌ನಲ್ಲಿ ಇತಿಹಾಸದಲ್ಲಿಯೇ ಸೈನ್ಯವೊಂದರ ಮತ್ತು ಜನರ ಬೃಹತ್ ಪ್ರಯಾಣ ಆರಂಭವಾಯಿತು. ಪ್ರಬಲ ವಿರೋಧವಿದ್ದಾಗ್ಯೂ ಅವರು ಪ್ರವಾಹವಿದ್ದ ನದಿಗಳನ್ನು ಕಾಡುಗಳನ್ನು ಜವುಗು ನೆಲ ಮತ್ತು ಹಿಮದಿಂದ ಆವರಿಸಿದ ಪರ್ವತಗಳನ್ನು ದಾಟಿದರು. ಈ ಭಯಾನಕ ಪ್ರಯಾಣ ಒಂದು ವರ್ಷ ಕಾಲ ನಡೆಯಿತು. ಅನೇಕ ಸಂದರ್ಭಗಳಲ್ಲಿ ಅವರು ಬಹುಮಟ್ಟಿಗೆ ನಾಶವಾದರು. ಆದರೆ ಅವರ ಆತ್ಮಸ್ಥೈರ್ಯ ಎತ್ತರವಾಗಿದ್ದು ಅಕ್ಟೋಬರ್ 1935 ರಲ್ಲಿ ಅವರು ಷೆನ್ಸಿಯನ್ನು ತಲುಪಿದಾಗ ಅವರು ಇನ್ನೂ ಹೋರಾಡುವ ಅಲ್ಪಸ್ವಲ್ಪ ಶಕ್ತಿಯನ್ನು ಹೊಂದಿದ್ದರು.

### *143.6.1 ಕಷ್ಟಗಳ ಸರಮಾಲೆ*

ದೀರ್ಘ ಪ್ರಮಾಣದ ಅಂಕಿ ಸಂಖ್ಯೆಗಳ ವರದಿಯನ್ನು ಅಧ್ಯಯನ ಮಾಡಿದವನೂ ಅಂತಹ ಕಷ್ಟಕೋಟಲೆಗಳನ್ನು ಅನುಭವಿಸಿಯೂ ಬದುಕುಳಿಯಲೂ ಸಾಧ್ಯವಿಲ್ಲ. ಮಾವೋನ ಸೋವಿಯತ್ ಗಣರಾಜ್ಯ 368 ದಿವಸಗಳ ಕಾಲ ಪ್ರಯಾಣ ಮಾಡಿತು. ಅವರ ಪ್ರತಿದಿನದ ಸರಾಸರಿ ಪ್ರಯಾಣ 18 ಮೈಲಿಗಳಾಗಿದ್ದವು. ಒಂದು ವರ್ಷದಲ್ಲಿ ಅವರು 6,875 ಮೈಲಿಗಳ ಪ್ರಯಾಣ ಮಾಡಿದರು. ಅವರು ಸುಮಾರು ಹನ್ನೆರಡು ಅತಿ ಎತ್ತರದ ಪರ್ವತಗಳನ್ನು ಮತ್ತು 30 ಪ್ರಮುಖ ನದಿಗಳನ್ನು ದಾಟಿದರು. ಪ್ರತಿಯೊಂದು ಪರ್ವತದ ತಪ್ಪಲಿನಲ್ಲಿ ಪ್ರತಿಯೊಂದು ಗಿರಿಕಂದರದಲ್ಲಿ ಪ್ರತಿಯೊಂದು ನದಿಯ ದಡದಲ್ಲಿ ಚಿಯಾಂಗ್ ಕೈ ಷೆಕ್‌ನ ತುಕಡಿಗಳಿದ್ದು, ಪಿರಂಗಿಗಳು, ಕೈಬಾಂಬುಗಳು ಮತ್ತು ಯಂತ್ರಚಾಲಿತ ಬಂದೂಕುಗಳಿಂದ ಸೋವಿಯತ್ ಗಣರಾಜ್ಯದ ಮುನ್ನಡೆಯನ್ನು ತಡೆಯುವ ಉದ್ದೇಶವನ್ನು ಹೊಂದಿದ್ದವು.

ಹೀಗೆ ಐದು ಬೃಹತ್ ಪ್ರಮಾಣದ ದಾಳಿಗಳು, ಜೊತೆಗೆ ತೀವ್ರವಾದ ಪ್ರಚಾರದ ಕಾರ್ಯಾಚರಣೆ ಮತ್ತು ಸಾಮಾಜಿಕ ಹಾಗೂ ಆರ್ಥಿಕ ಬದಲಾವಣೆಯ ಭರವಸೆಗಳು ಕುಮಿಂಟಾಂಗ್ ಪಕ್ಷಕ್ಕೆ ಭಾರೀ ವಿಜಯವನ್ನು ತಂದು ಕೊಟ್ಟವು. ಕಮ್ಯುನಿಸ್ಟರನ್ನು ಕಿಯಾಂಗ್ಸಿ ಪ್ರಾಂತದಿಂದ ಹೊರದೋಡಿಸಲಾಯಿತು. ಆದರೆ ಅವರು ನಂತರ 6,800 ಮೈಲಿಗಳ ಪ್ರದಕ್ಷಿಣೆಯ ಮಾರ್ಗದಲ್ಲಿ ಷನ್ಸಿಯನ್ನು ತಲುಪಿ, ಅಲ್ಲಿ 1936 ರಲ್ಲಿ ಮಾವೋತ್ಸೇತುಂಗನು ಚೀನೀ ಜನತಾ ಸೋವಿಯತ್ ಗಣರಾಜ್ಯವನ್ನು ಘೋಷಿಸಿದನು.

ಷನ್ಸಿಗೆ ಸುರಕ್ಷಿತವಾಗಿ ಹಿಂದಿರುಗಿದ ಕಮ್ಯುನಿಸ್ಟರು ತಮ್ಮ ಹತೋಟಿಯಲ್ಲಿದ್ದ ಪ್ರದೇಶದಲ್ಲಿ ಬೃಹತ್ ಪ್ರಮಾಣದ ಆರ್ಥಿಕ ಮತ್ತು ಸಾಮಾಜಿಕ ಪುನರ್ ನಿರ್ಮಾಣವನ್ನು ಕೈಗೊಂಡರು. ಆದಾಗ್ಯೂ 1936 ರ ವೇಳೆಗೆ ನಾಜಿಗಳ ಹಾವಳಿಯು ರಷ್ಯ ಮತ್ತು ಕಮ್ಯುನಿಸ್ಟ್ ಇಂಟರ್‌ಪೋಲ್‌ಗಳು ಪ್ರಜಾಪ್ರಭುತ್ವ ರಾಷ್ಟ್ರಗಳು ಮತ್ತು ಫ್ಯಾಸಿ ತತ್ವದ ವಿರೋಧಿಗಳೊಂದಿಗೆ ಸಹಕಾರಕ್ಕೆ ಕರೆ ನೀಡುವ ನೀತಿಯನ್ನು ಅಳವಡಿಸಿಕೊಂಡವು. ಈ ನೀತಿಗೆ ಅನುಗುಣವಾಗಿ ಮಾವೋ ರಾಜೀ ಸೂತ್ರವೊಂದನ್ನು ಮುಂದಿಡುವ ಮೂಲಕ ಜಪಾನಿನ ವಿರುದ್ಧ ಕುಮಿಂಟಾಂಗ್ ಪಕ್ಷದೊಂದಿಗೆ ಸೇರಿಕೊಳ್ಳಲು ಬಯಸಿದನು. ಈ ರಾಜೀ ಸೂತ್ರವು ಕೆಳಗಿನ ಅಂಶಗಳನ್ನು ಒಳಗೊಂಡಿದ್ದಿತು.

1) ಜಪಾನಿನ ವಿರುದ್ಧ ಪ್ರತಿಭಟನೆ
2) ಚೀನಾದ ತೆರಿಗೆ ಮಾನ್ಯ ಮಾಡುವುದು
3) ವ್ಯಾಪಾರ ಮತ್ತು ಕೈಗಾರಿಕೆಗಳ ಅಭಿವೃದ್ಧಿ
4) ಶಿಕ್ಷಣ ಸೌಲಭ್ಯಗಳ ಸುಧಾರಣೆ ಮತ್ತು ಜನರ ಕೆಲಸದ ಮತ್ತು ಜೀವನದ ಸ್ಥಿತಿಗಳ ಸುಧಾರಣೆ ಮತ್ತು
5) ಸ್ನೇಹಪರ ವಿದೇಶಗಳೊಂದಿಗೆ ಸಹಕಾರ. ಈ ಷರತ್ತುಗಳನ್ನು ತಿರಸ್ಕರಿಸಲಾಯಿತು. ಇದರಿಂದ ಜಪಾನನ್ನು ಒಂದುಗೂಡಿ ಎದುರಿಸುವ ಮತ್ತೊಂದು ಅವಕಾಶವೂ ಕೈತಪ್ಪಿತು.

## 143.7 ಆಂತರಿಕ ಯುದ್ಧ ವಿರಾಮದ ಯುಗ (ಕಾಲ)

*ಕಮ್ಯುನಿಸ್ಟ್ ಮತ್ತು ಕುಮಿಂಟಾಂಗ್ ಪಕ್ಷಗಳ ನಡುವೆ ಸಹಾಕರ (1937-40)*

ದೂರ ಪ್ರಯಾಣದ ನಂತರ ಚೀನಾದಲ್ಲಿ ಆಂತರಿಕ ಯುದ್ಧ ವಿರಾಮದ ಶಕೆ ಗೋಚರಿಸಿತು. ಹೊರಗಿನ ಶತೃವಾಗಿದ್ದ ಜಪಾನ್ ಚೀನಾದಲ್ಲಿ ತನ್ನ ಸಾಮ್ರಾಜ್ಯವನ್ನು ತ್ವರಿತವಾಗಿ ವಿಸ್ತರಿಸತೊಡಗಿತು. ಈ ಸಾಮಾನ್ಯ ಶತೃವಿನ ವಿರುದ್ಧ ಚೀನೀಯರು ಒಂದುಗೂಡಿದರು. ಸಿ.ಪಿ. ಫ್ರಿಡ್ಜರಾಲ್ಡ್ ಬರೆಯುವಂತೆ "ಈ ಒಪ್ಪಂದಗಳಂತೆ ಕಮ್ಯುನಿಸ್ಟ್ ಪಕ್ಷವು ತನ್ನ ನಾಮಮಾತ್ರ ಸ್ವತಂತ್ರ ರಾಜ್ಯವನ್ನು ರದ್ದುಪಡಿಸಿತು. ಭೂಮಿಯ ಹಂಚಿಕೆ ಮತ್ತು ಮುಟ್ಟುಗೋಲು ಹಾಕಿಕೊಳ್ಳುವುದನ್ನು ರದ್ದುಪಡಿಸಲು ಕೆಂಪು ಸೇನೆಯ ಹೆಸರನ್ನು ರದ್ದು ಪಡಿಸಲು ಮತ್ತು ಜನರಲ್ ಲಿಸ್ಸಿಮೊನ ಅಧೀನದಲ್ಲಿದ್ದ ರಾಷ್ಟ್ರೀಯ ಸೇನೆಯ ತನ್ನ ಅಷ್ಟ ಪಥ ಸೇನೆಯನ್ನು ಹಿಂದಕ್ಕೆ ಕರೆಸಿಕೊಳ್ಳಲು ಕ್ರಮ ಕೈಗೊಂಡಿತು. ಜನರಲ್ ಲಿಸ್ಸಿಮೊನ ಸರ್ಕಾರವನ್ನು ನ್ಯಾಯ ಸಮ್ಮತವೆಂದು ಒಪ್ಪಿಕೊಳ್ಳಲಾಯಿತು. ಸಾಮಾನ್ಯ ಶತೃ (ಜಪಾನ್) ವಿನ ಎದುರು ಚೀನಾದ ಐಕ್ಯತೆಗೆ ಈ ತ್ಯಾಗಗಳಿಂದ ಕಮ್ಯುನಿಸ್ಟರು ಚೀನಾಕ್ಕೆ ಅಪಾರ ಸೇವೆ ಸಲ್ಲಿಸಿದರೆಂದು ಚೀನಿಯರು ಭಾವಿಸಿದರು. ಹೀಗೆ ಅವರು ವಿದ್ಯಾವಂತ ವರ್ಗದ ಮೆಚ್ಚುಗೆಯನ್ನು ಸಂಪಾಧಿಸಿದರು.

*ಸಂಧಾನದ ಮಹತ್ವ*

ಹೊರನೋಟಕ್ಕೆ ಚಿಯಾಂಗ್ ಕೈ ಷೆಕ್ ಭಾರೀ ವಿಜಯವನ್ನು ಸಾಧಿಸಿದಂತೆ ಕಂಡುಬಂದರೂ ವಾಸ್ತವವಾಗಿ ಕಮ್ಯುನಿಸ್ಟರೇ ನಿಜವಾದ ವಿಜಯಿಗಳಾಗಿದ್ದರು. ಸಿ.ಪಿ. ಫ್ರಿಡ್ಜರಾಲ್ಡ್‌ರ ಅಭಿಪ್ರಾಯದಲ್ಲಿ "ಈ ಒಪ್ಪಂದದಿಂದ ಸರ್ಕಾರದ ಮುಖ (ಮಾನ) ಉಳಿಯಿತು. ದೀರ್ಘ ಕಾಲದ ಯುದ್ಧ ಕೊನೆಗೊಂಡಿತು ಮತ್ತು ಕಡೆಗೂ ಆಂತರಿಕ ಶಾಂತಿಯನ್ನು ಸಾಧಿಸಲಾಯಿತು. ಇದರಿಂದಾಗಿ ಸರ್ಕಾರವು ಹೊರಗಿನ ಒತ್ತಡದ ವಿರುದ್ಧ ಪ್ರತಿಭಟನೆಯ ನೀತಿಯನ್ನು ಮುಂದುವರಿಸಲು ಸಾಧ್ಯವಾಯಿತು. ಆದರೆ ನಿಜವಾಗಿಯೂ ಚಿಯಾಂಗರು ಶರಣಾಗತರಾಗಿದ್ದರು ಮತ್ತು ಚಿಯಾಂಗ್ ಹತ್ತು ವರ್ಷಗಳಿಂದ ಅನುಸರಿಸಿಕೊಂಡು ಬಂದಿದ್ದ ನೀತಿಯನ್ನು ಕೈಬಿಟ್ಟು, ಕಮ್ಯುನಿಸ್ಟರ ನೀತಿಯನ್ನು ಅನುಸರಿಸುವಂತೆ ಚಿಯಾಂಗ್ ಸ್ಯೂ ಲಿಯಾಂಗ್ ಅವರ ಮೇಲೆ ಒತ್ತಡ ಹೇರಿದರು.

*ಕಮ್ಯುನಿಸ್ಟರ ನಿಜವಾದ ಉದ್ದೇಶಗಳು*

ಮಾವೋತ್ಸೇತುಂಗನು ಕೆಲವು ನಿರ್ದಿಷ್ಟ ಉದ್ದೇಶಗಳನ್ನು ಹೊಂದಿ ಈ ನೀತಿಯನ್ನು ಅನುಸರಿಸಿದನೆಂದು ಕೆಲವು ವಿದ್ವಾಂಸರು ಭಾವಿಸಿದ್ದಾರೆ. ಜಪಾನಿನೊಂದಿಗೆ ಹೋರಾಟ ಅವರ ಮುಂದಿನ ಕಾರ್ಯಕ್ರಮದ ಅವಶ್ಯಕ ಭಾಗವಾಗಿತ್ತು. ಸಿ.ಪಿ. ಫ್ರಿಡ್ಜರಾಲ್ಡರ ಅಭಿಪ್ರಾಯದಲ್ಲಿ "ಹೀಗೆ ಚೀನಾದ ಎರಡು ಪಕ್ಷಗಳು ಶಾಂತಿ ಒಪ್ಪಂದ ಮಾಡಿಕೊಂಡವು. ಇದು ಅಂತರ್ಯುದ್ಧವನ್ನು ಕೊನೆಗೊಳಿಸಿತು ಮತ್ತು ಜಪಾನಿನ ವಿರುದ್ಧ ರಾಷ್ಟ್ರೀಯ ಯುದ್ಧಕ್ಕೆ ಚೀನಾವನ್ನು ಸಿದ್ಧಗೊಳಿಸಿತು. ಈ ಯುದ್ಧದಿಂದ ಚೀನಾದಲ್ಲಿ ಖಂಡಿತ್ವವಾಗಿಯೂ ತಲೆದೋರುವ ಗೊಂದಲದ ಮೂಲಕ ಅಂತಿಮ ವಿಜಯಕ್ಕೆ ಕಮ್ಯುನಿಸ್ಟರು ದಾರಿಯನ್ನು ಕಂಡರು. ಯುದ್ಧದ ಕಡೆಯಲ್ಲಿ ಕುಮಿಂಟಾಂಗ್ ಪಕ್ಷ ನಾಶವಾಗಿ ಕಮ್ಯುನಿಸ್ಟರು ಅವರ ಉತ್ತರಾಧಿಕಾರಿಗಳಾಗುವರೆಂದು ಅವರು ಭಾವಿಸಿದರು.

"1937 ಮತ್ತು 1938 ರ ಅವಧಿಯಲ್ಲಿ ಜಪಾನ್ ಮತ್ತು ಚೀನಾದ ಸೈನ್ಯಗಳ ಮೇಲೆ ಅನೇಕ ವಿಜಯಗಳನ್ನು ಸಾಧಿಸಿದರು. ಪೀಕಿಂಗ್, ಷಾಂಗೈ, ನಾನ್‌ಕಿಂಗ್, ಕ್ಯಾಂಟನ್ ಮತ್ತು ಹ್ಯಾಂಕೋಗಳು ಜಪಾನಿಯರ ವಶವಾದವು. ಕುಮಿಂಟಾಂಗ್ ಸೈನ್ಯವನ್ನು ಚೀನಾದ ಪಶ್ಚಿಮ ಪರ್ವತ ಪ್ರದೇಶದ ಕಡೆಗೆ ಓಡಿಸಲಾಯಿತು. ಎಲ್ಲಾ ಕರಾವಳಿ ಪ್ರದೇಶ, ಉತ್ತರ ಚೀನಾದ ಬಯಲು ಪ್ರದೇಶ ಮತ್ತು ಯಾಂಗ್‌ಟ್ಸಿಕಿ ಕಣಿವೆ ಮಧ್ಯದ ಭಾಗಗಳು ಕೈತಪ್ಪಿ ಹೋದವು". ಜಪಾನಿಯರ ವಿರುದ್ಧ ರಾಷ್ಟ್ರೀಯ ಸೇನೆ ಹೋರಾಡುತ್ತಿರುವಾಗ ಅದರ ಚಟುವಟಿಕೆಗಳ ಬಗ್ಗೆ ಅಪಾರ ಪ್ರಚಾರ ನಡೆಸಲಾಯಿತು. ಆದರೆ ಕಮ್ಯುನಿಸ್ಟರ ಗೆರಿಲ್ಲಾ ಚಟುವಟಿಕೆಗಳ ಬಗ್ಗೆ ಯಾವ ಸುದ್ದಿಯೂ ಇರಲಿಲ್ಲ.

## 143.8 ಕಮ್ಯುನಿಸ್ಟರ ಕೊಡುಗೆ

ಜಪಾನಿಯರಿಗೆ ಅಪಾರ ನಷ್ಟವುಂಟುಮಾಡುವುದು ಈಗ ಚೀನೀಯರ ಮುಂದಿದ್ದ ಮುಖ್ಯ ಕೆಲಸವಾಗಿತ್ತು. ಈ ಕಾರ್ಯವನ್ನು ಕಮ್ಯುನಿಸ್ಟ್ ಸ್ವಯಂ ಸೇವಕರು ಮಾತ್ರವೇ ಕೈಗೊಂಡರು. 1939 ರ ಮುಕ್ತಾಯದ ನಂತರ ರಾಷ್ಟ್ರೀಯ ಸರ್ಕಾರ ಕಳೆದು ಹೋಗಿದ್ದ ಪ್ರದೇಶಗಳನ್ನು ಪುನಃ ವಶಪಡಿಸಿಕೊಳ್ಳಲು ಯಾವುದೇ ಸೈನಿಕ ಪ್ರಯತ್ನ ಮಾಡಲಿಲ್ಲ. ಈ ಕಾರ್ಯವನ್ನು ಕಮ್ಯುನಿಸ್ಟರಿಗೆ ಬಿಡಲಾಯಿತು.

ಕಮ್ಯುನಿಸ್ಟ್ ಸೇನೆಯು ಜಪಾನಿನ ವಿರುದ್ಧ ದಂಗೆಯೆದ್ದಿದ್ದ ದೇಶ ಪ್ರೇಮಿಗಳ ಸಹಾಯದಿಂದ ದುರ್ಗಮವಾದ ಬೆಟ್ಟ ಪ್ರದೇಶಗಳಲ್ಲಿ ನೆಲೆ ನಿಂತು ನಾಗರೀಕ ಆಡಳಿತವನ್ನು ಸ್ಥಾಪಿಸಿತು. ತೆರಿಗೆಗಳನ್ನು ಸಂಗ್ರಹಿಸಿತು. ಬಾಡಿಗೆಯನ್ನು ಕಡಿಮೆ ಮಾಡಿತು. ಎಲ್ಲಾ ವರ್ಗದ ಜನರನ್ನು ಮುಕ್ತಗೊಳಿಸಲಾದ ಪ್ರದೇಶಗಳ ಆಡಳಿತದಲ್ಲಿ ಸೇರಿಸಿಕೊಳ್ಳಲಾಯಿತು ಮತ್ತು ಜಪಾನಿನ ವಿರುದ್ಧ ಚತುರತೆಯಿಂದ ಹಾಗೂ ಮಿತವಾದ ಗೆರಿಲ್ಲಾ ಯುದ್ಧವನ್ನು ಮಾಡಲಾಯಿತು. ಮೊದಲು ಜಪಾನಿಯರು ಈ ಚಟುವಟಿಕೆಗಳನ್ನು ಡಕಾಯಿತರ ಹಾವಳಿಯೆಂದು ಕಡೆಗಣಿಸಿದರು. ಆದರೆ ಇಡೀ ಪ್ರದೇಶಗಳು ಡಕಾಯಿತರ ವಶವಾಗುತ್ತಿರುವುದು ಗೊತ್ತಾದಾಗ ಅವರು ಪ್ರತೀಕಾರದ ಕ್ರಮಗಳನ್ನು ಕೈಗೊಳ್ಳಬೇಕಾಯಿತು. ಹಳ್ಳಿಗಳನ್ನು ಸುಡಲಾಯಿತು. ರೈತರನ್ನು ಹತ್ಯೆ ಮಾಡಲಾಯಿತು. ಆದರೆ ನುಣುಚಿಕೊಳ್ಳುವ ಗೆರಿಲ್ಲಾಗಳನ್ನು ಯುದ್ಧಕ್ಕಿಳಿಸಲು ಸಾಧ್ಯವಾಗಲಿಲ್ಲ. ಇಂತಹ ದಾಳಿಗಳಿಂದ ಜಪಾನಿಗಾದ ಲಾಭವೆಂದರೆ ಇನ್ನೂ ದೃಢವಾದ ಪ್ರತಿಭಟನೆ ಮತ್ತು ವ್ಯಾಪಕವಾದ ದ್ವೇಶ.

### 143.8.1 ಕುಮಿಂಟಾಂಗ್ ಮತ್ತು ಕಮ್ಯುನಿಸ್ಟ್ ಮೈತ್ರಿಯ ಕುಸಿತ (ಪತನ)

ಪರಿಸ್ಥಿತಿ ಬಹಳ ಕಾಲ ಸಂತೋಷದಿಂದ ಉಳಿಯಲಿಲ್ಲ. ಸ್ವಲ್ಪ ಸಮಯದಲ್ಲಿಯೇ ಚೀನಾದ ಎರಡು ಪ್ರಮುಖ ಪಕ್ಷಗಳ ನಡುವೆ ಒಡಕುಂಟಾಯಿತು. ಜಪಾನ್ ಆಕ್ರಮಿತ ಚೀನಾದಲ್ಲಿ ಕಮ್ಯುನಿಸ್ಟರು ತಮ್ಮ ಪ್ರಭಾವವನ್ನು ವಿಸ್ತರಿಸುವುದನ್ನು ಕುಮಿಂಟಾಂಗ್ ಪಕ್ಷ ಇಷ್ಟ ಪಡಲಿಲ್ಲ. ಉತ್ತರ ಮತ್ತು ಪೂರ್ವದಲ್ಲಿ ಗೆರಿಲ್ಲಾ ಯುದ್ಧ ತಂತ್ರ ಮತ್ತು ಪ್ರತಿಭಟನೆಯನ್ನು ಸಂಘಟಿಸುವಲ್ಲಿ ಕಮ್ಯುನಿಸ್ಟರ ಯಶಸ್ಸು ಯುದ್ಧದ ಕಡೆಯ ವರ್ಷಗಳಲ್ಲಿ ಕುಮಿಂಟಾಂಗ್ ಪಕ್ಷದ ವಿಫಲತೆಗೆ ವಿರುದ್ಧವಾಗಿದ್ದು ಅಪಾರ ನೋವುಂಟು ಮಾಡಿತು. ಅವರ ಚಟುವಟಿಕೆ ರಹಿತ ಸೈನ್ಯ, ಆಹಾರ ಮತ್ತು ಮದ್ದು ಗುಂಡುಗಳ ಕೊರತೆ ಮತ್ತು ಕುಗ್ಗಿದ ನೈತಿಕ ಸ್ಥೈರ್ಯದಿಂದ ಯುದ್ಧದ ನಿಜವಾದ ಪ್ರಯತ್ನವನ್ನು ಮಾಡಲಾಗಲಿಲ್ಲ. ಸೈನ್ಯಾಧಿಕಾರಿಗಳಲ್ಲಿ ಭ್ರಷ್ಟಾಚಾರ ವ್ಯಾಪಕವಾಗಿ ಹರಡಿತು. ಚುಂಕಿಂಗ್ ಸರ್ಕಾರ ಆಕ್ರಮಿತ ಪ್ರದೇಶದಲ್ಲಿ ತಮ್ಮ ಹಿತಾಸಕ್ತಿ ದಿವಾಳಿ ಮಾಡುತ್ತಿದ್ದುದನ್ನು ಎಚ್ಚರಿಕೆಯಿಂದ ಗಮನಿಸಿದರು ಮತ್ತು ಜನರ ದೃಷ್ಟಿಯಲ್ಲಿ ಕಮ್ಯುನಿಸ್ಟರನ್ನು ಚೀನೀ ಪ್ರತಿಭಟನೆಯಾಗಿ

### 143.8.2 ಆಗ್ನೇಯ ಭಾಗಗಳಲ್ಲಿ ಕಮ್ಯುನಿಸ್ಟರ ಮುನ್ನಡೆ

ಆಗ್ನೇಯ ಚೀನಾದ ಆಕ್ರಮಿತ ಭಾಗಗಳಲ್ಲಿ ಕಮ್ಯುನಿಸ್ಟರು ತಮ್ಮ ಚಟುವಟಿಕೆಗಳನ್ನು ವಿಸ್ತರಿಸಲು ಪ್ರಯತ್ನಿಸಿದಾಗ ಮಾರ್ಷಲ್ ಚಿಯಾಂಗ್ ಕೈ ಷೆಕ್‌ನು ಈ ಪಡೆಗಳನ್ನು ವಿಸರ್ಜಿಸಲು ನಿರ್ಧರಿಸಿದರು. ಆಗ್ನೇಯ ಭಾಗದಲ್ಲಿ ಕಮ್ಯುನಿಸ್ಟರು ಹೊಸ ಹಾಗೂ ಬೃಹತ್ ಗೆರಿಲ್ಲಾ ಪಡೆಗಳನ್ನು ಸಂಘಟಿಸುವ ಸೂಚನೆ ಕಂಡುಬಂದಾಗ ಭಿನ್ನಾಭಿಪ್ರಾಯ ತೀವ್ರಗೊಂಡು ಘರ್ಷಣೆಗೆ ಕಾರಣವಾಯಿತು.

ಮಧ್ಯ ಚೀನಾದಲ್ಲಿ ಹೊಸ 4 ನೇ ಸೇನೆ ಮತ್ತು ಆ ಭಾಗದಲ್ಲಿದ್ದ ವಿವಿಧ ಕುಮಿಂಟಾಂಗ್ ಪಡೆಗಳ ನಡುವೆ ತಿಕ್ಕಾಟ ಬೆಳೆಯತೊಡಗಿತ್ತು. ಈ ಹಗೆತನದ ದಕ್ಷಿಣ ಕಿಯಾಂಗ್ಸ್ ಪ್ರದೇಶದಲ್ಲಿ ಚಿಯಾಂಗ್‌ನ ಪ್ರತಿನಿಧಿಯಾಗಿದ್ದ ಚೆನ್ 1940 ರ ಬೇಸಿಗೆಯಲ್ಲಿ ತನ್ನ ಹತೋಟಿಯಲ್ಲಿದ್ದ ತುಕಡಿಗಳ ಗಣನೀಯ ಭಾಗವನ್ನು ಯಾಂಗ್‌ಟ್ಸಿಯುಚೆ ಉತ್ತರ ಕಿಯಾಂಗ್ಸ್‌ಗೆ ಕಳುಹಿಸಲಾಯಿತು. ಅಲ್ಲಿ ಈ ಪಡೆಗಳು ಕುಮಿಂಟಾಂಗ್ ಪಡೆಗಳ ಮೇಲೆ ಆಕ್ರಮಣ ಮಾಡಿ ಸಂಪೂರ್ಣವಾಗಿ ನಾಶಪಡಿಸಿದವು. ಇದು ಚುಂಕಿಂಗನು ಮತ್ತಷ್ಟು ಬಿಗಿ ಧೋರಣೆಯನ್ನು ತಳೆಯುವಂತೆ ಮಾಡಿತು. ಜೂನ್ 1940 ರಲ್ಲಿ ಕಮ್ಯುನಿಸ್ಟರು ಮತ್ತು ಕುಮಿಂಟಾಂಗ್ ಪಕ್ಷದ ನಡುವೆ ಒಂದು ಒಡಂಬಡಿಕೆ ಏರ್ಪಟ್ಟಿತು. ಮಧ್ಯ ಚೀನಾದಿಂದ ಹೊಸ ನಾಲ್ಕನೇ ಸೇನೆಯ ತೆರವಿಗೆ ಬದಲಾಗಿ ಕಮ್ಯುನಿಸ್ಟರಿಗೆ ಹಳದಿ ನದಿಯ ಉತ್ತರದ ಭಾಗಗಳ ಮೇಲೆ ಮುಕ್ತ ಹಸ್ತವನ್ನು ನೀಡುವಂತಾಯಿತು.

### 143.8.3 ಸಂಬಂಧದಲ್ಲಿ ಒಡಕು

ಈ ಘಟನೆಯು ಜಪಾನೀ ವಿರೋಧಿ ಯುದ್ಧದ ಕಾಲದಲ್ಲಿ ಕಮ್ಯುನಿಸ್ಟರು ಮತ್ತು ರಾಷ್ಟ್ರೀಯವಾದಿಗಳ ನಡುವೆ ಯಾವುದೇ ನಿಜವಾದ ಸಹಯೋಗದ ಕೊನೆಯಾಗಿದ್ದವು. ಅನೇಕ ಕಮ್ಯುನಿಸ್ಟರ ರಕ್ತಪಾತವನ್ನು ಅವರ ಗೆಳೆಯರು ಎಂದೂ ಮರೆತಿರಲಿಲ್ಲ. ಈ ಘಟನೆಯು ನಿಜವಾಗಿಯೂ ಚೀನಾದ ಎರಡು ಪ್ರಮುಖ ರಾಜಕೀಯ ಪಕ್ಷಗಳ ನಡುವೆ ಎಲ್ಲಾ ಸಹಕಾರವನ್ನು ಕೊನೆಗೊಳಿಸಿತು. ಈಗ ಈ ಎರಡು ಪಕ್ಷಗಳ ನಡುವೆ ಬಹಿರಂಗ ಘರ್ಷಣೆ ಆರಂಭವಾಯಿತು. ಸ್ಟೂಯರ್ಟ್ ಸ್ಕ್ರಾಮ್ ಬರೆದಿರುವಂತೆ "ತಾತ್ಕಾಲಿಕವಾಗಿ ಕುಮಿಂಟಾಂಗ್ ಪಕ್ಷ ಭಾರೀ ವಿಜಯವನ್ನು ಸಾಧಿಸಿದಂತೆ ಮತ್ತು ಆಗ್ನೇಯ ಚೀನಾದಲ್ಲಿ ಕಮ್ಯುನಿಸ್ಟ್ ಸಿದ್ಧಾಂತದ ಪ್ರಭಾವದ

ವಿಸ್ತರಣೆಯನ್ನು ಯಶಸ್ವಿಯಾಗಿ ತಡೆಗಟ್ಟದಂತೆ ಕಂಡು ಬಂದಿತು. ಕಮ್ಯುನಿಸ್ಟರು ಕುಮಿಂಟಾಂಗ್ ಪಕ್ಷದ ಹಗೆತನದ ನೀತಿಯಿಂದ ಕಡಿದು ಹಾಕಲಾಯಿತು. ಗಾಯಗೊಂಡವರಿಗೆ ವೈದ್ಯಕೀಯ ನೆರವೂ ತಲುಪದಂತೆ ತಡೆಯಲಾಯಿತು. ರಾಷ್ಟ್ರೀಯ ಸೇನೆ ಕಮ್ಯುನಿಸ್ಟ್ ಪ್ರದೇಶಗಳ ಮೇಲೆ ದಿಗ್ಬಂಧನವನ್ನು ವಿಧಿಸಿತು. ಚೀನೀ ಪಡೆಗಳ ಅತ್ಯುನ್ನತ ದಂಡನಾಯಕನಾಗಿದ್ದ ಚಿಯಾಂಗ್ ಕೈ ಷೇಕ್‌ನು ಕಮ್ಯುನಿಸ್ಟ್ ಸೇನೆಯನ್ನು ವಿಸರ್ಜನೆಯನ್ನು ಘೋಷಿಸಿದನು. ಆದರೆ ಕಮ್ಯುನಿಸ್ಟರು ಅವನ ಆಜ್ಞೆಯನ್ನು ತಿರಸ್ಕರಿಸಿದರು. ಕಮ್ಯುನಿಸ್ಟರು ಮಾನ್ಯತೆಯನ್ನು ತಿರಸ್ಕರಿಸಿದರಲ್ಲದೆ, ಕಮ್ಯುನಿಸ್ಟ್ ಪಕ್ಷದ ಪುನರ್ ನಿರ್ಮಾಣ ಮತ್ತು ಬಲವರ್ಧನೆಗೆ ಪ್ರಾಮಾಣಿಕ ಪ್ರಯತ್ನದಲ್ಲಿ ತೊಡಗಿದರು.

## 143.9 ಮಾರುವೇಷದಲ್ಲಿ ಬಂದ ಅನುಗ್ರಹ

ಸುಮಾರು ಎಂಟು ಸಾವಿರ ಕಮ್ಯುನಿಸ್ಟರನ್ನು ಕೊಲ್ಲಲಾಯಿತಾದರೂ, ಅವರ ಬಲಿದಾನ ನಿಷ್ಪ್ರಯೋಜಕವಾಗಲಿಲ್ಲ. ಅನೇಕ ಚೀನಿಯರು ಕಮ್ಯುನಿಸ್ಟರನ್ನು ನಿಜವಾದ ದೇಶಭಕ್ತರಾಗಿದ್ದು, ಜಪಾನನ್ನು ವಿರೋಧಿಸಲು ಮುಂದಾಗಿರುವುದೆಂದು, ಆದರೆ ದೇಶಬಕ್ತರಲ್ಲದ ಕುಮಿಂಟಾಂಗ್ ಸೈನಿಕರು ಅವರನ್ನು ತಡೆಯುತ್ತಿರುವರೆಂದು ಭಾವಿಸಿದರು. ಚಾಮರ್ ಜಾನಸನ್ ಅಭಿಪ್ರಾಯದಲ್ಲಿ ಹೊಸ ನಾಲ್ಕನೇ ಸೇನೆಯ ಘಟನೆಯು ಭವಿಷ್ಯದಲ್ಲಿ ಕಮ್ಯುನಿಸ್ಟರಿಗೆ ಬಹಳವಾಗಿ ಅನುಕೂಲವಾಯಿತು".

### *143.9.1 ಜಪಾನೀ ವಿರೋಧಿ ಹೋರಾಟ 1941-45*

ಈ ಮೇಲಿನ ಘಟನೆಯ ನಂತರ ಈ ಎರಡು ರಾಜಕೀಯ ಪಕ್ಷಗಳ ನಡುವೆ ಇದ್ದ ಎಲ್ಲಾ ನಿಕಟ ಸಹಕಾರಹವೂ ಕೊನೆಗೊಂಡಿತು. ಜಪಾನಿನ ವಿರುದ್ಧ ಯಾವುದೇ ಜಂಟಿ ಯೋಜನೆ ಇರಲಿಲ್ಲ. ಕಮ್ಯುನಿಸ್ಟರು ಕುಮಿಂಟಾಂಗ್ ಪಕ್ಷದ ವರಿಷ್ಠರಿಂದ ಯಾವುದೇ ಆಜ್ಞೆಯನ್ನು ಒಪ್ಪಿಕೊಳ್ಳಲು ನಿರಾಕರಿಸಿದರು. ಅವರು ತಮ್ಮದೇ ಆದ ಯುದ್ಧ ಕೌಶಲದಂತೆ ಯುದ್ಧವನ್ನು ಮುಂದುವರಿಸಿದರು. ಪ್ರತಿಯಾಗಿ ಮಾರ್ಷಲ್ 'ಚಿಯಾಂಗ್ ಕೈ ಷೇಕ್‌ನು' ಅತ್ಯಂತ ಕ್ರಿಯಾಶೀಲವಾದ ನೀತಿಯನ್ನು ಅಳವಡಿಸಿಕೊಳ್ಳಲಿಲ್ಲ. "1941 ರಿಂದ ಸೆಪ್ಟೆಂಬರ್ 1945 ರಲ್ಲಿ ಜಪಾನಿನ ಶರಣಾಗತಿಯವರೆಗೆ, ಚೀನಾದಲ್ಲಿ ನಿಜವಾಗಿಯೂ ಎರಡು ಯುದ್ಧಗಳು ನಡೆದವು. ದಕ್ಷಿಣದಲ್ಲಿ ಕುಮಿಂಟಾಂಗ್ ಪಕ್ಷದ ಮತ್ತು ಉತ್ತರ ಹಾಗು ಈಶಾನ್ಯ ಭಾಗದಲ್ಲಿ ನಡೆದ ಕಮ್ಯುನಿಸ್ಟ್ ಯುದ್ಧ. ಈ ಎರಡೂ ಪಡೆಗಳು ಪರಸ್ಪರ ಅನುಮಾನದ ಮತ್ತು ಶಸ್ತ್ರಾಸ್ತ್ರ ತಟಸ್ಥತೆಯನ್ನು ಉಳಿಸಿಕೊಂಡವು. ಅವುಗಳ ನಡುವೆ ಯಾವುದೇ ಸಮನ್ವಯತೆ, ಯೋಜನೆಗಳ ವಿನಿಮಯ ಮತ್ತು ಸಹಕಾರಗಳು ಉಳಿದಿರಲಿಲ್ಲ.

ಕಮ್ಯುನಿಸ್ಟರ ಗೆರಿಲ್ಲಾ ನೀತಿಯಿಂದ ಜಪಾನಿಯರಿಗೆ ಅಪಾರ ತೊಂದರೆಯಾಯಿತು. ಈಗ ಕುಮಿಂಟಾಂಗ್‌ರು ಕಮ್ಯುನಿಸ್ಟ್‌ರ ವಿರುದ್ಧ ಇನ್ನೂ ಹೆಚ್ಚಿನ ಕಠಿಣ ನೀತಿಯನ್ನು ಅನುಸರಿಸಲು (ಅಳವಡಿಸಿಕೊಳ್ಳಲು) ತೀರ್ಮಾನಿಸಿದರು. ಜುಲೈ 1941 ರಲ್ಲಿ ಸುಪ್ರಸಿದ್ಧ "ಮೂರು ಎಲ್ಲಾ ನೀತಿ" (ಎಲ್ಲರನ್ನು ಸುಡುವ, ಎಲ್ಲರನ್ನೂ ಕೊಲ್ಲುವ, ಎಲ್ಲರನ್ನೂ ದೋಚುವ) ಯನ್ನು ಉತ್ತರ ಚೀನಾದಲ್ಲಿ ಅಳವಡಿಸಿಕೊಳ್ಳಲಾಯಿತು. ಇದರ ಪರಿಣಾಮವಾಗಿ ಎಂಟನೇ ಪಥದ ಸೇನೆಯ ಗಾತ್ರವನ್ನು 4,00,000 ದಿಂದ 3,00,000 ಜನರಿಗೆ ಇಳಿಸುವುದು ಮತ್ತು ಉತ್ತರ ಚೀನಾದಲ್ಲಿ ಕಮ್ಯುನಿಸ್ಟ್ ಪ್ರದೇಶಗಳ ಜನಸಂಖ್ಯೆಯನ್ನು 44 ಮಿಲಿಯನ್‌ನಿಂದ 25 ಮಿಲಿಯನ್‌ಗೆ ಕಡಿಮೆ ಮಾಡುವುದು ಇದರ ಪರಿಣಾಮವಾಗಿತ್ತು. ಜಪಾನಿಯರು ಅಳವಡಿಸಿಕೊಂಡ ದಮನಕಾರಿ ನೀತಿಯು ಅನೇಕ ಪರಿಣಾಮಗಳನ್ನು ಬೀರಿತು.

(ಅ) ಅದು ಕಮ್ಯುನಿಸ್ಟರಿಗೆ ಅಪಾರ ನೋವುಗಳನ್ನುಂಟುಮಾಡಿತು. ಜಪಾನಿಯರ ಕ್ರೂರ ನೀತಿಯು ಕಮ್ಯುನಿಸ್ಟರ ಸ್ಥಾನ ಅತ್ಯಂತ ಕಠಿಣವಾಗುವಂತೆ ಮಾಡಿತು. ವಾಸ್ತವವಾಗೂಯ ಕಮ್ಯುನಿಸ್ಟ್ ಪ್ರದೇಶಗಳ ಸಂಪೂರ್ಣ ಆರ್ಥಿಕ ದಿಗ್ಬಂಧನದಿಂದ ಮಾವೋ ಮತ್ತು ಅವನ ಅನುಯಾಯಿಗಳಿಗೆ ಅತ್ಯಧಿಕ ಆರ್ಥಿಕ ಮತ್ತು ರಾಜಕೀಯ ಸಮಸ್ಯೆಗಳನ್ನುಂಟು ಮಾಡಿತು

(ಆ) ಅದು ಕಮ್ಯುನಿಸ್ಟರು ದೃಢ ನಿರ್ಧಾರ ಮಾಡುವಂತೆ ಮಾಡಿತು. ಜಪಾನಿಯರು ಹೇರಿದ ಕಷ್ಟಗಳಿಂದಾಗಿ ಕಮ್ಯುನಿಸ್ಟರು ತಾಳ್ಮೆ ಕಳೆದುಕೊಂಡರು.

*ಪೆರ್ಲ್ ಹಾರ್ಬರ್‌ನ ಮೇಲೆ ಜಪಾನಿಯರ ದಾಳಿ, ಡಿಸೆಂಬರ್ 1941*

ಜೂನ್ 1941 ರಲ್ಲಿ ಹಿಟ್ಲರ್ ರಷ್ಯಾದ ಮೇಲೆ ಆಕ್ರಮಣ ಮಾಡಿದನು ಮತ್ತು ಡಿಸೆಂಬರ್ 1941 ರಲ್ಲಿ ಜಪಾನ್ ಪೆರ್ಲ್ ಹಾರ್ಬರ್‌ನ ಮೇಲೆ ಹಠಾತ್ತನೆ ದಾಳಿ ಮಾಡಿತು. ಹೀಗೆ ಜಪಾನ್ ಮತ್ತು ಮಿತ್ರ ಪಕ್ಷದ ರಾಷ್ಟ್ರಗಳ ನಡುವೆ ಯುದ್ಧ ಆರಂಭವಾಯಿತು. ಅಮೆರಿಕಾ ಮತ್ತು ಇಂಗ್ಲೆಂಡ್ ಜಪಾನಿನೊಂದಿಗೆ ಯುದ್ಧದಲ್ಲಿ ತೊಡಗಿದವು. ಈ ದೇಶಗಳ ಬಂಡವಾಳ ಷಾಹಿಗಳೊಂದಿಗೆ ಸ್ನೇಹ ಬೆಳೆಸಿದರು. ಅವರು ತೀವ್ರವಾದ ಸಂಕಷ್ಟಗಳಿಗೀಡಾಗಿದ್ದರಿಂದ ಈ ದೇಶಗಳಿಂದ ಸಹಾಯ ಭರವಸೆಯನ್ನು ಸ್ವಾಗತಿಸಿದರು. ಪೆರ್ಲ್ ಹಾರ್ಬರ್ ಘಟನೆಯ ಎರಡು ದಿವಸಗಳ ನಂತರ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿಯು ಒಂದು ನಿರ್ದೇಶನವನ್ನು ಹೊರಡಿಸಿ ಪೆಸಿಫಿಕ್‌ನಲ್ಲಿ ಜಪಾನೀ ವಿರೋಧಿ ಸಂಯುಕ್ತ ರಂಗದಲ್ಲಿ ಬ್ರಿಟನ್ ಮತ್ತು ಅಮೆರಿಕಾಗಳ ಭಾಗವಹಿಸುವಿಕೆಯ ಮಹತ್ವವನ್ನು ಒತ್ತಿ ಹೇಳಿತು.

### *143.9.2 ಅಮೆರಿಕಾದ ಸಂಧಾನದ ಪ್ರಯತ್ನ*

ತಕ್ಷಣವೇ ಜಪಾನಿನ ವಿರುದ್ಧ ಯುದ್ಧವನ್ನು ಮುಂದುವರಿಸಲು, ಚೀನಾವನ್ನು ಒಂದುಗೂಡಿಸುವುದು ಮತ್ತು ಚೀನಾ ಎರಡು ಪ್ರಮುಖ ಪಕ್ಷಗಳು ಹತ್ತಿರವಾಗುವುದು ಸೂಕ್ತವೆಂದು ಅಮೆರಿಕನ್ನರಿಗೆ ಮನವರಿಕೆಯಾಯಿತು. ಈ ಉದ್ದೇಶದಿಂದ ಅವರು ಪ್ರಯತ್ನವನ್ನು ಆರಂಭಿಸಿದರು. ಕಮ್ಯುನಿಸ್ಟ್ ನೆಲೆಗೆ ಒಂದು ಅಮೆರಿಕಾದ ಸೇನಾ ನಿಯೋಗವನ್ನು ಕಳುಹಿಸಲಾಯಿತು ಮತ್ತು ರಾಜಕೀಯ ಸಂಧಾನಕ್ಕೆ ಪ್ರಯತ್ನಗಳು ಆರಂಭವಾದವು. 1944 ರ ಶರತ್ಕಾಲ ಕಾಲದಲ್ಲಿ ಮಾವೋತ್ಸೇತುಂಗ್ ಮತ್ತು ಅಮೇರಿಕ ಸರ್ಕಾರದ ಪ್ರತಿನಿಧಿಗಳ ನಡುವೆ ಮೊದಲನೆ ಮಹತ್ವದ ಸಂಪರ್ಕಗಳು ನಡೆದವು. ಆಗಸ್ಟ್‌ನಲ್ಲಿ ಅಮೆರಿಕಾದ ಸೇನಾ ನಿಯೋಗವು ರಾಯಭಾರಿ ಜಾನ್ ಎಸ್ ಸರ್ವೀಸ್‌ನೊಂದಿಗೆ ಯೆನಾನ್‌ಗೆ ಬಂದಿತು.

"ಆಯೋಗವು ಜಪಾನಿನ ವಿರುದ್ಧ ಯುದ್ಧವನ್ನು ಮುಂದುವರಿಸಲು ಚೀನಾದ ಕಮ್ಯುನಿಸ್ಟರೊಂದಿಗೆ ಸಂಬಂಧಗಳನ್ನು ಸುಧಾರಿಸಿಕೊಳ್ಳುವುದರ ಮಹತ್ವವನ್ನು ಚಿಯಾಂಗ್ ಕೈ ಷೇಕ್‌ನಿಗೆ ಒತ್ತಿ ಹೇಳಿತು".

ಹರ್ಲೆಯ ಸಲಹೆಗಳು: ಅಮೆರಿಕಾದ ಪ್ರತಿನಿಧಿಯಾಗಿದ್ದ ಪ್ಯಾಟ್ರಿಕ್ ಹರ್ಲೆ ಮಾವೋತ್ಸೇ ತುಂಗನನ್ನು ಭೇಟಿಯಾದನು. ಅಂತಿಮವಾಗಿ ಒಂದು ಯೋಜನೆಯನ್ನು ಒಪ್ಪಿಕೊಳ್ಳಲಾಯಿತು. ಸಮ್ಮಿಶ್ರ ಸರ್ಕಾರದ ಭರವಸೆಯ ಮೇರೆಗೆ ಮಾವೋತ್ಸೇ ತುಂಗನು ಸಮ್ಮಿಶ್ರ ಸರ್ಕಾರಕ್ಕೆ ವಹಿಸಲು ಒಪ್ಪಿದನು. ಆದರೆ ಚಿಯಾಂಗ್ ಕೈ ಷೇಕ್‌ನು ಅಂತಹ ಯಾವುದೇ ಸಮ್ಮಿಶ್ರ ಸರ್ಕಾರದಲ್ಲಿ ಕಮ್ಯುನಿಸ್ಟರನ್ನು ಸೇರಿಸಿಕೊಳ್ಳಲು ನಿರಾಕರಿಸಿದನು. ಹೀಗೆ ಈ ಯೋಜನೆ ಮುರಿದುಬಿದ್ದಿತು ಮತ್ತು ಅದರಿಂದ ಏನೂ ಆಗಲಿಲ್ಲ. ಸ್ಟ್ಯೂಯರ್ಟ್ ಸ್ಕ್ರಾಮ್ ಬರೆದಿರುವಂತೆ "ಪ್ಯಾಟ್ರಿಕ್ ಹರ್ಲೆಯು ಕಮ್ಯುನಿಸ್ಟರು ಮತ್ತು ಕುಮಿಂಟಾಂಗ್‌ರ ನಡುವೆ ಐದು ಅಂಶಗಳ ಕರಡು ಒಪ್ಪಂದವನ್ನು ಕೊಂಡೊಯ್ದನು. ಅದು ತನ್ನ ಅಭ್ಯಾಗತರ ಸ್ವಭಾವಕ್ಕೆ ತಕ್ಕುದಾಗಿದ್ದಿತು".

ಫೆಬ್ರವರಿ 1945 ರಲ್ಲಿ ಚು ತೆ ಕೈಗೊಂಬೆ ನಾನ್‌ಕಿಂಗ್ ಸರ್ಕಾರದಿಂದ ಸೇನಾಪಡೆಗಳನ್ನು ಪಕ್ಷಾಂತರವನ್ನು ಪ್ರೋತ್ಸಾಹಿಸಲು 20 ಮಿಲಿಯನ್ ಡಾಲರ್‌ಗಳ ಸಾಲಕ್ಕೆ ಬೇಡಿಕೆ ಸಲ್ಲಿಸಿದನು. ಆದರೆ ಇದನ್ನು ನಿರಾಕರಿಸಿದ ಹರ್ಲೆ, ಅಮೆರಿಕಾದ ಎಲ್ಲಾ ಸಂಪನ್ಮೂಲಗಳನ್ನು ರಾಷ್ಟ್ರೀಯ ಸರ್ಕಾರದ ಮೂಲಕವೇ ಕಳುಹಿಸುವಂತೆ ಸೂಚಿಸಿದನು.

### *143.9.3 ಜಪಾನಿನ ಶರಣಾಗತಿಯಿಂದ ಉದ್ಭವಿಸಿದ ಸಮಸ್ಯೆಗಳು*

ಎರಡೂ ಪಕ್ಷಗಳು(ಕುಮಿಂಟಾಂಗ್ ಮತ್ತು ಕಮ್ಯುನಿಸ್ಟ್) ತಮ್ಮ ನಡುವೆ ಘರ್ಷಣೆ ಅನಿವಾರ್ಯವೆಂದು ಅರಿತವು. ಅವರಿಬ್ಬರೂ ಶರಣಾಗತಿಯು 'ಜಪಾನಿನ ಶರಣಾಗತಿಯನ್ನು ಯಾರು ಒಪ್ಪಿಕೊಳ್ಳಬೇಕು? ಎಂಬ ಸಮಸ್ಯೆಯನ್ನು ಹುಟ್ಟುಹಾಕಿತು. ಕುಮಿಂಟಾಂಗ್ ಪಕ್ಷವು ತಮ್ಮದು ಚೀನಾದ ನ್ಯಾಯಸಮ್ಮತ ಸರ್ಕಾರವಾದ್ದರಿಂದ ಜಪಾನ್ ತಮ್ಮ ಮುಂದೆ ಶರಣಾಗಬೇಕೆಂದು ಬಯಸಿತು.

## 143.10 ಕಮ್ಯುನಿಸ್ಟರ ವಿಜಯ

ಜಪಾನಿನ ಶರಣಾಗತಿಯ (ಆಗಸ್ಟ್ 1945) ಪರಿಣಾಮದಿಂದಾಗಿ ರಾಷ್ಟ್ರೀಯವಾದಿಗಳು ಮತ್ತು ಕಮ್ಯುನಿಸ್ಟರು ಜಪಾನಿಯರು ತೆರವು ಮಾಡಿದ ಪ್ರದೇಶಗಳನ್ನು ವಶಪಡಿಸಿಕೊಳ್ಳಲು ಪೈಪೋಟಿಯಲ್ಲಿ ತೊಡಗಿದರು. ಘರ್ಷಣೆ ಅನಿವಾರ್ಯವಾಯಿತು. ಮಂಚೂರಿಯಾ

ಮತ್ತು ಉತ್ತರ ಚೀನಾದಲ್ಲಿ ಭಾರೀ ಪ್ರಯಾಣದ ಘರ್ಷಣೆ ಆರಂಭವಾಯಿತು. ರಾಷ್ಟ್ರೀಯವಾದಿಗಳು ಗಣನೀಯವಾದ ವಿಜಯವನ್ನು ಸಾಧಿಸಿದರು. ಆದರೆ ಕುಮಿಂಟಾಂಗ್ ಸರ್ಕಾರ ಪರಿಸ್ಥಿತಿಯ ಸದುಪಯೋಗಪಡಿಸಿಕೊಳ್ಳಲು ಅಸಮರ್ಥವಾಯಿತು. ಕಮ್ಯುನಿಸ್ಟರು ಪಟ್ಟಣಗಳಿಗೆ ಬದಲಾಗಿ ಒಳಭಾಗದ ಮೇಲೆ ತಮ್ಮ ಹತೋಟಿಯನ್ನು ಉಳಿಸಿಕೊಂಡರು. ಮಾವೋತ್ಸೇತುಂಗನು ಎಲ್ಲಾ ಕುಮಿಂಟಾಂಗ್ ವಿರೋಧಿಗಳೊಂದಿಗೆ ಸ್ನೇಹ ಬೆಳೆಸಿಕೊಳ್ಳಲು ಬಹಳವಾಗಿ ಶ್ರಮಿಸಿದನು.

ಜನತಾ ಸೇನೆಯೆಂದು ಮರು ನಾಮಕರಣಗೊಂಡ ಕೆಂಪು ಸೇನೆಯು ಈಗ ಪ್ರಬಲವಾದ ಪ್ರತಿದಾಳಿಯನ್ನು ಪ್ರಾರಂಭಿಸಿತು. ರಾಷ್ಟ್ರೀಯ ಪಡೆಗಳು ಕಮ್ಯುನಿಸ್ಟರಿಗೆ ಶರಣಾದವು. ಕಮ್ಯುನಿಸ್ಟರು ವಿಜಯಿಗಳಾದರು. 1950 ರ ವೇಳೆಗೆ ಅವರು ಚೀನಾದ ಮುಖ್ಯ ಭೂಮಿಯ ಸಂಪೂರ್ಣ ಭಾಗದ ಒಡೆಯರಾದರು. ಚಿಯಾಂಗ್ ಕೈ ಷೆಕ್ ಫಾರ್ಮೋಸಾಕ್ಕೆ ಪಲಾಯನ ಮಾಡಿದನು.

## 143.11 ಚೀನಾದ ಜನತಾ ಗಣರಾಜ್ಯ

ಕುಮಿಂಟಾಂಗ್ ಸರ್ಕಾರದ ವಿರುದ್ಧ ತಮ್ಮ ಅಂತಿಮ ವಿಜಯದ ನಂತರ, ಕಮ್ಯುನಿಸ್ಟರು ಚೀನಾದ ಜನತಾ ಗಣರಾಜ್ಯದ ಸ್ಥಾಪನೆಯನ್ನು ಘೋಷಿಸಿದರು. ಹೊಸ ಸರ್ಕಾರವು ವಾಸ್ತವವಾಗಿ ಕಮ್ಯುನಿಸ್ಟ್ ಸರ್ವಾಧಿಕಾರವಾಗಿತ್ತು. ಹೊಸ ಕಮ್ಯುನಿಸ್ಟ್ ಸರ್ಕಾರದ ಆಧಾರಗಳೆಂದರೆ

1) ಕೇಂದ್ರ ಜನತಾ ಸರ್ಕಾರದ ಅವಯವ ಕಾನೂನು

2) ಚೀನೀ ಜನತಾ ರಾಜಕೀಯ ಸಲಹಾ ಸಮಿತಿಯ ಅವಯವ ಕಾನೂನು ಮತ್ತು

3) ಸಿಪಿಪಿಸಿಸಿಯ ಸಾಮಾನ್ಯ ಕಾರ್ಯಕ್ರಮದ ಅರೆ ಸಂವಿಧಾನಾತ್ಮಕ ಸ್ವರೂಪ. 1954 ರ ಸೆಪ್ಟೆಂಬರ್ 24 ರಂದು ಅಂಗೀಕರಿಸಲಾದ ಒಂದು ಸಂವಿಧಾನಕ್ಕೆ ಇದಕ್ಕೆ ಬದಲಾಗಿ ಜಾರಿಗೆ ತರಲಾಯಿತು.

ಚೀನೀ ಜನತಾ ರಾಜಕೀಯ ಸಲಹಾ ಸಭೆಯು ಅತ್ಯಂತ ಕೇಂದ್ರೀಕೃತವಾದ ಮತ್ತು ಪ್ರಬಲವಾದ ಶಿಸ್ತಿನ ವ್ಯವಸ್ಥೆಯಾಗಿದ್ದಿತು. ಅದು ಸರ್ಕಾರದ ಪ್ರತಿಯೊಂದು ಹಂತವನ್ನೂ ನಿಯಂತ್ರಿಸುತ್ತಿದ್ದಿತು. ಜೊತೆಗೆ ಅದು ಸೇನೆ ಮತ್ತು ಜನರ ಸಂಘ ಸಂಸ್ಥೆಗಳನ್ನು ನಿಯಂತ್ರಿಸುತ್ತಿದ್ದಿತು. ಎಲ್ಲಾ ಸುದ್ದಿ ಮಾಧ್ಯಮಗಳು ಆಕಾಶವಾಣಿ, ಮುದ್ರಣಾಲಯ, ಚಲನಚಿತ್ರಗಳು, ಶಿಕ್ಷಣ ವ್ಯವಸ್ಥೆಗಳು ಸರ್ಕಾರದ ಏಕಸ್ವಾಮ್ಯವಾಗಿದ್ದವು. ಚೀನೀಯರು ಸರ್ಕಾರದಲ್ಲಿ ಮುಖ್ಯವಾಗಿ ಸ್ಥಳೀಯ ಸರ್ಕಾರಗಳಲ್ಲಿ ಭಾಗವಹಿಸಲು ಅವಕಾಶ ನೀಡಲಾಗಿತ್ತೆಂಬುದನ್ನು ಗಮನಿಸಬಹುದಾಗಿದೆ.

## 143.12 ಮುಕ್ತಾಯ

1. ಚೀನಾದ ಕಮ್ಯುನಿಸ್ಟ್ ಪಕ್ಷ 1921 ರಲ್ಲಿ ಸ್ಥಾಪಿತವಾಯಿತು ಮತ್ತು ಅದರ ಮೊದಲ ರಹಸ್ಯ ಅಧಿವೇಶನ ಷಾಂಘೈನಲ್ಲಿ ನಡೆಯಿತು.

2. ಸ್ವಲ್ಪ ಕಾಲದಲ್ಲಿಯೇ ಕಮ್ಯುನಿಸ್ಟರು ಮತ್ತು ಚಿಯಾಂಗ್ ಕೈ ಷೆಕ್‌ನ ನಾಯಕತ್ವದ ರಾಷ್ಟ್ರೀಯ ಪಕ್ಷ ಅಥವಾ ಕುಮಿಂಟಾಂಗ್ ಪಕ್ಷಗಳ ನಡುವೆ ಹಗೆತನ ಪ್ರಾರಂಭವಾಯಿತು. ಅವನು ಕಮ್ಯುನಿಸ್ಟರ ಕೆಂಪು ಸೇನೆಯನ್ನು ನಾಶಪಡಿಸಲು ಐದು ವಿಫಲ ದಾಳಿಗಳನ್ನು ನಡೆಸಿದನು.

3. ತರುವಾಯ ಕಮ್ಯುನಿಸ್ಟರು ಕಿಯಾಂಗ್ಸಿಯಲ್ಲಿದ್ದ ತಮ್ಮ ನೆಲೆಯನ್ನು ತ್ಯಜಿಸಿ ಪ್ರಸಿದ್ಧ ದೂರದ ಪ್ರಯಾಣವನ್ನು ಆರಂಭಿಸಿದರು (ಅಕ್ಟೋಬರ್ 1934) ಮತ್ತು ಷನ್ಸಿಯನ್ನು ತಲುಪಿದರು (ಅಕ್ಟೋಬರ್ 1965) ಅಲ್ಲಿ ಅವರು ಬೃಹತ್ ಪ್ರಮಾಣದ ರಾಜಕೀಯ - ಆರ್ಥಿಕ ಪುನರ್ ವ್ಯವಸ್ಥೆಯನ್ನು ಕೈಗೊಂಡರು.

4. ಜಪಾನಿಯರು ಚೀನಾದಲ್ಲಿ ವಿಸ್ತರಣೆಗೆ ಪ್ರಯತ್ನಿಸಿದಾಗ, ಕುಮಿಂಟಾಂಗ್ ಮತ್ತು ಕಮ್ಯುನಿಸ್ಟರು ಜಪಾನಿನ ಮುನ್ನಡೆಯನ್ನು ತಡೆಯಲು ಒಂದು ಆಂತರಿಕ ಶಾಂತಿ ಒಪ್ಪಂದವನ್ನು ಮಾಡಿಕೊಂಡರು (1937 -1940)

5. ಆಗ್ನೇಯ ಮತ್ತು ಮಧ್ಯ ಚೀನಾದ ಮೇಲೆ ತಮ್ಮ ಕಮ್ಯುನಿಸ್ಟರು ಹತೋಟಿಯನ್ನು ಸ್ಥಾಪಿಸಲು ಪ್ರಯತ್ನಿಸಿದಾಗ 1940 ರಲ್ಲಿ ಕಮ್ಯುನಿಸ್ಟರು ಮತ್ತು ಕುಮಿಂಟಾಂಗರ ನಡುವೆ ಮತ್ತೊಮ್ಮೆ ಭಿನ್ನಾಭಿಪ್ರಾಯವುಂಟಾಯಿತು. ಅಮೇರಿಕಾದ ಸಂಧಾನದ ಪ್ರಯತ್ನವೂ ವಿಫಲವಾಯಿತು. ಬಹಿರಂಗ ಹಗೆತನ ಕಮ್ಯುನಿಸ್ಟರನ್ನು ಹಿಂಸೆಗೆ ಗುರಿಪಡಿಸಲಾಯಿತು. ಇದು ಕಮ್ಯುನಿಸ್ಟರ ಬಗ್ಗೆ ಚೀನಾದ ಗ್ರಾಮಾಂತರ ಜನರ ಸಹಾನುಭೂತಿಗೆ ಕಾರಣವಾಯಿತು.

6. ಉತ್ತರ ಚೀನಾದಿಂದ ಜಪಾನಿಯರನ್ನು ಹೊಡೆದೋಡಿಸಲು ಕಮ್ಯುನಿಸ್ಟರು ಗೆರಿಲ್ಲಾ ಯುದ್ಧ ತಂತ್ರಗಳನ್ನು ಅನುಸರಿಸಿದರು. ಕಮ್ಯುನಿಸ್ಟರ ವಿರುದ್ಧ ಜಪಾನಿಯರ ದಮನಕಾರಿ ಕ್ರಮಗಳು ಅವರಿಗೆ ಕುಮಿಂಟಾಂಗ್ ಪಕ್ಷದ ವಿರುದ್ಧ ಚೀನಾದಲ್ಲಿ ಹೆಚ್ಚಿನ ಬೆಂಬಲವನ್ನು ಗಳಿಸಿಕೊಟ್ಟಿತು.

7. 1945 ರಲ್ಲಿ ಜಪಾನಿನ ಶರಣಾಗತಿಯ ನಂತರ ಅಧಿಕಾರಕ್ಕಾಗಿ ಕುಮಿಂಟಾಂಗ್ ಮತ್ತು ಕಮ್ಯುನಿಸ್ಟರ ನಡುವೆ ತೀವ್ರ ಪೈಪೋಟಿ ಉಂಟಾಯಿತು. ಕುಮಿಂಟಾಂಗ್ ಸರ್ಕಾರದ ಪಡೆಗಳನ್ನು ಕೆಂಪು ಸೇನೆ 1948 ರಲ್ಲಿ ನಿರ್ಣಯಾತ್ಮಕವಾಗಿ ಸೋಲಿಸಿತು. ಪರಿಣಾಮವಾಗಿ ಕಮ್ಯುನಿಸ್ಟರು 1950 ರಲ್ಲಿ ಇಡೀ ಚೀನಾದ ಪ್ರಭುಗಳಾದರು. ತರುವಾಯ ಜನತಾ ಗಣರಾಜ್ಯವನ್ನು ಘೋಷಿಸಲಾಯಿತು.

## 143.13 ಮಾದರಿ ಪ್ರಶ್ನೆಗಳು

1. ಚೀನಾದ ಜನತಾ ಗಣರಾಜ್ಯದ ಘೋಷಣೆಗೆ ಕಾರಣವಾದ ಸನ್ನಿವೇಶವನ್ನು ವಿವರಿಸಿ.
2. ಚೀನಾದಲ್ಲಿ ಪ್ರಾಬಲ್ಯಕ್ಕಾಗಿ ನಡೆದ ಪೈಪೋಟಿಯಲ್ಲಿ ಕುಮಿಂಟಾಂಗ್ ಮತ್ತು ಕಮ್ಯುನಿಸ್ಟರ ನಡುವಿನ ಹಗೆತನವನ್ನು ವಿವರಿಸಿ.
3. 'ದೂರದ ಪ್ರಯಾಣ' ಆಧುನಿಕ ಚೀನಾದ ಇತಿಹಾಸದ ಪ್ರಮುಖ ತಿರುವಿನ ಹಂತ ಚರ್ಚಿಸಿ.
4. ಜಪಾನ್ ಚೀನಾವನ್ನು ಆಕ್ರಮಿಸಿದುದು ಚೀನಾದಲ್ಲಿ ಕಮ್ಯುನಿಸ್ಟ್ ಸಿದ್ಧಾಂತದ ಯಶಸ್ಸಿಗೆ ಪರೋಕ್ಷ ವರವಾಗಿತ್ತು - ವಿಶ್ಲೇಷಿಸಿ,
5. ತಮ್ಮ ಪ್ರಾಬಲ್ಯಕ್ಕಾಗಿ ನಡೆದ ಹೋರಾಟದಲ್ಲಿ ಕುಮಿಂಟಾಂಗ್ ಪಕ್ಷ ಮತ್ತು ಚಿಯಾಂಗ್ ಕೈ ಷೇಕ್‌ರು ತಮ್ಮ ತಪ್ಪು ಗುರುತಿಸುವಿಕೆಯಿಂದ ಸೋಲನ್ನನುಭವಿಸಿದರು. ಪರಿಶೀಲಿಸಿ.
6. "ಚಿಯಾಂಗ್ ಕೈ ಷೇಕ್‌ರು ಹೊರಗಿನ ಕಾರಣಗಳಿಗಾಗಿ ಅಲ್ಲದೆ ತನ್ನ ದುಸ್ಸಾಹಸಗಳಿಂದ ವಿಫಲನಾದನು" ವ್ಯಾಖ್ಯಾನಿಸಿ.

## 143.14 ಹೆಚ್ಚಿನ ಅಧ್ಯಯನಕ್ಕೆ ಪುಸ್ತಕಗಳು


| | | | |
|---|---|---|---|
| 1. | Conrad et.al | : | A Documentary History of Chinese Commnunism, 1952 |
| 2. | Robert B. Rigg | : | Red China's Fighting Hordes (1952) |
| 3. | K. Ping Chia | : | China New Age R New Outlook (1956) |
| 4. | F.W. Houn | : | A Short History of Chinese Communication (1967) |
| 5. | Edgar Snow | : | Random Notes on Red China 1936-45 (1957) |
| 6. | P. Dult | : | China's Foreign Policy (1964) |
| 7. | V.P. Dutt | : | China and the World, 1966. |

## ಟಿಪ್ಪಣಿಗಳು

# ಘಟಕ - 144

## ಅಂತರ್ಯುದ್ಧ - ಕಾರಣಗಳು, ಯುದ್ಧದ ಗತಿ ಮತ್ತು ಪರಿಣಾಮಗಳು


144.0 ಉದ್ದೇಶಗಳು

144.1 ಪೀಠಿಕೆ

144.2 ಅಂತರ್ಯುದ್ಧಕ್ಕೆ ಮೊದಲಿನ ಚೀನ

144.2.1 ನಾಯಕರ ವಿರೋಧಿ ನಿಲುವು

144.2.2 ಅಮೆರಿಕಾದ ಸಂಧಾನದ ಪ್ರಯತ್ನಗಳು

144.2.3 ಸ್ಪರ್ಧಾತ್ಮಕ ಬೇಡಿಕೆಗಳು

144.3 ಹಳಸಿದ ಸಂಬಂಧ (ಹದಗೆಟ್ಟ ಸಂಬಂಧ)

144.3.1 ಮಂಚೂರಿಯಾದಿಂದ ರಷ್ಯಾದ ನಿರ್ಗಮನ

144.4 ಕುಮಿಂಟಾಂಗ್ ಮತ್ತು ಕಮ್ಯುನಿಸ್ಟರ (ಧ್ಯೇಯಗಳು) ಉದ್ದೇಶಗಳು

144.5 ಯುದ್ಧದ ಗತಿ (ಹಾದಿ)

144.5.1 ಮಂಚೂರಿಯಾ ಮತ್ತು ಷಾಂಟುಂಗ್‌ನಲ್ಲಿ ಚಿಯಾಂಗ್‌ನ ವಿಫಲತೆ

144.5.2 1947 ರ ಕಡೆಯ ವೇಳೆಯಲ್ಲಿನ ಸ್ಥಾನಮಾನ

144.5.3 ಕಮ್ಯುನಿಸ್ಟರ ಪ್ರತಿ ದಾಳಿ

144.5.4 ಚಿಂತಾಜನಕ (ದಾರುಣ) ಆರ್ಥಿಕ ಪರಿಸ್ಥಿತಿ

144.5.5 ಉತ್ತರ ಚೀನ ಮತ್ತು ಮಂಚೂರಿಯಾದಲ್ಲಿ ರಾಷ್ಟ್ರೀಯ ಪಕ್ಷದ ಆಳ್ವಿಕೆಯ ಅಂತ್ಯ

144.5.6 ಪೀಕಿಂಗಿನ ಶರಣಾಗತಿ (1948)

144.5.7 ಶಾಂತಿ ಪ್ರಯತ್ನಗಳ ವೈಫಲ್ಯ

144.5.8 ಹೋರಾಟದ ಕಡೆಯ ಹಂತ

144.6 ಕಮ್ಯುನಿಸ್ಟರ ವಿಜಯ - ಕಾರಣಗಳು

144.7 ಚಿಯಾಂಗ್ ಕೈ ಷೇಕ್ ವಿಫಲತೆ - ಕಾರಣಗಳು

144.8 ಮಾವೋನ ನಾಯಕತ್ವ

144.9 ಮುಕ್ತಾಯ

144.10 ಮಾದರಿ ಪ್ರಶ್ನೆಗಳು

144.11 ಹೆಚ್ಚಿನ ಅಧ್ಯಯನಕ್ಕೆ ಪುಸ್ತಕಗಳು

## 144.0 ಉದ್ದೇಶಗಳು

ಈ ಘಟಕದ ಅಧ್ಯಯನವು ಇವುಗಳನ್ನು ಸೂಕ್ತವಾಗಿ ಅರ್ಥಮಾಡಿಕೊಳ್ಳಲು ಸಾಧ್ಯವಾಗುವಂತೆ ಮಾಡುತ್ತದೆ.

1. ಚಿಯಾಂಗ್ ಕೈ ಷೆಕ್ ಮತ್ತು ಕಮ್ಯುನಿಸ್ಟರ ವಿರೋಧಾತ್ಮಕ ನಿಲುವಿಗೆ ಕಾರಣವಾದ ಹಿನ್ನೆಲೆ ಮತ್ತು ಸನ್ನಿವೇಶಗಳು
2. ಚೀನಾದ ಅನಾನುಕೂಲಕರ ಮತ್ತು ಅಸಮರ್ಥ ಕುಮಿಂಟಾಂಗ್ ಸರ್ಕಾರ
3. ಕುಮಿಂಟಾಂಗ್ ಪಡೆಗಳು ಮತ್ತು ಕಮ್ಯುನಿಸ್ಟರ ನಡುವೆ ದೀರ್ಘ ಕಾಲದ ಯುದ್ಧ
4. ಚೀನಾದಲ್ಲಿ ಕಮ್ಯುನಿಸ್ಟರ ಅಂತಿಮ ವಿಜಯಕ್ಕೆ ಮಾವೋನ ಸಮರ್ಥ ನಾಯಕತ್ವ

## 144.1 ಪೀಠಿಕೆ

ಚೀನಾದಲ್ಲಿ ನಡೆದ ಅಂತರ್ಯುದ್ಧವು ಎರಡು ಕಾರಣಗಳಿಂದ ರಾಷ್ಟ್ರೀಯ ಮಹತ್ವದ ಅಸಾಧಾರಣ ಘಟನೆಯೆನಿಸಿದೆ. ಅದು ಚಿಯಾಂಗ್ ಕೈ ಷೆಕ್‌ನ ದೀರ್ಘ ಆಳ್ವಿಕೆಯನ್ನು ಕೊನೆಗೊಳಿಸಿತು ಮತ್ತು ಇಡೀ ದೇಶವನ್ನು ಕೆಂಪು ಚೀನವನ್ನಾಗಿ ಪರಿವರ್ತಿಸಿದ ಕಮ್ಯುನಿಸ್ಟರ ಪ್ರಾಬಲ್ಯವನ್ನು ಸ್ಥಾಪಿಸಿತು.

ಈ ದೃಷ್ಟಿಯಿಂದ ಅಂತರ್ಯುದ್ಧದ ಪೂರ್ವದ ಚೀನಾದ ಪರಿಸ್ಥಿತಿಯ ಒಂದು ಸಂಕ್ಷಿಪ್ತ ಪರಿಚಯ ಅಗತ್ಯವಾಗಿದೆ. ಅಂತರ್ಯುದ್ಧಕ್ಕೆ ಮೊದಲು ಕುಮಿಂಟಾಂಗ್ ಸರ್ಕಾರದ ಮುಖ್ಯಸ್ಥನಾಗಿ ಚಿಯಾಂಗ್ ಕೈ ಷೆಕ್‌ನು ಅಮೆರಿಕಾದ ತೆರೆಮರೆಯ ಬಾರೀ ಬೆಂಬಲದಿಂದ ಪ್ರಮುಖ ಸ್ಥಾನವನ್ನು ಪಡೆದಿದ್ದನು. ಇದಕ್ಕೆ ವಿರುದ್ಧವಾಗಿ ಅಂತರ್ಯುದ್ಧದ ಪ್ರಾರಂಭದಲ್ಲಿ ಕಮ್ಯುನಿಸ್ಟರು ಸ್ವೀಕರಿಸುವ ಸಾಧಿನದಲ್ಲಿದ್ದರು. ಆದಾಗ್ಯೂ ಅಂತರ್ಯುದ್ಧದ ಸಮಯದಲ್ಲಿ ಅವರು ದೊರೆತ ಎಲ್ಲಾ ಅವಕಾಶಗಳನ್ನು ಸದುಪಯೋಗಪಡಿಸಿಕೊಂಡರು. ಪರಿಣಾಮಕಾರಿ ಮತ್ತು ಸಮರ್ಥ ನಾಯಕತ್ವವನ್ನು ಪಡೆದು ಕಮ್ಯುನಿಸ್ಟರು ಎಲ್ಲಾ ಕಷ್ಟಗಳನ್ನೂ ಎದುರಿಸಿದರು ಮತ್ತು ಕೆಳಹಂತದ ಬೆಂಬಲವನ್ನು ಗಳಿಸಲು ಪ್ರಯತ್ನಿಸಿದರು. ಜಪಾನಿನ ಶರಣಾಗತಿಯಿಂದುಂಟಾಗಿದ್ದ ಅತ್ಯಂತ ಅತಂತ್ರ ರಾಜಕೀಯ ವಾತಾವರಣವನ್ನು ಚೀನಾದ ಕಮ್ಯುನಿಸ್ಟ್ ಸಿದ್ಧಾಂತದ ಅನುಕೂಲಕ್ಕೆ ಬಳಸಿಕೊಳ್ಳಲಾಯಿತು. ಅವರು ಗ್ರಾಮಾಂತರ ಚೀನಾವನ್ನು ತಮ್ಮ ಕಡೆಗೆ ಒಲಿಸಿಕೊಳ್ಳಲು ಪರಿಸ್ಥಿತಿಯನ್ನು ಅತ್ಯಂತ ಜಾಗರೂಕತೆಯಿಂದ ಬಳಸಿಕೊಂಡರು. ಅವರ ವಿರೋಧಿಯಾಗಿದ್ದ ಕುಮಿಂಟಾಂಗ್ ಪಕ್ಷ ಗ್ರಾಮಾಂತರ ನೆಲೆ ಮತ್ತು ಜನರಿಂದ ದೂರ ಉಳಿಯಿತು ಮತ್ತು ಅವರ ದುಸ್ಸಾಹಸ ಅಂತಿಮವಾಗಿ ಅವರನ್ನು ಚೀನಾದ ಮುಖ್ಯ ಭೂಮಿಯಿಂದ ಹೊರಹಾಕಿತು. ಪ್ರಾಬಲ್ಯಕ್ಕಾಗಿ ನಡೆದ ಹೋರಾಟದಲ್ಲಿ ಕಮ್ಯುನಿಸ್ಟರು ಜಯಗಳಿಸಿ ಇಡೀ ಚೀನಾವನ್ನು ತನ್ನ ಹತೋಟಿಗೆ ತಂದುಕೊಂಡರು.

## 144.2 ಅಂತರ್ಯುದ್ಧಕ್ಕೆ ಮೊದಲಿನ ಚೀನಾ

ಜಪಾನಿನ ಮೇಲೆ ಆಕ್ರಮಣ, ವೈಮಾನಿಕ ಬಾಂಬ್ ದಾಳಿ, ಹಿರೋಷಿಮಾ ಮತ್ತು ನಾಗಾಸಾಕಿಗಳ ಮೇಲೆ ಬಾಂಬ್ ಪ್ರಯೋಗ ಮುಂತಾದವು ಜಪಾನನ್ನು ಶರಣಾಗುವಂತೆ ಒತ್ತಡ ಹೇರಿದವು. ಇದು ಚೀನಾದಲ್ಲಿ ಶೂನ್ಯ ವಾತಾವರಣವನ್ನು ಸೃಷ್ಟಿಸಿ ಅಂತಿಮವಾಗಿ ಅಂತರ್ಯುದ್ಧದಲ್ಲಿ ಪರ್ಯಾವಸನಗೊಂಡಿತು.

### *144.2.1 ನಾಯಕರ ವಿರುದ್ಧ ನಿಲುವು*

ಈ ನಂತರ ಎರಡೂ ಪಕ್ಷಗಳು ಕುಮಿಂಟಾಂಗ್ ಮತ್ತು ಕಮ್ಯುನಿಸ್ಟರು ಪರಸ್ಪರ ವಿರುದ್ಧ ಆದೇಶಗಳನ್ನು ಹೊರಡಿಸಿದರು. ಜನರಲ್ ಚಿಯಾಂಗ್ ಕೈ ಷೆಕ್‌ನು ಪ್ರಾಮಾಣಿಕವಾಗಿ ತನ್ನ ಹಕ್ಕನ್ನು ಮುಂದಿಟ್ಟನು ಮತ್ತು ಜಪಾನಿನಿಂದ ವಶಪಡಿಸಿಕೊಳ್ಳಲಾದ ಪ್ರದೇಶಗಳಿಗೆ ತನ್ನ ಸೈನಿಕರನ್ನು ಸಾಗಿಸಲು ಅಮೆರಿಕಾದ ವಾಯುಪಡೆಯ ಸಹಾಯವನ್ನು ಕೇಳಿದನು ಮತ್ತು ಆ ಮೂಲಕ ಕಮ್ಯುನಿಸ್ಟರಿಗೆ ಬದಲಾಗಿ ಕುಮಿಂಟಾಂಗ್ ಪಡೆಗಳಿಗೆ ಜಪಾನಿನ ಪಡೆಗಳ ಶರಣಾಗತಿಯನ್ನು ಪಡೆಯಲು ಪ್ರಯತ್ನಿಸಿದನು. ಮತ್ತೊಂದ ಕಡೆ ಮಾವೋತ್ಸೇತುಂಗನು ಸಾಧ್ಯವಾದಷ್ಟು ಪ್ರದೇಶಗಳನ್ನು ವಶಪಡಿಸಿಕೊಳ್ಳುವಂತೆ ಕಮ್ಯುನಿಸ್ಟ್ ಪಡೆಗಳಿಗೆ ಆದೇಶ ನೀಡಿದನು. "ತನ್ನ

ನೇತೃತ್ವದಲ್ಲಿದ್ದ ಸೈನಿಕ ಪಡೆಗಳಿಗೆ ಜಪಾನಿನ ಶರಣಾಗತಿಯನ್ನು ಪಡೆಯುವ ಮೂಲಕ ಭಾರೀ ಶಸ್ತ್ರಾಸ್ತ್ರಗಳ ಸಂಗ್ರಹವನ್ನು ವಶಪಡಿಸಿಕೊಂಡು ಕಮ್ಯುನಿಸ್ಟ್ ಪ್ರಾದೇಶಿಕ ನೆಲೆಗಳ ವಿಸ್ತರಣೆ ಮತ್ತು ಸಂಘಟನೆಗೆ ಬಳಸಿಕೊಳ್ಳುವುದು ಮಾವೋತ್ಸೇತುಂಗನ ಉದ್ದೇಶವಾಗಿತ್ತು".

### 144.2.2 *ಅಮೆರಿಕಾದ ಮಧ್ಯಸ್ಥಿಕೆಯ ಪ್ರಯತ್ನಗಳು*

ಎರಡು ಪಕ್ಷಗಳ ನಡುವೆ ಒಪ್ಪಂದವನ್ನು ಏರ್ಪಡಿಸುವ ಮೂಲಕ ಅಂತರ್ಯುದ್ಧವನ್ನು ತಡೆಯಲು ಅಮೇರಿಕಾ ಸರ್ಕಾರವು ತನ್ನ ಅತ್ಯಂತ ಶ್ರೇಷ್ಠ ರಾಜತಾಂತ್ರಿಕರಲ್ಲೊಬ್ಬನನ್ನು ಚೀನಾಕ್ಕೆ ಕಳುಹಿಸಿತು. ಆದರೆ ಉಭಯ ಪಕ್ಷಗಳೂ ಒಬ್ಬರಿಗೊಬ್ಬರು ಗಣನೀಯ ರಿಯಾಯಿತಿಗಳನ್ನು ನೀಡಲು ಒಪ್ಪಲಿಲ್ಲ. ಇಬ್ಬರೂ ಪರಸ್ಪರ ಸಂಶಯವನ್ನು ಹೊಂದಿದ್ದರು. ವಾಸ್ತವವಾಗಿ ಚಿಯಾಂಗ್ ಕೈ ಷೆಕ್‌ನು ಕಮ್ಯುನಿಸ್ಟರನ್ನು ತುಳಿಯಲು ಬಯಸಿದ್ದನು. ಕಮ್ಯುನಿಸ್ಟರು ತಮ್ಮ ಪ್ರತ್ಯೇಕ ಅಸ್ತಿತ್ವವನ್ನು ಉಳಿಸಿಕೊಳ್ಳಲು ದೃಢ ನಿರ್ಧಾರ ಮಾಡಿದ್ದರು.

### 144.2.3 *ಪೈಪೋಟಿಯ ಬೇಡಿಕೆಗಳು*

1946 ರಲ್ಲಿ ಚೀನಾಕ್ಕೆ ಕಳುಹಿಸಿದ ಜನರಲ್ ಮಾರ್ಷಲ್ ನಿಯೋಗದ ಉದ್ದೇಶ ಸಮ್ಮಿಶ್ರ ಸರ್ಕಾರ ರಚನೆಗೆ ಚೀನಾದ ಎರಡು ಪಕ್ಷಗಳನ್ನು ಪ್ರಚೋದಿಸುವ ಮೂಲಕ ಅಂತರ್ಯುದ್ಧವನ್ನು ತಡೆಗಟ್ಟುವುದಾಗಿತ್ತು. ಆದಾಗ್ಯೂ ಅದು ವಿಫಲವಾಯಿತು. ಕಮ್ಯುನಿಸ್ಟರು ಸುರಕ್ಷಿತ ಕಮ್ಯುನಿಸ್ಟ್ ಸಿದ್ಧಾಂತದ ಪ್ರಚಾರಕ್ಕೆ ಸರ್ಕಾರದ ಮೇಲೆ ಹೆಚ್ಚಿನ ಹತೋಟಿಯನ್ನು ಬೇಡಿದರು. ಆದರೆ ಕಮ್ಯುನಿಸ್ಟ್ ಕ್ರಾಂತಿಯನ್ನು ತಡೆಯಲು ಕುಮಿಂಟಾಂಗ್ ಪಕ್ಷ ಅಧಿಕಾರವನ್ನು ತನ್ನಲ್ಲಿಯೇ ಬಳಸಿಕೊಳ್ಳಲು ದೃಢ ನಿರ್ಧಾರ ಮಾಡಿತು. ಉಭಯತ್ರರರೂ ಮತ್ತೊಬ್ಬರ ಸೇನಾಬಲವನ್ನು ಇಳಿಸುವಂತೆ (ಕಡಿಮೆ ಮಾಡುವಂತೆ) ಮತ್ತು ತಮ್ಮ ಪೈಪೋಟಿಯ ಸ್ಥಳವನ್ನು ತೆರವು ಮಾಡುವಂತೆ ಒತ್ತಾಯಿಸಿದರು. ಎರಡೂ ಕಡೆಯವರೂ ಸಂಧಾನ ಸಾಧ್ಯವಾಗುವಂತೆ ಏರ್ಪಡಿಸಲಾಗಿದ್ದ ಶಾಂತಿಯನ್ನು ಉಲ್ಲಂಘಿಸಿದರು. ಕಮ್ಯುನಿಸ್ಟರು ಯುದ್ಧ ಕಾಲದಲ್ಲಿ ಅಮೆರಿಕಾದ ಸಲಹೆಗಾರರೊಂದಿಗೆ ಮಾಡಿಕೊಂಡಿದ್ದ ಒಪ್ಪಂದದಂತೆ ಕುಮಿಂಟಾಂಗ್ ಸೈನ್ಯದ ಪುನರ್ ವ್ಯವಸ್ಥೆ, ಪುನರ್ ಸಜ್ಜುಗೊಳಿಸುವಿಕೆ ಮತ್ತು ತರಬೇತಿಯನ್ನು ವಿರೋಧಿಸಿದರು. ಕಮ್ಯುನಿಸ್ಟರು ರೈಲು ಮತ್ತು ರಸ್ತೆ ಸಂಪರ್ಕಗಳನ್ನು ತಡೆಯುವುದನ್ನು ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಭೂಸುಧಾರಣೆಗಳನ್ನು ಮುಂದುವರಿಸುವುದಕ್ಕಾಗಿ ಕುಮಿಂಟಾಂಗ್‌ರು ಆಪಾದಿಸಿದರು.

## 144.3 ಹದಗೆಟ್ಟ ಸಂಬಂಧ

ಎರಡು ಪಕ್ಷಗಳ ನಡುವೆ ಸಂಬಂಧ ಹದಗೆಡಲು ಮತ್ತು ಮುರಿದು ಬೀಳಲು ಅನೇಕ ಕಾರಣಗಳಿದ್ದವು.

**ಪ್ರಾಮಾಣಿಕತೆಯ ಕೊರತೆ:** ಎರಡು ಪಕ್ಷಗಳಲ್ಲಿ ಯಾವುದೂ ಚೀನಾದ ಸಲುವಾಗಿ ತಮ್ಮ ಪಕ್ಷದ ಹಿತಾಸಕ್ತಿಗಳನ್ನು ತ್ಯಾಗ ಮಾಡಲು ಸಿದ್ಧವಿರಲಿಲ್ಲ.

**ವಿದೇಶೀ ಅಪಾಯದ ಅನುಪಸ್ಥಿತಿ:** (ವಿದೇಶೀ ಅಪಾಯವಿಲ್ಲದಿದ್ದುದು): ಸಾಮಾನ್ಯವಾಗಿ ವಿದೇಶೀ ಶತೃವಿನ ಅಪಾಯವಿದ್ದಾಗ ವಿರೋಧಿ ಪಕ್ಷಗಳು ಮೈತ್ರಿಯನ್ನು ರಚಿಸಿಕೊಳ್ಳುತ್ತವೆ. ಆದರೆ ಜಪಾನಿನ ಆಕಸ್ಮಿಕ ಸೋಲಿನಿಂದ ಅವರ ಸಾಮಾನ್ಯ ಶತೃ ಇಲ್ಲದಂತಾಯಿತು. ಹೀಗೆ ವಿದೇಶೀ ಅಪಾಯವಿಲ್ಲದಿದ್ದುದು ಒಡಂಬಡಿಕೆ ಸಾಧ್ಯವಿಲ್ಲದಂತೆ ಅತ್ಯಂತ ಕಠಿಣವಾಗುವಂತೆ ಮಾಡಿತು.

**ಚೀನಾದಲ್ಲಿದ್ದ ಸರ್ವಾಧಿಕಾರ ವ್ಯವಸ್ಥೆ:** ಚಿಯಾಂಗ್ ಕೈ ಷೆಕ್‌ನು ಸರ್ವಾಧಿಕಾರ ವ್ಯವಸ್ಥೆಯನ್ನು ಜಾರಿಗೆ ತಂದಿದ್ದು, ಅದರಲ್ಲಿ ಜನರಿಗೆ ಯಾವುದೇ ಪಾತ್ರವಿರಲಿಲ್ಲ. ಪ್ರಜಾಸತ್ತಾತ್ಮಕ ಒಕ್ಕೂಟಕ್ಕೆ ವಿದ್ಯಾವಂತ ವರ್ಗದ ವ್ಯಾಪಕ ಬೆಂಬಲವಿತ್ತು. ಆದರೆ ಪ್ರಜಾಸತ್ತಾತ್ಮಕ ಒಕ್ಕೂಟದ ಕೆಲವು ನಾಯಕರನ್ನು ಕೊಲ್ಲಲಾಯಿತು ಮತ್ತು ಕೆಲವರನ್ನು ಗಡಿಪಾರು ಮಾಡಲಾಯಿತು. ಅದರ ಅಳಿದುಳಿದವರು ಅಂತಿಮವಾಗಿ ಕಮ್ಯುನಿಸ್ಟರ ಆಶ್ರಯ ಪಡೆದರು ಮತ್ತು ಪೀಕಿಂಗ್‌ನ ಜನತಾ ಗಣರಾಜ್ಯದ ನಾಮಮಾತ್ರ ಸಮ್ಮಿಶ್ರ ಸರ್ಕಾರವನ್ನು ಸೇರಿದರು.

**ಚೀನಾದಲ್ಲಿದ್ದ ಕ್ರಾಂತಿಕಾರಿ ಪರಿಸ್ಥಿತಿ:** ವಾಸ್ತವವಾಗಿ ಚೀನಾ ಕ್ರಾಂತಿ ಅನಿವಾರ್ಯವೆಂಬ ಹಂತವನ್ನು ತಲುಪಿತ್ತು. ಅಲ್ಲಿ ಪ್ರಜಾಸತ್ತಾತ್ಮಕ ವ್ಯವಸ್ಥೆ ಇಲ್ಲದಿದ್ದುದರಿಂದ ಮತ್ತು ಚಿಯಾಂಗ್ ಕೈ ಷೆಕ್ ಯಾವುದೇ ವಿರೋಧವನ್ನು ಸಹಿಸಲು ಸಿದ್ಧನಿಲ್ಲದಿದ್ದುದರಿಂದ, ಕ್ರಾಂತಿಯೊಂದೇ ಅಂತಹ ಪರಿಸ್ಥಿತಿಯನ್ನು ಕೊನೆಗೊಳಿಸಲು ಸಾಧ್ಯವಿತ್ತು.

**ಅಸಾಧ್ಯ ಪರಿಸ್ಥಿತಿ:** ಉಭಯ ಪಕ್ಷಗಳು ಪುನಃ ಒಂದಾಗಲು ಸಾಧ್ಯವಿಲ್ಲ. ಸಿ.ಪಿ. ಫ್ರಿಟ್ಜರಾಲ್ಡ್‌ನ ಅಭಿಪ್ರಾಯದಲ್ಲಿ 1941 ರಲ್ಲಿ ಮೈತ್ರಿಯನ್ನು ಮಾಡಿಕೊಳ್ಳುವ ಒಪ್ಪಂದದ ಸಲಹೆಯು ಚೀನಾದ ಸರ್ಕಾರದ ಬಿಕ್ಕಟ್ಟಿಗೆ ಶಾಶ್ವತ ಪರಿಹಾರವನ್ನು ಒದಗಿಸುವ ಮತ್ತು ಚೀನೀ ಕ್ರಾಂತಿಯನ್ನು ಕೊನೆಗೊಳಿಸುವ ಉದ್ದೇಶವನ್ನು ಹೊಂದಿತ್ತು. ಕಮ್ಯುನಿಸ್ಟರು ತಮ್ಮ ಕ್ರಾಂತಿಕಾರಿ ಚಟುವಟಿಕೆಯನ್ನು ತನ್ನ ಗುರಿಯಿಂದ ಬೇರೆಡೆಗೆ ತಿರುಗಿಸುವ ಯಾವುದೇ ವ್ಯವಸ್ಥೆಗೆ ಸಿದ್ಧರಿರಲಿಲ್ಲ. ಕುಮಿಂಟಾಂಗ್ ಪಕ್ಷವು ತನ್ನ ಹಿಡಿತದಲ್ಲಿರುವ ಅಧಿಕಾರಕ್ಕೆ ಬೆದರಿಕೆಯುಂಟು ಮಾಡುವ ಅಥವಾ ದೇಶದಲ್ಲಿ ಸಾಮಾಜಿಕ ಕ್ರಾಂತಿಯನ್ನು ಹರಡಲು ಅನುಮತಿ ನೀಡುವ ಯಾವುದನ್ನು ಒಪ್ಪಲು ಸಿದ್ಧರಿರಲಿಲ್ಲ". 1946 ರಲ್ಲಿ ಜನರಲ್ ಮಾರ್ಷಲ್ಲನು ತಡವಾಗಿ ತನ್ನ ಕಾರ್ಯವನ್ನು ಆಶಾ ರಹಿತವೆಂದು ಕೈಬಿಟ್ಟನು.

### *144.3.1 ಮಂಚೂರಿಯಾದಿಂದ ರಷ್ಯಾದ ನಿರ್ಗಮನ*

ಜಪಾನಿನ ವಿರುದ್ಧದ ಯುದ್ಧದಲ್ಲಿ ರಷ್ಯನ್ನರು ಮಂಚೂರಿಯಾವನ್ನು ವಶಪಡಿಸಿಕೊಂಡಿದ್ದರು. ಯುದ್ಧ ಕೊನೆಗೊಂಡ ನಂತರ ಅವರು ಮಂಚೂರಿಯಾದಿಂದ ನಿರ್ಗಮಿಸಬೇಕಾಯಿತು. ಕುಮಿಂಟಾಂಗ್ ಪಕ್ಷ ಚೀನಾದ ಕಾನೂನುಬದ್ಧ ಆಡಳಿತಗಾರನಾಗಿದ್ದರಿಂದ, ಸೋವಿಯತ್ ಸೇನೆಯು ನಗರಗಳನ್ನು ಅವರಿಗೆ ಬಿಟ್ಟುಕೊಟ್ಟಿತು. ಇದೇ ವೇಳೆಯಲ್ಲಿ ಕಮ್ಯುನಿಸ್ಟರು ಗ್ರಾಮಾಂತರ ಪ್ರದೇಶಗಳನ್ನು ವಶಪಡಿಸಿಕೊಂಡರು.

## 144.4 ಕುಮಿಂಟಾಂಗ್ ಮತ್ತು ಕಮ್ಯುನಿಸ್ಟರ ಧ್ಯೇಯಗಳು

ಅಂತರ್ಯುದ್ಧದ ಪ್ರಾರಂಭದಲ್ಲಿ ಕಮ್ಯುನಿಸ್ಟರು ಗ್ರಾಮಾಂತರ ಪ್ರದೇಶಗಳ ಒಡೆತನವನ್ನು ಹೊಂದಿದ್ದರೆ, ಕುಮಿಂಟಾಂಗ್ ಸೇನೆ ದೇಶದ ಪ್ರಮುಖ ನಗರಗಳ ಮೇಲೆ ಹತೋಟಿ ಹೊಂದಿದ್ದಿತು. ಕುಮಿಂಟಾಂಗ್ ಪಡೆಗಳು ಉತ್ತಮವಾಗಿ ಸಜ್ಜುಗೊಂಡಿದ್ದವು ಮತ್ತು ತಮ್ಮ ಶತೃಗಳಿಗಿಂತ ಹೆಚ್ಚಿನ ಸಂಖ್ಯಾ ಬಲವನ್ನು ಹೊಂದಿದ್ದವು. ಸ್ಟ್ಯೂಯರ್ಟ್ ಸ್ಕ್ರಾಮ್ ಬರೆಯುವಂತೆ "1945 ರ ಕಾಲದಲ್ಲಿ 8 ನೇ ಪಥಸೇನೆ (Eight Route Army) ಮತ್ತು ಹೊಸ ನಾಲ್ಕನೇ ಸೇನೆಯ ನಾಯಕತ್ವದಲ್ಲಿದ್ದ ಸೇನಾ ಪಡೆಗಳು ಸುಮಾರು ಅರ್ಧ ಮಿಲಿಯನ್‌ನಿಂದ ಸುಮಾರು ಒಂದು ಮಿಲಿಯನ್ ಸೈನಿಕರಿಗೆ ವಿಸ್ತರಿಸಿದವು. ಕುಮಿಂಟಾಂಗ್ ಪಡೆಗಳು ಸರಿಸುಮಾರು ಅದರ ನಾಲ್ಕರಷ್ಟು ಗಾತ್ರವಿದ್ದವು".

*ಚಿಯಾಂಗ್ ಕೈ ಷೇಕ್‌ನ ಉದ್ದೇಶ*

ಎರಡೂ ಪಕ್ಷಗಳು ತಮ್ಮ ವಿರೋಧಿಯ ನಷ್ಟದಲ್ಲಿ ತಮ್ಮ ಪ್ರಭಾವವನ್ನು ವಿಸ್ತರಿಸಲು ಬಯಸಿದ್ದವು. ಚಿಯಾಂಗ್ ಕೈ ಷೇಕ್‌ನು ರೈಲ್ವೇ ಸಂಪರ್ಕದಿಂದ ಪ್ರದೇಶಗಳ ಮೇಲೆ ಹತೋಟಿಯನ್ನು ಪಡೆಯಲು ಬಯಸಿದ್ದನು.

1. ಸುತ್ತಮುತ್ತಲ ಪ್ರದೇಶಗಳನ್ನು ಆಕ್ರಮಿಸುವ ಭಯಕೆ. "ಹೀಗೆ ರೈಲು ಮಾರ್ಗದ ಮೂಲಕ ಉತ್ತರ ಚೀನಾದೊಂದಿಗೆ ಸಂಪರ್ಕವನ್ನು ಪುನಃ ಕಲ್ಪಿಸುವುದು, ಪೀಕಿಂಗ್-ಟೀನ್‌ಟ್ಸಿನ್-ನಾನ್‌ಕಿಂಗ್ ರೈಲು ಮಾರ್ಗ ಮತ್ತು ಪೀಕಿಂಗ್ - ಹ್ಯಾಂಕೋ ರೈಲು ಮಾರ್ಗ ಹಾದುಹೋಗುವ ಪ್ರಾಂತಗಳ ಮೇಲೆ ಹತೋಟಿಯನ್ನು ಸ್ಥಾಪಿಸುವುದು ಚಿಯಾಂಗನ ಉದ್ದೇಶವಾಗಿತ್ತು.

2. ಮಂಚೂರಿಯಾದ ಮೇಲೆ ಹತೋಟಿಯನ್ನು ವಿಸ್ತರಿಸುವುದು. ಮಂಚೂರಿಯಾದ ವಿಸ್ತಾರವಾದ ಭಾಗದ ಮೇಲೆ ತನ್ನ ಹಿಡಿತವನ್ನು ಸ್ಥಾಪಿಸಿ ಕಮ್ಯುನಿಸ್ಟರನ್ನು ಅಲ್ಲಿಂದ ಮತ್ತು ಉತ್ತರ ಚೀನಾದ ಬಯಲಿನಿಂದ ಪರ್ವತದ ಕಡೆಗೆ ಅವರನ್ನು ಓಡಿಸಿ ಕೊಲ್ಲುವುದು ಅಥವಾ ಶರಣಾಗುವಂತೆ ಮಾಡುವುದು ಚಿಯಾಂಗ್‌ನ ಬಯಕೆಯಾಗಿತ್ತು.

*ಕಮ್ಯುನಿಸ್ಟರ ಉದ್ದೇಶಗಳು*

ಇನ್ನೊಂದು ಕಡೆ ಚಿಯಾಂಗನ ಈ ಉದ್ದೇಶಗಳು ಈಡೇರದಂತೆ ತಡೆಯುವುದು ಕಮ್ಯುನಿಸ್ಟರ ಬಯಕೆಯಾಗಿತ್ತು. ಸಾಧ್ಯವಾದಷ್ಟೂ ಪ್ರದೇಶದಲ್ಲಿ ಕುಮಿಂಟಾಂಗ್‌ನ ಪ್ರಭಾವವನ್ನು ತೊಡೆದು ಹಾಕುವುದೂ ಕಮ್ಯುನಿಸ್ಟರ ಬಯಕೆಯಾಗಿತ್ತು. ಸಿ.ಪಿ. ಫ್ರಿಡ್ಜರಾಲ್ಡ್‌ನ ಅಭಿಪ್ರಾಯದಲ್ಲಿ "ಕಮ್ಯುನಿಸ್ಟರು ಈ ಕುಮಿಂಟಾಂಗ್ ಪ್ರದೇಶಗಳ ನಡುವಿನ ಅಂತರ ಸಂಪರ್ಕವನ್ನು ತಡೆಯಬೇಕಾಯಿತು ಮತ್ತು ನಂತರ ಪಟ್ಟಣಗಳಿಗೆ ಮುತ್ತಿಗೆ ಹಾಕಿ ಕುಮಿಂಟಾಂಗ್ ರಕ್ಷಣಾ ಗೋಡೆಗಳನ್ನು ನಾಶಪಡಿಸಲಾಗಿತ್ತು".

## 144.5 ಯುದ್ಧದ ಗತಿ (ಹಂತಗಳು)

### *144.5.1 ಮಂಚೂರಿಯಾ ಮತ್ತು ಷಾಂಟುಂಗ್‌ಗಳಲ್ಲಿ ಚಿಯಾಂಗನ ವೈಫಲ್ಯ*

ಜನರಲ್ ಚಿಯಾಂಗ್ ಕೈ ಷೆಕ್‌ನು ಈ ಎರಡು ಪ್ರದೇಶಗಳಲ್ಲೂ ತನ್ನ ಪ್ರಭಾವವನ್ನು ವಿಸ್ತರಿಸಲು ಪ್ರಯತ್ನಿಸಿದನು. ಚಿಯಾಂಗನು 1947 ರಲ್ಲಿ ಮೊದಲು ಷಾಂಟುಂಗನ್ನು ಆಕ್ರಮಿಸಿಕೊಳ್ಳಲು ಪ್ರಯತ್ನಿಸಿದನು. ಆ ಮೂಲಕ ಪೀಕಿಂಗ್-ಟೀನ್‌ಟ್ಸಿನ್-ನಾನ್‌ಕಿಂಗ್ ರೈಲು ಮಾರ್ಗವನ್ನು ಆರಂಭಿಸುವುದು ಅವನ ಉದ್ದೇಶವಾಗಿತ್ತು. ಅವನು ಇದರ ಜೊತೆ ಜೊತೆಗೇ ಮಂಚುರಿಯಾದ ಮೇಲೆ ತನ್ನ ಹಿಡಿತವನ್ನು ವಿಸ್ತರಿಸಲೂ ಸಹ ಪ್ರಯತ್ನಿಸಿದನು. ಈ ಎರಡು ಪ್ರಯತ್ನಗಳಿಗೆ ಕುಮಿಂಟಾಂಗ್ ಪಕ್ಷಕ್ಕೆ ಕಾರಣಗಳಿದ್ದವು. ಮಂಚೂರಿಯಾವನ್ನು ಅದರಷ್ಟಕ್ಕೆ ಬಿಟ್ಟಲ್ಲಿ ಅದು ಸಂಪೂರ್ಣವಾಗಿ ಕೈಬಿಟ್ಟು ಹೋಗುತ್ತಿದ್ದಿತು. ಒಂದು ಸಾರಿ ಅದು ಕಮ್ಯುನಿಸ್ಟ್ ನೆಲೆಯಾದ ನಂತರ ಪುನಃ ವಶಪಡಿಸಿಕೊಳ್ಳಲು ಸಾಧ್ಯವಿರಲಿಲ್ಲ ಮತ್ತು ಉತ್ತರ ಚೀನಾದಲ್ಲಿ ಕುಮಿಂಟಾಂಗ್ ಪಕ್ಷಕ್ಕೆ ಉಪದ್ರವವುಂಟು ಮಾಡುತ್ತಿದ್ದಿತು.

ಷಾಂಟುಂಗನ್ನು ವಶಪಡಿಸಿಕೊಳ್ಳುವ ಜನರಲ್ ಚಿಯಾಂಗ್ ಕೈ ಷೆಕ್‌ನ ಪ್ರಯತ್ನಗಳು ಅತ್ಯಂತ ಹೀನಾಯವಾಗಿ ವಿಫಲವಾದವು ಮತ್ತು ತೀವ್ರ ಹಿನ್ನಡೆಯುಂಟಾಯಿತು. 1947 ರಲ್ಲಿ ಚೀನಾದ ಅತ್ಯುತ್ತಮ ಸೇನೆಯೂ ಉತ್ತರ ಚೀನಾಕ್ಕೆ ಬೀಗದ ಕೈನಂತಿದ್ದ ಷಾಂಟುಂಗನ್ನು ಗೆದ್ದುಕೊಳ್ಳಲು ವಿಫಲವಾದವು. ವಾಸ್ತವವಾಗಿ ಅವು ಅತ್ಯಂತ ಭೀಕರವಾದ ಮತ್ತು ವಿನಾಶಕಾರಿಯಾದ ಸೋಲನ್ನನುಭವಿಸಿದವು. ಮಂಚೂರಿಯಾದಲ್ಲಿ ಅನೇಕ ಪ್ರದೇಶಗಳನ್ನು ವಶಪಡಿಸಿಕೊಳ್ಳುವಲ್ಲಿಯೂ ಚಿಯಾಂಗ್ ಕೈ ಷೆಕ್ ವಿಫಲನಾದನು. ಮಂಚೂಕಿಯಾದಲ್ಲಿ ವಿಸ್ತರಿಸಲು ಕುಮಿಂಟಾಂಗ್ ಪಡೆಗಳು ವಿಫಲವಾದವು. ಪ್ರಾರಂಭದ ಅಲ್ಪ ಪ್ರಗತಿಯ ನಂತರ ಅವರು ರಕ್ಷಣಾ ವಿಧಾನವನ್ನು ಅನುಸರಿಸುವಂತಾಯಿತು. ಆ ವರ್ಷದ ಕೊನೆಯೊಳಗಾಗಿ ಮಂಚೂರಿಯಾ ರೈಲು ಮಾರ್ಗವನ್ನು ಕಡಿದು ಹಾಕಲಾಯಿತು ಮತ್ತು ಕುಮಿಂಟಾಂಗ್ ಸೇನೆಯು ಪ್ರಮುಖ ನಗರಗಳ ಸುತ್ತಮುತ್ತಲಿನ ದ್ವೀಪದಂತಹ ಪ್ರದೇಶಗಳನ್ನು ಮಾತ್ರವೇ ತನ್ನ ಹಿಡಿತದಲ್ಲಿಟ್ಟುಕೊಂಡಿದ್ದಿತು. ದೀರ್ಘ ಪ್ರಯಾಣದ ನಂತರ ಕಮ್ಯುನಿಸ್ಟರು ಯೆನಾನನ್ನು ತಮ್ಮ ಹತೋಟಿಗೆ ತೆಗೆದುಕೊಂಡರು. ಈ ನಂತರ ಚಿಯಾಂಗ್ ಕೈ ಷೆಕ್‌ನು ಆಕ್ರಮಣವನ್ನು ಆರಂಭಿಸಿದನು ಮತ್ತು ಆ ಪ್ರಾಂತವನ್ನು ವಶಪಡಿಸಿಕೊಂಡ ತನ್ನ ವಿಜಯದ ಭಾರೀ ಪ್ರಚಾರವನ್ನು ಕೈಗೊಂಡನು.

### *144.5.2 1947 ರ ಕಡೆಯ ವೇಳೆಯಲ್ಲಿದ್ದ ಸ್ಥಿತಿ*

ಹೀಗೆ ಅತ್ಯಂತ ಮಹತ್ವದ ವರ್ಷವಾಗಿದ್ದ 1947 ಅನೇಕ ದುರಂತಗಳಲ್ಲಿ ಕೊನೆಗೊಂಡಿತು. ಉತ್ತರ ಚೀನಾದೊಂದಿಗೆ ಸಂಪರ್ಕವನ್ನು ಸ್ಥಾಪಿಸುವ ಅಥವಾ ಮಂಚೂರಿಯಾದ ಮೇಲಿನ ಹತೋಟಿಯನ್ನು ವಿಸ್ತರಿಸುವ ಪರಿಣಾಮದೊಂದಿಗೆ ಯುದ್ಧ 1947 ರಲ್ಲಿ ಕೊನೆಗೊಂಡಿತು. 1947 ರಲ್ಲಿ ಕುಮಿಂಟಾಂಗ್ ಸರ್ಕಾರವು ಮೊದಲು ತಟಸ್ಥತೆಯ ಮೂಲಕ ರಕ್ಷಣಾ ನೀತಿಯನ್ನು ಅನುಸರಿಸುವಂತೆ ಒತ್ತಡ ಹಾಕಲಾಯಿತು. ಆದರೆ ನಂತರ ಅವರ ಪ್ರತ್ಯೇಕಿಸಲ್ಪಟ್ಟ ಉತ್ತರ ಚೀನಾದ ಪ್ರದೇಶಗಳು ಮತ್ತು ಮಂಚೂರಿಯಾದ ವಲಯಗಳ ಮೇಲೆ ದಿಗ್ಬಂಧನವನ್ನು ವಿಧಿಸುವ ಮೂಲಕ ಮತ್ತು ಕಮ್ಯುನಿಸ್ಟ್ ಪ್ರತಿ ದಾಳಿಯನ್ನು ಆರಂಭಿಸುವ ಮೂಲಕ ಕುಮಿಂಟಾಗ್‌ರನ್ನು ಒತ್ತಡಕ್ಕೆ ಸಿಲುಕಿಸಲಾಯಿತು.

### *144.5.3 ಕಮ್ಯುನಿಸ್ಟರ ಪ್ರತಿ ದಾಳಿ (1947)*

ಕಮ್ಯುನಿಸ್ಟರು ಪ್ರತಿ ದಾಳಿಯನ್ನು ಆರಂಭಿಸಿ ಅನೇಕ ಪ್ರದೇಶಗಳನ್ನು ಗೆದ್ದುಕೊಂಡರು. ದಕ್ಷಿಣದ ಕಡೆಗೆ ತಾ ಪೀ ಶಾನ್ ಪರ್ವತಗಳ ಮೇಲೆ ತ್ವರಿತವಾದ ಅನಿರೀಕ್ಷಿತ ದಾಳಿಯೊಂದಿಗೆ 1947 ರ ಬೇಸಿಗೆಯಲ್ಲಿ ಪ್ರತಿ ದಾಳಿ ಆರಂಭವಾಯಿತು. ಇದು ಹಳೆಯ ಕಮ್ಯುನಿಸ್ಟ್ ಪ್ರದೇಶವಾಗಿದ್ದು, ಕಮ್ಯುನಿಸ್ಟರು ಈಗ ಅಲ್ಲಿ ಹೊಸ ನೆಲೆಯನ್ನು ಸ್ಥಾಪಿಸಿದರು. ಕೆಳಗಿನ ಯಾಂಗ್‌ಟ್ಸಿ ಕಣಿವೆಗೆ ಬೆದರಿಕೆಯೊಡ್ಡಿ ಅವರು ಉತ್ತರ ಚೀನಾವನ್ನು ವಶಪಡಿಸಿಕೊಳ್ಳುವ ಕುಮಿಂಟಾಂಗ್‌ನ ಯಾವುದೇ ಮುಂದಿನ ಪ್ರಯತ್ನಕ್ಕೆ ತಡೆಯೊಡ್ಡಿದರು. ಈ ನಂತರ ಚಿಯಾಂಗನು ಮಂಚೂರಿಯಾದಲ್ಲಿ ಕಮ್ಯುನಿಸ್ಟರ ಮೇಲೆ ಮತ್ತೊಮ್ಮೆ ದಾಳಿ ಮಾಡಲು ಆಲೋಚಿಸಿದನು. ಭೂಮಾರ್ಗ ಸುರಕ್ಷಿತವಲ್ಲದಿದ್ದುದರಿಂದ ಅವನು ಸಮುದ್ರದ ಮೂಲಕ ತನ್ನ ಪಡೆಗಳನ್ನು ಅಲ್ಲದೆ ಕಳುಹಿಸಿದನು.

*ಕಮ್ಯುನಿಸ್ಟರ ಪ್ರತಿರೋಧ*

ರಾಷ್ಟ್ರೀಯವಾದಿಗಳ ಪರಿಸ್ಥಿತಿ ಈಗಾಗಲೇ ಅತ್ಯಂತ ಸಂದಿಗ್ಧವಾಗಿತ್ತು. ಮಂಚೂರಿಯಾ, ಮಾಕ್ಡೇನ್, ಚಾಂಗ್‌ಚುನ್‌ನಲ್ಲಿ ಕುಮಿಂಟಾಂಗ್ ರಕ್ಷಣಾ ನೆಲೆಗಳು ಒಂದಾದ ನಂತರ ಒಂದರಂತೆ ಪತನವಾದವು ಅಥವಾ ಹಿಂತೆಗೆದುಕೊಳ್ಳಲಾಯಿತು. ಕಮ್ಯುನಿಸ್ಟರು ಒಂದೆರಡು ಪ್ರಮುಖ ನಗರಗಳಲ್ಲದೆ ಷಾಂಟುಂಗನ್ನು ಹತೋಟಿಗೆ ತಂದುಕೊಂಡರು. ಅವರು ಗ್ರಾಮಾಂತರ ಹುನಾನ್ ಪ್ರದೇಶವನ್ನು ವಶಪಡಿಸಿಕೊಂಡ ಕುಮಿಂಟಾಂಗರನ್ನು ಪ್ರತ್ಯೇಕಿಸಿದರು. ಯಾಂಗ್‌ಟ್ಸಿ ಕಣಿವೆಗೆ ಅವರು ಮುನ್ನುಗ್ಗಿದರು. ಷನ್ಸಿ ಅವರ ಕೈಸೇರಿತು; ಕುಮಿಂಟಾಂಗ್ ಸೇನೆಯನ್ನು ಸದೆಬಡಿಯಲಾಯಿತು.

## 144.5.4 *ದಾರುಣ ಆರ್ಥಿಕ ಪರಿಸ್ಥಿತಿ*

ರಾಷ್ಟ್ರೀಯವಾದಿಗಳ ಕೈ ಕೆಳಗೆ ಚೀನಾದ ಪರಿಸ್ಥಿತಿ ಅತ್ಯಂತ ಹೀನಾಯವಾಗಿತ್ತು. ಹಣದುಬ್ಬರವುಂಟಾಗಿ ಜೀವನಾವಶ್ಯಕ ವಸ್ತುಗಳ ಬೆಲೆಗಳು ಏರತೊಡಗಿದವು. ಇನ್ನೊಂದು ಕಡೆ ಅಧಿಕಾರಿಗಳು ಭ್ರಷ್ಟರಾಗಿದ್ದು ವೈಯುಕ್ತಿಕ ಭವಿಷ್ಯದ ನಿರ್ಮಾಣದಲ್ಲಿ ನಿರತರಾಗಿದ್ದರು. ಹೀಗೆ ಚಿಯಾಂಗ್ ಕೈ ಷೆಕ್‌ನ ಆಳ್ವಿಕೆಯ ಸೈನಿಕ ಪರಿಸ್ಥಿತಿಯು ಕೆಟ್ಟದಾಗಿತ್ತು ಮತ್ತು ಆರ್ಥಿಕ ಪರಿಸ್ಥಿತಿ ಅದಕ್ಕಿಂತಲೂ ಹದಗೆಟ್ಟಿತು. "ನಿಯಂತ್ರಿಸಲಾಗದ ಹಣದುಬ್ಬರವು ರಾಷ್ಟ್ರವು ಹಣಕ್ಕೆ ಬೆಲೆಯಿಲ್ಲದಂತೆ ಮಾಡಿದ್ದಿತು ಮತ್ತು ಜನತೆಯು ಬೆಳ್ಳಿಯ ಡಾಲರ್‌ಗಳ ರಹಸ್ಯ ಸಂಗ್ರಹವನ್ನು ಅವಲಂಬಿಸಬೇಕಾಯಿತು. ಅಮೆರಿಕಾದ ಹಣ ಮತ್ತು ಚಿನ್ನದ ಗಟ್ಟಿಗಳು ವ್ಯಾಪಾರವನ್ನು ನಾಶಪಡಿಸುವ ಸಾರ್ವಜನಿಕ ಸೇವೆಯನ್ನು ಭ್ರಷ್ಟಾಚಾರದ ಕೂಪಕ್ಕೆ ತಳ್ಳಿದವು ಮತ್ತು ಸೈನಿಕರನ್ನು ಎದೆಗುಂದಿಸಿದವು" ಅಂತಹ ಕರುಣಾಜನಕ ಸ್ಥಿತಿಯು ಜನಸಮೂಹದ ನಿರಾಶೆಗೆ ಕಾರಣವಾಯಿತು. ಇದರಿಂದ ಅವರು ರಾಷ್ಟ್ರೀಯವಾದಿಗಳಿಗಿಂತಲೂ ಕಮ್ಯುನಿಸ್ಟರ ಬಗ್ಗೆ ಹೆಚ್ಚಿನ ಸಹಾನುಭೂತಿಯನ್ನು ಬೆಳೆಸಿಕೊಂಡರು. ಸಿ.ಪಿ. ಫ್ರಿಟ್ಜರಾಲ್ಡ್ ಅಭಿಪ್ರಾಯ ಪಡುವಂತೆ "ಅಂತಹ ನಾಗರೀಕರ ಬಗ್ಗೆ ಕಿಂಚಿತ್ತೂ ಕಾಳಜಿಯಿಲ್ಲದ, ದೇಶದ ಬಗೆ ಸ್ವಲ್ಪವೂ ಜಾಗರೂಕತೆಯನ್ನು ವಹಿಸದ ಅಸಮರ್ಥ ಸರ್ಕಾರವು ಅಂತಿಮವಾಗಿ ಮತ್ತು ಸಂಪೂರ್ಣವಾಗಿ ವಿದ್ಯಾವಂತ ವರ್ಗದಿಂದ ದೂರವುಳಿಯಿತು".

## 144.5.5 *ಉತ್ತರ ಚೀನ ಮತ್ತು ಮಂಚೂರಿಯಾದಲ್ಲಿ ರಾಷ್ಟ್ರೀಯ ಪಕ್ಷದ ಆಳ್ವಿಕೆಯ ಅಂತ್ಯ*

1948 ರ ಸುಮಾರಿನಲ್ಲಿ ಕಮ್ಯುನಿಸ್ಟರು ಕೆಲವೇ ವಾರಗಳಲ್ಲಿ ತಮ್ಮ ಪ್ರತಿದಾಳಿಯನ್ನು ಆರಂಭಿಸಿ ಅನೇಕ ಕುಮಿಂಟಾಂಗ್ ಸೇನೆಗಳನ್ನು ಸೋಲಿಸುವಲ್ಲಿ ಯಶಸ್ವಿಯಾದರು. ಹೀಗೆ ಚಿಯಾಂಗ್ ಕೈ ಷೆಕ್‌ನು ಇಡೀ ಉತ್ತರ ಚೀನಾವನ್ನು ಕಳೆದುಕೊಂಡನು. ಪ್ರತಿದಾಳಿಯನ್ನು ಆರಂಭಿಸಿದ ಕೆಲವೇ ವಾರಗಳಲ್ಲಿ ಕಮ್ಯುನಿಸ್ಟರು ಉತ್ತರ ಚೀನಾದಲ್ಲಿದ್ದ ರಾಷ್ಟ್ರೀಯವಾದಿಗಳ ಕಡೆಯ ಭದ್ರಕೋಟೆಗಳನ್ನು ನಾಶಪಡಿಸಿದರು. ಷಾಂಟುಂಗ್‌ನಲ್ಲಿ ಟ್ಸಿನಾಫು ಸೆಪ್ಟೆಂಬರ್‌ನಲ್ಲಿ ಕಮ್ಯುನಿಸ್ಟರ ವಶವಾಯಿತು. ಯಾಂಗ್‌ಟ್ಸಿಯ ಮೇಲೆ ಬೃಹತ್ ದಾಳಿಯನ್ನು ಅಕ್ಟೋಬರ್‌ನಲ್ಲಿ ಪ್ರಾರಂಭಿಸಲಾಯಿತು ಮತ್ತು ಮಂಚೂರಿಯಾದಲ್ಲಿ ಕುಮಿಂಟಾಂಗ್‌ನ ಕೊನೆ ಅಕ್ಟೋಬರ್ 31 ರಂದು ಅನಿರೀಕ್ಷಿತವಾಗಿ ಬಂದಿತು. ಜನರಲ್ ಚಿಯಾಂಗ್ ಕೈ ಷೆಕ್ ಮಂಚೂರಿಯಾದಲ್ಲಿ ತನ್ನ ಸೇನೆಯನ್ನು ಇಳಿಸಿದರು. ಆದರೆ ಬಹು ಬೇಗನೆ ಕಮ್ಯುನಿಸ್ಟರು ಅವರನ್ನು ಸೋಲಿಸಿ ಶಸ್ತ್ರಾಸ್ತ್ರಗಳನ್ನು ಕೆಳಗಿಳಿಸುವಂತೆ ಮಾಡಿದರು. ಅಲ್ಪ ಪ್ರತಿರೋಧದ ನಂತರ ಇಡೀ ಕುಮಿಂಟಾಂಗ್ ಸೇನೆ ಶರಣಾಯಿತು".

***ಮುಕ್ಡೇನ್‌ನ ಶರಣಾಗತಿ:*** ಕಳೆದ ಒಂದು ವರ್ಷದಿಂದ ಕುಮಿಂಟಾಂಗ್ ಪಡೆಗಳು ಇದರ ಮುತ್ತಿಗೆಯಲ್ಲಿ ತೊಡಗಿದ್ದವು. ಅವುಗಳಿಗೆ ವಿರಾಮ ನೀಡಲು ಒಂದು ಪಡೆಯನ್ನು ಕಳುಹಿಸಲಾಯಿತು. ಆದರೆ ಆ ಪಡೆಯನ್ನು ಕಮ್ಯುನಿಸ್ಟರು ಚಿನ್ ಚೌ ಎಂಬಲ್ಲಿ ಸುತ್ತುವರಿದು ತಮ್ಮ ಶಸ್ತ್ರಾಸ್ತ್ರಗಳನ್ನು ಒಪ್ಪಿಸುವಂತೆ ಮಾಡಿದರು. ಕಡೆಯದಾಗಿ ಮುಕ್ಡೇನ್‌ನಲ್ಲಿಯೂ ರಾಷ್ಟ್ರೀಯವಾದಿಗಳು ತಮ್ಮ ಶಸ್ತ್ರಾಸ್ತ್ರಗಳನ್ನು ಒಪ್ಪಿಸಿದರು. ಈ ದುರಂತದ ನಂತರ ಸು ಚೌ ಎಂಬಲ್ಲಿ ಭೀಕರ ಹೋರಾಟ ನಡೆದು ಕುಮಿಂಟಾಂಗ್ ಪಡೆಗಳು ಮತ್ತೊಂದು ತೀವ್ರ ಸೋಲನ್ನು ಅನುಭವಿಸಿದವು.

## 144.5.6 *ಪೀಕಿಂಗ್‌ನ ಶರಣಾಗತಿ (1949)*

ಚೀನಾದ ಐತಿಹಾಸಿಕ ನಗರ ಕಮ್ಯುನಿಸ್ಟರ ಮುಂದಿಗೆ ಗುರಿಯಾಯಿತು. ಕಮ್ಯುನಿಸ್ಟರು ತಕ್ಷಣವೇ ದಾಳಿ ಮಾಡಿ ಪೀಕಿಂಗ್‌ನ ಹೊರ ವಲಯವನ್ನು ತಲುಪಿದರು. ಪೀಕಿಂಗ್ ನಗರದ ಮೇಲೆ ಒಂದು ದಾಳಿ ಪ್ರಾರಂಭವಾಯಿತು. ಆ ನಗರದಲ್ಲಿ ಸುಮಾರು 2

ಮಿಲಿಯನ್ ನಾಗರೀಕರು ವಾಸಿಸುತ್ತಿದ್ದರು. ರಾಷ್ಟ್ರೀಯವಾದಿಗಳು ತಮ್ಮೊಂದಿಗೆ ಸುಮಾರು ಒಂದು ಲಕ್ಷ ಸೈನಿಕರನ್ನು ಹೊಂದಿದ್ದರು. ಕೆಲವು ತಿಂಗಳ ದಾಳಿಯ ನಂತರ ಜನವರಿ, 22, 1949 ರಂದು ರಾಷ್ಟ್ರೀಯವಾದಿಗಳು ತಮ್ಮ ಶಸ್ತ್ರಾಸ್ತ್ರಗಳನ್ನು ಒಪ್ಪಿಸಿದರು. ಈ ದುರಂತದ ನಂತರ ಸು ಚೌ ಎಂಬಲ್ಲಿ ಭೀಕರ ಹೋರಾಟ ನಡೆದು ಕುಮಿಂಟಾಂಗ್ ಪಡೆಗಳು ಮತ್ತೊಂದು ತೀವ್ರ ಸೋಲನ್ನು ಅನುಭವಿಸಿದವು.

### 144.5.6 ಪೀಕಿಂಗ್‌ನ ಶರಣಾಗತಿ (1949)

ಚೀನಾದ ಐತಿಹಾಸಿಕ ನಗರ ಕಮ್ಯುನಿಸ್ಟರ ಮಂದಿಗೆ ಗುರಿಯಾಯಿತು. ಕಮ್ಯುನಿಯ್ಟರು ತಕ್ಷಣವೇ ದಾಳಿ ಮಾಡಿ ಪೀಕಿಂಗ್‌ನ ಹೊರ ವಲಯವನ್ನು ತಲುಪಿದರು. ಪೀಕಿಂಗ್ ನಗರದ ಮೇಲೆ ಒಂದು ದಾಳಿ ಪ್ರಾರಂಭವಾಯಿತು. ಆ ನಗರದಲ್ಲಿ ಸುಮಾರು 2 ಮಿಲಿಯನ್ ನಾಗರೀಕರು ವಾಸಿಸುತ್ತಿದ್ದರು. ರಾಷ್ಟ್ರೀಯವಾದಿಗಳು ತಮ್ಮೊಂದಿಗೆ ಸುಮಾರು ಒಂದು ಲಕ್ಷ ಸೈನಿಕರನ್ನು ಹೊಂದಿದ್ದರು. ಕೆಲವು ತಿಂಗಳ ದಾಳಿಯ ನಂತರ ಜನವರಿ 22, 1949 ರಿಂದ ರಾಷ್ಟ್ರೀಯವಾದಿಗಳು ತಮ್ಮ ಶಸ್ತ್ರಾಸ್ತ್ರಗಳನ್ನು ಒಪ್ಪಿಸಿದರು. ಟೀನ್‌ಟ್ಸಿನ್ ಈಗಾಗಲೇ ಕಮ್ಯುನಿಸ್ಟರ ನೇರ ದಾಳಿಗೆ ಮೊದಲೇ ಶರಣಾಗಿದ್ದಿತು. ಪೀಕಿಂಗ್‌ನ ಪತನದ ನಂತರ ಉತ್ತರ ಚೀನಾದಲ್ಲಿ ಇತರ ಕೆಲವು ಸಣ್ಣ ನಗರಗಳನ್ನು ಶೀಘ್ರವಾಗಿ ವಶಪಡಿಸಿಕೊಳ್ಳುವುದರೊಂದಿಗೆ ಒಂದು ಅಧ್ಯಾಯ ಕೊನೆಗೊಂಡಿತು.

### *144.5.7 ಶಾಂತಿ ಪ್ರಯತ್ನಗಳ ವೈಫಲ್ಯ*

1949 ರಲ್ಲಿ ಪರಿಸ್ಥಿತಿ ಅತ್ಯಂತ ಹತಾಶೆಯಿಂದ ಕೂಡಿದ್ದಿತು. ಚಿಯಾಂಗ್ ಕೈ ಷೆಕ್ ಅಧ್ಯಕ್ಷ ಪದವಿಗೆ ರಾಜೀನಾಮೆ ನೀಡಿದನು. ಇದರಿಂದ ಅವನ ಉತ್ತರಾಧಿಕಾರಿ ಉಪಧ್ಯಕ್ಷ ಲಿ ಸುಂಗಿಯೆನ್‌ಗೆ ಪರಿಸ್ಥಿತಿಯನ್ನು ರಕ್ಷಿಸಲು ಸಾಧ್ಯವಾಯಿತು. ಆದರೆ ಅವನಿಗೆ ನಿಜವಾದ ಅಧಿಕಾರ ದೊರೆಯಲಿಲ್ಲ. ಚಿಯಾಂಗ್ ಕೈ ಷೆಕ್ ಚೀನಾವನ್ನು ಬಿಟ್ಟು ಹೋಗಲಿಲ್ಲ ಇಲ್ಲವೇ ಪಕ್ಷದ ಮೇಲೆ ತನ್ನ ಹತೋಟಿಯನ್ನು ತ್ಯಜಿಸಲಿಲ್ಲ. ಪರಿಣಾಮವಾಗಿ ಕಮ್ಯುನಿಸ್ಟರೊಂದಿಗೆ ಒಂದು ಗೌರವಯುತ ಒಪ್ಪಂದವನ್ನು ಮಾಡಿಕೊಳ್ಳುವ ಉಪಾಧ್ಯಕ್ಷನ ಪ್ರಯತ್ನಗಳು ಯಶಸ್ವಿಯಾಗಲಿಲ್ಲ. ಫೆಬ್ರವರಿಯಿಂದ ಏಪ್ರಿಲ್ 1949 ರವರೆಗೆ ಸಂಧಾನಗಳು ಮುಂದುವರಿದವು. ಯಾವುದೇ ಹೋರಾಟ ನಡೆಯಲಿಲ್ಲ. ಆ ಸಮಯದಲ್ಲಿ ಕಮ್ಯುನಿಸ್ಟರು ಯಾಂಗ್‌ಟ್ಸಿಗೆ ಉತ್ತರಕ್ಕಿದ್ದ ಇಡೀ ಚೀನಾದ ಮೇಲೆ ಹತೋಟಿ ಹೊಂದಿದ್ದರು. ಕುಮಿಂಟಾಂಗರು ದಕ್ಷಿಣ ಮತ್ತು ಪಶ್ಚಿಮ ಚೀನಾದ ಮೇಲೆ ಇನ್ನೂ ತಮ್ಮ ನಿಯಂತ್ರಣದಲ್ಲಿರಿಸಿಕೊಂಡಿದ್ದರು.

ಸಲಹೆಯಂತೆ ಷರತ್ತುಗಳಂತೆ ಕುಮಿಂಟಾಂಗ್ ಪಕ್ಷ ಕಮ್ಯುನಿಸ್ಟರಿಗೆ ಗಣನೀಯ ರಿಯಾಯಿತಿಗಳನ್ನು ನೀಡಬೇಕಾಗಿತ್ತು. ಜನರಲ್ ಚಿಯಾಂಗ್ ಕೈ ಷೆಕ್ ಈ ಷರತ್ತುಗಳನ್ನು ಒಪ್ಪಲಿಲ್ಲ. ಹಂಗಾಮಿ ಅಧ್ಯಕ್ಷ ಲಿ ಸುಂಗ್ ಜೆನ್ ಒಪ್ಪಂದಕ್ಕೆ ಸಹಿ ಹಾಕಲು ಸಿದ್ಧನಿದ್ದನು. ಆದರೆ ಚಿಯಾಂಗ್‌ನ ಗುಪ್ತ ಪ್ರತಿನಿಧಿಗಳು ಅಂತಹ ಒಪ್ಪಂದಕ್ಕೆ ಸಹಿ ಹಾಕಿದನು. ಲಿ ಯನ್ನು ಕೊಲ್ಲುವುದಾಗಿ ಬೆದರಿಕೆ ಹಾಕಿದರು. ಆದ್ದರಿಂದ ಅವನು ಪೀಕಿಂಗ್‌ನಿಂದ ಓಡಿಹೋದರು ಮತ್ತು ಒಪ್ಪಂದಕ್ಕೆ ಸಹಿ ಹಾಕಲಿಲ್ಲ.

### *144.5.8 ಹೋರಾಟದ ಕಡೆಯ ಹಂತ*

ಒಂದು ಶಾಂತಿಯುತ ಇತ್ಯರ್ಥಕ್ಕೆ ಮಾತುಕತೆಗಳು ವಿಫಲವಾದಾಗ, ಕಮ್ಯುನಿಸ್ಟರು ತಮ್ಮ ಕಡೆಯ ದಾಳಿಯನ್ನು ಆರಂಭಿಸಿದರು. ಈ ದಾಳಿ ಆರಂಭವಾದ ನಂತರ ಚೀನಾದ ಒಂದು ಪಟ್ಟಣದ ನಂತರ ಮತ್ತೊಂದು ಕೈತಪ್ಪಿದವು. ಸ್ಟ್ಯೂಯರ್ಟ್ ಸ್ಕ್ಯಾಮ್‌ನ ಹೇಳಿಕೆಯಂತೆ "ಏಪ್ರಿಲ್ 20 ರಂದು ಕಮ್ಯುನಿಸ್ಟರ ಷರತ್ತುಗಳ ಕಡೆಯ ವರದಿಯನ್ನು ನಾನ್‌ಕಿಂಗ್ ಸರ್ಕಾರ ತಿರಸ್ಕರಿಸಿತು. ಮೂರನೇ ದಿವಸ ಮಾವೋ ಜನತಾ ವಿಮೋಚನಾ ಸೇನೆಗೆ ಒಂದು ಆದೇಶವನ್ನು ನೀಡಿ ದೇಶವ್ಯಾಪಿ ದಾಳಿಗೆ ಕರೆ ನೀಡಿದನು. ಅದೇ ದಿವಸ ಕಮ್ಯುನಿಸ್ಟ್ ಪಡೆಗಳು ಮುನ್ನೂರು ಮೈಲಿಯ ಗಡಿಯಲ್ಲಿ ಯಂಗ್‌ಟ್ಸಿಯನ್ನು ದಾಟಿ, ಏಪ್ರಿಲ್ 23 ರಂದು ಅವು ನಾನ್‌ಕಿಂಗ್‌ನ್ನು ವಶಪಡಿಸಿಕೊಂಡವು. ವಾಸ್ತವವಾಗಿ ಇದು ಚೀನಾದ ಮುಖ್ಯ ಭೂಮಿಯ ಕುಮಿಂಟಾಂಗ್ ಹೋರಾಟದ ಕೊನೆಯಾಗಿತ್ತು. ಕುಮಿಂಟಾಂಗ್ ಸರ್ಕಾರವು ಸೋಲನ್ನು ಒಪ್ಪಿಕೊಂಡು ಫಾರ್ಮೋಸಾದಲ್ಲಿ ಆಶ್ರಯ ಪಡೆಯಲು ಬಯಸಿತು. ಅಂದಿನಿಂದ ಕುಮಿಂಟಾಂಗ್ ಪಕ್ಷ ಫಾರ್ಮೋಸಾದಲ್ಲಿ ಪ್ರತಿಬಂಧನದಲ್ಲಿ ಉಳಿಯಿತು. ಈಗ ಕೆಂಪು ಚೀನಾ ಪ್ರಪಂಚದ ಪ್ರಬಲ ರಾಷ್ಟ್ರಗಳಲ್ಲಿ ಒಂದಾಗಿದ್ದು ವಿಶ್ವಸಂಸ್ಥೆಯ ಸದಸ್ಯನಾಗಿದೆ.

## 144.6 ಕಮ್ಯುನಿಸ್ಟ್ ವಿಜಯದ ಕಾರಣಗಳು

ಕಮ್ಯುನಿಸ್ಟರ ವಿಜಯಕ್ಕೆ ಅನೇಕ ಕಾರಣಗಳನ್ನು ನೀಡಲಾಗಿದೆ. ಅವುಗಳಲ್ಲಿ ಕೆಲವನ್ನು ಕೆಳಗೆ ನೀಡಲಾಗಿದೆ.

*ಸಮರ್ಪಿಸಿಕೊಂಡ ಸೈನ್ಯ*

ಕಮ್ಯುನಿಸ್ಟ್ ಸೇನೆ ಅವರ ಉದ್ದೇಶಕ್ಕೆ ಬಹಳವಾಗಿ ಸಮರ್ಪಿಸಿಕೊಂಡಿದ್ದಿತು. ಸ್ಟೂಯರ್ಟ್ ಸ್ಕ್ರಾಮನನ್ನು ಉಲ್ಲೇಖಿಸುವುದಾದರೆ "1946-49 ರ ಚೀನಾದ ಅಂತರ್ಯುದ್ಧವು ಪ್ರಶ್ನಾತೀತವಾಗಿ ಒಂದು ಚಿಕ್ಕ ಆದರೆ ಜನಪ್ರಿಯ ಬೆಂಬಲವನ್ನು ಪಡೆದ ಸಮರ್ಪಣೆಯ ಮತ್ತು ಸುಸಂಘಟಿತ ಪಡೆಯ ಬಹುದೊಡ್ಡ ಆದರೆ ನೈತಿಕ ಸ್ಥೈರ್ಯವಿಲ್ಲದ ಮತ್ತು ಅಸಮರ್ಥ ನಾಯಕತ್ವದ ಅಪ್ರಿಯ ಸೈನ್ಯದ ಮೇಲಿನ ವಿಜಯದ ಇತಿಹಾಸದ ಅತ್ಯಂತ ಪ್ರಮುಖ ಉದಾಹರಣೆಗಳಲ್ಲಿ ಒಂದಾಗಿದೆ".

*ಅಸಮರ್ಥ ನಾಯಕತ್ವ*

ಕುಮಿಂಟಾಂಗ್ ಸೇನೆಯ ದಂಡನಾಯಕರು ಅಸಮರ್ಥರಾಗಿದ್ದರು. ತಮ್ಮ ಅಸಮರ್ಥತೆಯ ಹೊರತಾಗಿಯೂ ಚಿಯಾಂಗ್‌ನಿಗೆ ಒಪ್ಪಿಗೆಯಾಗಿದ್ದರಿಂದ ಅವರಲ್ಲಿ ಅನೇಕರನ್ನು ನೇಮಕ ಮಾಡಿಕೊಳ್ಳಲಾಗಿತ್ತು. ಅಲ್ಲದೆ ರಾಷ್ಟ್ರೀಯವಾದಿಗಳು ಸಂಪೂರ್ಣವಾಗಿ ಸೈನಿಕ ನೆಲೆಯಲ್ಲಿಯೇ ಯುದ್ಧವನ್ನು ಕಳೆದುಕೊಂಡರು. ಏಕೆಂದರೆ ಚಿಯಾಂಗನು ಸಾಮರ್ಥ್ಯಕ್ಕಿಂತಲೂ ವೈಯುಕ್ತಿಕ ನಿಷ್ಠೆಯ ಆಧಾರದ ಮೇಲೆಯೇ ಪ್ರಮುಖ ದಂಡನಾಯಕರನ್ನು ನೇಮಿಸಿಕೊಂಡಿದ್ದನು.

ಪ್ರಜಾಸತ್ತಾತ್ಮಕ ಒಕ್ಕೂಟದ ಬಹಿಷ್ಕಾರವು ಕಮ್ಯುನಿಸ್ಟರ ಕೈಯನ್ನು ಬಲಪಡಿಸಿತು. ಪ್ರಜಾಸತ್ತಾತ್ಮಕ ಒಕ್ಕೂಟ ಚೀನಾದಲ್ಲಿ ಮೂರನೇ ಪಕ್ಷವಾಗಿತ್ತು. ಆದರೆ ಕ್ರೂರ ಸರ್ವಾಧಿಕಾರಿಯಂತೆ ವರ್ತಿಸಿದ ಚಿಯಾಂಗ್ ಕೈ ಷೆಕ್‌ನು ಅದನ್ನು ಸಹಿಸಲಿಲ್ಲ ಮತ್ತು ಅದರ ಅನೇಕ ನಾಯಕರನ್ನು ಕೊಂದು ಹಾಕಿದನು. ಅಳಿದುಳಿದವರು ಕಮ್ಯುನಿಸ್ಟರ ಹಶದಲ್ಲಿದ್ದ ಪ್ರದೇಶಗಳಿಗೆ ಓಡಿ ಹೋದರು. "ಕಮ್ಯುನಿಸ್ಟರ ತೆಕ್ಕೆಗೆ ಬಿದ್ದ ಚೀನಾದ ಮೂರನೇ ಶಕ್ತಿಯ ದೊಡ್ಡ ಭಾಗದಿಂದ ಮಾವೋನ ಕೈ ಬಲಗೊಂಡಿತು".

*ಇತರ ಕಾರಣಗಳು*

ಇತರ ಅನೇಕ ಕಾರಣಗಳೂ ಇದ್ದವು. ಪ್ರಜಾಸತ್ತಾತ್ಮಕ ಒಕ್ಕೂಟವು ಭ್ರಷ್ಟ ಹಾಗೂ ಕ್ರೂರ ಚಿಯಾಂಗ್‌ನ ಆಡಳಿತದ ವಿರುದ್ಧ ದ್ವೇಷವನ್ನು ಬೆಳೆಸಿಕೊಂಡರು. ಸ್ಟೂಯರ್ಟ್ ಸ್ಕ್ರಾಮ್ ಕುಮಿಂಟಾಂಗ್ ಚೀನಾದಲ್ಲಿ ಏರ್ಪಟ್ಟಿದ್ದ ವ್ಯಾಪಕವಾದ ಹಣದುಬ್ಬರ ಮತ್ತು ಭ್ರಷ್ಟಾಚಾರಗಳು ಇದಕ್ಕೆ ಕಾರಣವಾದವು.

## 144.7 ಜನರಲ್ ಚಿಯಾಂಗ್ ಕೈ ಷೆಕ್‌ನ ವಿಫಲತೆ

ಅಂತಿಮವಾಗಿ ಚಿಯಾಂಗ್ ಕೈ ಷೆಕ್‌ನ ವಿಫಲತೆಗೆ ಅನೇಕ ಕಾರಣಗಳಿದ್ದವು. ಚೆಸ್ಟರ್ ಚಾಲ್ಸ್ ಉಲ್ಲೇಖಿದಂತೆ "ಕಮ್ಯುನಿಸ್ಟ್ ಹೇಳುವ ಏಕಪಕ್ಷೀಯವಾದ ವಿಫಲ ಮತ್ತು ಭಾವನಾತ್ಮಕ ಪ್ರಯತ್ನ 1949 ರಿಂದಲೂ ನಡೆದಿದೆ. ಕಿಂಚಿತ್ತೂ ವಿವಾದವಿಲ್ಲದ ಚೀನಾದ ದುರಂತದ ಪ್ರಮುಖ ಪಾಠಗಳನ್ನು ಸ್ಪಷ್ಟವಾಗಿ ನಮ್ಮ ಮುಂದಿಡಲು ನಾವು ಶ್ರಮಿಸಬೇಕಾಗಿದೆ.

*ಕುಮಿಂಟಾಂಗ್ ಸರ್ಕಾರದ ನಕಾರಾತ್ಮಕ ಕಾರ್ಯಕ್ರಮ*

ಕುಮಿಂಟಾಂಗ್ ಪಕ್ಷ ತನ್ನ ಮುಂದೆ ಯಾವುದೇ ರಚನಾತ್ಮಕ ಕಾರ್ಯಕ್ರಮವನ್ನು ಹೊಂದಿರಲಿಲ್ಲ. ಅದರ ಉದ್ದೇಶ ಕೇವಲ ನಕಾರಾತ್ಮಕವಾಗಿತ್ತು. ಮೊದಲನೆಯದಾಗಿ ಅದು ಮಂಚೂಗಳನ್ನು ಅಧಿಕಾರದಿಂದಿಳಿಸಲು ಪ್ರಯತ್ನಿಸಿತು. ನಂತರ ಯುದ್ಧ ನಾಯಕರನ್ನು (ಮಿಲಿಟರಿ ನಾಯಕರು) ಪದಚ್ಯುತಗೊಳಿಸಲು ಒಂದು ಪ್ರಯತ್ನವನ್ನು ಮಾಡಲಾಯಿತು ಮತ್ತು ಕಡೆಯದಾಗಿ ಕಮ್ಯುನಿಸ್ಟರ ವಿರುದ್ಧ ಒಂದು ಹೋರಾಟ ಆರಂಭವಾಯಿತು. ಎಂದಿಗೂ ಒಂದು ರಚನಾತ್ಮಕ ಕಾರ್ಯಕ್ರಮವನ್ನು ಅನುಸರಿಸಲಿಲ್ಲ. ಕುಮಿಂಟಾಂಗ್ ಸರ್ಕಾರದ ಬೆಂಬಲಿಗರು ನವ ಬೆಳಕಿನ ಚಳುವಳಿಯನ್ನು ಉಲ್ಲೇಖಿಸಬಹುದು (ಹೆಸರಿಸಬಹುದು) ಆದರೆ ಅದು ಎಂದಿಗೂ ಜನಪ್ರಿಯ ಚಳುವಳಿಯಾಗಲಿಲ್ಲ. 1954 ರಲ್ಲಿ ಲೀಗ್ಟನ್ ಸ್ಟೂಯರ್ಟ್ ಬರೆದಿರುವಂತೆ "ಕುಮಿಂಟಾಂಗ್ ಪಕ್ಷವೂ ಮುಖ್ಯವಾಗಿ ಒಂದು ಅಸಮರ್ಥ ಮತ್ತು ಹೊರಗಿನ ರಾಜವಂಶವನ್ನು ಅಧಿಕಾರದಿಂದಿಳಿಸುವ ಮತ್ತು ನಂತರ ಪ್ರಾದೇಶಿಕ ಸೇನಾ ನಾಯಕರಿಗೂ ಅದನ್ನೇ

ಮಾಡುವ ಸಕಾರಾತ್ಮಕ ಪ್ರೇರಣೆಯಿಂದ ಅಧಿಕಾರಕ್ಕೆ ಬಂದಿತೇ ವಿನಃ ಪ್ರಜಾಪ್ರಭುತ್ವ ಮತ್ತು ಸಾಮಾಜಿಕ ಸುಧಾರಣೆಯ ಹೆಚ್ಚು ಸಕಾರಾತ್ಮಕ ಉದ್ದೇಶಗಳಿಂದಲ್ಲ".

*ಭ್ರಷ್ಟ ಅಧಿಕಾರಿಗಳು*

ಕುಮಿಂಟಾಂಗ್ ಸರ್ಕಾರದ ವಿಫಲತೆಗೆ ಮತ್ತೊಂದು ಕಾರಣವೆಂದರೆ ಅದರ ಬಹುಪಾಲು ಅಧಿಕಾರಿಗಳು ಭ್ರಷ್ಟಾಚಾರಿಗಳಾಗಿದ್ದರು. ಸ್ವಾಭಾವಿಕವಾಗಿಯೇ ಅಂತಹ ಆಡಳಿತದಿಂದ ಜನರು ನಿರಾಶೆಗೊಂಡರು ಮತ್ತು ಕಮ್ಯುನಿಸ್ಟರನ್ನು ಸ್ವಾಗತಿಸಿದರು. ಡಾ. ಜಾನ್ ಲೀಗ್ಟನ್ ಸ್ಟೂಯರ್ಟ್ ಮುಂದುವರಿದು "ಚಿಯಾಂಗ್‌ನ ಆಡಳಿತದಲ್ಲಿ ಸಾರ್ವಜನಿಕ ನಿಧಿಯಿಂದ ಲಾಭ ಮಾಡಲಾಗಲಿಲ್ಲ. ದೇಶದ ಹಿತಕ್ಕಿಂತಲೂ ಕುಟುಂಬ ಸ್ನೇಹಿತರು ಅಥವಾ ವರ್ಗಗಳ ಬಗ್ಗೆ ಹೆಚ್ಚಿನ ಕಾಳಜಿಯಿದ್ದಿತು. ಚಿಯಾಂಗನು ವೈಯುಕ್ತಿಕವಾಗಿ ಎಷ್ಟೇ ಪ್ರಾಮಾಣಿಕವಾಗಿದ್ದರೂ, ಅವನು ಎಲ್ಲಾ ಕಡೆಗಳಿಂದಲೂ ಮೂರ್ಖ ಅಧಿಕಾರಿಗಳಿಂದ ಸುತ್ತುವರಿಯಲ್ಪಟ್ಟಿದ್ದು ಅವನ ನಾಯಕತ್ವಕ್ಕೆ ಕಳಂಕವುಂಟಾಯಿತು.

*ದಂಡನಾಯಕರ ದೌರ್ಜನ್ಯ*

ಚಿಯಾಂಗನ ಅನೇಕ ದಂಡನಾಯಕರು ರಾಷ್ಟ್ರೀಯ ಹಿತವನ್ನು ಕಡೆಗಣಿಸಿದರು ಮತ್ತು ಯುದ್ಧದಲ್ಲಿ ಭಾಗವಹಿಸಲಿಲ್ಲ. ಚೆಸ್ಟರ್ ಚಾಲ್ಸನ ಅಭಿಪ್ರಾಯದಲ್ಲಿ "ಅನೇಕ ರಾಷ್ಟ್ರೀಯ ಸೈನಿಕರು ವೀರಾವೇಶದಿಂದ ಮತ್ತು ಉತ್ತಮವಾಗಿ ಹೋರಾಡಲು ಸಿದ್ಧರಾಗಿದ್ದರೂ, ಒಂದೇ ಒಂದು ಗುಂಡನ್ನೂ ಹಾರಿಸದೆ ಅವರ ದಂಡನಾಯಕರು ಇಡೀ ತಂಡವನ್ನು (ಸೇನಾ ವಿಭಾಗವನ್ನು ಮಾರಾಟ ಮಾಡಿದರು. ಅಂತಹ ಪಕ್ಷಾಂತರ ಮತ್ತು ಶರಣಾಗತಿಯಿಂದ ರಾಷ್ಟ್ರೀಯ ಸೈನ್ಯಕ್ಕೆ ಅಮೆರಿಕಾ ಒದಗಿಸಿದ್ದ ಶಸ್ತ್ರಾಸ್ತ್ರಗಳು ಕಮ್ಯುನಿಸ್ಟರ ಕೈಸೇರಿದವು. ಪರಿಸ್ಥಿತಿ ಹದಗೆಟ್ಟಂತೆ, ನಂಬಲಸಾಧ್ಯವಾದ ಭ್ರಷ್ಟಾಚಾರ ಮತ್ತು ಭಯೋತ್ಪಾದನೆಯ ತೀವ್ರವಾದ ಹೆಚ್ಚಳಗಳು ಕುಮಿಂಟಾಂಗ್ ಸರ್ಕಾರವನ್ನು ಬಲಿತೆಗೆದು ಕೊಂಡವು".

*ಕುಮಿಂಟಾಂಗ್ ನಾಯಕರ ಪ್ರತಿಗಾಮಿ ನೀತಿಗಳು*

ಕುಮಿಂಟಾಂಗ್ ನಾಯಕರು ಪರಿಸ್ಥಿತಿ ದಿನೇ ದಿನೇ ಉಲ್ಬಣಗೊಳ್ಳುತ್ತಿರುವುದನ್ನು ಗಮನಿಸಿದರೂ ಅದನ್ನು ನಿಯಂತ್ರಿಸಲು ಯಾವ ಕ್ರಮಗಳನ್ನೂ ಕೈಗೊಳ್ಳಲಿಲ್ಲ. ಅವರು ಅಗತ್ಯ ಸುಧಾರಣೆಗಳನ್ನು ಜಾರಿಗೆ ತರುವ ನೀತಿಯನ್ನು ಅಳವಡಿಸಿಕೊಳ್ಳಲಿಲ್ಲ. "ಇದು ಕಮ್ಯುನಿಸ್ಟರಲ್ಲದ ಸುಧಾರಕರು ಮಂದಗಾಮಿಗಳು ಮತ್ತು ಬುದ್ದಿಜೀವಿಗಳನ್ನು ಸಂಪೂರ್ಣವಾಗಿ ಪಕ್ಕಕ್ಕೆ ತಳ್ಳಿತು".

*ಉತ್ಸಾಹದ ಕೊರತೆ*

ಭ್ರಷ್ಟ ಮತ್ತು ಸ್ವಾರ್ಥ ಆಡಳಿತವು ಜನಸಮೂಹದ ಅವನತಿಗೆ ಕಾರಣವಾಯಿತು. ಅವರು ಸ್ವಾರ್ಥ ಸಾಧಕ ಮುಖಂಡರಿಗಾಗಿ ತಮ್ಮ ಅಸಮಧಾನಕ್ಕೆ ಜೀವವನ್ನು ಬಲಿಕೊಡಲು ಬಯಸಲಿಲ್ಲ. ಹೆಚ್ಚಿನ ಸೈನಿಕರಲ್ಲಿ ಉತ್ಸಾಹವೇ ಉಳಿದಿರಲಿಲ್ಲ. ಅವರ ನೈತಿಕ ಸ್ಥೈರ್ಯ ಅಧೋಗತಿಗಿಳಿದಿದ್ದಿತು. ಚಿಯಾಂಗ್ ಕೈ ಷೆಕ್ ಮತ್ತು ಅವನ ಬೆಂಬಲಿಗರಿಗೆ ಒಂದು ಹನಿ ರಕ್ತವನ್ನೂ ಚೆಲ್ಲಲು ಅವರು ಬಯಸಲಿಲ್ಲ.

*ಸಂಘಟನೆಯ ಕುಸಿತ*

ಚಿಯಾಂಗ್ ಕೈ ಷೆಕನು ತನ್ನ ಸಂಘಟನೆಯ ಕುಸಿತ ಮತ್ತು ಕುಮಿಂಟಾಂಗ್ ಸೈನಿಕರ ಅಶಿಸ್ತು ತನ್ನ ವಿಫಲತೆಗೆ ಬಹು ಮುಖ್ಯ ಕಾರಣವೆಂದು ಭಾವಿಸಿದನು. ಜನರಲ್ ಇಸೋಮಿ ಹೇಳಿಕೆಯಂತೆ "ನಾನು ನನ್ನ ಮೇಲೆಯೇ ತಪ್ಪನ್ನು ಹೊರಿಸಿಕೊಳ್ಳಬೇಕು. ಮುಖ್ಯ ಭೂಮಿಯಲ್ಲಿ ವಿನಾಶಕಾರಿಯಾದ ಸೈನಿಕ ಸೋಲುಗಳಿಗೆ ಕಮ್ಯುನಿಸ್ಟರ ಅಪಾರವಾದ ಬಲ ಕಾರಣವಾಗಿರಲಿಲ್ಲ. ಬದಲಾಗಿ ಸಂಘಟನೆಯ ಕೊರತೆ, ಅಶಿಸ್ತು ಮತ್ತು ಪಕ್ಷದ ಸದಸ್ಯರ ಅತ್ಯಂತ ಕಡಿಮೆಯಾದ ಉತ್ಸಾಹಗಳು ಕಾರಣವಾದವು"

ಕಮ್ಯುನಿಸ್ಟರ ಪ್ರಬಲವಾದ ಕ್ರಾಂತಿಕಾರಿ ಶಕ್ತಿ

ಚೀನೀಯರು ಗಂಭೀರವಾದ ಧಾರ್ಮಿಕ ನಂಬಿಕೆಯುಳ್ಳವರಾಗಿದ್ದು ಕಮ್ಯುನಿಸ್ಟ್ ಸಿದ್ಧಾಂತವನ್ನು ಸುಲಭವಾಗಿ ಒಪ್ಪಿಕೊಳ್ಳಲಾರರೆಂದು ಅನೇಕ ಜನರು ನಂಬಿದ್ದರು. ಆದರೆ ಕಮ್ಯುನಿಸ್ಟರ ಆರ್ಥಿಕ ಸಿದ್ಧಾಂತವು ಚೀನೀಯರ ಹೃದಯವನ್ನು ಗೆದ್ದಿತು. ಜಪಾನಿನ ಆಕ್ರಮಣವು ಕುಮಿಂಟಾಂಗ್ ಸರ್ಕಾರದ ಸ್ಥಾನವನ್ನು ಮತ್ತಷ್ಟು ದುರ್ಬಲಗೊಳಿಸಿತು

ಸಾಮಾನ್ಯ ಸನ್ನಿವೇಶದಲ್ಲಿ ಕುಮಿಂಟಾಂಗ್ ನಾಯಕತ್ವವು ಪರಿಸ್ಥಿತಿಯನ್ನು ಯಶಸ್ವಿಯಾಗಿ ನಿಬಾಯಿಸುತ್ತಿದ್ದಿತು. ಆದರೆ ಅಸಾಧಾರಣ ಸನ್ನಿವೇಶದಲ್ಲಿ ಜಪಾನಿನ ದಾಳಿಯಿಂದ ಸೃಷ್ಟಿಯಾದ ಆರ್ಥಿಕ ಮುಗ್ಗಟ್ಟು ಮತ್ತು ರಾಜಕೀಯ ಸಂಕಷ್ಟಗಳು ಪರಿಸ್ಥಿತಿಯು ಅತ್ಯಂತ ಕಠಿಣವಾಗುವಂತೆ ಮಾಡಿದವು. ಕಮ್ಯುನಿಸ್ಟರು ಪರಿಸ್ಥಿತಿಯನ್ನು ತಮ್ಮ ಅನುಕೂಲಕ್ಕೆ ಬಳಸಿಕೊಂಡರು.

*ಸ್ವಹಿತಾಸಕ್ತಿಗಳ ವಿರೋಧ*

ಚಿಯಾಂಗ್ ಕೈ ಷೆಕ್‌ನಿಗೆ ಬಂಡವಾಳಶಾಹಿಗಳು ಕೈಗಾರಿಕೋದ್ಯಮಿಗಳು ಮತ್ತು ಭೂಮಾಲೀಕರ ಬೆಂಬಲವಿತ್ತು. ಇವರು ಸಮಾಜವಾದದ ಮಾದರಿಯನ್ನು ಒಪ್ಪಲು ಸಿದ್ಧರಿರಲಿಲ್ಲ. ಏಕೆಂದರೆ ಭೂಮಿ ಅಥವಾ ಉತ್ಪಾದನಾ ಮೂಲಗಳ ಸಮಾನ ಹಂಚಿಕೆಯಿಂದ ಅವರು ಅವುಗಳ ಏಕಸ್ವಾಮ್ಯಕ್ಕೆ ಧಕ್ಕೆಯುಂಟಾಗುತ್ತಿದ್ದಿತು. ಆದ್ದರಿಂದ ಚಿಯಾಂಗ್ ಕೈ ಷೆಕ್‌ನು ತನ್ನ ಅತ್ಯುತ್ತಮ ಬೆಂಬಲಿಗರ ವೈಮನಸ್ಯವನ್ನು ಕಟ್ಟಿಕೊಳ್ಳುವ ಧೈರ್ಯ ಮಾಡಲಿಲ್ಲ ಪರಿಣಾಮವಾಗಿ ಜನಸಮೂಹ ಅಸಮಧಾನಗೊಂಡಿತು.

*ಅಮೆರಿಕಾದ ಅಸಹಾಯಕತೆ*

ಅಮೆರಿಕಾ ಅಪಾರ ಮೊತ್ತದ ಹಣಕಾಸಿನ ನೆರವನ್ನು ನೀಡಿದ್ದಲ್ಲಿ 'ಬಹುಶಃ ಪರಿಸ್ಥಿತಿಯಂದ ಪಾರು ಮಾಡಬಹುದಾಗಿದ್ದಿತು. ಆದರೆ ಪರ್ಲ್ ಹಾರ್ಬ್‌ನ ಮೇಲೆ ನಡೆದ ಅನಿರೀಕ್ಷಿತ ದಾಳಿಯಿಂದ ಅಮೆರಿಕ ಮಹಾಯುದ್ಧದಲ್ಲಿ ಭಾಗವಹಿಸಿತು ಮತ್ತು ಇದರಿಂದ ಪರಿಸ್ಥಿತಿಯನ್ನು ರಕ್ಷಿಸಲು ಅದಕ್ಕೆ ಸಾಧ್ಯವಾಗಲಿಲ್ಲ. ಚಾರ್ಲ್ಸ್ ಚಾಲ್ಸನ ಅಭಿಪ್ರಾಯದಲ್ಲಿ "ಪರ್ಲ್ ಹಾರ್ಬರ್ ಮೇಲಿನ ದಾಳಿಯ ನಂತರ ಅಮೆರಿಕ ಎರಡು ಖಂಡಗಳಲ್ಲಿ ಯುದ್ಧವನ್ನು ಎದುರಿಸಬೇಕಾಯಿತು ಮತ್ತು ಅದು ಅಂತಹ ಒಂದು ಕಾರ್ಯಕ್ರಮಕ್ಕೆ ಧನಸಹಾಯವನ್ನು ನೀಡುವುದಕ್ಕಾಗಲಿ ಪ್ರೋತ್ಸಾಹಿಸಲಾಗಲಿ ಸಾಧ್ಯವಾಗಲಿಲ್ಲ".

*ಅಮೆರಿಕನ್ನರ ಯುದ್ಧ ವಿರೋಧಿ ಧೋರಣೆ*

ಯುರೋಪ್ ಮತ್ತು ಏಷ್ಯಾದ ಎರಡೂ ರಂಗಗಳಲ್ಲಿ ಭೀಕರ ಯುದ್ಧದ ನಂತರ, ಅಮೆರಿಕನ್ನರು ಮತ್ತೊಂದು ಭಾರೀ ಪ್ರಮಾಣದ ಯುದ್ಧವನ್ನು ಮಾಡುವ ಮನಸ್ಥಿತಿಯಲ್ಲಿರಲಿಲ್ಲ. ಅಮೆರಿಕನ್ನರು ಚೀನಾದ ನೆಲದಲ್ಲಿ ಮತ್ತೊಂದು ಯುದ್ಧವನ್ನು ಮಾಡಿದ್ದಲ್ಲಿ ಬಹುಶಃ ಕುಮಿಂಟಾಂಗ್ ಚೀನಾವನ್ನು ರಕ್ಷಿಸಬಹುದಾಗಿತ್ತು. ಬಹುಮಟ್ಟಿಗೆ ಇದರಿಂದಲೂ ಕುಮಿಂಟಾಂಗ್ ಸರ್ಕಾರವನ್ನು ರಕ್ಷಿಸಲು ಸಾಧ್ಯವಿರಲಿಲ್ಲ. ಅಮೆರಿಕಾದ ನೆರವು ಚೀನಾವನ್ನು ರಕ್ಷಿಸಬಹುದಾಗಿತ್ತೆಂಬ ವಾದವನ್ನು ಒಪ್ಪಿಕೊಂಡರೂ, ಅಮೆರಿಕನ್ನರು ಯುದ್ಧದಿಂದ ಬಸವಳಿದಿದ್ದು, 1945 ರಲ್ಲಿ ಅಥವಾ 1949 ರವರೆಗೂ ಅಂತಹ ನಿರ್ಧಾರವನ್ನು ತೆಗೆದುಕೊಳ್ಳಲು ಸಿದ್ಧರಿರಲಿಲ್ಲ. ಚೆಸ್ಟರ್ ಚಾಲ್ಸ್‌ನ ಅಭಿಪ್ರಾಯದಲ್ಲಿ "ಜಪಾನಿನೊಂದಿಗೆ ಯುದ್ಧ ಕೊನೆಗೊಂಡಾಗ ಉಳಿದಿದ್ದ ಏಕೈಕ ಪರ್ಯಾಯವೆಂದರೆ ಅಮೆರಿಕಾದ ಸೇನಾಪಡೆ, ನೌಕಾಪಡೆ ಮತ್ತು ವಾಯುಪಡೆಗಳ ಗಂಭೀರವಾದ ಮತ್ತು ಬೃಹತ್ ಮಧ್ಯ ಪ್ರವೇಶ ಆದರೆ 1945 ರ ವೇಳೆಗೆ ಅಮೆರಿಕಾದ ಸೇನೆಯ ಮಧ್ಯಪ್ರವೇಶ ರಾಜಕೀಯವಾಗಿ ಅಸಾಧ್ಯವಾಗಿದ್ದು ನಾವು ಅವರ ವಿವೇಕವನ್ನು ಚರ್ಚಿಸಲೂ ಸಾಧ್ಯವಿಲ್ಲ".

## 144.8 ಮಾವೋನ ನಾಯಕತ್ವ

ಚೀನಾದ ಮಹಾ ಕಮ್ಯುನಿಸ್ಟ್ ನಾಯಕನಾದ ಮಾವೋ ಚೀನಾ ಕೃಷಿ ರಾಷ್ಟ್ರವೆಂಬುದನ್ನು ಮನಗಂಡು ರೈತರಲ್ಲಿ ಮನವಿ ಮಾಡಿಕೊಂಡನು. ಅವನು ಜಮೀನನ್ನು ಸಮಾನವಾಗಿ ಹಂಚಿದನು. ಅದು ಅವನಿಗೆ ಲಕ್ಷಾಂತರ ಚೀನೀ ರೈತರ ಸಹಾನುಭೂತಿಯನ್ನು ಗಳಿಸಿಕೊಟ್ಟಿತು. ಇದಕ್ಕೆ ವಿರುದ್ಧವಾಗಿ ಚಿಯಾಂಗನು ಈ ಮಿಲಿಯಾಂತರ ಜನರನ್ನು ಕಡೆಗಣಿಸಿದನು. ಚೆಸ್ಟರ್ ಚಾಲ್ಸ್ ಬರೆದಿರುವಂತೆ "ಗ್ರಾಮಾಂತರ ಬಡತನದ ಹಿನ್ನೆಲೆಯಲ್ಲಿ ಮಾವೋ ಏಷ್ಯಾದಲ್ಲಿ ಅಗಾಧವಾದ ಮತ್ತು ಕೊನೆ ಮುಗಿಯದ ಶಕ್ತಿಯ ಮೂಲವಾದ ರೈತರಿಗೆ ಯಶಸ್ವಿಯಾಗಿ ಮನವಿ ಮಾಡಿಕೊಳ್ಳುವ ಮೂಲಕ ವಿಜಯವನ್ನು ಸಾಧಿಸಿದನು. ಅವರ ಉತ್ಸಾಹವನ್ನು ಸ್ಫೋಟಿಸುವ ಮೂಲಕ ತಾನು ಬಹುದೊಡ್ಡ ಸುಸಜ್ಜಿತವಾದ ಸೇನೆಯನ್ನು ದಿಕ್ಕರಿಸುವ ಮತ್ತು ಅಂತಿಮವಾಗಿ ಪರಾಭವಗೊಳಿಸುವ ಸಾಮರ್ಥ್ಯವನ್ನು ಹೊಂದಿದ ಒಂದು ಶಕ್ತಿಯನ್ನು ಸೃಷ್ಟಿಸಬಹುದೆಂದು ಅರಿತನು".

*ನಿಷ್ಠಾವಂತ ಅನುಯಾಯಿಗಳು*

ಮಾವೋತ್ಸೇತುಂಗನು ಒಂದು ಘನ ಉದ್ದೇಶಕ್ಕಾಗಿ ಸರ್ವಸ್ವವನ್ನು ತ್ಯಾಗ ಮಾಡಲು ಸಿದ್ಧವಾಗಿದ್ದ ಅನೇಕ ನಿಷ್ಠಾವಂತ ಬೆಂಬಲಿಗರನ್ನು ಹೊಂದಿದ್ದು ಈ ವಿಷಯದಲ್ಲಿ ಅದೃಷ್ಟಶಾಲಿಯಾಗಿದ್ದನು. "ಮಾವೋ ನಿಷ್ಠಾವಂತ ಸಂಘಟಿತರಾದ ಚತುರ ನಾಯಕತ್ವದ ಅಲ್ಪಸಂಖ್ಯಾತರಲ್ಲಿ ತನ್ನ ವಿಶ್ವಾಸವನ್ನಿರಿಸಿದ್ದನು ಮತ್ತು ಅವನ ವಿಜಯಿಯಾದನು".

*ದೃಢನಿರ್ಧಾರದ ನಾಯಕತ್ವ*

ಮಾವೋತ್ಸೇತುಂಗ್ ಚೌ ಎನ್ ಲಾಯ್ ಮತ್ತು ಇನ್ನೂ ಅನೇಕರು ಚೀನೀಯರಿಗೆ ಅಚಲವಾದ ಮತ್ತು ದೃಢವಾದ ನಾಯಕತ್ವವನ್ನು ನೀಡಿದರು. ಇದು ಅಂತಿಮವಾಗಿ ಕಮ್ಯುನಿಸ್ಟರಿಗೆ ಜಯವನ್ನು ತಂದುಕೊಟ್ಟಿತು.

*ಕಮ್ಯುನಿಸ್ಟರ ಸೈನ್ಯ*

ಮಾವೋತ್ಸೇತುಂಗನು ಅತ್ಯಂತ ಬುದ್ಧಿವಂತಿಕೆಯಿಂದ ತನ್ನ ಇಡೀ ಸೈನ್ಯವನ್ನು ಕುಮಿಂಟಾಂಗ್ ಸೈನ್ಯದೊಂದಿಗೆ ವಿಲೀನಗೊಳಿಸಲಿಲ್ಲ. ಹೀಗೆ ಅವನ ಸೈನ್ಯ ಕ್ರಮೇಣ ಅಪಾರ ಅನುಭವವನ್ನು ಗಳಿಸಿತು ಮತ್ತು ಬಲಿಷ್ಠವಾಯಿತು. ಇದು ಅಂತಿಮವಾಗಿ ಕಮ್ಯುನಿಸ್ಟರ ವಿಜಯಕ್ಕೆ ಕಾರಣವಾಯಿತು.

*ರಷ್ಯಾದ ನೆರವು*

ಸ್ಟ್ಯಾಲಿನ್‌ನ ನಾಯಕತ್ವದಲ್ಲಿ ರಷ್ಯಾದ ಕಮ್ಯುನಿಸ್ಟ್ ಪಕ್ಷ ಚೀನಾದ ಕಮ್ಯುನಿಸ್ಟರಿಗೆ ನೆರವನ್ನು ನೀಡಿತು.

ಹೀಗೆ ಅಂತರ್ಯುದ್ಧದಲ್ಲಿ ಕಮ್ಯುನಿಸ್ಟರ ವಿಜಯವು ಚೀನಾದಲ್ಲಿ ಏರ್ಪಟ್ಟಿದ್ದ ಪರಿಸ್ಥಿತಿಯಲ್ಲಿ ಅತ್ಯಂತ ಸ್ವಾಭಾವಿಕವಾಗಿತ್ತು.

## 144.9 ಮುಕ್ತಾಯ

1. 1945 ರಲ್ಲಿ ಹಿಂದೆಂದೂ ಏರ್ಪಡದಿದ್ದ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಸಮಸ್ಯೆಗಳಿಂದ ಪ್ರೇರಿತವಾಗಿ ತ್ವರಿತವಾಗಿ ಬದಲಾಗುತ್ತಿದ್ದ ಸನ್ನಿವೇಶದಲ್ಲಿ ಅಂತರ್ಯುದ್ಧ ಪ್ರಾರಂಭವಾಯಿತು.

2. ಚಿಯಾಂಗ್ ಕೈ ಷೆಕ್‌ನ ನಾಯಕತ್ವದ ಸರ್ವಾಧಿಕಾರ ಮಾದರಿಯ ಆಡಳಿತವು ಅಸಮರ್ಥವಾಗಿದ್ದು, ಚೀನಾದ ಪ್ರದೇಶಗಳಿಂದ ಜಪಾನಿನ ನಿರ್ಗಮನದಿಂದ ಉದ್ಭವಿಸಿದ ರಾಜಕೀಯ ಶೂನ್ಯತೆಯನ್ನು ತನ್ನ ಲಾಭಕ್ಕೆ ಬಳಸಿಕೊಳ್ಳಲು ಹೀನಾಯವಾಗಿ ವಿಫಲವಾಯಿತು.

3. ಚಿಯಾಂಗ್‌ನ ಸೇನೆಯ ವಿರುದ್ಧ ಕಮ್ಯುನಿಸ್ಟರ ಪ್ರತಿದಾಳಿಯು ಸುವ್ಯವಸ್ಥಿತವಾಗಿದ್ದು ಮತ್ತು ಪರಿಣಾಮಕಾರಿಯಾಗಿ ಸಂಯೋಜಿಸಲ್ಪಟ್ಟಿದ್ದು ನಿಷ್ಠಾವಂತ ಕಮ್ಯುನಿಸ್ಟ್ ಸಂಗಾತಿಗಳಿಂದ (ಪುನಶ್ಚೇತನ) ಪುನಶ್ಚೇತನವನ್ನು ಪಡೆಯಿತು.

4. ಮಾವೋನ ಶ್ರೇಷ್ಠ ಮಟ್ಟದ ನಾಯಕತ್ವದಲ್ಲಿ ಕಮ್ಯುನಿಸ್ಟರು ಅತ್ಯಂತ ಪ್ರಿಯವಾದ ಕಾರ್ಯಕ್ರಮಗಳ ಮೂಲಕ ಗ್ರಾಮಾಂತರ ಜನಸಮೂಹಕ್ಕೆ ಮನವಿ ಮಾಡಿಕೊಂಡರು. ಅವರ ಸಾಂಕೇತಿಕ ಬೆಂಬಲವು ಕುಮಿಂಟಾಂಗ್ ಸರ್ಕಾರದ ಪದಚ್ಯುತಿಗೆ ಮತ್ತು ಇಡೀ ದೇಶವನ್ನು ಕೆಂಪು ಚೀನವನ್ನಾಗಿ ಪರಿವರ್ತಿಸಿದ ಕಮ್ಯುನಿಸ್ಟರ ಆಳ್ವಿಕೆಯ ಸ್ಥಾಪನೆಗೆ ಮುಖ್ಯ ಅಸ್ತ್ರವಾಯಿತು.

## 144.10 ಮಾಧರಿ ಪ್ರಶ್ನೆಗಳು

1. ಚೀನಾದಲ್ಲಿ ಅಂತರ್ಯುದ್ಧಕ್ಕೆ ದಾರಿಮಾಡಿಕೊಟ್ಟ ಕಾರಣಗಳು ಮತ್ತು ಸನ್ನಿವೇಶಗಳನ್ನು ವಿವರಿಸಿ.

2. 'ಮಾವೋನ ಪರಿಣಾಮಕಾರಿ ನಾಯಕತ್ವವು ಅಂತರ್ಯುದ್ಧದಲ್ಲಿ ಕಮ್ಯುನಿಸ್ಟರ ವಿಜಯಕ್ಕೆ ಮುಖ್ಯ ಅಸ್ತ್ರವಾಯಿತು' ಚರ್ಚಿಸಿ.

3. ಚೀನಾದಲ್ಲಿ ಕಮ್ಯುನಿಸ್ಟ್ ಸರ್ಕಾರವನ್ನು ಸ್ಥಾಪಿಸಲು ಅಂತರ್ಯುದ್ಧ ಪರೋಕ್ಷ ವರವಾಗಿತ್ತು ಪರಿಶೀಲಿಸಿ.

## 144.11 ಹೆಚ್ಚಿನ ಅಧ್ಯಯನಕ್ಕೆ ಪುಸ್ತಕಗಳು


1. B. Schwartz : Chinese Communication and the Rise of Mao (1967)
2. Ch'n Jerome : Mao and the Chinese Revolution (1967)
3. H.M. Vinake : A History of Far East in Modern Times (1964)
4. K.T. Hollinton : A Biography of president chiang kai - shek (1938)
5. Clydes Beer : The Far East (1976)


ಕೆ.ಬಿ. ಚಂದ್ರ

# ಘಟಕ - 145

## ಕಮ್ಯುನಿಸ್ಟ್ ಚೀನ : ಆಂತರಿಕ ಬೆಳವಣಿಗೆಗಳು


145.0 ಉದ್ದೇಶಗಳು
145.1 ಪೀಠಿಕೆ
145.1.1 1949 ರ ಹಿನ್ನೆಲೆ
145.2 ರಾಜಕೀಯ ಮತ್ತು ಆಡಳಿತದ ತಳಹದಿ
145.2.1 ಸಮ್ಮಿಶ್ರ ಸರ್ಕಾರ
145.2.2 ಸಮೂಹ ಸಂಘಟನೆ
145.2.3 ತಾತ್ಕಾಲಿಕ ಸರ್ಕಾರ
145.3 ಕಮ್ಯುನಿಸ್ಟ್ ಪಕ್ಷದ ಪಾತ್ರ
145.3.1 ಮಾವೋನ ನಾಯಕತ್ವ
145.3.2 ಸಮೂಹಕ್ಕೆ ಪುನರ್‌ರೂಪ (ಹೊಸ ಆಕಾರ) ನೀಡುವುದು
145.3.3 ಪ್ರಚಾರ ಮತ್ತು ಮನವೊಲಿಕೆ
145.3.4 ಚೀನೀಯರ ಆಲೋಚನೆಗೆ ರೂಪ ನೀಡುವುದು
145.3.5 ಚೀನೀ ಬುದ್ಧಿಜೀವಿಗಳ ಧೋರಣೆ
145.4 ಸಾಮಾಜಿಕ ಪರಿವರ್ತನೆ
145.5 ಆರ್ಥಿಕ ಅಭಿವೃದ್ಧಿ
145.5.1 ತ್ವರಿತ ಆಧುನೀಕರಣ
145.5.2 ಸೋವಿಯತ್ ರಷ್ಯದ ನೆರವಿಗೆ ಕೋರಿಕೆ
145.5.3 ಹಳೆಯ ಆರ್ಥಿಕ ವ್ಯವಸ್ಥೆಯ ಬದಲಾವಣೆ
145.5.4 ಹೊಸ ಕೈಗಾರಿಕೀಕರಣ
145.5.5 ಕೃಷಿ ಸಮಸ್ಯೆಗಳು
145.6 ಮಹಾ ಮುನ್ನಡೆ ಜಿಗಿತ
145.6.1 ಕಮ್ಯೂನ್‌ಗಳ ಪಾತ್ರ
145.6.2 ಆತುರದ ಆಂತರಿಕ ಪ್ರಯೋಗ
145.6.3 ವೆಚ್ಚದ ಕಡಿತ
145.7 ಬಿಕ್ಕಟ್ಟಿನಲ್ಲಿ ಕ್ರಾಂತಿ
145.7.1 ಪಕ್ಷದೊಳಗೆ ಭಿನ್ನಾಭಿಪ್ರಾಯ
145.8 ಮಹಾ ಸಾಂಸ್ಕೃತಿಕ ಕ್ರಾಂತಿ
145.9 ಲೌಕಿಕ ಉದ್ದೇಶಗಳಿಗೆ ಹಿಂತಿರುಗಿದುದು
145.10 ಸಮಕಾಲೀನ ಚೀನ
145.11 ಮುಕ್ತಾಯ
145.12 ಮಾದರಿ ಪ್ರಶ್ನೆಗಳು
145.13 ಹೆಚ್ಚಿನ ಅಧ್ಯಯನಕ್ಕೆ ಪುಸ್ತಕಗಳು

## 145.0 ಉದ್ದೇಶಗಳು

ಈ ಘಟಕದ ಅಧ್ಯಯನದಿಂದ ನೀವು ಕೆಳಗಿನ ಅಂಶಗಳನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗುವುದು.

* ಚೀನಾದಲ್ಲಿ ಕಮ್ಯುನಿಸ್ಟ್ ಸರ್ಕಾರವನ್ನು ಸ್ಥಾಪಿಸಲು ಕಮ್ಯುನಿಸ್ಟರು ಕೈಗೊಂಡ ಪ್ರಯತ್ನಗಳು
* ಚೀನಾದಲ್ಲಿ ಕಮ್ಯುನಿಸ್ಟ್ ಆಡಳಿತವನ್ನು ಕ್ರೋಢೀಕರಿಸುವಲ್ಲಿ ಕಮ್ಯುನಿಸ್ಟ್ ಪಕ್ಷದ ಪಾತ್ರ
* ಸಾಮಾಜಿಕ ಪರಿವರ್ತನೆ ಮತ್ತು ಆರ್ಥಿಕ ವ್ಯವಸ್ಥೆಯ ಆಧುನೀಕರಣದ ದಿಸೆಯಲ್ಲಿ ಪ್ರಯತ್ನ
* 'ಮಹಾ ಮುನ್ನಡೆಯ ಜಿಗಿತ'ದ ಹೆಸರಿನಲ್ಲಿ ಆಂತರಿಕ ರಂಗದಲ್ಲಿ ಕೈಗೊಳ್ಳಲಾದ ಉತ್ಪಾದನೆಯ ಪ್ರಯೋಗ
* ಹಳೆಯ ಚೀನಾವನ್ನು ಆಧುನಿಕ ಚೀನವನ್ನಾಗಿ ರೂಪಿಸುವ ಉದ್ದೇಶವನ್ನು ಹೊಂದಿದ್ದ ಸಾಂಸ್ಕೃತಿಕ ಕ್ರಾಂತಿಯ ಬಲಾತ್ಕಾರದ ಅನುಷ್ಠಾನ.

## 145.1 ಪೀಠಿಕೆ

1949 ನೇ ವರ್ಷ ಆಧುನಿಕ ಚೀನಾದ ಇತಿಹಾಸದಲ್ಲಿ ಅತ್ಯಂತ ಮಹತ್ವಪೂರ್ಣವಾಗಿದೆ. 1949 ನೇ ವರ್ಷವು ಕುಮಿಂಟಾಂಗ್ ಯುಗದ ಕರುಣಾಜನಕ ಅಂತ್ಯ ಮತ್ತು ಕಮ್ಯುನಿಸ್ಟ್ ಸಿದ್ಧಾಂತದ ಯಶೋಗಾಥೆಯ ಆರಂಭವನ್ನು ಕಂಡಿತು. ಹಳೆಯ ಚೀನಾ ಕೊನೆಯಿಲ್ಲದ ಸಮಸ್ಯೆಗಳು ಒಂದು ಸಂಗ್ರಹವಾಗಿದ್ದು, ತೀವ್ರವಾದ ಗಮನ ಮತ್ತು ತಕ್ಷಣದ ಪರಿಹಾರವನ್ನು ಬೇಡಿತು. ಇದಕ್ಕೆ ಕಮ್ಯುನಿಸ್ಟರು ಹೇಗೆ ಪ್ರತಿಕ್ರಿಯಿಸಿದರು? ಅವರಿಗೆ ಅವುಗಳನ್ನು ಬಗೆಹರಿಸಲು ಸಾಧ್ಯವಾಯಿತೆ? ಅದು ಸಾಧ್ಯವಾಗಿದ್ದರೆ, ಅವರು ಇಟ್ಟ ಹೆಜ್ಜೆಗಳು ಜಾರಿಗೆ ತಂದ ಸುಧಾರಣೆಯ ಕ್ರಮಗಳು ಮತ್ತು ಅದರ ಪರಿಣಾಮವಾದ ಪರಿವರ್ತನೆಗೆ ಸಾಧನೆಗಳನ್ನು ವಿಷದವಾಗಿ ಚರ್ಚಿಸುವುದು ಅಗತ್ಯವಾಗಿದೆ.

### *145.1.1 1949 ರ ಹಿನ್ನೆಲೆ*

1949 ನೇ ಪಕ್ಷವು ಚೀನೀ ನಾಗರೀಕತೆಯ ರಾಜಕೀಯ ಪರಂಪರೆಯಲ್ಲಿ ಅತ್ಯಂತ ಮಹತ್ವದಿಂದ ಕೂಡಿದ್ದಿತು. ಆ ವರ್ಷ ಕಮ್ಯುನಿಸ್ಟ್ ಪಡೆಗಳು ಕುಮಿಂಟಾಂಗ್ ಪಕ್ಷ ಮತ್ತು ಅದರ ಸರ್ಕಾರವನ್ನು ಚೀನಾದ ಮುಖ್ಯ ಭೂಮಿಯಿಂದ ಹೊರಹಾಕಿದವು. ಕಮ್ಯುನಿಸ್ಟರ ದಿಗ್ವಿಜಯವು ರಾಜವಂಶಗಳು ತಮ್ಮ ಯೋಗ್ಯತೆಯಿಂದ ಅಧಿಕಾರಕ್ಕೆ ಬಂದವು ಮತ್ತು ಅವನತಿಯಿಂದ ನಾಶವಾದವು ಎಂಬ ಚೀನಾದ ಇತಿಹಾಸದ ಪುರಾತನ ತಿರುಗುವ ಚಕ್ರದ ಸಿದ್ಧಾಂತವನ್ನು ಮನವರಿಕೆ ಮಾಡಿಕೊಡುತ್ತದೆ. ಬದಲಾಗಿ ಅದು ಆಧುನಿಕ, ಪಾಶ್ಚಿಮಾತ್ಯ ಮೌಲ್ಯಗಳೊಂದಿಗೆ ಸಾಂಪ್ರದಾಯಿಕ ಚೀನೀ ಮೌಲ್ಯಗಳನ್ನೊಳಗೊಂಡ ಒಂದು ಹೊಸ ವ್ಯವಸ್ಥೆಯನ್ನು ಬಯಸಿತು. ಈ ಕ್ರಾಂತಿಯ ತತ್ವಗಳ ಉಗ್ರ ರೂಪವಾಗಿ ಕಮ್ಯುನಿಸ್ಟರು 1949 ರಲ್ಲಿ ಅಧಿಕಾರವನ್ನು ಆಕ್ರಮಿಸಿದರು. ಚೀನಾದ ದೀರ್ಘ ಇತಿಹಾಸದಿಂದ ತೆಗೆದುಕೊಳ್ಳಲಾಗಿ ಸಂಪ್ರದಾಯಗಳು ಮತ್ತು ಮೌಲ್ಯಗಳ ದೃಷ್ಟಿಯಿಂದಲೂ ಬಹುಶಃ ಅವರ ದಿಗ್ವಿಜಯಗಳು ಸಂಪೂರ್ಣ ಕ್ರಾಂತಿಯ ಕಲ್ಪನೆಯ ಮೇಲೆ ನಿಂತಿದ್ದವು. 1949 ರ ಮಹತ್ವ ಇಲ್ಲಿ ಅಡಗಿದೆ.

ಚೀನಾವನ್ನು ಪುನರ್ ರೂಪಿಸುವ ಮತ್ತು ಜನರನ್ನು ಕೇಂದ್ರೀಕೃತ ಸರ್ಕಾರದಡಿಯಲ್ಲಿ ಒಂದುಗೂಡಿಸುವ ಕಾರ್ಯಗಳಿಗೆ ಕಮ್ಯುನಿಸ್ಟರು ಭಾರೀ ಉಂಬಳಿಯನ್ನು ಪಡೆದರು. ಅನೇಕ ವರ್ಷಗಳ ಕಠಿಣ ಹೋರಾಟವು ಮಾವೋತ್ಸೇತುಂಗನ ನಾಯಕತ್ವದಲ್ಲಿ ಗಮನಾರ್ಹವಾದ ಒಗ್ಗಟ್ಟಿನ ಮತ್ತು ದೃಢ ನಿರ್ಧಾರದ ನಾಯಕತ್ವವನ್ನು ಸೃಷ್ಟಿಸಿತು. ಚೀನಾದ ವಾಯುವ್ಯ ಭಾಗದಲ್ಲಿ ನಿಜವಾಗಿಯೂ ಆಡಳಿತ ನಡೆಸುವ ಮೂಲಕ ಪಡೆದ ಅನುಭವದಿಂದ ಕಮ್ಯುನಿಸ್ಟರು ಅಧಿಕಾರಕ್ಕೆ ಬಂದರು. ಇದರ ಜೊತೆಗೆ ತಮ್ಮ ಕ್ರಾಂತಿಕಾರಿ ಪರಂಪರೆಯಿಂದ ತಮ್ಮ ತತ್ವದ ಬೋಧನೆಯಿಂದ, ಸೋವಿಯತ್ ರಷ್ಯದ ಕಮ್ಯುನಿಸ್ಟ್ ರಾಜ್ಯ ಒದಗಿಸಿದ ನಿದರ್ಶನದಿಂದ ಈ ಹೊಸ ನಾಯಕತ್ವವು ತನ್ನ ತಕ್ಷಣದ ಗುರಿಗಳು ಮತ್ತು ಅವುಗಳನ್ನು ಸಾಧಿಸುವ ಮಾರ್ಗಗಳ ಸ್ಪಷ್ಟ ಕಲ್ಪನೆಯನ್ನು ಪಡೆಯಿತು.

## 145.2 ರಾಜಕೀಯ ಮತ್ತು ಆಡಳಿತಾತ್ಮಕ ಅಡಿಪಾಯಗಳು

ಕಮ್ಯುನಿಸ್ಟರು ಸೈನಿಕ ವಿಜಯಗಳ ಕಡೆಗೆ ಹತ್ತಿರವಾಗುತ್ತಿರುವಂತೆಯೇ 1948-49 ರಲ್ಲಿ ಅವರು ರಾಷ್ಟ್ರೀಯ ಸರ್ಕಾರ ಸ್ಥಾಪನೆಗೆ ಸಿದ್ಧವಾದರು. ಮೊದಲನೆ ಹೆಜ್ಜೆಯಾಗಿ, ಸೆಪ್ಟೆಂಬರ್ 1949 ರಲ್ಲಿ ಪೀಕಿಂಗ್‌ನಲ್ಲಿ ನಡೆದ ಚೀನೀ ಜನತಾ ಸಲಹಾ ಸಮ್ಮೇಳನವನ್ನು ಏರ್ಪಡಿಸಲಾಯಿತು. ಅದು ಮೂರು ಮೂಲಭೂತ ನಿರ್ಣಯಗಳನ್ನು ಅಂಗೀಕರಿಸಿತು.

1. ಮಧ್ಯಂತರ ಸಂವಿಧಾನವಾಗಿ ಕಾರ್ಯ ನಿರ್ವಹಿಸುವ ಸಾಮಾನ್ಯ ತತ್ವಗಳ ಏಕರೂಪದ ಕಾರ್ಯಕ್ರಮ
2. ತಾತ್ಕಾಲಿಕ ಸರ್ಕಾರವನ್ನು ಸ್ಥಾಪಿಸಲು ಕೇಂದ್ರ ಜನತಾ ಸರ್ಕಾರದ ಆವಯವ ಕಾನೂನು
3. ಚೀನೀ ಜನತಾ ಸಲಹಾ ಸಮ್ಮೇಳನದ ಆವಯವ ಕಾಯಿದೆ. ಹೀಗೆ ಸಮ್ಮೇಳನವು ತನ್ನ ಕಾರ್ಯವನ್ನು ಪೂರೈಸಿದ ನಂತರವೇ ಕಮ್ಯುನಿಸ್ಟರು ಅಕ್ಟೋಬರ್ 1, 1949 ರಂದು ಚೀನೀ ಜನತಾ ಗಣರಾಜ್ಯದ ಸ್ಥಾಪನೆಯನ್ನು ಘೋಷಿಸಿದರು.

### *145.2.1 ಸಮ್ಮಿಶ್ರ ಸರ್ಕಾರ*

ಹೊರನೋಟಕ್ಕೆ ಹೊಸ ಸರ್ಕಾರ ಒಂದು ವಿಶಾಲವಾದ ಸಮ್ಮಿಶ್ರಣವಾಗಿತ್ತು. ಅದರಲ್ಲಿ ಕಮ್ಯುನಿಸ್ಟರು ರೈತ ವರ್ಗದ ಮೈತ್ರಿಯೊಂದಿಗೆ, ಅನೇಕ 'ಪ್ರಜಾಸತ್ತಾತ್ಮಕ' ಪಕ್ಷಗಳೊಂದಿಗೆ ಕೆಲಸ ಮಾಡಿದರು. ಈ 'ಪ್ರಜಾಸತ್ತಾತ್ಮಕ' ಪಕ್ಷಗಳು ಚೀನೀ ಜನತಾ ಸಲಹಾ ಸಮ್ಮೇಳನದಲ್ಲಿ ಸ್ಥಾನಗಳನ್ನು ಹೊಂದಿದ್ದವು. ಅವರ ಪ್ರತಿನಿಧಿಗಳು ಸರ್ಕಾರು ಹುದ್ದೆಗಳಲ್ಲಿ ನೇಮಕಗೊಂಡರು. ಪ್ರಜಾಸತ್ತಾತ್ಮಕ ಪಕ್ಷಗಳು ಕಮ್ಯುನಿಸ್ಟ್ ನಾಯಕತ್ವದಲ್ಲಿ ಕಾರ್ಯ ನಿರ್ವಹಿಸಿದುದು ಸಮ್ಮಿಶ್ರ ಸರ್ಕಾರದ ನಿಜವಾದ ಸ್ವರೂಪವಾಗಿತ್ತು. ಈ ಪಕ್ಷಗಳಿಗೆ ತಳಮಟ್ಟ ಬೆಂಬಲವನ್ನು ಗಳಿಸಲು ಅಥವಾ ತಮಗಾಗಿ ಪ್ರಚಾರ ಮಾಡಲು ಅನುಮತಿಯಿರಲಿಲ್ಲ. ಹೊಸ ಸರ್ಕಾರ ಯಾವುದೇ ಒಂದು ವರ್ಗವನ್ನಲ್ಲದೆ ಎಲ್ಲಾ ಜನರನ್ನು ಪ್ರತಿನಿಧಿಸುತ್ತಿದೆಯೆಂಬುದನ್ನು ಸಮರ್ಥಿಸಲು ಅವು ಅಂಕಿ ಸಂಖ್ಯೆಗಳ ಮೂಲಕ ತೋಡಿಕೊಡಲು ಅವಕಾಶ ದೊರಕಿಸಿಕೊಟ್ಟವು. ಅದಕ್ಕಿಂತಲೂ ಹೆಚ್ಚಾಗಿ ಸಾಧ್ಯವಾದಷ್ಟು ನಮ್ರವಾಗಿದ್ದು, ಈ ಪಕ್ಷಗಳು ಕಮ್ಯುನಿಸ್ಟರ ಇಷ್ಟಕ್ಕೆ ತಕ್ಕಂತೆ ಜನರಿಗೆ ಶಿಕ್ಷಣ ನೀಡಲು ಮತ್ತು ಮಾರ್ಗದರ್ಶನ ನೀಡಲು ಸಹಾಯ ಮಾಡಿದವು. ಅವು "ಸಾಮಾಜಿಕ ನಿರ್ಮಾಣಕ್ಕೆ" ಉತ್ಸಾಹ ಮತ್ತು ಶಕ್ತಿಯನ್ನು ಸಂಚಯಿಸುವ ಕೆಲಸದಲ್ಲೂ ನೆರವು ನೀಡಿದವು. ಅವು ಹೆಚ್ಚು ಕಾಲ ಈ ಉದ್ದೇಶಗಳನ್ನು ಈಡೇರಿಸಲು ಸಾಧ್ಯವಿಲ್ಲದಿದ್ದಾಗ ಕಣ್ಮರೆಯಾದವು.

### *145.2.2 ಸಮೂಹ ಸಂಘಟನೆ*

ಕಮ್ಯುನಿಸ್ಟರು ತಮ್ಮ ಆಳ್ವಿಕೆಯನ್ನು ಜಾರಿಗೊಳಿಸಲು ಸಮೂಹ ಸಂಘಗಳನ್ನು ಸ್ಥಾಪಿಸಿದರು. ಅಂತಹ ಸಂಘಗಳಲ್ಲಿ ಅಖಿಲ ಚೀನಾ ಪ್ರಜಾಸತ್ತಾತ್ಮಕ ಯುವಕರ ಒಕ್ಕೂಟ, ಅಖಿಲ ಚೀನಾ ಸಹಕಾರ ಸಂಘಗಳ ಒಕ್ಕೂಟ, ಅಖಿಲ ಚೀನಾ ಪ್ರಜಾಸತ್ತಾತ್ಮಕ ಮಹಿಳಾ ಒಕ್ಕೂಟ, ಕೃಷಿಕರ ಸಂಘ ಮತ್ತು ಸ್ವಯಂ ಆಡಳಿತದ ಸಾಕಾರಕ್ಕಾಗಿ ರಚಿಸಲಾಗಿದ್ದ ಚೀನಾದ ಚರ್ಚುಗಳ ರಾಷ್ಟ್ರೀಯ ಸಮಿತಿ ಮುಖ್ಯವಾದವು. ಇತರ ಸಾಮೂಹಿಕ ಸಂಘಗಳಾದ ಚೀನಾ ಸೋವಿಯತ್ ಸ್ನೇಹ ಸಂಘ, ಚೀನಾದ ರೆಡ್‌ಕ್ರಾಸ್ ಸೊಸೈಟಿ ಮತ್ತು ವಿಶ್ವಶಾಂತಿ ಹಾಗೂ ಅಮೆರಿಕಾದ ಆಕ್ರಮಣಕ್ಕೆ ವಿರುದ್ಧವಾದ ಚೀನೀ ಜನತಾ ಸಮಿತಿ ಕೆಲವು ನಿರ್ದಿಷ್ಟ ಉದ್ದೇಶವನ್ನು ಪ್ರತಿನಿಧಿಸುತ್ತಿದ್ದವು. ಈ ಸಂಘಗಳು ತಮ್ಮ ಕಮ್ಯುನಿಸ್ಟ್ ನಾಯಕತ್ವವನ್ನು ಮರೆಮಾಚಲಿಲ್ಲ. ಸಾಮೂಹಿಕ ಸಂಘಗಳಲ್ಲಿ ಕಾರ್ಯತಃ ಎಲ್ಲರನ್ನು ಸೇರಿಸಿಕೊಂಡಿದ್ದುದು ಕಮ್ಯುನಿಸ್ಟರು ಅಪಾರ ಜನಪ್ರಿಯ ಬೆಂಬಲವನ್ನು ಹೊಂದಿದ್ದರೆಂಬ ಅಭಿಪ್ರಾಯವನ್ನು ದೇಶ ವಿದೇಶಗಳಲ್ಲಿ ಸೃಷ್ಟಿಸಲು ಸಹಾಯ ಮಾಡಿದವು. ಈ ಸಂಘಗಳೇ ಪಕ್ಷದ ಕಾರ್ಯಕ್ರಮಗಳ ಪ್ರಚಾರ ಮತ್ತು ಅನುಷ್ಠಾನದ ಅತಿರಿಕ್ತ ಯಾಂತ್ರಿಕ ಕೌಶಲ್ಯವನ್ನು ಒದಗಿಸಿದವು.

### *145.2.3 ತಾತ್ಕಾಲಿಕ ಸರ್ಕಾರ*

1949 ರಲ್ಲಿ ಸ್ಥಾಪಿಸಲಾದ ತಾತ್ಕಾಲಿಕ ಸರ್ಕಾರ ನಾಲ್ಕು ಮುಖ್ಯ ಶಾಖೆಗಳನ್ನೂ ಒಳಗೊಂಡಿತ್ತು. ಕೇಂದ್ರ ಜನತಾ ಸರ್ಕಾರವು ಶಾಸಕಾಂಗದ ಕಾರ್ಯಾಂಗದ ಮತ್ತು ನ್ಯಾಯಾಂಗದ ಅಧಿಕಾರಗಳನ್ನು ಚಲಾಯಿಸುತ್ತಿದ್ದಿತು. ಆಡಳಿತಾತ್ಮಕ ಜವಾಬ್ದಾರಿಗಳು ಮತ್ತು ಸೈನ್ಯದ ನಿಯಂತ್ರಣಗಳು ಕ್ರಮವಾಗಿ ಸರ್ಕಾರದ ಆಡಳಿತ ಸಮಿತಿ ಮತ್ತು ಜನತಾ ಕ್ರಾಂತಿಕಾರಿ ಸೈನಿಕ ಸಮಿತಿ ಸೇರಿದ್ದವು. ಕಡೆಯದಾಗಿ,

ಕಾರ್ಯಾಂಗಕ್ಕೆ ಪೂರಕವಾಗಿ ಆದರೆ ಅವುಗಳಿಗೆ ಅಧೀನವಾಗಿ ಪ್ರಾಕ್ಯುರೇಟರ್ ಜನರಲ್‌ನ ಕಛೇರಿ ಮತ್ತು ಸರ್ವೋಚ್ಚ ಜನತಾ ನ್ಯಾಯಾಲಯಗಳಿದ್ದವು. ಈ ರಚನೆಯ ನೇರ ಹತೋಟಿಯಲ್ಲಿ ಪ್ರಾಂತಗಳು ಮತ್ತು ಅವುಗಳ ಕೆಳಗಿನ ಎಲ್ಲವನ್ನು ಒಳಗೊಂಡ ಸ್ಥಳೀಯ ಸರ್ಕಾರವಿತ್ತು. ದೇಶದ ಮುಖ್ಯ ಭಾಗಗಳಿಗೆ ವಿಸ್ತರಿಸಿದ್ದ ಪುರಾತನ ಸಾರ್ವಭೌಮ ವ್ಯವಸ್ಥೆಗೆ ವಿರುದ್ಧವಾಗಿ ಕಮ್ಯುನಿಸ್ಟ್ ಸರ್ಕಾರವು ಪಟ್ಟಣಗಳು, ಕೇರಿಗಳು ಮತ್ತು ಬೀದಿಗಳ ಕೆಳ ಮಟ್ಟದವರೆಗೂ ತಲುಪಿದ್ದಿತು. ರಾಷ್ಟ್ರೀಯ ಅಲ್ಪಸಂಖ್ಯಾತುರು ನೆಲೆಸಿದ್ದ ಪ್ರದೇಶಗಳಲ್ಲಿ ಸ್ವಯಮಾಡಳಿತ ಸ್ಥಳೀಯ ಸರ್ಕಾರಗಳನ್ನು ಸ್ಥಾಪಿಸುವ ಮೂಲಕ ಈ ಕೇಂದ್ರೀಕೃತ ರಚನೆಯ ಬದಲಾಯಿಸಲಾಯಿತು. ಆದಾಗ್ಯೂ 1949 ರಲ್ಲಿ ಕಮ್ಯುನಿಸ್ಟರ ಈ ಅಲ್ಪಸಂಖ್ಯಾತರಿಗೆ ವಿಶೇಷ ರೀತಿಯ ಸ್ವಾಯತ್ತತೆಯನ್ನು ನೀಡುವ ಉದ್ದೇಶವನ್ನು ಹೊಂದಿದ್ದರೇ ಎಂಬುದು ಸ್ಪಷ್ಟವಾಗಿಲ್ಲ.

ರಾಷ್ಟ್ರೀಯ ಜನತಾ ಕಾಂಗ್ರೆಸ್ ಸಭೆಯನ್ನು ಏರ್ಪಡಿಸುವ ಮೂಲಕ ಮತ್ತು ಸಂವಿಧಾನವನ್ನು ಅಂಗೀಕರಿಸುವ ಮೂಲಕ ಸೆಪ್ಟೆಂಬರ್ 1954 ರಲ್ಲಿ ಸರ್ಕಾರವನ್ನು ಅಧಿಕೃತವಾಗಿ ರಚಿಸಲಾಯಿತು. ಆದರೆ ಅದರಲ್ಲಿ ಯಾವುದೇ ಮೂಲಭೂತ ರಾಜಕೀಯ ಆಳ್ವಿಕೆಗೆ ಬದಲಾವಣೆಗಳಿರಲಿಲ್ಲ. ಕಮ್ಯುನಿಸ್ಟರ ನ್ಯಾಯಬದ್ಧ ಆಳ್ವಿಕೆಗೆ ಅತಿರಿಕ್ತ ಹಕ್ಕನ್ನು ನೀಡುವ ಜೊತೆಗೆ ಹೊಸ ಸಂವಿಧಾನವು ಮುಂಬರಲಿದ್ದ ರಾಷ್ಟ್ರೀಯ ಆರ್ಥಿಕ ವ್ಯವಸ್ಥೆ ನೈಸರ್ಗಿಕ ಬದಲಾವಣೆ ಸಂಪನ್ಮೂಲಗಳ ರಾಷ್ಟ್ರೀಕರಣ ಮತ್ತು ಕೇಂದ್ರೀಕೃತ ಯೋಜನೆಯ ಉದ್ಘಾಟನೆಗೆ ಕಾನೂನಿನ ತಳಹದಿಯಾಗಿ ಅತ್ಯಂತ ಪ್ರಮುಖವಾಗಿದ್ದಿತು. ಸಂವಿಧಾನದಡಿಯಲ್ಲಿ ಸರ್ಕಾರಿ ವ್ಯವಹಾರಗಳಲ್ಲಿ ಚೀನಾದ ಜನರಿಗೆ ಚುನಾವಣೆ ಮತ್ತು ಸರ್ಕಾರಿ ಹುದ್ದೆಗಳನ್ನು ಹೊಂದುವ ಅವಕಾಶಗಳನ್ನು ಸಂವಿಧಾನದಲ್ಲಿ ನೀಡಲಾಗಿದ್ದು, ಈ ಎರಡು ಅಂಶಗಳು ಸರ್ಕಾರದಲ್ಲಿ ಭಾಗವಹಿಸುವ ಭಾವನೆಯನ್ನುಂಟುಮಾಡಿದವು. ಈ ದೃಷ್ಟಿಯಲ್ಲಿ ಸರ್ಕಾರವು ಇತರ ಬೃಹತ್ ಸಂಘ ಸಂಸ್ಥೆಗಳಂತೆ, ಜನರ ಬೆಂಬಲವನ್ನು ಗಳಿಸಲು ಒಂದು ಸಾಧನವಾಯಿತು.

## 145.3 ಕಮ್ಯುನಿಸ್ಟ್ ಪಕ್ಷದ ಪಾತ್ರ

ಮೊದಲ ಇಪ್ಪತ್ತು ವರ್ಷಗಳ ಆಳ್ವಿಕೆಯಲ್ಲಿ "ಬೃಹತ್ ಕಾರ್ಮಿಕವರ್ಗದ ಸಾಂಸ್ಕೃತಿಕ ಕ್ರಾಂತಿಯ" (1966-1969) ಪ್ರಾರಂಭದವರೆಗೆ. ಚೀನಾದ ಕಮ್ಯುನಿಸ್ಟ್ ಪಕ್ಷವು ಸೈನ್ಯ ಮತ್ತು ತನ್ನ ಅಧಿಕಾರವನ್ನು ನಿರ್ವಹಿಸಲು ಬೇಕಾಗಿದ್ದ ಸರ್ಕಾರಿ ಕಾರ್ಯಾಚರಣೆಯ ಇತರ ಎಲ್ಲಾ ಅಂಗಗಳ ಕೇಂದ್ರವಾಗಿತ್ತು. ಅದರ ಹಿಡಿತವು ಪೀಕಿಂಗ್‌ನಿಂದ ಅತ್ಯಂತ ತಳಹಂತದವರೆಗೂ ವಿಸ್ತರಿಸುವಂತೆ ಪಕ್ಷದ ಸಂಘಟನೆಯನ್ನು ರೂಪಿಸಲಾಗಿದ್ದಿತು. 1949 ರಿಂದ 1951 ರ ನಡುವೆ ಅದರ ಸದಸ್ಯತ್ವ 4, 448, 080 ಯಿಂದ 17 ಮಿಲಿಯನ್‌ಗೆ ಹೆಚ್ಚಿತು. ಹೀಗೆ ಪಕ್ಷವನ್ನು ಎಲ್ಲಾ ಸಂಘಟನೆಗಳಿಗೆ ಉನ್ನತ ಹುದ್ದೆಗಳನ್ನು ನಿಯಂತ್ರಿಸಲು ಅಗತ್ಯವಾಗಿದ್ದ ಸಿಬ್ಬಂದಿಯಿಂದ ಸಜ್ಜುಗೊಳಿಸಲಾಯಿತು. ಒಂದನ್ನೊಂದು ಬಂಧಿಸುವ ಶಿಸ್ತಿನ ಅಂಗವಾಗಿ ಪಕ್ಷದ ಸದಸ್ಯರ ಮೂಲಕ ಸಾರ್ವಜನಿಕ ನೀತಿಯನ್ನು ಅನುಷ್ಠಾನಗೊಳಿಸಲಾಗುತ್ತಿದ್ದಿತು. ಪಕ್ಷದ ಮೇಲಿನ ಹತೋಟಿಯ ಮೂಲಕವೇ ಮಾವೋತ್ಸೇತುಂಗ್ ಮತ್ತು ಕೆಲವೇ ಹಿರಿಯ ಸಹೋದ್ಯೋಗಿಗಳಾದ ಲಿಯು ಶಾವೋಕ್, ಚೌ ಎನ್ ಲಾಯ್ ಚು, ಚೆನ್ ಯಾನ್, ತೆಂಗ್ ಸಿಯಾವೋಪಿಂಗ್ ಮತ್ತು ಲಿನ್ ಪಿಯಾವೋ ತಮ್ಮ ಅಧಿಕಾರ ಹುದ್ದೆಯ ಹೊರತಾಗಿ ರಾಷ್ಟ್ರೀಯ ನೀತಿಯನ್ನು ನಿರ್ಧರಿಸುತ್ತಿದ್ದರು. ಜವಾಬ್ದಾರಿಯನ್ನು ವಹಿಸುತ್ತಿದ್ದರು ಮತ್ತು ನಿರ್ಧಾರಗಳ ಅನುಷ್ಠಾನದ ಮಾರ್ಗಗಳನ್ನು ನಿಗದಿಪಡಿಸುತ್ತಿದ್ದರು.

### *145.3.1 ಮಾವೋ ನಾಯಕತ್ವ*

ಕಮ್ಯುನಿಸ್ಟ್ ಆಳ್ವಿಕೆಯ ಪ್ರಾರಂಭದ ವರ್ಷಗಳಲ್ಲಿ ನಾಯಕತ್ವವು ಅಪೂರ್ವವಾದ ಉದ್ದೇಶದ ಏಕತೆಯಿಂದ ವಿಶಿಷ್ಟವಾಗಿದ್ದಿತು. ಮಾವೋನ ಅಧಿಕಾರ ಪ್ರಶ್ನಾತೀತವಾಗಿತ್ತು. ಉನ್ನತ ಅಧಿಕಾರಿಗಳು ಪಕ್ಷ ಸಂಬಂಧ ಸಿದ್ಧಾಂತದ ಹಂಚಿಕೆಯ ಪ್ರಭಾವಕ್ಕೆ ಒಗ್ಗಿದಂತೆ ಕಂಡು ಬರುತ್ತಿದ್ದಿತು. ಪಕ್ಷದಾದ್ಯಂತ ಐಕ್ಯತೆ (ಒಗ್ಗಟ್ಟು) ಮತ್ತು ಉನ್ನತ ಮಟ್ಟದ ರಾಜಕೀಯ ಜಾಗೃತಿ ಮತ್ತು ಕ್ರಾಂತಿಕಾರಿ ಶಕ್ತಿಯನ್ನು ನಿರಂತರ ಭೋದನೆಯ ಮೂಲಕ ರಕ್ಷಿಸಲಾಗಿತ್ತು (ಕಾಪಾಡಲಾಗಿತ್ತು). ಪ್ರತಿಯೊಬ್ಬ ಸದಸ್ಯನೂ ತನ್ನ ಮಾರ್ಕ್ಸ್‌ನ ಲೆನಿನ್ನನ ತತ್ವಗಳ ಮತ್ತು ಮಾವೋತ್ಸೇತುಂಗನ ಆ ಯೋಜನೆಗಳನ್ನು ಅರ್ಥ ಮಾಡಿಕೊಳ್ಳಲು ನಿರಂತರ ಅಧ್ಯಯನ ಅಥವಾ ತರಬೇತಿಯಲ್ಲಿ ನಿರತನಾಗಿರಬೇಕಾಗಿತ್ತು. ದೋಷಗಳನ್ನು ಸರಿಪಡಿಸಲು ಆಗಿಂದಾಗ್ಗೆ ಚೆಂಗ್ ಫೆಂಗ್ ಆಂದೋಲನಗಳನ್ನು ನಡೆಸುತ್ತಿದ್ದುದು ಐಕ್ಯತೆಯನ್ನು ಬೆಳೆಸುವಲ್ಲಿ ಅತ್ಯಂತ ಪರಿಣಾಮಕಾರಿಯೆಂಬುದು ದೃಡಪಟ್ಟಿತು. ಸದಸ್ಯರು ತಮ್ಮ ಅಧ್ಯಯನವನ್ನು ತೀವ್ರಗೊಳಿಸುವುದರ ಜೊತೆಗೆ

ವಿಮರ್ಶೆ ಮತ್ತು ಆತ್ಮವಿಮರ್ಶೆಗೆ ಗುರಿ ಮಾಡಿದ ಗುಂಪು ಚರ್ಚೆಗಳಲ್ಲಿ ತಮ್ಮ ಒಳಗಿನ ಆಲೋಚನೆಗಳನ್ನು ಹೊರಗೆಡವಬೇಕಾಗಿದ್ದಿತು. ಈ ನಂತರದ ಯಾಂತ್ರಿಕ ಕ್ರಿಯೆಯು ಪಕ್ಷದ ನಾಯಕರಿಗೆ ಅನಪೇಕ್ಷಿತ ವ್ಯಕ್ತಿಗಳನ್ನು ಗುರುತಿಸಿ ಅವರನ್ನು ಹೊರಹಾಕಲು ವಿಶೇಷವಾಗಿ ಪರಿಣಾಮಕಾರಿಯಾಗಿದ್ದಿತು.

### *145.3.2 ಜನಸಮೂಹಗಳನ್ನು ಪುನರ್ ರೂಪಿಸುವುದು*

ಮಾವೋನ ಕಲ್ಪನೆಗಳು ಸಾಕಾರಗೊಳಿಸಲು ಉತ್ಸಾಹಶಾಲಿ ಜನಪ್ರಿಯ ಬೆಂಬಲದ ಅಗತ್ಯವಿತ್ತು. ಹೀಗೆ 1949 ರ ನಂತರ ತಮ್ಮ ಅಧಿಕಾರವನ್ನು ಭದ್ರಪಡಿಸಿಕೊಂಡ ಕಮ್ಯುನಿಸ್ಟರು ಹಳೆಯ ವ್ಯವಸ್ಥೆಗೆ ನಿಷ್ಠೆಯಿಂದಿದ್ದವರನ್ನು ತೊಡೆದು ಹಾಕಲು ತಮ್ಮನ್ನು ತೊಡಗಿಸಿಕೊಂಡರು. ಅಲ್ಲದೆ ಅತ್ಯಂತ ಉನ್ನತ ನಿರೀಕ್ಷೆಗಳನ್ನು ಪ್ರೋತ್ಸಾಹಿಸುವ ಮತ್ತು ಅಂತಹ ನಿರೀಕ್ಷೆಗಳೊಂದಿಗೆ ತಮ್ಮನ್ನು ತೊಡಗಿಸಿಕೊಳ್ಳುವ ಕಾರ್ಯದಲ್ಲೂ ತೊಡಗಿದರು. ಈ ಗುರಿಗಳನ್ನೆ ಅನುಗುಣವಾಗಿ ಪಕ್ಷವು ವಿಶೇಷವಾಗಿ ತನ್ನ ಅಧಿಕಾರದ ಮೊದಲ ವರ್ಷಗಳಲ್ಲಿ ಕೆಲವು ವೇಳೆ ಕಠಿಣ ತಂತ್ರಗಳನ್ನು ಬಳಸಿತು. ಕಮ್ಯುನಿಸ್ಟ್ ಸಿದ್ಧಾಂತ ಮತ್ತು ಆಚರಣೆಯಂತೆ, ಕ್ರಾಂತಿಯ ಶತೃಗಳು ಮತ್ತು ಅವರನ್ನು ಗುರುತಿಸುವ ಕೆಲಸವನ್ನು ಕಮ್ಯುನಿಸ್ಟರು ಮಾತ್ರವೇ ನಿರ್ಧರಿಸಬೇಕಾಗಿತ್ತು. ಅಂತಹವರು ನಾಗರೀಕ ಹಕ್ಕುಗಳಿಗೆ ಅರ್ಹರಾಗಿರಲಿಲ್ಲ ಮತ್ತು ಅವರ ಬಗ್ಗೆ ಕಠಿಣವಾಗಿ ವರ್ತಿಸಲಾಗುತ್ತಿತ್ತು. ಈ ತರ್ಕದ ಹಿನ್ನೆಲೆಯಲ್ಲಿ ಕಮ್ಯುನಿಸ್ಟ್ ಆಳ್ವಿಕೆಯು 1951 - 53 ರಲ್ಲಿ ಲೆಕ್ಕವಿಲ್ಲದಷ್ಟು ಭೂಮಾಲೀಕರ ತಪಾಸಣೆ ಮತ್ತು ಅವರ ಜಮೀನಿನ ಮರುಹಂಚಿಕೆಗೆ ಬೆಂಬಲ ನೀಡಿತು. ಈ ಕ್ರಮಗಳು ತನ್ನ ಸಂಕುಚಿತ ನೀತಿಗೆ ಮತ್ತು ಚೀನಾದ ಹಳೆಯ ಸಂಪ್ರದಾಯಗಳಿಗೆ ಜೋತುಬಿದ್ದಿದ ಸ್ಥಳೀಯ ನಾಯಕತ್ವವನ್ನು ನಾಶಪಡಿಸುವ ಮೂಲಕ ಹೊಸ ಯುಗಕ್ಕೆ ಹಾದಿಯನ್ನು ಸುಗಮಗೊಳಿಸುವಲ್ಲಿ ಅತ್ಯಂತ ಮಹತ್ವದ ಪಾತ್ರ ವಹಿಸಿದವು.

### *145.3.3 ಪ್ರಚಾರ ಮತ್ತು ಮನವೊಲಿಕೆ*

ಒಟ್ಟಿನಲ್ಲಿ, ಪ್ರಚಾರ ಮತ್ತು ಮನವೊಲಿಕೆಗಳು ಕಮ್ಯುನಿಸ್ಟ್ ಚೀನಾದಲ್ಲಿ ಬಲವಂತಕ್ಕಿಂತಲೂ ಅತ್ಯಂತ ಮುಖ್ಯವೆಂಬುದು ಕೆಲವು ವೇಳೆ ದೃಢಪಟ್ಟಿದೆ. ಅಲ್ಲದೆ, ತನ್ನ ಸೈದ್ಧಾಂತಿಕ ಹತೋಟಿಯಲ್ಲಿ ಕಮ್ಯುನಿಸ್ಟ್ ನಾಯಕತ್ವದ ನಂಬಿಕೆಯು 1940 ರ ಚಿಂಗ್ ಫೆಂಗ್ ಆಂದೋಲನ ಮತ್ತು ನಂತರದ ಅದನ್ನು ಸರಿಪಡಿಸುವ ಪ್ರಯತ್ನಗಳು ಯಶಸ್ಸಿನಿಂದ ಜನಪ್ರಿಯವಾಗಿದೆ.

ಹೊಸ ಸಾಮಾಜಿಕ ವ್ಯವಸ್ಥೆಯನ್ನು ಜಾರಿಗೆ ತರಲು ಶಿಕ್ಷಣ ಒಂದು ಪ್ರಮುಖ ಸಾಧನವಾಯಿತು. ಕಮ್ಯುನಿಸ್ಟರು ಎರಡು ಪ್ರಮುಖ ಅಗತ್ಯಗಳನ್ನು ಪೂರೈಸಲು ರೂಪಿಸಲಾದ ಶಿಕ್ಷಣವನ್ನು ನೀಡಲು ಜನರಿಗೆ ಶಾಲೆಗಳ ಒಂದು ವ್ಯವಸ್ಥೆಯ ನಿರ್ಮಾಣವನ್ನು ಪ್ರಾರಂಭಿಸಿದರು.

1. ಆಧುನಿಕ ಸಮಾಜಕ್ಕೆ ಅಗತ್ಯವಾದ ತಾಂತ್ರಿಕ ಪರಿಣತಿಯಲ್ಲಿ ಹೆಚ್ಚಾಗಿದ್ದು ಅನಕ್ಷರಸ್ಥ ಜನರಿಗೆ ತರಬೇತಿ ನೀಡುವುದು ಮತ್ತು
2. ಪೀಕಿಂಗ್‌ನ ಕ್ರಾಂತಿಕಾರಿ ಕಾರ್ಯಕ್ರಮಗಳನ್ನು ಸಮರ್ಥಿಸುವ ಸಿದ್ಧಾಂತಗಳನ್ನು ಜನರಿಗೆ ಭೋದಿಸುವುದು. ಈ ಶಾಲೆಗಳು ಉನ್ನತ ಮಟ್ಟದ ರಾಜಕೀಯ ಶಿಕ್ಷಣವನ್ನು ಬೋಧಿಸಲು ಅವಕಾಶ ಕಲ್ಪಿಸಿದುದಲ್ಲದೆ, ಪಠ್ಯಕ್ರಮವೂ ರಚನಾತ್ಮಕವಾಗಿದ್ದಿತು. ಅದನ್ನು ದೈಹಿಕ ಶ್ರಮಕ್ಕೆ ಸಾಂಪ್ರದಾಯಕ ತೃಪ್ತಿಯನ್ನು ವಿರೋಧಿಸಲು ವಿಜ್ಞಾನ ಮತ್ತು ತಾಂತ್ರಿಕ ಜ್ಞಾನಗಳಿಗೆ ಒತ್ತು ನೀಡಲು ಮತ್ತು ಸಂಶೋಧನೆ ಹಾಗೂ ಅಧ್ಯಯನದೊಂದಿಗೆ ಪ್ರಾಯೋಗಿಕ ಅನ್ವಯವನ್ನು ಬೆಸೆಯಲು ರೂಪಿಸಲಾಗಿತ್ತು.

1959 ರ ವೇಳೆಗೆ ಸುಮಾರು 86 ಮಿಲಿಯನ್ ಮಕ್ಕಳು ಪ್ರಾಥಮಿಕ ಶಾಲೆಗಳಲ್ಲಿ 12 ಮಿಲಿಯನ್ ವಿದ್ಯಾರ್ಥಿಗಳು ಮಾಧ್ಯಮಿಕ ಶಾಲೆಗಳಲ್ಲಿ ಮತ್ತು 660,000 ವಿದ್ಯಾರ್ಥಿಗಳ ಕಾಲೇಜುಗಳು ಮತ್ತು ವಿಶ್ವವಿದ್ಯಾನಿಲಯಗಳಲ್ಲಿ ಹಾಜರಾಗುತ್ತಿದ್ದರು. ಇದರ ಜೊತೆಗೆ ಅರೆಕಾಲಿಕ ಶಾಲೆಗಳು ಕೆಲಸ ಮತ್ತು ವಿದ್ಯಾಭ್ಯಾಸಗಳನ್ನು ಒಟ್ಟಿಗೆ ನೀಡುತ್ತಿದ್ದವು. ಪರಿಮಾಣಾತ್ಮಕವಾಗಿ ಅಳೆಯುವುದಾದರೆ (ಕಾಲೇಜು ಹಂತದ ದಾಖಲಾತಿ ಪಟ್ಟಿ 1963 ರಲ್ಲಿ 1947 ರ ಐದು ಪಟ್ಟು ಇದ್ದಿತು, ಕಮ್ಯುನಿಸ್ಟ್ ಪೂರ್ವ ಯುಗದ ಅತ್ಯಂತ ಉನ್ನತ ವರ್ಷ), ಇವು ಆಶಾದಾಯಕ ಅಂಕಿಗಳಾಗಿದ್ದವು. ಒಟ್ಟಿನಲ್ಲಿ ಹೇಳುವುದಾದರೆ ಪಠ್ಯಕ್ರಮದ ರಾಜಕೀಯೇತರ ಅಂಶಗಳ ಗುಣಮಟ್ಟ ಇನ್ನೂ ಉತ್ತಮವಾಗಿರಲಿಲ್ಲ. ಇಲ್ಲವೆ ಮೊದಲನೇ ದಶಕದ ಬೆಳವಣಿಗೆಯನ್ನು 1960 ರ ದಶಕದಲ್ಲಿ ಉಳಿಸಿಕೊಳ್ಳಲಾಗಲಿಲ್ಲ. ಮಹಾ

ಮುನ್ನಡೆ ಜಿಗಿತದಿಂದ ಹೇರಲಾದ ಆರ್ಥಿಕ ಒತ್ತಡಗಳಿಂದ ಶಾಲಾ ವ್ಯವಸ್ಥೆಯ ವಿಸ್ತರಣೆಗೆ ಧಕ್ಕೆಯುಂಟಾಯಿತು. ಇದರ ಜೊತೆಗೆ ಉನ್ನತ ಮಟ್ಟದ ಶಿಕ್ಷಣ ವ್ಯವಸ್ಥೆಯು ಸೈದ್ಧಾಂತಿಕ ಭಿನ್ನಾಭಿಪ್ರಾಯಗಳಿಗೆ ಗುರಿಯಾಗಿದ್ದರಿಂದ ಸಮಸ್ಯೆ ತಲೆಯೆತ್ತಿತು. ಮುಂದುವರಿದ ಶಾಲೆಗಳ ವಿಶೇಷ ಕಾರ್ಯಕ್ರಮಗಳು ಕ್ರಾಂತಿಯ ಸಮಾನತೆಯ ಅಂಶವನ್ನು ಉಲ್ಲಂಘಿಸುತ್ತಿವೆಯೆಂದು ಆಪಾದಿಸಲಾಯಿತು. ಪ್ರೌಢಶಾಲೆಗಳು (ಉನ್ನತ ಶಾಲೆಗಳು) ಹೊಸ ಶ್ರೀಮಂತ ವರ್ಗವನ್ನು ಹುಟ್ಟುಹಾಕುವ ನೆಲೆಗಳಾಗಿದ್ದು, ಅವು ಮುಂದೆ ಕ್ರಾಂತಿಯನ್ನು ಆಕ್ರಮಿಸಿ ಅದನ್ನು ಬುಡಮೇಲು ಮಾಡುವುದೆಂದು ಹೇಳಬಹುದಾಗಿದೆ. 1960 ರ ಕಡೆಯ ಸಾಂಸ್ಕೃತಿಕ ಕ್ರಾಂತಿಯ ಕಾಲದಲ್ಲಿ ವಿದ್ಯಾರ್ಥಿಗಳು 'ಪರಿಣಿತ' ನಾಗಿರುವುದಕ್ಕಿಂತ ಕಮ್ಯುನಿಸ್ಟ್‌ನಿಗಿರುವ (ಕೆಂಪು) ಪ್ರಾಮುಖ್ಯತೆಯನ್ನು ಒತ್ತಿಹೇಳುವ ರಾಜಕೀಯ ಚಳುವಳಿಯಲ್ಲಿ ಬಂಧಿತರಾಗಿದ್ದರಿಂದ ಶಾಲೆಗಳು ಮುಚ್ಚಿದವು.

### *145.3.4 ಚೀನೀಯರ ಆಲೋಚನೆಗಳನ್ನು ರೂಪಿಸುವುದು*

ಶಾಲಾ ವ್ಯವಸ್ಥೆಯಾಚೆ ಕಮ್ಯುನಿಸ್ಟರು ಚೀನಿಯರ ಚಿಂತನೆಯ ಸ್ವರೂಪವನ್ನು ಪುನರ್ ರೂಪಿಸಲು ನಿರಂತರ ಹಾಗೂ ತೀವ್ರವಾದ ಪ್ರಚಾರವನ್ನು ಕೈಗೊಂಡರು. ಸಾಹಿತ್ಯ, ಸುದ್ದಿ ಮಾಧ್ಯಮ, ನಾಟಕ, ಚಲನಚಿತ್ರಗಳು ಮತ್ತು ಆಕಾಶವಾಣಿ ನವಚೀನಾದ ಪ್ರಚಾರ ಮಾಧ್ಯಮಗಳಾದವು. ತರಬೇತಿ ಪಡೆದ ಪಕ್ಷದ ವಿಮರ್ಶಾತ್ಮಕ ಚರ್ಚೆ ಮತ್ತು ತಮ್ಮ ಚಟುವಟಿಕೆಗಳ ಮೌಲ್ಯ ನಿರ್ಧರಣೆಗಾಗಿ ಜನಸಾಮಾನ್ಯರನ್ನು 12 ರ ಗುಂಪುಗಳಾಗಿ ರಚಿಸಿದರು. ಇಡೀ ಸಮಾಜವನ್ನು ಒಳಗೊಂಡ ಇಂತಹ ಪ್ರಚಾರಕ್ಕೆ ಸೇರಿಸಿಕೊಳ್ಳಲಾದ ಜನರ ಸಂಖ್ಯೆಯನ್ನು ಅಂದಾಜು ಮಾಡಲು ಸಾಧ್ಯವಿಲ್ಲ. ಉದಾಹರಣೆಗೆ 1951 - 52 ರಲ್ಲಿ ಅನರ್ಹ ಕಮ್ಯುನಿಸ್ಟರನ್ನು ಪಕ್ಷದಿಂದ ಹೊರಹಾಕಲು ಮತ್ತು ಮೊದಲಿನ ಕುಮಿಂಟಾಂಗ್ ಅಧಿಕಾರಿಗಳು ಉಪಯುಕ್ತವಾಗಿದ್ದರೂ ಅನಗತ್ಯವೆಂಬುದನ್ನು ಬಹಿರಂಗ ಪಡಿಸಲು "ಮೂರು ವಿರೋಧಿ ಚಳುವಳಿಗಳನ್ನು ಭ್ರಷ್ಟಾಚಾರ, ಅನಗತ್ಯ ವೆಚ್ಚ ಮತ್ತು ಅಧಿಕಾರಶಾಹಿ" ಗಳ ವಿರುದ್ಧ ಚೀನೀಯರನ್ನು ಎತ್ತಿ ಕಟ್ಟಲು ರೂಪಿಸಲಾಗಿತ್ತು. ಇದೇ ಕಾಲದ "ಐದು ವಿರೋಧಿ ಚಳುವಳಿ" ಯನ್ನು "ತೆರಿಗೆಗಳ್ಳತನ, ಲಂಚ ಸ್ವೀಕಾರ, ಸರ್ಕಾರಿ ಗುತ್ತಿಗೆಗಳಲ್ಲಿ ಮೋಸ, ಆರ್ಥಿಕ ಗುಪ್ತಚಾರದ ಕಳ್ಳತನ, ರಾಷ್ಟ್ರೀಯ ಆಸ್ತಿಯ ಕಳ್ಳತನಗಳನ್ನು ಗುರಿಯಾಗಿಸಿಕೊಂಡು ರಾಜ್ಯದ ಒಡೆತನದ ವ್ಯಾಪಾರದ ಶತೃಗಳನ್ನು ಅಡಗಿಸಲು ಸಾರ್ವಜನಿಕ ಬೆಂಬಲವನ್ನು ಗಳಿಸಿತು. ಚಳುವಳಿಗಳ ಇತರ ಗುರಿಗಳೆಂದರೆ "ಊಳಿಗಮಾನ್ಯ ವ್ಯವಸ್ಥೆ" ಅಮೆರಿಕಾದ ಸಾಮ್ರಾಜ್ಯಶಾಹಿ ನೀತಿ ಮತ್ತು "ಬಂಡವಾಳಶಾಹಿಯ ಹಿಂಬಾಲಕರು". 1950 ರ ಕಡೆಯ ಮಹಾ ಮುನ್ನಡೆ ಜಿಗಿತದ ಕಾಲದಲ್ಲಿ ಕೈಗಾರಿಕಾ ಉತ್ಪಾದನೆಯ ಹೆಚ್ಚಳ ಪ್ರಚಾರದ ಪ್ರಮುಖ ವಸ್ತುವಾಯಿತು. ಸಂಪರ್ಕ ಮಾಧ್ಯಮಗಳನ್ನೆಲ್ಲಾ ನಿಯಂತ್ರಿಸುವ ಮೂಲಕ ಒಂದು ಪ್ರಚಾರಾಂಧೋಲನದ ಮೇಲೆ ಮತ್ತೊಂದನ್ನು ಪ್ರಚಾರವನ್ನು ಕೈಗೊಳ್ಳುವ ಮೂಲಕ, ಆಯ್ದ ಉದ್ದೇಶಗಳ ಬಗ್ಗೆ ಸಾರ್ವಜನಿಕ ಅಭಿಪ್ರಾಯವನ್ನು ಕೆಣಕುವ ಮೂಲಕ, ಕಮ್ಯುನಿಸ್ಟರು ವಿರೋಧಿಗಳನ್ನು ಅಸ್ಥಿರಗೊಳಿಸಲು ಮತ್ತು ಚೀನಾವನ್ನು ಮಾರ್ಪಡಿಸುವ ಹೆಜ್ಜೆಯನ್ನು ಇಟ್ಟರು.

### *145.3.5 ಚೀನಿ ಬುದ್ಧಿ ಜೀವಿಗಳ ಧೋರಣೆ*

ಹೊಸ ಸಿದ್ಧಾಂತದೊಂದಿಗೆ ಹೊಂದಿಕೊಳ್ಳುವಂತೆ ಕಮ್ಯುನಿಸ್ಟರ ಒತ್ತಾಯವು ಚೀನೀ ಬುದ್ಧಿಜೀವಿಗಳನ್ನು ವಿಶೇಷ ಸಮಸ್ಯೆಗಳಲ್ಲಿ ಸಿಲುಕಿಸಿತು. ಸಾಂಪ್ರದಾಹಿಕವಾಗಿ ಅಭಿಪ್ರಾಯದ ನಾಯಕರಾದ ಬುದ್ಧಿಜೀವಿಗಳು ಕಮ್ಯುನಿಸ್ಟ್ ನಾಯಕತ್ವದ ಬಗ್ಗೆ ತಮ್ಮ ಧೋರಣೆಗೆ ಅನುಗುಣವಾಗಿ ಪೀಕಿಂಗ್‌ಗೆ ಬೆದರಿಕೆ ಅಥವಾ ಭರವಸೆಯನ್ನು ನೀಡಿದರು. ಸಮಸ್ಯೆಯೆಂದರೆ 1949 ರಲ್ಲಿ ಕುಮಿಂಟಾಂಗ್‌ರಿಂದ ಭ್ರಮ ನಿರಸನಗೊಂಡ ಅನೇಕ ಬುದ್ಧಿಜೀವಿಗಳು ಹೊಸ ಆಳ್ವಿಕೆಯಲ್ಲಿ ಅಲ್ಪ ಅನುಕೂಲವನ್ನು ಕಂಡರು. ಪರಿಣಾಮವಾಗಿ ಈ ಜನರು ತೀವ್ರ ಮನವೊಲಿಕೆಗೆ ಗುರಿಯಾದರು. ಅವರಲ್ಲಿ ಕೆಲವರನ್ನು ಅಭಿಪ್ರಾಯದ ಒತ್ತಡದ ಮೂಲಕ ಪರಿವರ್ತಿಸಲು ಪ್ರಯತ್ನಿಸಲಾಯಿತು. ಸಭೆಗಳನ್ನು ಏರ್ಪಡಿಸಿ ಅಲ್ಲಿ ವ್ಯಕ್ತಿಗಳನ್ನು ಅವಹೇಳನ ಮಾಡಲಾಯಿತು. ತಮ್ಮ ಭಾವನೆಗಳ ತಪ್ಪನ್ನು ಒಪ್ಪಿಕೊಳ್ಳುವಂತೆ ಪ್ರೇರೇಪಿಸಲಾಯಿತು ಮತ್ತು ಹೊಸ ಹಾದಿಯನ್ನೂ ಅಳವಡಿಸಿಕೊಳ್ಳುವಂತೆ ಪ್ರೋತ್ಸಾಹಿಸಲಾಯಿತು. ಚಿಂತನೆಗಳನ್ನು ಮರು ರೂಪಿಸುವ ಈ ಪ್ರಯತ್ನಗಳನ್ನು ಅತ್ಯಂತ ಪ್ರಭಾವಶಾಲಿ ವ್ಯಕ್ತಿಗಳ ಬಗ್ಗೆ ಮೃದುಗೊಳಿಸಲಾಯಿತು. ಆದರೆ ಉದ್ದೇಶ ಹಾಗೆಯೇ ಉಳಿಯಿತು.

ಮುಕ್ತ ಆಲೋಚನೆಯನ್ನು ಹತ್ತಿಕ್ಕುವ ಸಮಸ್ಯೆಯನ್ನು ಎದುರಿಸಿದ ಅನೇಕ ಬುದ್ಧಿಜೀವಿಗಳು ತಲೆತಪ್ಪಿಸಿಕೊಳ್ಳಲು ಪ್ರಯತ್ನಿಸಿದರು. ಆದರೆ ತಲೆತಪ್ಪಿಸಿಕೊಳ್ಳುವುದು ಸೂಕ್ತವಲ್ಲವೆಂದು ಮತ್ತು ಅಸಾಧ್ಯವೆಂದು ಭಾವಿಸಿದ ಬಹುಸಂಖ್ಯಾತ ಬುದ್ಧಿಜೀವಿಗಳು ಕಮ್ಯುನಿಸ್ಟರ ಉದ್ದೇಶಗಳನ್ನು ಈಡೇರಿಸಲು ಸಿದ್ಧರಾದರು. ಹೀಗೆ ಪೀಕಿಂಗ್ ಸರ್ಕಾರವು ಯಾವ ರಂಗದಲ್ಲಿ ಕುಮಿಂಟಾಂಗ್ ಸರ್ಕಾರ ವಿಫಲವಾಗಿತ್ತೋ

ಅಲ್ಲಿ ಗಣನೀಯ ಯಶಸ್ಸನ್ನು ಸಾಧಿಸಿತು. ತಕ್ಷಣವೇ ಕಮ್ಯುನಿಸ್ಟರು ದೇಶದ ಆಧುನಿಕ ತರಬೇತಿ ಪಡೆದು ಸಕಾಷ್ಟು ಸಂಖ್ಯೆಯ ವಿದ್ವಾಂಸರ ಸೇವೆಯನ್ನು ಪಡೆದುಕೊಂಡರು. 1957 ರ 'ನೂರು ಹೂವುಗಳ' ಚಳುವಳಿ ಮತ್ತು ನಂತರದ ಸಾಂಸ್ಕೃತಿಕ ಕ್ರಾಂತಿಯ ಕಾಲದಲ್ಲಿ ಬುದ್ಧಿಜೀವಿಗಳಿಂದ ಟೀಕೆಗಳು ಸ್ಫೋಟಗೊಂಡರೂ ಎಲ್ಲಾ ಸ್ವತಂತ್ರ ಆಲೋಚನೆಯನ್ನು ತೊಡೆದು ಹಾಕುವಲ್ಲಿ ಕಮ್ಯುನಿಸ್ಟ್ ಆಡಳಿತದ ಯಶಸ್ಸಿನ ಬಗ್ಗೆ ಅನುಮಾನವುಂಟಾಯಿತು.

## 145.4 ಸಾಮಾಜಿಕ ಬದಲಾವಣೆ (ಪರಿವರ್ತನೆ)

ಕಮ್ಯುನಿಸ್ಟ್ ಆಳ್ವಿಕೆಯು ಮೂಲಭೂತ ಸಾಮಾಜಿಕ ಪರಿವರ್ತನೆಯ ಗತಿಯನ್ನು ಬಲವಂತವಾಗಿ ಹೆಚ್ಚಿಸಿತು. ಕುಟುಂಬ ಜೀವನದಲ್ಲಿ ಒಂದು ಅತ್ಯಂತ ಮಹತ್ವದ ಕ್ರಾಂತಿಯಾಯಿತು. (ಅತ್ಯಂತ ಮಹತ್ವದ ಕ್ರಾಂತಿಗಳಲ್ಲಿ ಒಂದೆಂದರೆ ಕುಟುಂಬ ಜೀವನದಲ್ಲಾದ ಬದಲಾವಣೆ) 1950 ರ ವಿವಾಹ ಕಾಯಿದೆಯಂತೆ, ಮದುವೆ, ವಿಚ್ಛೇದನ ಮತ್ತು ಆಸ್ತಿ ಹಕ್ಕಿನಲ್ಲಿ ಮಹಿಳೆಯರು ಸಾಂಪ್ರದಾಯಿಕ ಮಾರ್ಗಗಳನ್ನು ಅನುಸರಿಸುತ್ತಿರುವ ಬಗ್ಗೆ ಮಕ್ಕಳು ಟೀಕಿಸಲು ಮತ್ತು ತಿಳಿ ಹೇಳಲು ಕಮ್ಯುನಿಸ್ಟ್ ಆಚರಣೆ ಪ್ರೋತ್ಸಾಹಿಸಿತು. ಅಂತಹ ಕ್ರಮಗಳನ್ನು ಅಳವಡಿಸಿಕೊಳ್ಳುವ ಮೂಲಕ ಪೀಕಿಂಗ್ ಸರ್ಕಾರವು ರಾಷ್ಟ್ರಕ್ಕೆ ಬದ್ಧವಾಗಿರುವುದಕ್ಕೆ ಪ್ರತಿಸ್ಪರ್ಧೆ ನೀಡುತ್ತಿದ್ದ ಕುಟುಂಬಕ್ಕೆ ಅತ್ಯಂತ ವಿಧೇಯತೆ ತೊಡೆದುಹಾಕುವ ಆಶಾಭಾವನೆಯನ್ನು ಹೊಂದಿದ್ದಿತು. ಮನೆಯಾಟಂ ಉತ್ಪಾದನಾ ಕೆಲಸಗಳಿಗೆ ಮಹಿಳೆಯರನ್ನು ತೊಡಗಿಸುವುದು ಮತ್ತೊಂದು ಉದ್ದೇಶವಾಗಿತ್ತು.

ಆದರೆ ಕೆಲವು ಪ್ರದೇಶಗಳಲ್ಲಿ ಸಾಂಪ್ರದಾಯಿಕ ಸಂಸ್ಕೃತಿಯ ಮೇಲೆ ಸರ್ಕಾರದ ಗದಾಪ್ರಹಾರವು ಪೂರ್ಣ ಪ್ರಮಾಣದಲ್ಲಿರಲಿಲ್ಲ. ಕಮ್ಯುನಿಸ್ಟ್ ಆಳ್ವಿಕೆಯು ಧಾರ್ಮಿಕ ವಿರೋಧಿಯಾಗಿದ್ದರೂ ಧಾರ್ಮಿಕ ಸಂಸ್ಥೆಗಳ ವಿರುದ್ಧದ ಪ್ರಚಾರವನ್ನು (ಚಳುವಳಿ) ಸಂಭವನೀಯ ಪರಿಣಾಮದ ಮೇಲೆ ನಿರ್ಧರಿಸಲಾಗುತ್ತಿದ್ದಿತು. ವಿದೇಶೀ ಸಂಬಂಧವಿಲ್ಲದ ಸಂಘಟಿತ ಧರ್ಮ ಪಂಥಗಳಾದ ತಾವೋ ಧರ್ಮ ಮೊದಲಾದವುಗಳ ಬಗ್ಗೆ ಕಠಿಣವಾಗಿ ವರ್ತಿಸಲಾಯಿತು. ಆದರೆ ಬೌದ್ಧಧರ್ಮ ಮತ್ತು ಇಸ್ಲಾಂ ಧರ್ಮಗಳಿಗೆ ಹೊರನೋಟಕ್ಕೆ ರಕ್ಷಣೆ ನೀಡಲಾಗಿತ್ತು. ರಾಜಕೀಯ ಮತ್ತು ಸಾಂಸ್ಕೃತಿಕ ಐಕ್ಯತೆಯು ಸಾಂಪ್ರದಾಯಿಕ ಸಿದ್ಧಾಂತಗಳು, ಕೆಲವು ಸಾಂಪ್ರದಾಯಿಕ ಅತಿಥಿ ಸತ್ಕಾರ ಮತ್ತು ಆಚರಣೆಗಳು ಹಾಗೂ ಅತ್ಯಂತ ಸಾಂಪ್ರದಾಯಿಕ ಕಲೆ ಮತ್ತು ಸಾಹಿತ್ಯಗಳಿಗೂ ಸಹಿಷ್ಣುತೆ ಮತ್ತು ಪ್ರೋತ್ಸಾಹಗಳನ್ನು ನೀಡಲಾಗಿತ್ತು.

ಚೀನೀ ಸಮಾಜವನ್ನು ಪುನರ್ ರೂಪಿಸುವ ಕಮ್ಯುನಿಸ್ಟರ ಇಡೀ ಪ್ರಯತ್ನದಲ್ಲಿ ಕೆಲವು ಉತ್ತಮ ಅಂಶಗಳಿದ್ದವು. ರೈತರು ಭೂ ಮಾಲೀಕರನ್ನು ತೊಡೆದು ಹಾಕುವ ಕ್ರಮಗಳನ್ನು ಅತ್ಯಂತ ಉತ್ಸಾಹದಿಂದ ಸ್ವಾಗತಿಸಿದರು. ಆದರೆ ನಂತರ ಜಾರಿಗೆ ತಂದ ಸಹಕಾರ ಸಂಘಗಳು ಸಮೂಹ ಕೃಷಿ ಮತ್ತು ಹೆಚ್ಚಿನ ತೆರಿಗೆಗಳ ಬಗ್ಗೆ ಅವರು ಸಂತೋಷವನ್ನು ವ್ಯಕ್ತಪಡಿಸಲಿಲ್ಲ. ಕೈಗಾರಿಕಾ ಕಾರ್ಮಿಕರು ಕಮ್ಯುನಿಸ್ಟರ ಆಡಳಿತದಲ್ಲಿ ತಮ್ಮ ಸ್ಥಿತಿಗತಿಗಳಲ್ಲಿ ಸ್ವಲ್ಪಮಟ್ಟಿನ ಸುಧಾರಣೆಯನ್ನು ಕಂಡರು. ರಾಷ್ಟ್ರೀಯ ಅಲ್ಪಸಂಖ್ಯಾತರು ತಮ್ಮ ಸ್ವಾಯತ್ತ ಸರ್ಕಾರಗಳು ಸ್ವಾಯತ್ತತೆಯನ್ನು ಕಳೆದುಕೊಂಡುದರಿಂದ ಅಸಮಧಾನಗೊಂಡರು.

## 145.5 ಆರ್ಥಿಕ ಬೆಳವಣಿಗೆ

### *145.5.1 ತ್ವರಿತವಾದ ಆಧುನೀಕರಣ*

ಕಾರ್ಲ್‌ಮಾರ್ಕ್ಸ್‌ನ ಅನುಯಾಯಿಗಳಾಗಿ ಪೀಕಿಂಗ್‌ನ ನಾಯಕರು ತಮ್ಮ ಭವಿಷ್ಯದ ಸಮಾಜವನ್ನು ವಿಜ್ಞಾನ ಮತ್ತು ತಂತ್ರಜ್ಞಾನದ ಪ್ರಪಂಚದೊಂದಿಗೆ ಮತ್ತು ಹಿಂದುಳಿದ ರೈತ ಸಮಾಜದ ಆಧುನೀಕರಣದ ಯಶಸ್ಸಿನೊಂದಿಗೆ ಗುರುತಿಸಿಕೊಂಡರು. ಸಮೃದ್ಧ ಜನತಾ ಸಮಾಜವು ವಿಶೇಷ ಸವಲತ್ತು ಮತ್ತು ಬಡತನದ ಸ್ಥಾನವನ್ನು ಆಕ್ರಮಿಸಿತು. ಇಷ್ಟಾದರೂ ಕ್ರಾಂತಿಯನ್ನು ನಾಶಪಡಿಸಲು ದೃಢನಿರ್ಧಾರ ಮಾಡಿದ್ದ ಹೊರಗಿನ ಶತೃಗಳ ವಿರುದ್ಧ ಮಾತ್ರವೇ ಅಲ್ಲದೆ ಪ್ರಗತಿಗಿದ್ದ ಆಂತರಿಕ ತಡೆಗೋಡೆಗಳ ವಿರುದ್ಧವೂ ಒಂದು ನಿರಂತರ ಹೋರಾಟ ತಲೆಯೆತ್ತಿತ್ತು. ಹೀಗೆ ಪೀಕಿಂಗ್ ಸರ್ಕಾರವು ಮೊದಲಿಗೆ ಬೃಹತ್ ಕೈಗಾರಿಕೆಗಳನ್ನು ಸ್ಥಾಪಿಸುವ ಪ್ರಾಮುಖ್ಯತೆಯನ್ನು ಗಮನದಲ್ಲಿಟ್ಟುಕೊಂಡು ತ್ವರಿತವಾದ ಆಧುನೀಕರಣದ ಒಂದು ಕಾರ್ಯಕ್ರಮವನ್ನು ಕೈಗೊಂಡಿತು. ಕೃಷಿಯನ್ನು ಪುನರ್ವ್ಯವಸ್ಥೆಗೊಳಿಸಲಾಯಿತು ಮತ್ತು ಕೈಗಾರಿಕೀಕರಣಕ್ಕೆ ಬೆಂಬಲವಾಗಿ ಅದನ್ನು ಆಧುನೀಕರಣಗೊಳಿಸಲಾಯಿತು. ಇದರ ಜೊತೆಗೆ ಮಾರ್ಕ್ಸ್‌ನ ನಂಬಿಕೆಗಳು ಕೇಂದ್ರೀಕೃತ ಯೋಜನೆ, ನಿರ್ಣಯವನ್ನು ಕೈಗೊಳ್ಳುವ ಮತ್ತು ಸಾಮೂಹಿಕ ವ್ಯವಸ್ಥೆಯ ಮೂಲಕ ಇಡೀ ಆಧುನೀಕರಣದ ಪ್ರಕ್ರಿಯೆಯನ್ನು ನಿರ್ದೇಶಿಸುವ ದೃಢನಿರ್ಧಾರವನ್ನು ಪ್ರೋತ್ಸಾಹಿಸಿದರು.

### *145.5.2 ಸೋವಿಯತ್ ನೆರವು*

ಚೀನಾದ ಭೌತಿಕ ಬದಲಾವಣೆಗೆ ಬಂಡವಾಳ ಮತ್ತು ಸಿಬ್ಬಂದಿಗಳೆರಡರ ಕೊರತೆಯಿದ್ದು, ಪೀಕಿಂಗ್ ನೆರವಿಗಾಗಿ ತನ್ನ ನೆರೆಯ ಕಮ್ಯುನಿಸ್ಟ್ ರಾಷ್ಟ್ರವಾದ ಸೋವಿಯತ್ ಒಕ್ಕೂಟದ ಕಡೆಗೆ ನೋಡಿತು. 1950 ರ ಪ್ರಾರಂಭದಲ್ಲಿ ಚೀನಾ ಮತ್ತು ಸೋವಿಯತ್ ಒಕ್ಕೂಟಗಳು ಒಂದು ಮೈತ್ರಿ ಒಪ್ಪಂದಕ್ಕೆ ಮತ್ತು 300 ಮಿಲಿಯನ್ ಡಾಲರುಗಳ ಸಾಲವನ್ನು ನೀಡುವ ಪರಸ್ಪರ ವ್ಯಾಪಾರ, ಮತ್ತು ರಷ್ಯಾದ ತಾಂತ್ರಿಕ ನೆರವಿನ ಅನೇಕ ಜಂಟಿ ಆರ್ಥಿಕ ಒಪ್ಪಂದಗಳಿಗೆ ಸಹಿ ಹಾಕಿದವು. ನಂತರದ ಒಡಂಬಡಿಕೆಗಳು ಸೋವಿಯತ್ ನೆರವಿನ ಮೊತ್ತವನ್ನು ಹೆಚ್ಚಿಸಿದವು. ಉದಾಹರಣೆಗೆ 1956 ರ ಒಂದು ವರ್ಷದಲ್ಲಿಯೇ ಸುಮಾರು 2000 ಜನರನ್ನು ವಿನಿಮಯ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಯಿತು. ಸಾವಿರಾರು ರಷ್ಯಾದ ತಾಂತ್ರಿಕ ಪರಿಣಿತರನ್ನು ಚೀನಾಕ್ಕೆ ಕಳುಹಿಸಲಾಯಿತು. ಸಾವಿರಕ್ಕೂ ಹೆಚ್ಚು ಚೀನಿಯರು ತಾಂತ್ರಿಕ ಶಿಕ್ಷಣ ಮತ್ತು ಕೆಲಸದಲ್ಲಿದ್ದು ತರಬೇತಿಗಾಗಿ ಸೋವಿಯತ್ ಒಕ್ಕೂಟಕ್ಕೆ ಹೋದರು. ಚೀನಾಕ್ಕೆ ಸೋವಿಯತ್ ಒಕ್ಕೂಟದ ಸಾಲದ ಮೊತ್ತವನ್ನು ಆರ್ಥಿಕ ಬೆಳವಣಿಗೆಗೆ ಸುಮಾರು ಎರಡು ಬಿಲಿಯನ್ ಡಾಲರುಗಳು ಮತ್ತು ಸೈನ್ಯದ ಉದ್ದೇಶಕ್ಕೆ ಒಂದು ಬಿಲಿಯನ್ ಎಂದು ಅಂದಾಜು ಮಾಡಲಾಗಿದೆ. ಆದಾಗ್ಯೂ 1950 ರ ದಶಕದ ಕಡೆಯ ವೇಳೆಗೆ ಚೀನಾ-ಸೋವಿಯತ್ ಒಪ್ಪಂದಗಳು ಮುಕ್ತಾಯವಾಗಲಿದ್ದವು. ಆದರೆ ಈ ಮಿತ್ರ ರಾಷ್ಟ್ರಗಳ ನಡುವೆ ಉದ್ವಿಗ್ನತೆ ಹೆಚ್ಚಿದ್ದರಿಂದ ಒಪ್ಪಂದಗಳನ್ನು ನವೀಕರಿಸಲಿಲ್ಲ. ಸಿಂಹಾವಲೋಕನ ಮಾಡಿದಾಗ ಸೋವಿಯತ್ ನೆರವು ಎಂದಿಗೂ ಚೀನಾ ಬಯಸಿದಷ್ಟು ವಿಸ್ತಾರವನ್ನು ಪಡೆದುಕೊಳ್ಳಲಿಲ್ಲ. ಯೋಜನೆಗಳ ಎಚ್ಚರದ ಆಯ್ಕೆ ಮತ್ತು ದೊರೆಯುವ ಸಂಪನ್ಮೂಲಗಳ ಸಾಧ್ಯವಾದಷ್ಟು ಸಮರ್ಥ ಬಳಕೆ ನೆರವಿನ ಪರಿಣಾಮವನ್ನು ಹೆಚ್ಚಿಸಿತು. ಈ ನೆರವಿಲ್ಲದೆ ಚೀನಾದ ಕೈಗಾರಿಕಾ ಗುರಿಗಳನ್ನು ತಲುಪಲು ಸಾಧ್ಯವಿರಲಿಲ್ಲ.

### *145.5.3 ಹಳೆಯ ಆರ್ಥಿಕ ವ್ಯವಸ್ಥೆಯ ಬದಲಾವಣೆ*

ಕಮ್ಯುನಿಸ್ಟರು ತಮ್ಮ ಪೂರ್ವಿಕರಿಂದ ಪಡೆದ ಆರ್ಥಿಕ ವ್ಯವಸ್ಥೆಯು ಅವರು ನಿರ್ಮಿಸಲು ಬಯಸಿದ್ದ ಆರ್ಥಿಕ ವ್ಯವಸ್ಥೆಗೆ ಸ್ವಲ್ಪವೇ ಹೋಲಿಕೆಯನ್ನು ಹೊಂದಿದ್ದಿತು. ಕೈಗಾರಿಕಾ ಸೌಲಭ್ಯಗಳು ಹೋಲಿಕೆ ಮಾಡಿ ನೋಡಿದಾಗ ಬಹಳ ಕಡಿಮೆಯೂ ಮತ್ತು ಸ್ಥಳೀಯವೂ ಆಗಿದ್ದವು. ಮಂಚೂರಿಯಾದಲ್ಲಿ ಜಪಾನಿಯರು ಬಿಟ್ಟು ಹೋಗಿದ್ದ ಬೃಹತ್ ಕೈಗಾರಿಕೆಗಳೇ ಒಂದು ದೊಡ್ಡ ಆಸ್ತಿಯಾಗಿದ್ದವು. ಕೆಲವು ಹಗುರ ಕೈಗಾರಿಕೆಗಳು ಮುಖ್ಯವಾಗಿ ಬಟ್ಟೆ ಕೈಗಾರಿಕೆಗಳು ಚೀನಾದ ಕರಾವಳಿ ಪಟ್ಟಣಗಳಲ್ಲಿ ವಿಶೇಷವಾಗಿ ಷಾಂಗೈ ಮತ್ತು ಟೀನ್‌ಟ್ಸಿನ್‌ಗಳಲ್ಲಿ ಉಳಿದಿದ್ದವು. ರೈಲು ವ್ಯವಸ್ಥೆಯು ಮಂಚೂರಿಯಾದಲ್ಲಿ ಮಾತ್ರವೇ ಕೇಂದ್ರೀಕೃತವಾಗಿತ್ತು. ಒಟ್ಟಾರೆಯಾಗಿ ಇವು ಸೀಮಿತ ಸೌಲಭ್ಯಗಳಾಗಿದ್ದವು ಮತ್ತು ಇವುಗಳೆಲ್ಲವು ವಿದೇಶಿ ಹಾಗೂ ಅಂತರ್ಯುದ್ಧದ ನಷ್ಟಕ್ಕೊಳಗಾಗಿದ್ದವು.

ಅವುಗಳನ್ನು ವಹಿಸಿಕೊಂಡ ನಂತರ ಕಮ್ಯುನಿಸ್ಟರು ರೈಲು ಮಾರ್ಗಗಳ ದುರಸ್ತಿ, ಹೊಸ ಮಾರ್ಗಗಳ ನಿರ್ಮಾಣ, ಚೀನೀಯರಿಗೆ ಅತ್ಯಂತ ಪ್ರಮುಖವಾಗಿದ್ದ ನದಿಗಳಲ್ಲಿ ಬಾರ್ಜ್ ಸಂಚಾರದ ವ್ಯವಸ್ಥೆಗೆ ವಿಶೇಷ ಗಮನ ನೀಡಿದರು. ಬೃಹತ್ ಕೈಗಾರಿಕೆಗಳಿಗಿಂತಲೂ ಲಘು ಕೈಗಾರಿಕೆ ಬಹು ಬೇಗನೆ ಚೇತರಿಸಿಕೊಂಡಿತು. ಕೃಷಿ ನಿರಂತರವಾದ ಉತ್ತಮ ಬೆಳೆಯ ಕಾಲಗಳನ್ನು ಕಂಡಿತು. ಆದಾಗ್ಯೂ ಕಮ್ಯುನಿಸ್ಟ್ ಆರ್ಥಿಕ ಚೇತನದಲ್ಲಿ ಅತ್ಯಂತ ಪ್ರಮುಖವಾದುವೆಂದರೆ ಹಣದುಬ್ಬರ ನಿಯಂತ್ರಣದ ಕ್ರಮಗಳು, ಈ ಪ್ರಗತಿಯ ಸಾಧನೆಗೆ ಸಾಲದ ಮೇಲಿನ ಕಠಿಣವಾದ ನಿರ್ಬಂಧಗಳು ಮತ್ತು ಸರ್ಕಾರಿ ವ್ಯಾಪಾರ ಕಂಪನಿಗಳಿಂದ ಬಹುತೇಕ ವಸ್ತುಗಳ ಬಿಡುಗಡೆಯ ಮೂಲಕ ಬೆಲೆಗಳ ಮೇಲೆ ಸರ್ಕಾರದ ಹತೋಟಿಗಳು ಕಾರಣವಾಗಿದ್ದವು. ಒಂದು ದೃಢವಾದ ರಾಷ್ಟ್ರೀಯ ಆಯವ್ಯಯ ಮತ್ತು ನಿರ್ಧಯವಾಗಿ ಜಾರಿಗೆ ತರಲಾಗಿದ್ದ ಒಂದು ರಾಷ್ಟ್ರೀಯ ತೆರಿಗೆ ವ್ಯವಸ್ಥೆ ಮೂಲಕ ಈ ಕ್ರಮಗಳನ್ನು ಬೆಂಬಲಿಸಲಾಯಿತು. 1952 ರ ವೇಳೆಗೆ ಉತ್ಪಾದನೆಯು ಬಹುತೇಕ ಯುದ್ಧಪೂರ್ವ ಮಟ್ಟದಲ್ಲಿತ್ತು. ಮಿಗಿಲಾಗಿ ಕಮ್ಯುನಿಸ್ಟರು ಇನ್ನೂ ಹೆಚ್ಚಿನ ಮುನ್ನಡೆಗೆ ಅಗತ್ಯವಾಗಿದ್ದ ಯಂತ್ರಗಳ ಮೇಲೆ ಹತೋಟಿಯನ್ನು ಪಡೆದಿದ್ದರು. ವ್ಯಾಪಾರ ಕೈಗಾರಿಕೆ ಮತ್ತು ಬ್ಯಾಂಕ್ ಸಾಲಗಳು ಹಾಗೂ ಠೇವಣಿಗಳು ಗಣನೀಯವಾಗಿ ಸರ್ಕಾರದ ಹತೋಟಿಗಳು ಕಾರಣವಾಗಿದ್ದವು. ಒಂದು ದೃಢವಾದ ರಾಷ್ಟ್ರೀಯ ತೆರಿಗೆ ವ್ಯವಸ್ಥೆ ಮೂಲಕ ಈ ಕ್ರಮಗಳನ್ನು ಬೆಂಬಲಿಸಲಾಯಿತು. ಪ್ರತಿನಿಧಿಗಳು ಮತ್ತು ಉದ್ಯಮಗಳ ಕೈಯಲ್ಲಿದ್ದವು. ಇದೇ ವೇಳೆಗೆ 1950 ರ ಕೃಷಿ ಸುಧಾರಣೆ ಕಾಯಿದೆಯಂತೆ ಭೂಮಾಲೀಕರಿಂದ ಅವರ ಆಸ್ತಿಪಾಸ್ತಿಗಳನ್ನು ಕಸಿದುಕೊಳ್ಳಲಾಯಿತು. ಭೂಮಿಯನ್ನು ಲಕ್ಷಾಂತರ ರೈತರ ನಡುವೆ ಹಂಚಲಾಯಿತು. ಈ ಹೆಜ್ಜೆಯ ಪರಿಣಾಮಗಳಲ್ಲಿ ಒಂದೆಂದರೆ ಗ್ರಾಮಾಂತರ ಪ್ರದೇಶಗಳಲ್ಲಿ ಮತ್ತು ಹಳ್ಳಿಗಳಲ್ಲಿ ಕೃಷಿಕ ವರ್ಗದ ಆಡಳಿತದ ಸ್ಥಾಪನೆ, ಅದಕ್ಕೆ ಅವರು ಕಮ್ಯುನಿಸ್ಟ್ ಪಕ್ಷಕ್ಕೆ ಕೃತಜ್ಞರಾಗಿದ್ದರು.

### 145.5.4 ಹೊಸ ಕೈಗಾರಿಕೀಕರಣ

ಈ ತಳಹದಿಗಳ ಮೇಲೆ ಚೀನಾದ ಹೊಸ ಕೈಗಾರಿಕೀಕರಣವನ್ನು ಕೈಗೊಳ್ಳಲಾಯಿತು. 1953 ರಲ್ಲಿ ಪ್ರಕಟಿಸಲಾದ ಪಂಚವಾರ್ಷಿಕ ಯೋಜನೆಯಲ್ಲಿ ಯಾವುದೇ ನಿರ್ದಿಷ್ಟ ಗುರಿಗಳಿರಲಿಲ್ಲ. ಅತ್ಯಂತ ದೂರದ ಮತ್ತು ತಾಂತ್ರಿಕವಾಗಿ ಹಿಂದುಳಿದ ಗ್ರಾಮಾಂತರ ಪ್ರದೇಶಗಳೂ ಸೇರಿದಂತೆ ಅನೇಕ ಭಾಗಗಳಲ್ಲಿ ಬೃಹತ್ ಕೈಗಾರಿಕಾ ನೆಲೆಗಳ ಸ್ಥಾಪನೆ ಪೀಕಿಂಗ್ ಸರ್ಕಾರದ ಉದ್ದೇಶವಾಗಿತ್ತು. ಕೇಂದ್ರೀಕರಿಸಲಾದ ಯೋಜನೆ ಮತ್ತು ಉಗಮದ ಸಾಮಾಜೀಕರಣದ ಮೂಲಕ ಈ ವಿಸ್ತರಣೆಯ ಮೇಲೆ ಸರ್ಕಾರದ ಹತೋಟಿಯನ್ನು ಏರ್ಪಡಿಸಲಾಯಿತು. ರೈತರನ್ನು ವಿದೇಶೀ ವಿನಿಮಯ ಮತ್ತು ಕೈಗಾರಿಕೆ ಕಚ್ಚಾ ವಸ್ತುಗಳನ್ನಾಗಿ ಪರಿವರ್ತಿಸಬಹುದಾದ ಅಧಿಕ ಉತ್ಪಾದನೆಯನ್ನು ಮಾಡುವಂತೆ ಅಂಕುಶ ಹೇರಲಾಯಿತು.

ಕೆಲವು ಕಾಲ ಮತ್ತು ಪ್ರದೇಶಗಳಲ್ಲಿ ಕೈಗಾರಿಕೆಯಲ್ಲಿನ ಸಾಧನೆಗಳು ಸ್ಪಷ್ಟವಾಗಿ ಕಾಣುವಂತಿದ್ದವು ಮತ್ತು ಮೆಚ್ಚುವಂತಿದ್ದವು (ಪರಿಣಾಮಕಾರಿಯಾಗಿದ್ದವು) ಕಬ್ಬಿಣದ ಉತ್ಪಾದನೆ ಅಲ್ಪವಾಗಿದ್ದರೂ 1952 ರಿಂದ 1957 ರವರೆಗೆ ಒಟ್ಟು ಸುಮಾರು ಶೇ. 325 ರಷ್ಟು ಹೆಚ್ಚಿತು. ಕಲ್ಲಿದ್ದಲಿನ ಉತ್ಪಾದನೆ ಶೇ. 200 ರಷ್ಟು ಹೆಚ್ಚಿತು. ಒಟ್ಟು 4084 ಕಿಲೋ ಮೀಟರ್ ಹೊಸ ರೈಲು ಮಾರ್ಗವನ್ನು ನಿರ್ಮಿಸಲಾಯಿತು.

### 145.5.5 ಕೃಷಿ ಸಮಸ್ಯೆಗಳು

ಕಮ್ಯುನಿಸ್ಟರು ಕೃಷಿಯನ್ನು ವೈಯುಕ್ತಿಕ ಉದ್ಯಮದಿಂದ ಸಾಮೂಹಿಕ ಉದ್ಯಮವನ್ನಾಗಿ ಬದಲಾಯಿಸಿದ್ದರಿಂದ ಕೃಷಿ ರಂಗದಲ್ಲಿಯೂ ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಯಿತು. 1953 ರಲ್ಲಿ ಪ್ರಾರಂಭದಲ್ಲಿ ಸಣ್ಣ ವೈಯುಕ್ತಿಕವಾದ ಭೂ ಹಿಡುವಳಿಗಳು ಯಾಂತ್ರೀಕೃತ ಕೃಷಿಗೆ ಸೂಕ್ತವಲ್ಲವೆಂದು ಸರ್ಕಾರ ಪ್ರಕಟಿಸಿತು. ವೈಯುಕ್ತಿಕ ಹಿಡುವಳಿಯನ್ನು ಒಂದು ಗೂಡಿಸಿದ್ದರಿಂದ ಯಂತ್ರಗಳು ನೀರಾವರಿ ಮತ್ತು ರಸಗೊಬ್ಬರಗಳ ಹೆಚ್ಚಿನ ಬಳಕೆಯಿಂದ ಉತ್ಪಾದನೆಯನ್ನು ಹೆಚ್ಚಿಸಲಾಯಿತು. ಆದರೆ 1957 ರ ವೇಳೆಗೆ ಉತ್ಪಾದನೆಯನ್ನು ಹೆಚ್ಚಿಸುವ ಮತ್ತು ಇಡೀ ಭೂ ಗೇಣಿ ಪದ್ಧತಿಯನ್ನು ನಿರಂತರವಾಗಿ ಬದಲಾಯಿಸುವ ಪ್ರಯತ್ನವು ಕೃಷಿ ಉತ್ಪಾದನೆ ಮತ್ತು ಬೇಡಿಕೆಗಳ ನಡುವೆ ಅಂತರವನ್ನು ಸೃಷ್ಟಿಸಲು ಮಾತ್ರವೇ ಯಶಸ್ವಿಯಾಯಿತು. ಸೋವಿಯತ್ ನೆರವಿನಲ್ಲಿ ಇಳಿಮುಖ ಮತ್ತು ಕೈಗಾರಿಕಾ ವಿಸ್ತರಣೆಯಲ್ಲಿ ವೇಗದ ನಷ್ಟವು ಪರಿಸ್ಥಿತಿಯನ್ನು ಜಟಿಲಗೊಳಿಸಿತು.

## 145.6 "ಬೃಹತ್ ಮುನ್ನಡೆ ಜಿಗಿತ"

ಈ ಸಮಸ್ಯೆಗಳನ್ನು ಎದುರಿಸಿದ ಪೀಕಿಂಗ್ ಸರ್ಕಾರ 1957 ರ ಕಡೆಯಲ್ಲಿ ಚೀನಾದ ಕಾರ್ಮಿಕರ ತೀವ್ರವಾದ ಶೋಷಣೆಗೆ ತೀವ್ರವಾದ ಕಾರ್ಯಕ್ರಮಗಳ ಕಡೆಗೆ ಗಮನ ಹರಿಸಿತು. ಉತ್ಪಾದನಾ ಗುರಿಗಳನ್ನು ಮೇಲ್ಮುಖವಾಗಿ ಸಂಪೂರ್ಣವಾಗಿ ಪರಿಷ್ಕರಿಸಲಾಯಿತು. ಜನಸಾಮಾನ್ಯರನ್ನು ಸಂಘಟಿಸಲಾಯಿತು. ಪ್ರಸಿದ್ಧವಾದ 'ಮಹಾ ಮುನ್ನಡೆ ಜಿಗಿತ' ಕಾರ್ಯಕ್ರಮವನ್ನು 1958 ರಲ್ಲಿ ಕೈಗೊಳ್ಳಲಾಯಿತು. ಈ ಗುರಿಗೆ ಅನುಗುಣವಾಗಿ ಬೃಹತ್ ನೀರಾವರಿ ಯೋಜನೆಗಳು, ಆಳವಾದ ಉಳಿಮೆ ಮತ್ತು ಕೃಷಿಭೂಮಿಯ ವಿಸ್ತರಣೆಗಳ ಮೂಲಕ ಕೃಷಿ ಉತ್ಪಾದನೆಯನ್ನು ಹೆಚ್ಚಿಸಬೇಕಾಗಿತ್ತು. ಆಯ್ದ ಬೃಹತ್ ಕೈಗಾರಿಕೆಗಳ ವಿಸ್ತರಣೆಯಲ್ಲಿ ಸರ್ಕಾರ ಬೃತ್ ಪ್ರಮಾಣದ ಬಂಡವಾಳವನ್ನು ತೊಡಗಿಸಿತು. ವ್ಯಕ್ತಿಗಳು ತಮ್ಮ ಖಾಂದ ವೃತ್ತಿಯಲ್ಲಿ ಹಿಂದೆಂದಿಗಿಂತಲೂ ಹೆಚ್ಚು ಶ್ರಮವಹಿಸಿ ದುಡಿಯಬೇಕಾಗಿತ್ತು. ಇದೇ ವೇಳೆಯಲ್ಲಿ ಅವರು ಹೆಚ್ಚುವರಿ ಉತ್ಪಾದನೆಯ ಕೆಲಸವನ್ನು ವಹಿಸಿಕೊಳ್ಳಬೇಕಾಗಿತ್ತು. ಕೆಲಸಗಾರರು ತಮ್ಮ ಬಿಡುವಿನ ವೇಳೆಯಲ್ಲಿ ಗುಜರಿ ಕಬ್ಬಿಣವನ್ನು ಕರಗಿಸುವ ಹಿಂದಿನ ಅಂಕಣದ ಕುಲುಮೆಗಳನ್ನು ನಿರ್ವಹಿಸುತ್ತಿದ್ದರು. ಮರದ ಸಸಿಗಳನ್ನು ನಡೆಸುತ್ತಿದ್ದರು ಅಥವಾ ನೀರನ್ನು ನಿಯಂತ್ರಿಸುವ ಯೋಜನೆಗಳನ್ನು ನಿರ್ಮಿಸುತ್ತಿದ್ದರು. ಆ ಮೂಲಕ ಹೆಚ್ಚುವರಿ ದುಡಿಮೆಯ ಮೂಲಕ ಆರ್ಥಿಕ ವ್ಯವಸ್ಥೆಯನ್ನು ಉತ್ತೇಜಿಸುತ್ತಿದ್ದರು.

### 145.6.1 ಕಮ್ಯೂನ್‌ಗಳ ಪಾತ್ರ

ಕಮ್ಯೂನ್ ಒಂದು ಆಡಳಿತ ಘಟಕವಾಗಿದ್ದು ಗ್ರಾಮೀಣ ಪ್ರದೇಶದಲ್ಲಿ ಸರಾಸರಿ 10,000 ಎಕರೆ ಮತ್ತು 5,000 ಕುಟುಂಬಗಳನ್ನು ಒಳಗೊಂಡಿದ್ದು ಮಹಾ ಜಿಗಿತದ ಬಲವಂತವಾದ ವೇಗದ ಹೆಚ್ಚಳವನ್ನು ವ್ಯವಸ್ಥೆಗೊಳಿಸುವ ಅತ್ಯಗತ್ಯ ಚೌಕಟ್ಟಿನ 1958 ರಲ್ಲಿ ಸುಮಾರು 24,000 ಅಂತಹ ಕಮ್ಯೂನ್‌ಗಳನ್ನು ಸೃಷ್ಟಿಸುವ ಪ್ರಯತ್ನಕ್ಕೆ ಮೊದಲು ಕಮ್ಯುನಿಸ್ಟರಿಗೆ ಅವುಗಳ ಬಗ್ಗೆ ಸ್ವಲ್ಪವೇ ಅನುಭವವಿದ್ದಿತು. ಲಭ್ಯವಿರುವ ಎಲ್ಲಾ ಕಾರ್ಮಿಕರನ್ನು ಸಂಪೂರ್ಣವಾಗಿ ಕ್ರೋಢೀಕರಿಸಲು ಮಂಡಿಸಿದ ಸಾಧ್ಯತೆಗಳ ತಂತ್ರದಿಂದ

ಅವರು ಆಕರ್ಶಿತರಾದರು. ಪ್ರತಿಯೊಂದು ಕಮ್ಯೂನ್‌ನಲ್ಲೂ 200 ರಿಂದ 300 ಕುಟುಂಬಗಳ ಕೆಲಸಗಾರರನ್ನು ಒಂದು ಉತ್ಪಾದನಾ ತಂಡವಾಗಿ ರಚಿಸಲಾಗಿತ್ತು. ಅಗತ್ಯಕ್ಕೆ ತಕ್ಕಂತೆ ಉದ್ಯೋಗದಿಂದ ಉದ್ಯೋಗಕ್ಕೆ ಇದನ್ನು ಬದಲಾಯಿಸಲಾಗುತ್ತಿತ್ತು. ಇದನ್ನು ವ್ಯವಸಾಯದ ಉದ್ದೇಶಕ್ಕೆ ಮಾತ್ರವೇ ಕೆಲಸಗಾರರನ್ನು ಒಂದೆಡೆ ಸೇರಿಸುತ್ತಿದ್ದು ಸಮೂಹ ಸಂಘಗಳಿಗಿಂತ ಮುಂದುವರಿದವೆಂದು ಪರಿಗಣಿಸಲಾಗಿತ್ತು. ಮಿಗಿಲಾಗಿ ಒಂದೇ ದಿಕ್ಕಿನಲ್ಲಿ ಅಪಾರ ಸಂಖ್ಯೆಯ ಜನರನ್ನು ತೊಡಗಿಸುವ ಮೂಲಕ ಬೃಹತ್ ಯೋಜನೆಗಳನ್ನು ಕೈಗೊಳ್ಳಲು ಕಮ್ಯೂನನ್ನು ಸಜ್ಜುಗೊಳಿಸಲಾಯಿತು. ಹೊಸ ಬಗೆಯ ಸಾಮೂಹಿಕ ಜೀವನದಿಂದ ಇನ್ನೂ ಹೆಚ್ಚಿನ ಅನುಕೂಲಗಳನ್ನು ನಿರೀಕ್ಷಿಸಲಾಗಿತ್ತು. ಸಾಮೂಹಿಕ ಊಟದ ಕೋಣೆಗಳು ಮನೆಗೆಲಸವನ್ನು ಕಡಿಮೆ ಮಾಡಿತು ಮತ್ತು ಆಹಾರದ ಸೇವನೆಯ ಮೇಲೆ ಹಿಡಿತವನ್ನು ಬಿಗಿಗೊಳಿಸಿತು. ಶಿಶುವಿಹಾರ ಮತ್ತು ವೃದ್ಧಾಶ್ರಮಗಳ ಸ್ಥಾಪನೆಯ ಮೂಲಕ ಮಕ್ಕಳು ಮತ್ತು ವೃದ್ಧರ ಆಳ್ವಿಕೆಗೆ ಶ್ರಮದ ವೆಚ್ಚವನ್ನು ಕಡಿಮೆ ಮಾಡಲಾಯಿತು. ಪ್ರಾಥಮಿಕ ಸಾಮಾಜಿಕ ಘಟಕವಾಗಿ ಕುಟುಂಬದ ಮೇಲಿನ ಪ್ರಾಮುಖ್ಯತೆಯನ್ನನು ಕಡಿಮೆ ಮಾಡುವ ಮೂಲಕ ಶಿಸ್ತನ್ನು ಬಲಪಡಿಸಲಾಯಿತು. ಒಟ್ಟಿನಲ್ಲಿ ಕಮ್ಯೂನ್‌ಗಳು ವ್ಯಕ್ತಿಗಳ ಆರ್ಥಿಕ ಚಟುವಟಿಕೆ ಕೆಲಸದ ಪರಿಸ್ಥಿತಿ, ವಾಸಸ್ಥಳ ಮತ್ತು ಕುಟುಂಬ ಜೀವನವನ್ನು ನಿಯಂತ್ರಿಸುವ ಒಂದು ಯಂತ್ರವನ್ನು ನೀಡಿದವು.

### *145.6.2 ಆತುರದ ಆಂತರಿಕ ಪ್ರಯೋಗಗಳು*

ಚೀನಿಯರ ಜೀವನದ ಇಂತಹ ತಂಡ ರಚನೆಯು ಇತಿಹಾಸದಲ್ಲಿ ಕೆಲವೇ ಹೋಲಿಕೆಯಾಗುವ ಮಾನವ ಚಟುವಟಿಕೆಯ 1858 ರ ಕಡೆಯ ವೇಳೆಗೆ ಪೀಕಿಂಗ್ ಶೇಕಡ 100 ರ ಕೃಷಿ ಉತ್ಪಾದನಾ ಹೆಚ್ಚಳವನ್ನು ದಾಖಲಿಸಿತು. ಕಬ್ಬಿಣ ಮತ್ತು ಉಕ್ಕಿನ ಉತ್ಪಾದನೆಯು ದ್ವಿಗುಣಗೊಂಡಿತು. ಇತರ ಪ್ರಮುಖ ಉದ್ದಿಮೆಗಳಲ್ಲಿಯೂ ಇಂತಹುದೇ 'ಜಿಗಿತವನ್ನು' ದಾಖಲಿಸಲಾಯಿತು. ಆದಾಗ್ಯೂ ಕಾಲಕಳೆದಂತೆ ಸರ್ಕಾರದ ಉತ್ಪಾದನೆಯ ಅಂದಾಜನ್ನು ಇಳಿಸಲಾಯಿತು. ಬಲತ್ಕಾರದ ಕಡಿತದ ಇತರ ಸೂಚನೆಗಳೂ ಇದವು. ಕಮ್ಯೂನ್ ವ್ಯವಸ್ಥೆಯ ಕೆಲವು ಲಕ್ಷಣಗಳಿಂದ ಸಮುದಾಯದ ಉಂಟಾದ ಹಜಾರಗಳು ಮತ್ತು ಕೆಲಸದ ತಂಡಗಳ ಕಠಿಣ ನಿರ್ದೇಶನಗಳನ್ನು ಬದಲಾಯಿಸಲಾಯಿತು ಅಥವಾ ಕೈಬಿಡಲಾಯಿತು. ಅಪಾರ ಪ್ರಚಾರ ಮಾಡಲಾಗಿದ್ದ ಅಧಿಕ ಪ್ರಯೋಗಗಳು ಅತ್ಯಂತ ಮುಖ್ಯವಾದ ಹಿಂದಿನ ಅಂಗಳದ ಕುಲುಮೆಗಳು ವಿಫಲತೆಯನ್ನು ಅನುಭವಿಸಿದವು. ಕಮ್ಯುನಿಸ್ಟರು ಅತ್ಯಂತ ತ್ವರಿತವಾಗಿ ಅತ್ಯಂತ ಹೆಚ್ಚಿನದಕ್ಕೆ ಪ್ರತ್ನಿಸಿದಂತೆ ಕಂಡುಬಂದಿತು. ಮಹಾ ಮುನ್ನಡೆ ಜಿಗಿತವು ಕೈಗಾರಿಕಾ ಉತ್ಪಾದನೆಯ ತಾತ್ಕಾಲಿಕ ಹೆಚ್ಚಳ ಹೊಸ ಸ್ಥಾವರಗಳ ಸ್ಥಾಪನೆ ಸಾರಿಗೆ ಸೌಲಭ್ಯಗಳ ವಿಸ್ತರಣೆ ಮತ್ತು ಕೆಲವು ಕೃಷಿ ಅಂಶಗಳ ಆಧುನೀಕರಣ ಮತ್ತು ಜನಸಾಮಾನ್ಯರ ಮೇಲೆ ಕಮ್ಯುನಿಸ್ಟ್ ಆಳ್ವಿಕೆಯ ಹಿಡಿತದ ಕ್ರೋಢೀಕರಣದ ಮತ್ತು ಜನಸಾಮಾನ್ಯರ ಮೇಲೆ ಕಮ್ಯುನಿಸ್ಟ್ ಆಳ್ವಿಕೆಯ ಹಿಡಿತದ ಕ್ರೋಢೀಕರಣದ ಮೇಲೆ ಪರಿಣಾಮವನ್ನುಂಟು ಮಾಡುವ ವೇಗದ ಹೆಚ್ಚಳಕ್ಕೆ ಕಾರಣವಾಯಿತು. ಆದಾಗ್ಯೂ ಅನೇಕ ಹೊಸ ಮತ್ತು ಅಸ್ಥಿರತೆಯುಂಟು ಮಾಡುವ ಸಮಸ್ಯೆಗಳು ಹುಟ್ಟಿಕೊಂಡವು. 1959 ರ ಪ್ರಾರಂಭದಲ್ಲಿ ಕೈಗಾರಿಕಾ ಸ್ಥಾವರಗಳ ಮೇಲೆ ಅಧಿಕವಾದ ತೆರಿಗೆಗಳನ್ನು ವಿಧಿಸಿದ್ದರಿಂದ ದುರಸ್ತಿಗಾಗಿ ಅವುಗಳು ಮುಚ್ಚಿದವು. ಅದಕ್ಕಿಂತಲೂ ಹೆಚ್ಚು ಗಂಭೀರವಾದ ಕಡಿತ ಕೃಷಿಯಲ್ಲುಂಟಾಯಿತು. 1960 ರಲ್ಲಿ ದಾನ್ಯದ ಉತ್ಪಾದನೆಯಲ್ಲಿ ಕಡಿಮೆಯಾಗಿದ್ದರಿಂದ ಆಸ್ಟ್ರೇಲಿಯಾ, ಕೆನಡಾ ಮತ್ತು ಎಲ್ಲಿಂದ ಸಾಧ್ಯವೋ ಅಲ್ಲಿಂದ ಗೋಧಿಯನ್ನು ಆಮದು ಮಾಡಿಕೊಳ್ಳುವ ಅಗತ್ಯ ತಲೆದೋರಿತು.

### *145.6.3 ಉತ್ಪಾದನೆಯ ಕಡಿತ*

ಈ ಸಮಸ್ಯೆಗಳಿಂದ ಪಾರಾಗಲು ಪೀಕಿಂಗ್ ಸರ್ಕಾರವು ಮಹಾ ಮುನ್ನಡೆ ಜಿಗಿತದ ಅತ್ಯಂದ ತೀವ್ರವಾದ ಲಕ್ಷಣಗಳಿಂದ ಹಿಂತೆಗೆಯಿತು. ಕೇಂದ್ರೀಕೃತ ಯೋಜನೆಗೆ ಪುನರ್ ಮಹತ್ವ ನೀಡಲಾಯಿತು. ಕೃಷಿ ಉತ್ಪಾದನೆಗೆ ಪ್ರಾಶಸ್ತ್ಯ ನೀಡಲಾಯಿತು ಮತ್ತು ಕೈಗಾರಿಕಾ ಬಂಡವಾಳವನ್ನು ಇಳಿಸಲಾಯಿತು. ತ್ವರಿತವಾದ ಉತ್ಪಾಧನೆಯ ಬೆಳವಣಿಗೆಗ ಮೊದಲು ನೀಡಲಾಗಿದ್ದ ಪ್ರಾಮುಖ್ಯತೆಗೆ ಬದಲಾಗಿ ಅಧಿಕಾರ ವರ್ಗವು ಗುಣಮಟ್ಟ ಮತ್ತು ವಿವಿಧ ಬಗೆಗಳ ಬಗ್ಗೆ ಗಮನ ಹರಿಸಿತು. ಪಕ್ಷವು ಬಳಕೆದಾರರ ವಸ್ತುಗಳ ಉತ್ಪಾದನೆಯ ಹೆಚ್ಚಳ ಮತ್ತು ಮಾರುಕಟ್ಟೆ ಪರಿಸ್ಥಿತಿಗಳನ್ನು ಸುಧಾರಿಸುವ ಅಗತ್ಯವನ್ನು ಗುರುತಿಸಿತು. ಆದಾಗ್ಯೂ ಭಾರೀ ಬದಲಾವಣೆಗಳು ಗ್ರಾಮಾಂತರ ಕಮ್ಯೂನ್‌ಗಳನ್ನು ಸಂಭವಿಸಿದವು. ಅಲ್ಲಿ ಆಡಳಿತ ಮಂಡಳಿಯನ್ನು ಉತ್ಪಾದಕರ ಸಮೀಪಕ್ಕೆ ತರಲು ಆಡಳಿತ ರಚನೆಯಲ್ಲಿ ಮಾರ್ಪಾಡುಗಳನ್ನು ಮಾಡಲಾಯಿತು. ರೈತರಿಗೆ ತಮ್ಮ ಇಷ್ಟಕ್ಕೆ ತಕ್ಕಂತೆ ಬಳಸಲು ಖಾಸಗಿ ಹಿಡುವಳಿಗಳನ್ನು ಹೊಂದಲು ಅವಕಾಶ ನೀಡಲಾಯಿತು.

1961-62 ರಲ್ಲಿ ಜಾರಿಗೊಳಿಸಲಾದ ಉತ್ಪಾದನೆಯ ಕಡಿತವು ಚೀನಾದ ಆರ್ಥಿಕ ವ್ಯವಸ್ಥೆಯಲ್ಲಿ ಭಾಗಶಃ ಪುನಶ್ಚೇತನವನ್ನುಂಟು ಮಾಡಿತು. ಅನಂತರ ಇನ್ನೂ ಹೆಚ್ಚಿನ ಪ್ರಗತಿಗೆ ಸಿದ್ಧತೆಯನ್ನು ನಡೆಸುವಲ್ಲಿ ಕಮ್ಯುನಿಸ್ಟ್ ಸರ್ಕಾರವು ರೈತರ ಶಕ್ತಿಯನ್ನೂ ಸೂಕ್ತವಾಗಿ ಕಬಳಿಸಿಕೊಂಡಲ್ಲಿ ಚೀನಾವನ್ನು ಮಾರ್ಪಡಿಸಲು ಸಾಧ್ಯವೆಂಬ ಸಿದ್ಧಾಂತದ ಆಧಾರದ ಮೇಲೆ ಎಚ್ಚರಿಕೆಯಿಂದ ಮುಂದಿನ ಹೆಜ್ಜೆಯನ್ನು ಇಟ್ಟಿತು. ಮತ್ತೊಂದು ಆರ್ಥಿಕ ಮುನ್ನಡೆಯ ಸಾಧನೆಗಾಗಿ ಮಾನಸಿಕ ಸಿದ್ಧತೆಗೆ ಪಕ್ಷವು 'ಸಾಮಾಜಿಕ ಶಿಕ್ಷಣ ಪ್ರಚಾರ' ದ ಕಡೆಗೆ ಗಮನ ಹರಿಸಿತು. ಅನಂತರ ಆ ಸಾಧನೆಗೆ ಅಗತ್ಯವಾಗಿದ್ದ ಬೌದ್ಧಿಕ ಮತ್ತು ಭಾವನಾತ್ಮಕ ವಾತಾವರಣವನ್ನು ಏರ್ಪಡಿಸುವುದನ್ನು ತಡೆಹಿಡಿದು ಪಕ್ಷವು ಆರ್ಥಿಕ ಕಡಿತದ ಅವಧಿಯ ಅನೇಕ ಹೊಂದಾಣಿಕೆಗಳನ್ನು ಖಾಸಗಿ ಹಿಡುವಳಿಗಳು, ಗ್ರಾಮಾಂತರ ಮಾರುಕಟ್ಟೆ ಮತ್ತು ಉತ್ಪಾದನೆಯ ಸ್ಥಳೀಯಕ್ಕೂ ಉಳಿಸಿಕೊಂಡಿತು. ಈ ಸನ್ನಿವೇಶದಲ್ಲಿ ಆರ್ಥಿಕ ಪ್ರಗತಿಯು ಉತ್ತಮವಾಗಿದ್ದು 1965 ರಲ್ಲಿ ಪಕ್ಷದ ಅಧಿಕಾರಿಗಳು ಆಶಾದಾಯಕವಾಗಿ ಮಾತನಾಡುವಂತಾಗಿದ್ದು ಅದು ತಕ್ಷಣವೇ ಮೂರನೇ ಪಂಚವಾರ್ಷಿಕ ಯೋಜನೆಯ ಪ್ರಕಟಣೆಗೆ ಕಾರಣವಾಯಿತು.

## 145.7 ಕ್ರಾಂತಿಯಲ್ಲಿ ಬಿಕ್ಕಟ್ಟು

ಈ ಆಶಾದಾಯಕ ಹೇಳಿಕೆಗಳು ಕೆಲವು ಕಾಲ ಚೀನಾದ ನಾಯಕರಲ್ಲೇ ಆಳವಾದ ಭಿನ್ನಾಭಿಪ್ರಾಯಗಳನ್ನು ಮರೆಮಾಚಿದವು. ಕೆಲವು ಮಾವೋನ ಅತ್ಯಂತ ನಿಕಟವರ್ತಿಗಳು ಮತ್ತು ಇತರ ಕಮ್ಯುನಿಸ್ಟ್ ಪಕ್ಷದ ಉನ್ನತ ಅಧಿಕಾರಿಗಳು ಅಧ್ಯಕ್ಷರ ಪದೇ ಪದೇ ಅಂತಹುದೇ ಪ್ರಚಾರದಿಂದ ಭ್ರಮನಿರಸನಗೊಂಡರು. ಅವರ ಅಭಿಪ್ರಾಯದಲ್ಲಿ ಕ್ರಾಂತಿಯನ್ನು ವಿವೇಚನಾಯುತ ಯೋಜನೆ ಮತ್ತು ಖಾಯಂ ಆದ ಪ್ರಕ್ರಿಯೆಗಳ ಮೂಲಕ ಮುಂದುವರಿಸಬೇಕಾಗಿತ್ತು. ಇದನ್ನು ಮಾವೋ ಒಪ್ಪಲಿಲ್ಲ. ಕ್ರಾಂತಿಯ ವಿಫಲತೆಯಿಂದ ಮಾವೋ ಕೂಡ ಬೇಸರಗೊಂಡಿದ್ದನು. ಚೀನಾದ ಹೊಸ ನಾಯಕರು ಮೃದುವಾಗಿರುವರು ಮತ್ತು ಸ್ವಯಂತೃಪ್ತರಾಗಿರುವರೆಂಬ ಹೊರನೋಟದ ಸೂಚನೆಗಳಿಂದ ಅವನು ವಿಚಲಿತನಾಗಿದ್ದನು. ಉದಾಹರಣೆಗೆ, ಕಮ್ಯುನಿಸ್ಟ್ ಉನ್ನತ ಅಧಿಕಾರಿಗಳು ವಿಶೇಷ ಸವಲತ್ತುಗಳನ್ನು ಪಡೆಯಲು ತಮ್ಮ ನಾಯಕತ್ವವನ್ನು ಬಳಸಿಕೊಳ್ಳುತ್ತಿರುವರೆಂದು ಹೇಳಲಾಗಿತ್ತು. ವಾಸ್ತವವಾಗಿ ಇಡೀ ಪಕ್ಷದ ಪೌರುಷವು ಅವನತಿ ಹೊಂದುತ್ತಿದೆಯೆಂಬ ಭೀತಿಯನ್ನು ಮಾವೋ ಹೊಂದಿದ್ದನು.

### *145.7.1 ಪಕ್ಷದೊಳಗಿನ ಭಿನ್ನಮತ*

ಈ ಪಕ್ಷದೊಳಗಿನ ಭಿನ್ನಮತಗಳು ಮತ್ತು ಉದ್ವಿಗ್ನತೆಗಳು ಪ್ರಮುಖ ನೀತಿಗಳಿಗೆ ಈ ಮೊದಲು ಇದ್ದ ಒಗ್ಗಟ್ಟಿನ ಬೆಂಬಲವನ್ನು ಹಾಳು ಮಾಡಿದ್ದವು. ಪ್ರಾರಂಭದ ವರ್ಷಗಳಲ್ಲಿ ಮಾವೋ ಮತ್ತು ಅವನ ಸಹೋದ್ಯೋಗಿಗಳು ಸೋವಿಯತ್ ಮಾದರಿಗಳನ್ನು ಚೀನಾದ ಬೆಳವಣಿಗೆಗೆ ಮಾರ್ಗದರ್ಶಿಗಳೆಂದು ಒಮ್ಮತದಿಂದ ಒಪ್ಪಿಕೊಂಡಿದ್ದರು. ಲಿಯು ಶಾವೋ ಚಿ ಮತ್ತು ಅವನ ಸಹವರ್ತಿಗಳು ಈ ಮಾದರಿಗಳಲ್ಲಿ ತಮ್ಮ ವಿಶ್ವಾಸವನ್ನು ಗಟ್ಟಿಗೊಳಿಸುವುದನ್ನು ಮುಂದುವರಿಸಿದರು. ಅವರು ಕೇಂದ್ರೀಕೃತ ಯೋಜನೆ, ಬೃಹತ್ ಕೈಗಾರಿಕೆಗಳ ಅಭಿವೃದ್ಧಿ ಮತ್ತು ನಗರೀಕರಣವನ್ನು ಪ್ರತಿಪಾದಿಸಿದರು. ಇದಕ್ಕೆ ಪ್ರತಿಯಾಗಿ ಮಾವೋ ಬದಲಾದ ಕೃಷಿಕರ ವರ್ಗ ಮತ್ತು ಸ್ವಯಂ ಪರಿಪೂರ್ಣ ಗ್ರಾಮಾಂತರ ಜೀವನದ ಕಲ್ಪನೆಗೆ ಹೆಚ್ಚಿನ ಮಹತ್ವವನ್ನು ನೀಡಿದನು. ಇದರಲ್ಲಿ ಜನಸಾಮಾನ್ಯರ, ರೈತರ, ಕುಶಲಕರ್ಮಿಗಳ ಮತ್ತು ಸೇನಾ ಯೋಧರ ಪ್ರತಿಭೆಗಳನ್ನು ಒಂದಲ್ಲಿ ಸೇರಿಸಲಾಯಿತು.

ಚೀನಾದ ಕಮ್ಯುನಿಸ್ಟ್ ನಾಯಕರ ನಡುವೆಯೇ ಇದ್ದ ಈ ಸೈದ್ಧಾಂತಿಕ ಸಂಘರ್ಷಗಳು ಚೀನಾ ಮತ್ತು ಅದರ ಕಮ್ಯುನಿಸ್ಟ್ ಮಿತ್ರನಾಗಿದ್ದ ಸೋವಿಯತ್ ಒಕ್ಕೂಟಗಳ ನಡುವೆ ಸೈದ್ಧಾಂತಿಕ ಮತ್ತು ರಾಜಕೀಯ ಉದ್ವಿಗ್ನತೆಗೆ ಕಾರಣವಾದವು. ಏಷ್ಯಾ ಮತ್ತು ಆಫ್ರಿಕಾದ ಮೂರನೇ ಜಗತ್ತಿನ ರಾಷ್ಟ್ರಗಳಲ್ಲಿ ಸ್ಥಾನಮಾನ ಮತ್ತು ಪ್ರಭಾವಕ್ಕಾಗಿ ಈ ಎರಡು ಕಮ್ಯುನಿಸ್ಟ್ ದಿಗ್ಗಜಗಳ ನಡುವೆ ಅಲ್ಲಿಂದ ಸ್ಪರ್ಧೆ ಹುಟ್ಟಿಕೊಂಡಿತು. ಸ್ವಾಭಾವಿಕವಾಗಿಯೇ ಈ ಬೆಳವಣಿಗೆಗಳು ಮಾವೋನ ದೃಢನಿರ್ಧಾರವನ್ನು ಮಾತ್ರವೇ ಪೋಷಿಸಿದವು.

## 145.8 ಮಹಾ ಸಾಂಸ್ಕೃತಿಕ ಕ್ರಾಂತಿ

ಈ ಸೈದ್ಧಾಂತಿಕ ಪಿಡುಗನ್ನು ಗುಣಪಡಿಸಲು ಮಾವೋ 1962 ರ "ಸಮಾಜವಾದಿ-ಶಿಕ್ಷಣ ಆಂದೋಲನ" ದ ಕಡೆಗೆ ಗಮನ ಹರಿಸಿದನು. ಈ ಆಂದೋಲನವು ಮಾವೋಗೆ ಬೆಂಬಲವನ್ನು ಸೂಚಿಸುವ ಮತ್ತು ಪಕ್ಷದ ನಾಯಕರು ಹಾಗೂ ಬುದ್ಧಿಜೀವಿಗಳಿಗೆ ಬಲವಂತಾವಿಗ ದೈಹಿಕ ಶ್ರಮದ ಕೆಲಸಗಳನ್ನು ನಿರ್ವಹಿಸುವಂತೆ ಮಾಡುವ 'ಕ್ರಾಂತಿಕಾರಿ ಉತ್ತರಾಧಿಕಾರಿಗಳ' ತರಭೇತಿಯ

ಚಳುವಳಿಯಾಗಿತ್ತು. ಆದರೆ ಈ ಕ್ರಾಂತಿಯಿಂದ ಹೆಚ್ಚಿನದನ್ನು ಸಾಧಿಸಲು ಸಾಧ್ಯವಾಗಲಿಲ್ಲ. ಪಕ್ಷದ ಆಡಳಿತ ವರ್ಗ ಮಾವೋನ ಆಜ್ಞೆಗಳನ್ನು ಅಧಿಕೃತವಾಗಿ ಮಾನ್ಯ ಮಾಡಿದ್ದರೂ ಅವರ ಕಾರ್ಯನಿರ್ವಹಣೆಯಲ್ಲಿ ನಿಜವಾದ ಉತ್ಸಾಹದ ಕೊರತೆಯಿತ್ತು. ಪರಿಣಾಮವಾಗಿ ಮಾವೋ ಬದಲಾಗದ ತನ್ನ ಪಕ್ಷದಿಂದಲೇ ವಿರೋಧವನ್ನು ಎದುರಿಸಬೇಕಾಯಿತು. ಆ ವೇಳೆಗೆ ತನ್ನ ನಿಕಟ ಸಹವರ್ತಿಯಾಗಿದ್ದ ಲಿನ್ ಪಿಯೊವೋನ ನಾಯಕತ್ವದಲ್ಲಿದ್ದ ಕೆಂಪು ಸೇನೆ ಹಾಗೂ ಪಕ್ಷದ ಹೊರಗೆ ವಿದ್ಯಾರ್ಥಿಗಳು ತನ್ನ ನಾಯಕತ್ವಕ್ಕೆ ಬೆಂಬಲ ಸೂಚಿಸುವ "ಜನ ಸಾಮಾನ್ಯ ವರ್ಗದ ಮಹಾ ಸಾಂಸ್ಕೃತಿಕ ಕ್ರಾಂತಿ" ಯನ್ನು ಆರಂಭಿಸಿದನು. ಅದು ಬಹುಬೇಗನೆ ಅಭೂತಪೂರ್ವ ರೂಪವನ್ನು ತಾಳಿತು.

ಬುದ್ಧಿಜೀವಿಗಳಲ್ಲಿ ಕ್ರಾಂತಿಯ ತೀವ್ರತೆಯನ್ನು ಹೆಚ್ಚಿಸುವ ಚಳುವಳಿಯಾಗಿ ಆರಂಭವಾದ (ಆದ್ದರಿಂದಲೇ 'ಸಾಂಸ್ಕೃತಿಕ ಕ್ರಾಂತಿ' ಯೆಂಬ ಹೆಸರು) ಈ ಹೊಸ ನಡೆ ಬಹುಬೇಗನೆ ಇಡೀ ಚೀನಾವನ್ನು ಹೊಗಳುವ ಮಾವೋನ ನಾಯಕತ್ವವನ್ನು ಮೆಚ್ಚುವ ಬೃಹತ್ ಸಭೆಗಳ ಪ್ರದರ್ಶನಗಳ ಮತ್ತು ಪ್ರಚಾರದ ಗೊಂದಲದಲ್ಲಿ ಮುಳುಗಿಸಿತು. 1967 ರ ಬೇಸಿಗೆಯ ವೇಳೆಗೆ 'ರೆಡ್ ಗಾರ್ಡ್' ಗಳೆಂದು ಕರೆಯಲಾದ ಮಿಲಿಯಾಂತರ ಯುವ ಕ್ರಾಂತಿಕಾರಿಗಳು ಬಲಪಂಥೀಯರ ವಿರೋಧಿ ಪ್ರದರ್ಶನವನ್ನು ನಡೆಸಿದರು. ಈ ಆರ್ಭಟವು ಉನ್ನತ ನಾಯಕತ್ವದಲ್ಲಿದ್ದ (ಮಾವೋ ಮತ್ತು ಲಿಯು ನಡುವೆ) ತೀವ್ರವಾದ ಸಂಘರ್ಷವನ್ನು ಮಾತ್ರವಲ್ಲದೆ ಪರಿಣಾಮವಾದ ಪಕ್ಷದ ಕೆಳ ಹಂತದ ಅಧಿಕಾರವರ್ಗ ಸರ್ಕಾರಿ ಅಧಿಕಾರಿಗಳು ಮತ್ತು ಜನಸಾಮಾನ್ಯರಲ್ಲಿ ಉಂಟಾದ ಗೊಂದಲವನ್ನು ಪ್ರತಿಬಿಂಬಿಸುತ್ತದೆ.

ಕೊನೆಗೆ, (ಚಳುವಳಿಯು ಸುಮಾರಾಗಿ ಮೇ 1966 ರಿಂದ ಏಪ್ರಿಲ್ 1969 ರವರೆಗೆ ನಡೆಯಿತು) ಮಾವೋ ಸಂಪರ್ಕ ಮಾಧ್ಯಮಗಳ ಮತ್ತು ರೆಡ್‌ಗಾರ್ಡ್‌ಗಳ ಮೇಲಿನ ಹತೋಟಿ ಹಾಗೂ ಕೆಂಪು ಸೇನೆಯ ತಾರ್ಕಿಕವಾದ ಬೆಂಬಲದಿಂದ ಹೋರಾಟದಲ್ಲಿ ಜಯಗಳಿಸಿ, ಪಕ್ಷ ಮತ್ತು ಅಧಿಕಾರ ವರ್ಗವನ್ನು ಸಂಪೂರ್ಣವಾಗಿ ಶುದ್ಧಿಗೊಳಿಸಿರುವುದಾಗಿ ಜಂಬ ಕೊಚ್ಚಿಕೊಳ್ಳುವಂತಾಯಿತು. ಆದರೆ ಸಾರ್ವಜನಿಕರು ಮತ್ತು ಆದರ ನಿಂದನಗೊಳಗಾಗಿದ್ದ ಪಕ್ಷವನ್ನು ತಾತ್ಕಾಲಿಕವಾಗಿಯಾದರೂ ಪ್ರಮುಖ ನಾಯಕತ್ವದ ಪಾತ್ರದಿಂದ ಹೊರಗಿಡಲಾಯಿತು. ಲಿನ್ ಪಿಯಾವೋನ್ನು ಚೀನಾದ ಎರಡನೇ ಬಹುಮುಖ್ಯ ನಾಯಕನೆಂದು ಹುದ್ದೆಯ ಹತೋಟಿಯ ಭಾಗವಾಗಿ ಸೇನೆಯ ಏಳಿಗೆಯನ್ನು ಸೂಚಿಸಿತು. ಪೀಕಿಂಗ್ ಲಿನ್‌ನನ್ನು 'ಪರಿಣತ' ಎನ್ನುವುದಕ್ಕಿಂತಲೂ 'ಕೆಂಪು' ಎಂದು ಘೋಷಿಸಿತು.

## 145.9 ಭೌತಿಕ ಉದ್ದೇಶಗಳ ಪುನರಾಗಮನ

ಮಾವೋನ ಸಾಂಸ್ಕೃತಿಕ ಕ್ರಾಂತಿಯ ಉತ್ಪಾದನೆ ಮತ್ತು ಮಾನವ ಸಂಪನ್ಮೂಲಗಳಲ್ಲಿ ತೀವ್ರವಾದ ನಷ್ಟವನ್ನುಂಟು ಮಾಡಿತು. ಸುಮಾರು ಮೂರು ವರ್ಷಗಳ ಕಾಲ ಶಾಲೆಗಳನ್ನು ಮುಚ್ಚಲಾಗಿತ್ತು. ಸಾರಿಗೆ ವ್ಯವಸ್ಥೆ ಅಸ್ತವ್ಯಸ್ತಗೊಂಡಿತು. ಕೈಗಾರಿಕೆಗಳ ಗುರಿಯಿಂದ ದೂರ ಉಳಿದವು. ದೇಶದ ಒಳಭಾಗಗಳಲ್ಲೂ ಅವ್ಯವಸ್ಥೆ ತಲೆದೋರಿತು. ಆದರೆ ಸಾಮಾನ್ಯವಾಗಿ ಕೃಷಿ ಉತ್ಪಾದನೆಯಲ್ಲಿ ಕೈಗಾರಿಕೆಯಲ್ಲಾದಷ್ಟು ಗಂಭೀರವಾದ ಕಡಿತವಾಗಲಿಲ್ಲ. ನವಚೇತನ ಪಡೆದ ಕ್ರಾಂತಿಕಾರಿ ನಾಯಕತ್ವ ಮತ್ತು ಪಕ್ಷಕ್ಕೆ ಈ ನಷ್ಟ ಹೆಚ್ಚಿನದೇನೂ ಆಗಿರಲಿಲ್ಲವೆಂಬುದು ಪೀಕಿಂಗ್‌ನ ಅಧಿಕೃತ ಅಭಿಪ್ರಾಯವಾಗಿದೆ.

1969 ರ ವೇಳೆಗೆ, ಸಾಂಸ್ಕೃತಿಕ ಕ್ರಾಂತಿಯು ತನ್ನ ರಾಜಕೀಯ ಉದ್ದೇಶಗಳನ್ನು ಸಾಧಿಸಿದಂತೆ ಕಂಡುಬಂದಿತು. ಆದ್ದರಿಂದ ಚೀನಾದ ಆಂತರಿಕ ಕಾರ್ಯಕ್ರಮಗಳು ಕ್ರಾಂತಿಯ ಭೌತಿಕ ಆಧಾರಗಳ ಬಗ್ಗೆ ಹೊಸ ಆಸಕ್ತಿಯನ್ನು ತೋರಿಸಲು ಪ್ರಾರಂಭಿಸಿದವು. ಮೊದಲು ಶಿಕ್ಷಣದ ಉನ್ನತ ಅಧಿಕಾರಿಗಳು ಶೈಕ್ಷಣಿಕ ವಿಷಯಗಳಿಗಿಂತಲೂ ರಾಜಕೀಯಕ್ಕೆ ಹೆಚ್ಚು ಒತ್ತು ನೀಡಿದರೂ ಶಾಲೆಗಳು ಪುನರಾರಂಭವಾದವು. ವಿಶ್ವವಿದ್ಯಾನಿಲಯಕ್ಕೆ ಪ್ರವೇಶವನ್ನು ಭೌದ್ಧಿಕ ಅರ್ಹತೆಗಿಂತಲೂ ರಾಜಕೀಯ ಅರ್ಹತೆಯ ಮೇಲೆ ನಿರ್ಧರಿಸಲಾಗುತ್ತಿದ್ದಿತು. ಎಲ್ಲಕ್ಕೂ ಮಿಗಿಲಾಗಿ ವಿದ್ಯಾರ್ಥಿಗಳು ಶಿಕ್ಷಣ ಪಡೆದ ನಂತರ ಗ್ರಾಮಾಂತರ ಪ್ರದೇಶಗಳಲ್ಲಿ ಕಡ್ಡಾಯವಾಗಿ ಕೆಲಸ ಮಾಡಬೇಕಾಗಿತ್ತು. ಕೆಲವರು ಮಾತ್ರವೇ ಪಟ್ಟಣಗಳಲ್ಲಿ ಸರ್ಕಾರಿ ಉದ್ಯೋಗಗಳನ್ನು ಪಡೆಯಲು ಅನುಮತಿಯಿದ್ದಿತು. ಸಿದ್ಧಾಂತಕ್ಕೆ ಬದಲಾಗಿ ವಿಷಯಗಳಿಗೆ ಒತ್ತು ನೀಡಿದ್ದ ಶಿಕ್ಷಕರನ್ನು 1974 ರಲ್ಲಿಯೂ ಟೀಕಿಸಲಾಯಿತು. ಇನ್ನೊಂದೆಡೆ ವಿಶ್ವವಿದ್ಯಾನಿಲಯಗಳಿಗೆ ಪ್ರವೇಶಕ್ಕೆ ಪ್ರವೇಶ ಪರೀಕ್ಷೆಯನ್ನು ನಿಗಧಿ ಪಡಿಸಲಾಗಿತ್ತು. ಶಿಕ್ಷಣ ಅವಧಿಯ ಸಾಧನೆಯ ಮೇಲೆ ಪದವಿಯನ್ನು ನಿರ್ಧರಿಸಲಾಗುತ್ತಿತ್ತು. ಪದವೀಧರರು ಗ್ರಾಮಾಂತರ ಸಮುದಾಯಗಳಲ್ಲಿ ಕಡ್ಡಾಯವಾಗಿ ಕಾರ್ಯ ನಿರ್ವಹಿಸಬೇಕೆಂದು ನೀತಿಯನ್ನು ಮರೆತಂತೆ ಕಾಣುತ್ತಿದ್ದಿತು. ಆರ್ಥಿಕ ಯೋಜನೆಯ ಪುನಶ್ಚೇತನ, ಸುಧಾರಿಸಿದ ಪಕ್ಷ ಮತ್ತು ಸರ್ಕಾರ ಅಧಿಕಾರಿಗಳ ಪುನರ್ವಸತಿ ಮತ್ತು ಮರುನೇಮಕ ಮತ್ತು

ನಾಗರೀಕ ವ್ಯವಹಾರಗಳಲ್ಲಿ ಕೆಂಪು ಸೇನೆಯ ನಿರ್ದೇಶನವನ್ನು ಕಡಿಮೆ ಮಾಡುವ ತೀರ್ಮಾನದಲ್ಲಿಯೂ ಸಾಂಸ್ಕೃತಿಕ ಕ್ರಾಂತಿಯ ಇತರ ಹಿನ್ನಡೆಗಳಲ್ಲಿ ಕಾಣಬಹುದಾಗಿತ್ತು.

ನಿರಾಯಾಸ ಕೆಲಸಗಾರ ಪ್ರತಿಭಾವಂತ ಆಡಳಿತಗಾರ ಮತ್ತು ಹೊಸ ಎರಡನೇ ನಾಯಕನಾದ ಚೌ ಎನ್ ಲಾಯ್‌ನು ಚೀನಾವನ್ನು ಈ ಹೊಸ ನೀತಿಗಳ ಕಡೆಗೆ ಮುನ್ನಡೆಸಿದ ಗೌರವಕ್ಕೆ ಪಾತ್ರನಾಗಿದ್ದಾನೆ. 1974 ರಲ್ಲಿ ಲಿನ್ ಪಿಯೊವೋ ಮಂಗೋಲಿಯಾದಲ್ಲಿ ನಡೆದ ವಿಮಾನ ಅಪಘಾತದಲ್ಲಿ ಮರಣ ಹೊಂದಿದನು. ಅವನ ನೆನಪನ್ನು ಬಹಿರಂಗವಾಗಿ ಅವಹೇಳನ ಮಾಡಲಾಯಿತು. ಈ ಆಪಾದನೆಗಳು ಒಮ್ಮೆ ಒಂದುಗೂಡಿದ್ದ ಚೀನಾದ ನಾಯಕತ್ವರು ಅನುಭವಿಸಿದ ಗಾಯದಿಂದ ಅದು ವಾಸಿಯಾಗಿರಲಿಲ್ಲವೆಂಬುದನ್ನು ಸೂಚಿಸುತ್ತದೆ. ಆದಾಗ್ಯೂ ಸಾಂಸ್ಕೃತಿಕ ಕ್ರಾಂತಿಯ ಕಾಲದಲ್ಲಿ ಸವಾಲನ್ನು ಎದುರಿಸಿದ ಕೇಂದ್ರ ಸರ್ಕಾರದ ಅಧಿಕಾರವನ್ನು ಪುನಃ ಸ್ಥಾಪಿಸಲಾಯಿತು. ಪೀಕಿಂಗ್ ಮತ್ತೊಮ್ಮೆ ಮೂಲಭೂತ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಯನ್ನು ನಿರ್ದೇಶಿಸತೊಡಗಿತು. ಮಿಗಿಲಾಗಿ ಮಾವೋನ ಪ್ರಮುಖ ಉಪಾಧ್ಯಕ್ಷನಾಗಿ ಚೌ ಎನ್ ಲಾಯ್‌ಯ ಸ್ಥಾನವು (1972-1974) ಅಮೆರಿಕಾ ಮತ್ತು ಪಾಶ್ಚಿಮಾತ್ಯ ರಾಷ್ಟ್ರಗಳೊಂದಿಗೆ ಚೀನಾದ ಅಧಿಕೃತ ಸಂಪರ್ಕಗಳನ್ನು ವಿಸ್ತರಿಸಿದ ವಿದೇಶಾಂಗ ನೀತಿಯನ್ನು ನಿರ್ದೇಶಿಸಲು ಅವನಿಗೆ ಸಾಧ್ಯವಾಗುವಂತೆ ಮಾಡಿತು.

## 145.10 ಸಮಕಾಲೀನ ಚೀನ

1970 ರ ಪ್ರಾರಂಭದಲ್ಲಿ ಕಮ್ಯುನಿಸ್ಟ್ ಚೀನಾ ಹಳೆಯ ಕನ್‌ಫ್ಯೂಷಿಯಸ್‌ನ ಚೀನ ಮತ್ತು ಚಿಯಾಂಗ್ ಕೈ ಷೆಕ್‌ನ ಚೀನಾಗಳೆರಡಕ್ಕೂ ಸಂಪೂರ್ಣವಾಗಿ ವಿರುದ್ಧವಾಗಿದ್ದಿತು. ಕಮ್ಯುನಿಸ್ಟರು ಪೀಕಿಂಗ್‌ನಿಂದ ಮೂಲೆಯ ಹಳ್ಳಿಯವರೆಗೂ ಹರಡಿದ ಒಂದು ಹೊಸ ಏಕದಳ ಸಮಾಜವನ್ನು ಸ್ಥಾಪಿಸಿದರು. ಆರ್ಥಿಕ ವ್ಯವಸ್ಥೆಯನ್ನು ರಾಷ್ಟ್ರೀಯ ಶಕ್ತಿಯ ವರ್ಧನೆಯ ಉದ್ದೇಶಕ್ಕೆ ರೂಪಿಸಿದರು. ಕಮ್ಯುನಿಸ್ಟ್ ಸಿದ್ಧಾಂತದಿಂದ ಪ್ರಭಾವಿತವಾದ ಸಾಮಾಜಿಕ ವ್ಯವಸ್ಥೆಯನ್ನು ಸ್ಥಾಪಿಸಿದರು. ಚೀನ ವಿಶ್ವದ ಪ್ರಬಲ ರಾಷ್ಟ್ರವಾಯಿತು. ವಿವಿಧ ಹಳೆಯ ಮತ್ತು ಹೊಸ ಪೌರ್ವಾತ್ಯ ಮತ್ತು ಪಾಶ್ಚಿಮಾತ್ಯ ಮೂಲಗಳಿಂದ ಉತ್ತೇಜನ ಪಡೆದು ಏಳಿಗೆಗೆ ಬರುತ್ತಿದ್ದ ಚೀನಾ ವಿಶಿಷ್ಟ ದೇಶವಾಗಿ ರೂಪ ಪಡೆಯುತ್ತಿದ್ದಂತೆ ಕಂಡು ಬಂದಿತು.

ಏನೇ ಇದ್ದರೂ ಮಾವೋನ ನಾಯಕತ್ವದ ಚೀನಾ, ಚೀನಾದ ಕ್ರಾಂತಿಯ ಇತ್ತೀಚಿನ ಹಂತವಾಗಿದ್ದು ಅದು ನೂರು ವರ್ಷಗಳ ಹಿಂದೆಯೇ ಆರಂಭವಾಗಿತ್ತು. ಅದ್ಭುತವಾಗಿದ್ದಂತೆಯೇ ವಾಸ್ತವವೆಂದರೆ ಈ ಕ್ರಾಂತಿಯ ಬಹುತೇಕ ಕಾಲದಲ್ಲಿ ಪಾಶ್ಚಿಮಾತ್ಯ ಪ್ರಜಾಪ್ರಭುತ್ವ ರಾಷ್ಟ್ರಗಳು ಅದನ್ನು ಕಡೆಗಣಿಸಿದ್ದವು. ಅಂತಿಮವಾಗಿ ಹೊಸ ಚೀನ ಮುಕ್ತ ಮತ್ತು ಪ್ರಜಾಸತ್ತಾತ್ಮಕ ಸಮಾಜವೆಂಬ ಅತ್ಯಂತ ಪ್ರಶ್ನಾರ್ಹ ಕಲ್ಪನೆಯ ಮೇಲೆಯೇ ಪಾಶ್ಚಿಮಾತ್ಯ ರಾಷ್ಟ್ರಗಳು ಹೊಸ ಕ್ರಾಂತಿಕಾರಿ ಚೀನಾಕ್ಕೆ ಮಾನ್ಯತೆ ನೀಡಿದ್ದವು. ಆದ್ದರಿಂದ ಚೀನ ಸಂಪೂರ್ಣವಾಗಿ ಏಕದಳ ಸಿದ್ಧಾಂತಕ್ಕೆ ತಿರುಗಿದಾಗ ಮುಖ್ಯವಾಗಿ ಅಮೆರಿಕಾದಲ್ಲಿ ಮಾವೋ ಚೀನ ಕೇವಲ ಒಂದು ತಾತ್ಕಾಲಿಕ ಹಂತವೆಂದು ಪದೇ ಪದೇ ಹೇಳಲಾಯಿತು. ಆದರೆ ಬಹುತೇಕ ಚೀನಿಯರು ತಮ್ಮ ಪ್ರಜಾಸತ್ತಾತ್ಮಕ ಸ್ವಾತಂತ್ರ್ಯದ ಬಗ್ಗೆ ಯಾವ ಆಸಕ್ತಿಯನ್ನು ಹೊಂದಿರಲಿಲ್ಲ.

ಅಂತಿಮವಾಗಿ, ಕಮ್ಯುನಿಸ್ಟರು ಚೀನಾ ಮತ್ತು ಅದರ ಒಡೆಯರ ಬಂಧಿಗಳಾಗಿದ್ದರು. ಕಮ್ಯುನಿಸ್ಟ್ ಆಡಳಿತವು ಅನೇಕ ಭರವಸೆಗಳನ್ನು ನೀಡಿತು. ಅವುಗಳಲ್ಲಿ ಕೆಲವು ಖಂಡಿತವಾಗಿಯೂ ಈಡೇರಿದವು. ಆದರೆ ಭರವಸೆ ನೀಡಿದ್ದಂತೆ ಚೀನ ಉಟೋಪಿಯವಾಗಲಿಲ್ಲ. ಇನ್ನೂ ಶಿಕ್ಷಣವಿಲ್ಲದ ಬಹುಸಂಖ್ಯಾತ ಚೀನಿಯರ ಜೀವನದ ಮೂಲಭೂತ ಅಂಶಗಳನ್ನು ಸಂಕೀರ್ಣ ಕೈಗಾರಿಕಾ ಸಮಾಜ ಹೊಸಕಿ ಹಾಕಲಿಲ್ಲ. ಬೃಹತ್ ಮುನ್ನಡೆ ಜಿಗಿತದ ಬಗ್ಗೆ ಕಮ್ಯುನಿಸ್ಟರ ಕಣ್ಣಿಗೆ ಕಟ್ಟುವ ತಪ್ಪು ಲೆಕ್ಕಾಚಾರಗಳು ಖಂಡಿತವಾಗಿಯೂ ಸಮಸ್ಯೆಯನ್ನು ಹೆಚ್ಚಿಸಿದವು. ಕಡೆಯದಾಗಿ, ಲಭ್ಯವಿರುವ ಸಂಪನ್ಮೂಲಗಳ ಮೇಲೆ ಜನಸಂಖ್ಯೆಯ ಒತ್ತಡ ಅತ್ಯಂತ ಪ್ರಮುಖವಾದ ನಿಯಂತ್ರಣದ ಅಂಶವಾಗಿದೆ. ಅತ್ಯಂತ ತ್ವರಿತವಾದ ಜನಸಂಖ್ಯೆಯ ಹೆಚ್ಚಳ ಆಹಾರದ ಕೊರತೆಯನ್ನು ಸೃಷ್ಟಿಸಿತು. ವ್ಯಾಪಕ ಅಶಾಂತಿಯನ್ನು ಹುಟ್ಟುಹಾಕಿತು ಮತ್ತು ಎಲ್ಲಾ ನಿರೀಕ್ಷೆಗಳನ್ನು ಮೀರಿ ಕೈಗಾರಿಕೀಕರಣವನ್ನು ನಿಧಾನಗೊಳಿಸಿತು. ಹಿಂದೆ ಇದ್ದಂತೆಯೇ ಉತ್ಪಾದನೆ ಚೀನಾದ ರಾಷ್ಟ್ರೀಯ ಶಕ್ತಿಯ ಮುಂದಿನ ಬೆಳವಣಿಗೆಗಳಿಗೆ ಯಥೋಚಿತವೆಂದು ಸಮರ್ಥಿಸಬಹುದು. ಆದರೆ ತನ್ನ ಮಿಲಿಯಾಂತರ ಜನರ ಉತ್ತಮ ಜೀವನದ ಭರವಸೆಗೆ ಜೀವ ನೀಡಲು ಸಾಲದಾಗಿದೆ.

## 145.11 ಮುಕ್ತಾಯ

1. ನಿರಂತರ ಆಂತರಿಕ ಕಲಹಗಳ ನಂತರ ಕಮ್ಯುನಿಸ್ಟರು 1949 ರಲ್ಲಿ ಚೀನಾದ ಆಡಳಿತವನ್ನು ವಹಿಸಿಕೊಂಡರು. ಅಂದಿನಿಂದಲೂ ತಮ್ಮ ರಾಜಕೀಯ ಲಾಭಗಳ ಕ್ರೋಢೀಕರಣಕ್ಕೆ ದೃಢ ಪ್ರಯತ್ನಗಳನ್ನು ಮಾಡಲಾಯಿತು.

2. ರಾಜಕೀಯ ಸ್ಥಿರತೆಯ ಸಾಧನೆಗೆ, 1949 ರಲ್ಲಿ ಸ್ಥಾಪಿಸಲಾದ ಒಂದು ಬಗೆಯ ಸಮ್ಮಿಶ್ರ ಸರ್ಕಾರವನ್ನು ಕಮ್ಯುನಿಸ್ಟರ ಸಂಪೂರ್ಣ ಹತೋಟಿಯಲ್ಲಿ 1954 ರಲ್ಲಿ ಅಧಿಕೃತಗೊಳಿಸಲಾಯಿತು. ವಿರೋಧವನ್ನು ತೊಡೆದು ಹಾಕಲು ಮತ್ತು ಜನಪ್ರಿಯ ಬೆಂಬಲವನ್ನು ಪಡೆಯಲು ಸಾಮೂಹಿಕ ಸಂಘಟನೆಯನ್ನು ಕೈಗೊಳ್ಳಲಾಯಿತು.

3. ಪ್ರಚಾರ ಮತ್ತು ಮನವೊಲಿಕೆಯ ಮೂಲಕ ಚೀನಾದ ಬುದ್ದಿಜೀವಿಗಳೂ ಸೇರಿದಂತೆ ಸಿದ್ಧಾಂತ ನಿಷ್ಠೆಯ ಬದಲಾವಣೆಯ ಮೂಲಕ ಇಡೀ ಜನಸಮುದಾಯವನ್ನು ತಿದ್ದಲು ಪ್ರಯತ್ನಗಳನ್ನು ಮಾಡಲಾಯಿತು.

4. ಆರ್ಥಿಕ ವಲಯದಲ್ಲಿ ಪುರಾತನವಾದ ಕೃಷಿ ಆಧಾರಿತ ಆರ್ಥಿಕ ವ್ಯವಸ್ಥೆಯನ್ನು ಬದಲಾಯಿಸುವ ತೀವ್ರ ಪ್ರಯತ್ನ ನಡೆಯಿತು. ಸೋವಿಯತ್ ಒಕ್ಕೂಟದ ನೆರವಿನಿಂದ ತ್ವರಿತವಾದ ಆಧುನೀಕರಣದ ಮತ್ತು ಕೈಗಾರಿಕೀಕರಣದ ಪ್ರಯತ್ನಗಳನ್ನು ಮಾಡಲಾಯಿತು.

5. ಕೃಷಿ ವಲಯದಲ್ಲಿ ಪರಂಪರಾನುಗತ ತೊಂದರೆಗಳನ್ನು ತೊಡೆದುಹಾಕಲು ಚೀನಾದ ಕಾರ್ಮಿಕರನ್ನು (ಶ್ರಮ) ತೀವ್ರವಾಗಿ ಬಳಸಿಕೊಂಡಿತು. ಆದ್ದರಿಂದಲೇ 1957 ರಲ್ಲಿ ಬೃಹತ್ ಮುನ್ನಡೆ ಜಿಗಿತದ ಚಳುವಳಿ ನಡೆಯಿತು. ಇದರಲ್ಲಿ ಸ್ಥಳೀಯ ಕಮ್ಯೂನ್‌ಗಳು ಶ್ಲಾಘನೀಯ ಪಾತ್ರ ವಹಿಸಿದವು.

6. ಚೀನಾವನ್ನು ಬದಲಾಯಿಸಲು ಕೈಗೊಂಡ ವಿಧಾನಗಳು ಚೀನಾದ ಉನ್ನತ ನಾಯಕರಲ್ಲಿ ಸೈದ್ಧಾಂತಿಕ ಭಿನ್ನಾಭಿಪ್ರಾಯಗಳು ಮತ್ತು ಆಂತರಿಕ ಭಿನ್ನ ಮತಕ್ಕೆ ಕಾರಣವಾದವು.

7. ಇದಕ್ಕೆ ಪ್ರತಿಯಾಗಿ ಮಾವೋ ಮಹಾ ಸಾಂಸ್ಕೃತಿಕ ಕ್ರಾಂತಿಗೆ ಚಾಲನೆ ನೀಡಿದರು. ಅದು ಉತ್ಪಾದನೆ ಮತ್ತು ಮಾನವ ಸಂಪನ್ಮೂಲಗಳ ಭಾರೀ ನಷ್ಟಕ್ಕೆ ಕಾರಣವಾಯಿತು. ಇದೆಲ್ಲದರ ಹೊರತಾಗಿಯೂ, 1970 ರ ಸುಮಾರಿನಲ್ಲಿ ಕೆಂಪು ಚೀನ ವಿಶಿಷ್ಟ ದೇಶವಾಗಿ ಖಚಿತ ರೂಪ ಪಡೆಯುತ್ತಿರುವಂತೆ ಕಂಡು ಬಂದಿತು.

## 145.12 ಮಾದರಿ ಪ್ರಶ್ನೆಗಳು

1. 1949 ರ ನಂತರ ಕಮ್ಯುನಿಸ್ಟ್ ಚೀನಾದಲ್ಲಿ ನಡೆದ ಆಂತರಿಕ ಬೆಳವಣಿಗೆಗಳನ್ನು ದೀರ್ಘವಾಗಿ ವಿವರಿಸಿ.

2. ಚೀನಾದಲ್ಲಿ ಕಮ್ಯುನಿಸ್ಟ್ ಅಧಿಕಾರವನ್ನು ಕ್ರೋಢಾಕರಿಸುವಲ್ಲಿ ಮಾವೋ ಮತ್ತು ಅವನ ಬೆಂಬಲಿಗರ ಪ್ರಯತ್ನಗಳನ್ನು ಪರಿಶೀಲಿಸಿ.

3. 1949 ರಿಂದ ಚೀನಾದ ಭವಿಷ್ಯವನ್ನು ರೂಪಿಸುವಲ್ಲಿ ಕಮ್ಯುನಿಸ್ಟ್ ಪಕ್ಷದ ಪಾತ್ರವನ್ನು ವಿವರಿಸಿ.

4. ಮಹಾ ಮುನ್ನಡೆ ಜಿಗಿತ ಚಳುವಳಿಯ ಅನುಷ್ಠಾನಕ್ಕೆ ಕಾರಣವಾದ ಸನ್ನಿವೇಶಗಳನ್ನು ವಿವರಿಸಿ.

5. ಮಾವೋನ ಮಹಾ ಸಾಂಸ್ಕೃತಿಕ ಕ್ರಾಂತಿ ಕೇವಲ ತಿದ್ದುಪಡಿ ಚಳುವಳಿಯಾಗಿರಲಿಲ್ಲ. ಅದು ಅವನ ಪರಮಾಧಿಕಾರವನ್ನು ಕ್ರೋಢೀಕರಿಸುವುದೂ ಆಗಿತ್ತು, ಚರ್ಚಿಸಿ.

## 145.13 ಹೆಚ್ಚಿನ ಅಧ್ಯಯನಕ್ಕೆ ಗ್ರಂಥಗಳು


1. Joseph .B.R. Whitney : China, Area Administraion and Nation, Buidling (1970)
2. R.H. Solomon : Mao's Revolution and the Chinese political culture (1971)
3. Peter .S.H. Tang : China Today: Domestic and Foreign Policies (1961)
4. S.B. Griffith : The Chinese People's Liberation Army (1967)
5. Theodre Shabad : China's changing Map: A political and Economic Geography of the chinese people's Republic (1996)
6. O.L. Dowson : Communist China's Agriculture (1970)
7. Franklin Houn : To change a Nation: Propaganda and Indoctination in Communist, China (1961)
8. Franz Schurman : Ideology and Organisation in Communist china (1966)
9. Stuart Schram : The Political thought of Mao Tse Tung (1969)

# ಟಿಪ್ಪಣಿಗಳು

# ಘಟಕ - 146

# ಕಮ್ಯುನಿಸ್ಟ್ ಚೀನಾದ ವಿದೇಶಿ ಸಂಬಂಧಗಳು


146.0 ಉದ್ದೇಶಗಳು

146.1 ಪೀಠಿಕೆ

146.2 ಚೀನಾ-ಸೋವಿಯತ್ ಸಂಬಂಧಗಳು,1962ರ ತನಕ

- 146.2.1 ಮಧುಚಂದ್ರದ ಕಾಲ
- 146.2.2 ಚೀನಾ-ಸೋವಿಯತ್ ಭಿನ್ನಾಭಿಪ್ರಾಯಗಳು
- 146.2.3 ಪೂರ್ವ ಯೂರೋಪಿನಲ್ಲಿ ಚೀನಿಯರ ಒಳನುಗ್ಗುವಿಕೆ
- 146.2.4 1957ರ ಸಮ್ಮೇಳನ
- 146.2.5 ತೈವಾನ್ ಬಿಕ್ಕಟ್ಟು
- 146.2.6 ಶೃಂಗಸಭೆ
- 146.2.7 ಟಿಬೆಟ್ಟಿನ ಪ್ರಶ್ನೆ
- 146.2.8 ಅಂತರದ ವಿಸ್ತರಣೆ
- 146.2.9 ತಾತ್ಕಾಲಿಕ ಶಾಂತಿ
- 146.2.10 ಆಲ್ಬೇನಿಯಾ ಸಮಸ್ಯೆಗಳು

146.3 ಚೀನಾ-ಸೋವಿಯತ್ ಸಂಬಂಧಗಳು, 1962 ರಿಂದ

- 146.3.1 ಕ್ಯೂಬಾ ಬಿಕ್ಕಟ್ಟು
- 146.3.2 (ಆರೋಪ) ಆಪಾಧನೆ ಮತ್ತು ಪ್ರತ್ಯಾರೋಪ ಪ್ರತಿ ಆಪಾಧನೆ
- 146.3.3 ರಷ್ಯ ವಿರೋದಿ ಪ್ರಚಾರ
- 146.3.4 ತೃತೀಯ ಜಗತ್ತಿನ ಬಗ್ಗೆ ಭಿನ್ನಾಭಿಪ್ರಾಯಗಳು
- 146.3.5 ಚೀನಾ-ಸೋವಿಯತ್ ಘರ್ಷಣೆಗಳು
- 146.3.6 ಚೀನಾ-ಅಮೇರಿಕ ಸಂಬಂಧ ಸುಧಾರಣೆ

146.4 ಚೀನಾ ಮತ್ತು ಪಶ್ಚಿಮ ಜಗತ್ತು

146.5 ಚೀನಾ ಮತ್ತು ಅಮೇರಿಕ ಸಂಬಂಧಗಳು

- 146.5.1 ಅಮೇರಿಕ ವಿರೋಧಿ ಸಿಧಂತ
- 146.5.2 ಕೊರಿಯಾ ಯುದ್ಧ
- 146.5.3 ತಡೆಹಿಡಿಯುವ ನೀತಿ
- 146.5.4 ಇಂಡೋ-ಚೀನಾ ಸಮಸ್ಯೆ
- 146.5.5 ಚೀನಾ-ಅಮೇರಿಕ ಸಂಬಂಧ ಸುಧಾರಣೆ

146.6 ಚೀನಾ ಮತ್ತು ತೃತೀಯ ಪ್ರಪಂಚ

146.7 ಚೀನಾ ಮತ್ತು ವಿಶ್ವಸಂಸ್ಥೆ

146.8 ಮುಕ್ತಾಯ

146.9 ಮಾದರಿ ಪ್ರಶ್ನೆಗಳು

146.10 ಹೆಚ್ಚಿನ ಅಧ್ಯಯನಕ್ಕೆ ಗ್ರಂಥಗಳು

## 146.0 ಉದ್ದೇಶಗಳು

ಈ ಘಟಕದ ಅಧ್ಯಯನದಿಂದ ನೀವು ಇವುಗಳ ಬಗ್ಗೆ ತಿಳಿದುಕೊಳ್ಳಬಹುದು.

1. 1962 ರವರೆಗೆ ಚೀನಾ ಸೋವಿಯತ್ ಸಂಬಂಧಗಳಲ್ಲಿ ಅಡಗಿದ್ದ ಬಹುಮುಖ ಸಮಸ್ಯೆಗಳು
2. 1962 ರಿಂದ ಅವುಗಳ ಸಂಬಂಧಗಳಲ್ಲಿ ಆಳಗೂಂಡ (ಹೆಚ್ಚಿದ) ಬಿಕ್ಕಟ್ಟು
3. ಸಂಬಂಧ ಸುಧಾರಣೆಗೆ ಕಾರಣವಾದ ಅಮೆರಿಕಾದ ಬಗ್ಗೆ ಚೀನಾದ ನೀತಿ.
4. ತೃತೀಯ ಪ್ರಪಂಚದ ದೇಶಗಳ ಬಗ್ಗೆ ಚೀನಾದ ಧೋರಣೆ
5. ವಿಶ್ವಸಂಸ್ಥೆಗೆ ಚೀನಾ ಪ್ರವೇಶ

## 146.1 ಪೀಠಿಕೆ

1, ಅಕ್ಟೋಬರ್, 1949ರಂದು ಕಮ್ಯುನಿಸ್ಟರು ಅಧಿಕೃತವಾಗಿ ಚೀನಾದ ಸರ್ಕಾರದ ಅಧಿಕಾರವನ್ನು ವಹಿಸಿಕೊಂಡರು. ಚೀನಾದಲ್ಲಿ ಕಮ್ಯುನಿಸ್ಟ್ ಸಿದ್ಧಾಂತದ ವಿಜಯವು ಮೊದಲು ಶೂನ್ಯತೆಯಿಂದ ಕೂಡಿದ್ದ ಪಿತೂರಿ ಮತ್ತು ಸಾಹಸಗಳನ್ನು ಆಹ್ವಾನಿಸುತ್ತಿದ್ದ ಚೀನಾಕ್ಕೆ ಒಂದು ಹೊಸ ಶಕ್ತಿಯನ್ನು ತುಂಬಿತು. ಅದರ ಉಪಸ್ಥಿತಿ, ಆಸಕ್ತಿಗಳು ಮತ್ತು ಹೆಬ್ಬಯಕೆಗಳು ಇಡೀ ಪ್ರಪಂಚದ ಮೇಲೆಲ್ಲದಿದ್ದರೂ, ಇಡೀ ಏಷ್ಯಾದ ಮೇಲೆ ಪ್ರಭಾವ ಬೀರಿದವು. ಜೌನ್ ಹೇ ಎಂಬುವವನು ವಶ್ವದ ಶಾಂತಿ ಚೀನಾದ ಮೇಲೆ ನಿಂತಿದೆ ಮತ್ತು ಯಾರು ಚೀನಾವನ್ನು ಅರ್ಥ ಮಾಡಕೂಳ್ಳುವರೋ ಅವರು ಮುಂಬರುವ ಐದು ವರ್ಷಗಳ ವಿಶ್ವ ರಾಜಕೀಯಕ್ಕೆ ಕೀಲಿಕೈಯನ್ನು ಹೂಂದುವರು ಎಂದು ಹೇಳಿದ್ದಾನೆ.

## 146.2 ಚೀನಾ-ಸೋವಿಯತ್ ಸಂಬಂಧಗಳು

### *146.2.1 ಮಧುಚಂದ್ರ ಕಾಲ*

ಕಮ್ಯುನಿಸ್ಟ್ ಸರ್ಕಾರಗಳ ಮನ್ನಣೆಯನ್ನು ಬೇಡಿತು. ಸೋವಿಯತ್ ರಷ್ಯ ಅಕ್ಟೋಬರ್,2ರಂದು ಹೊಸ ಸರ್ಕಾರವನ್ನು ಮಾನ್ಯಮಾಡಿದ ಮೊದಲ ದೇಶವಾಗಿತ್ತು. ಸೋವಿಯತ್ ರಷ್ಯ ಮತ್ತು ಕಮ್ಯುನಿಸ್ಟ್ ಚೀನಾಗಳು ತಮ್ಮ ಹಳೆಯ ಒಪಂದಗಳನ್ನು ರದ್ದುಪಡಿಸಿ ಮೂವತ್ತು ವರ್ಷಗಳ ಚೀನಾ-ಸೋವಿಯತ್ ಸ್ನೇಹ ಒಪ್ಪಂದ ಮತ್ತು ಪರಸ್ಪರ ಸಹಕಾರಕ್ಕೆ ಫೆಬ್ರವರಿ,1950ರಲ್ಲಿ ಸಹಿಹಾಕಿದವು. ಒಪ್ಪಂದ ಚೀನಾಕ್ಕೆ ಅನುಕೂಲಕರವಾಗಿತ್ತು. ರಷ್ಯ, ಜನತಾ ಗಣರಾಜ್ಯಕ್ಕೆ ಉಧಾರವಾದ ನೆರವನ್ನು ನೀಡಿತು ಮತ್ತು ಚೀನಾದಲ್ಲಿದ್ದ ತನ್ನ ಎಲ್ಲಾ ರೈಲ್ವೇ ಹಕ್ಕುಗಳನ್ನು ಬಿಟ್ಟುಕೊಟ್ಟಿತು, ತನ್ನ ಪಡೆಗಳನ್ನು ವಾಪಸ್ ಕರೆಸಿಕೊಂಡಿತು ಮತ್ತು ಪೋರ್ಟ್ ಆರ್ಥರ್ ಹಾಗೂ ಡೈರೆನ್‌ಗಳನ್ನು ಚೀನೀಯರಿಗೆ ಹಂದಿರುಗಿಸಿತು. ವಾಸ್ತವವಾಗಿ , ರಷ್ಯದ ನೆರವು ಪ್ರಾರಂಭದ ವರ್ಷಗಳಲ್ಲಿ ಚೀನಾದ ಬಿಕ್ಕಟ್ಟುಗಳನ್ನು ನಿವಾರಿಸಲು ಸಹಾಯವಾಯಿತು. ವಿಶ್ವಸಂಸ್ಥೆಯಲ್ಲಿ, ಕೊರಿಯಾ ಯದ್ಧದಲ್ಲಿ , ಸೈನ್ಯದ ಆಧುನೀಕರಣ ಮತ್ತು ಚೀನಾದಲ್ಲಿ ಬಲಿಷ್ಟವಾದ ಕೈಗಾರಿಕಾ ಸಂಕೀರ್ಣವನ್ನು ಅಭಿ ವೃದ್ಧಿ ಪಡಿಸುವಲ್ಲಿ ರಷ್ಯ ಶಕ್ತಿಮೀರಿ ಬೆಂಬಲ ನೀಡಿತು. ತಮ್ಮ ಸಂಬಂಧಗಳಲ್ಲಿ ಸ್ವಲ್ಪಮಟ್ಟಿಗೆ ಹದಗೆಟ್ಟದ್ದರೂ 1954-55ರ ಅವಧಿಯಲ್ಲಿ ರಷ್ಯ ಚೀನಕ್ಕೆ ತನ್ನ ನೆರವನ್ನು ತೀವ್ರವಾಗಿ ಹೆಚ್ಚಿಸಿತು. ನಿಜವಾಗಿಯೂ 1950-55ರ ಕಾಲವನ್ನು ಚೀನಾ-ಸೋವಿಯತ್ ಸಂಬಂಧದ ಮಧುಚಂದ್ರದ ಕಾಲವೆಂದು ಕರೆಯಬಹುದಾಗಿದೆ.

### *146.2.2 ಚೀನಾ-ಸೋವಿಯತ್ ಭಿನ್ನಾಭಿಪ್ರಾಯಗಳು-ಕಾರಣಗಳು*

ಆದರೆ ಸ್ವಪ್ಪ ಕಾಲದಲ್ಲಿಯೇ ರಷ್ಯ ಮತ್ತು ಚೀನಾಗಳ ನಡುವೆ ಭಿನ್ನಾಭಿಪ್ರಾಯಗಳು ಬೆಳೆದವು. ಭಿನ್ನಾಭಿಪ್ರಾಯಗಳ ಅಂತರ ದಿನೇ ದಿನ ಹೆಚ್ಚುತ್ತಾ ಹೋಗಿ ಹಗೆತನದ ಹಂತವನ್ನು ಮುಟ್ಟಿತು. ಎಂ.ಎನ್.ರಾಯ್ ತಮ್ಮ ಗ್ರಂಥವಾದ 'our Differences' ನಲ್ಲಿ ವಿರೋಧಗಳು ಮತ್ತು ಭ ನ್ನಾಭಪ್ರಾಯಗಳು ಕಮ್ಯುನಿಸ್ಟ್ ಪ್ರಪಂಚದ ಐಕ್ಯತೆಗೆ ಬೆದರಿಕೆ ಒಡ್ಡಬಹುದು ಎಂಬುದಾಗಿ ಅಭಪ್ರಾಯಪಟ್ಟಿದ್ದಾರೆ. "50ರ ದಶಕದ ಪ್ರಾರಂಭದಲ್ಲಿ ರಷ್ಯವನ್ನು ಸುತ್ತಿಸಿ ಚೀನಾದಲ್ಲಿ ಹಾಡಿದ ಹಾಡು 1959ರ ಕಡೆಯ ವೇಳಗೆ

ತೆಳುವಾದ ಗಾಳಿಯಲ್ಲಿ ಆವಿಯಾಯಿತು. ಚೀನಾ-ಸೋವಿಯತ್ ಭಿನ್ನಾಭಿಪ್ರಾಯಕ್ಕೆ ಅನೇಕ ಕಾರಣಗಳಿದ್ದವು. ಬಹಳ; ಚೀನಾದ ಶಕ್ತಿಯ ತ್ವರಿತವಾದ ಬೆಳವಣಿಗೆಯಿಂದ ಜಾಗ್ರತವಾದ ರಷ್ಯ ತನ್ನ ಕಮ್ಯುನಿಸ್ಟ್ ಪ್ರಪಂಚದ ನಾಯಕತ್ವದ ಬೆಳವಣಿಗೆಯಿಂದ ಜಾಗೃತವಾದ ರಷ್ಯ ತನ್ನ ಕಮ್ಯುನಿಸ್ಟ್ ಪ್ರಪಂಚದ ನಾಯಕತ್ವದ ಮತ್ತು ಸೋವಿಯತ್ ಶಕ್ತಿಗೆ ಶಾಶ್ವತ ಬೆದರಿಕೆಯುಂಟಾಗಬಹುದೆಂದು ಭಾವಿಸಿತು.

1953ರಲ್ಲಿ ಸ್ಟಾಲಿನ್ ಮರಣ ಹೊಂದಿದಾಗ, ಮಲೆನ್ಕೋವ್ ಮತ್ತು ಕ್ರುಶ್ಚೇವ್ ನಡುವೆ ಉತ್ತರಾಧಿಕಾರಕ್ಕಾಗಿ ಹೋರಾಟ ಆರಂಭವಾಯಿತು ಮಲಂಎಕೋವ್ ಪಶ್ಚಿಮದೊಂದಿಗೆ ಯುದ್ಧದ ಕಲ್ಪನೆಯನ್ನು ವಿರೋದಸಿದನು ಕ್ರುಶ್ಚೇವ್ ಚೀನಾದ ಹಿತಾಶಕ್ತಿಗಳಿಗೆ ಸೂಕ್ತವಾಗಿದ್ದ ಪಶ್ಚಿಮದೊಂದಿಗೆ ಕಠಿಣವಾದ ದೋರಣೆಯನ್ನು ಪ್ರತಿಪಾದಿಸಿದನು. ಸ್ಟಾಲಿನ್ನನ ಮರಣದ ನಂತರ ಕಮ್ಯುನಿಸ್ಟ್ ಪ್ರಪಂಚದ ನಾಯಕತ್ವ ಜೇಷ್ಠತೆಯ ಆಧಾರದ ಮೇಲೆ ಮಾವೋನ ಹೆಗಲ ಮೇಲೆ ಬಿದ್ದಿತು. ಆದರೆ ಅವನ ನಿರಾಶೆಗೆ ಕೃಶ್ಚೇವ್ ಕಮ್ಯುನಿಸ್ಟ್‌ಗುಂಪಿನ ನಾಯಕನಾಗಿ ಹೊರಬಂದನು. ಅನೇಕ ಆಂತರಿಕ ಮತ್ತು ವಿದೇಶಿ ಸಮಸ್ಯೆಗಳಲ್ಲಿ ಮುಳುಗಿ ಹೋಗಿದ್ದರಿಂದ ಮತ್ತು ಅವುಗಳನ್ನು ಬಗೆಹರಿಸಲು ಕ್ರುಶ್ಚೇನ್ ಬೆಂಬಲವನ್ನು ಪಡೆದಿದ್ದರಿಂದ ಮಾವೋ ಆಗಲೇ ಅದನ್ನು ವಿರೋದಿಸಿಲ್ಲ. ಸೋವಿಯತ್ ಒಕ್ಕೂಟದ ಕಮ್ಯುನಿಸ್ಟ್ ಪಕ್ಷದ 20ನೇ ಅಧಿವೇಶನದಲ್ಲಿ (ಫೆಬ್ರವರಿ,1956) ಕೃಶ್ಚೇವ್ ಸ್ಟಾಲಿನ್ನನ ಸಿದ್ಧಾಂತದ ಮೇಲೆ ಮಾಡಿದ ತೀವ್ರವಾದ ತೀವ್ರವಾದ ದಾಳಿಯು, ಸ್ಟಾಲಿನ್ನನ ಸಿದ್ಧಾಂತಗಳನ್ನು ತೊಡೆದುಹಾಕುವ ಕೆಲಸವಕ್ಕೆ ಚಾಲನೆ ನೀಡಿದುದು ಮಾವೋನ 'ನಾಯಕನ ಪೂಜೆಯ'ಕಲ್ಪನೆಗೆ ಕಾರ್ಯವನ್ನುಂಟುಮಾಡಿತು. ಒಂದೇ ಹೊಡೆತದಲ್ಲಿ ಕೃಶ್ಚೇವನು ಕಾಲು ಶತಮಾನದ ಕಾಲ ಕಮ್ಯುನಿಸ್ಟ್ ಪ್ರಪಂಚವನ್ನು ಆಳಿದ ವ್ಯಕ್ತಿಯ ಚಿತ್ರವನ್ನೇ ಸಂಪೂರ್ಣವಾಗಿ ನಾಶಪಡಿಸಿದನು. ಈ ಪ್ರಕ್ರಿಯೆಯಲ್ಲಿ ಅವನು ಮಾವೋ ಸೇರಿದಂತೆ ಸ್ಟ್ಯಾಲಿನ್ ಮಾದರಿಯ ನಾಯಕತ್ವಕ್ಕೂ ಹಾನಿಯುಂಟುಮಾಡಿದನು . ಅವನು ಉಧಾರೀಕರಣದ ಪ್ರಕ್ರಯೆಗೂ ಚಾಲನೆ ನೀಡಿದನು: 'ಶಾಂತಾಯುತ ಸಹಬಾಳ್ವೆಯನ್ನು' ಪ್ರತಿಪಾದಿಸಿದನು. ಮಾರ್ಕ್ಸನ ಮತ್ತು ಲೆನಿನ್ನನ ಯುದ್ಧ ಅನಿವಾರ್ಯತೆಯ ಸಿದ್ಧಾಂತವನ್ನು ಮೃದು ಗೊಳಿಸಿದನು, ಅಂತರ್ಯುದ್ಧವನ್ನು ಸಾಮಾಜವಾದ ಸಿದ್ಧಾಂತಕ್ಕೆ ಪರಿವರ್ತನೆಯೊಂದಿಗೆ ಸೇರಿಸುವ ಅಗತ್ಯವಿಲ್ಲವೆಂದು ಅಭಿಪ್ರಾಯ ಪಟ್ಟನು. ಇದನ್ನು ಶಾಂತಿಯುಕ್ತ ಸಂಸದೀಯ ವಿಧಾನಗಳ ಮೂಲಕವೂ ಸಾಧಿಸಬಹುದೆಂದು ಅವನು ಸಮರ್ಥಿಸಿದನು, ಮತ್ತು ಸಮಾಜವಾದ ಸಿದ್ಧಾಂತಕ್ಕೆ ಬೇರೆ ಬೇರೆ ದೇಶಗಳಲ್ಲಿ ಬೇರೆ ಬೇರೆ (ರೂಪಗಳನೆಯೊಂದು) ಮಾರ್ಗಗಳಿವೆಯೆಂದು ಸೂಚಿಸಿದನು.

### *146.2.3 ಪೂರ್ವ ಯೂರೋಪಿನಲ್ಲಿ ಚೀನಿಯರ ಒಳನುಸುಳುವಿಕೆ*

1956ರ ನಂತರ ಚೀನಿಯರು ಪೂರ್ವ ಯೂರೋಪಿನ ಕಮ್ಯುನಿಸ್ಟ್ ರಾಜಕೀಯದಲ್ಲಿ ಸಕ್ರಯ ಪಾತ್ರ ವಹಿಸಲು ಪ್ರಯನ್ನಿಸಿದರು. ಪೋಲೆಂಡಿನ ಮತ್ತು ಹಂಗೇರಿಯಾದ ದಂಗೆಗಳ ಬಗ್ಗೆ ಟಿಟೊ ತೆಗೆದುಕೊಂಡ ನಿಲಿವಿನಿಂದಾಗಿ ಈಗಾಗಲೇ ಸೋವಿಯತ್ ಒಕ್ಕೂಟ ಮತ್ತು ಯುಗೋಸ್ಲಾವಿಯಾಗಳ ನಡುವೆ ಭಿನ್ನಾಭಿಪ್ರಾಯಗಳು ತಲೆಯೆತ್ತಿದ್ದವು. ಚೌ ಎನ್ ಉಂಟ್ ಪೂರ್ವ ಯೂರೋಪಿನ ಪ್ರವಾಸವನ್ನು ಕೈಗೂಂಡು ವಾರ್ಸಾ, ಬುಡಾಫೆಸ್ಟ್ ಮತ್ತು ಮಾಸ್ಕೋಗಳಿಗೆ ಭೇಟಿ ನೀಡಿದನು. ಸಮಾಜವಾದ ರಾಷ್ಟ್ರಗಳ ನಡುವೆ ಸಮಾನತೆ ಅವನ ಭಾಷಣಗಳ ತಿರುಳಾಗಿತ್ತು, ಚೀನಾದ 'ಸಮಾನತೆಯ'ಅಂಶವನ್ನು ಬೆಂಬಲಿಸುವ ಜಂಟಿ ಹೇಳಿಕೆಯನ್ನು ರಷ್ಯ ಮತ್ತು ಚೀನಾದ ನಾಯಕರಿಬ್ಬರೂ ಹೊರಡಿಸಿದದಿದ್ದರೂ, ಅದುವರೆಗೆ ತಮ್ಮ ಎಕಸ್ವಾಮ್ಯವಾಗಿಗಿದ್ದ ಪೂರ್ವ ಯೂರೋಪಿನ ವ್ಯವಹಾರಗಳಲ್ಲಿ ಚೀನಾದ ಹಸ್ತಕ್ಷೇಪದಿಂದ ರಷ್ಯನ್ನರಿಗೆ ಸಂತೋಷವಾಗಲಿಲ್ಲ.

### *146.2.4 1957ರ ಸಮ್ಮೇಳನ*

1957 ರಲ್ಲಿ ರಷ್ಯನ್ನರು ಐಸಿಬಿಎಂ ಅನ್ನು ಅಭಿವೃದ್ಧಿ ಪಡಿಸಿದರು. ತಮ್ಮ ಮೊದಲ ಭೂಉಪಗ್ರಹವನ್ನು ಉಡಾಯಿಸುವ ಮೂಲಕ ಸಾಮ್ರಾಜ್ಯಷಾಹಿ ಬಣಕ್ಕಿಂತಲೂ ಸಮಾಜವಾದಿ ಬಣವನ್ನು ಬಲಿಷ್ಠಗೊಳಿಸಿದರು. ಅಕ್ಟೋಬರ್ ಕ್ರಾಂತಿಯ 48ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ, ಸಭೆಯಲ್ಲಿ ಖುದ್ದಾಗಿ ಭಾಗವಹಿಸಿದ ಮಾವೋ ಸೋಓವಿಯತ್ ಒಕ್ಕೂಟವನ್ನು "ಮೊದಲ ಮತ್ತು ಬಲಿಷ್ಠಶಾಲಿ ಸಮಾಜವಾದಿ ಶಕ್ತಿ"ಯೆಂದು ಶ್ಲಾಘಿಸಿದನು. ಅಣ್ವಸ್ತ್ರ ರಕ್ಷಣೆಗೆ ಹೊಸ ತಂತ್ರಜ್ಞಾನದ ಮೇಲೆ ಚೀಲಾ-ಸೋವಿಯತ್ ಒಪ್ಪಂದವೊಂದಕ್ಕೂ (ಅಕ್ಟೋಬರ್,15,1957) ಸಹಿಹಾಕಲಾಯಿತು. ಈ ಒಪ್ಪಂದದಂತೆ ರಷ್ಯನ್ನರು ತಮ್ಮ ಎಲ್ಲಾ ಅಣು ರಹಸ್ಯಗಳನ್ನು ಚೀನಾದೊಂದಿಗೆ ಹಂಚಿಕೊಳ್ಳಲು ಮತ್ತು ಚೀನಾಕ್ಕೆ ಅಣು ಸಾಮರ್ಥ್ಯಗಳನ್ನು ಒದಗಿಸಲು ಒಪ್ಪಿದರು. ಆದರೂ ಸಮ್ಮೇಳನದಲ್ಲಿ ಮಾವೋ ಕೃಶ್ಚೇವ್‌ಗೆ ಕಠಿಣ ಸವಾಲನ್ನು ಒಡ್ಡಿದನು . ಮಾವೋ ತೈವಾನನ್ನು ಚೀನಾದೊಂದಿಗೆ ಸೇರಿಸಿಕೊಳ್ಳವ ಬಯಕೆಯನ್ನು ಹೊಂದಿದ್ದನು. ಅಮೇರಿಕದ 7ನೇ ಪಡೆ ಮತ್ತು ಅಮೆರಿಕಾದ ಅಣ್ವಸ್ತ್ರ ರಕ್ಷಣೆಗೆ ಒಳಪಟ್ಟಿತ್ತು. ಆದ್ದರಿಂದ ಮಾವೋ ರಷ್ಯಾ ಅಮೆರಿಕಾ

ಸಾಮ್ರಾಜ್ಯಶಾಹಿ ವಿರೋಧಿ ನೀತಿಯ ಬಗ್ಗೆ ಕಠಿಣ ನಿಲುವನ್ನು ಅನುಸರಿಸಬೇಕೆಂದು ಬಯಸಿದನು. ಅವನು ಪಶ್ಚಿಮದೊಂದಿಗೆ ಸಂಧಾನವನ್ನು ಟೀಕಿಸಿದನು. ಸಮಾಜವಾದಿ ಬಣದ ಶ್ರೇಷ್ಠತೆಯನ್ನು ಸಹೋದರ ದೇಶಗಳಾದ ಚೀನಾದಂತಹ ರಾಷ್ಟ್ರಗಳಿಗೆ ತೈವಾನ್ ಮತ್ತು ಕರಾವಳಿ ದ್ವೀಪಗಳನ್ನು ವಶಪಡಿಸಿಕೊಳ್ಳಲು ಬೆಂಬಲ ನೀಡಲು ಉಪಯೋಗಿಸಬೇಕೆಂದು ಆಗ್ರಹಿಸಿದನು. ಇತ್ತೀಚಿನ ಒಪ್ಪಂದದ ಹೊರತಾಗಿಯೂ ತೈವಾನನ್ನು ವಶಪಡಿಸಿಕೊಳ್ಳಲು ಚೀನಾಕ್ಕೆ ಸಹಾಯ ಮಾಡುವಲ್ಲಿ ರಷ್ಯಾದ ವಿಫಲತೆಯು ಚೀನಾ - ಸೋವಿಯತ್ ಸಂಬಂಧಗಳು ಮತ್ತಷ್ಟು ಹದಗೆಡಲು ಕಾರಣವಾಯಿತು. ಕೃಶ್ಚೇವನು ಮಾವೋನನ್ನು ನುಂಗಲು ರಷ್ಯಾಕ್ಕೆ ಸಾಧ್ಯವಿಲ್ಲವೆಂದು ಅರಿತನು.

### *146.2.5 ತೈವಾನ್ ಬಿಕ್ಕಟ್ಟು 1958*

ರಷ್ಯಾ, ಚೀನಾಕ್ಕೆ ಆರ್ಥಿಕ ನೆರವನ್ನು ನೀಡುವುದನ್ನು ಮುಂದುವರಿಸಿತು. ಆದರೆ ಸ್ನೇಹದ ನೆರಳಿನ ಹಿಂದೆಯೇ ಚೀನಾ-ಸೋವಿಯತ್ ಸಂಬಂಧಗಳಲ್ಲಿ ಒತ್ತಡಗಳು ಮತ್ತು ಬಿರುಕುಗಳೂ ಉಂಟಾದವು. ಚೀನಾ ಆಕ್ರಮಣಕಾರಿ ನಿಲುವನ್ನು ತಾಳಿತು. ಕಾಗದ ಹುಲಿಗಳಿಗೆ (ಅಂತರಿಕ್ಷ ತಂತ್ರಜ್ಞಾನ ಮತ್ತು ಐಸಿಬಿಎಂ ಗಳಲ್ಲಿ ಸೋವಿಯತ್ ಒಕ್ಕೂಟದ ಸಾಧನೆಗಳಿಂದಾಗಿ) ಇನ್ನು ಮುಂದೆ ಹೆದರದ ಅದು ಆಗಸ್ಟ್ 1958 ರಲ್ಲಿ ಕ್ವಿಮೆಯ್ ಫಿರಂಗಿ ದಾಳಿಯನ್ನು ಆರಂಭಿಸಿತು. ಕಾಗದ ಹುಲಿಯು ತೈವಾನ್ ಮತ್ತು ಕರಾವಳಿಯ ದ್ವೀಪಗಳನ್ನು ರಕ್ಷಿಸಲು ಮಧ್ಯ ಪ್ರವೇಶಿಸುವ ಬೆದರಿಕೆ ಹಾಕಿತು. ಚೀನಾ ಹಿಂದಕ್ಕೆ ಸರಿಯಬೇಕಾಯಿತು. ಪ್ರಧಾನಿ ಚೌ ಎನ್ ಲಾಯ್ ಮಾತುಕತೆಗೆ ಸೂಚಿಸಿದನು. ಉದ್ವಿಗ್ನತೆ ಶಮನಗೊಂಡ ನಂತರವೇ ಕೃಶ್ಚೇವನ್ನು ಬಾಯಿ ತೆರೆದನು ಮತ್ತು ಘಟನೆಯ ನಂತರ ಅಮೆರಿಕಾ ವಿರುದ್ಧದ ಬೆದರಿಕೆಯ ತಂತ್ರವನ್ನು ಖಂಡಿಸಿದನು. ರಷ್ಯಾ ತನ್ನನ್ನು ಕಡೆಗಣಿಸಿತೆಂದೇ ಚೀನಾ ಭಾವಿಸಿತು.

### *146.2.6 ಶೃಂಗ ಸಭೆ*

ಇನ್ನೊಂದು ಕಡೆ ಕೃಶ್ಚೇವನು ಚೀನಾದ ಕಮ್ಯೂನ್‌ಗಳನ್ನು ಹಳೆಯ ಕಾಲದವೆಂದೂ, 'ಅವು ಕಾರ್ಯನಿರ್ವಹಿಸವೆಂದು' ಟೀಕಿಸಿದನು. ಅವನು ಶೃಂಗಸಭೆಯ ಕಾರ್ಯಕ್ರಮಗಳನ್ನು ಸೋವಿಯತ್ ಒಕ್ಕೂಟದ ಮೊದಲ ಉಪಪ್ರಧಾನಿಯನ್ನು ಅಮೆರಿಕಾಕ್ಕೆ ಕಳುಹಿಸಿಕೊಟ್ಟಿತು. ಶೃಂಗಸಭೆಯು 1959 ರ ಸೆಪ್ಟೆಂಬರ್ 15 ರಿಂದ 28 ರವರೆಗೆ ನಡೆಯಿತು. ಚೀನೀ ಟೀಕೆಯನ್ನು ತೀವ್ರವಾಗಿ ಪರಿಗಣಿಸಿದೆ ಅವನು ರಷ್ಯಾದ ಹಿತಾಸಕ್ತಿಗಳನ್ನು ರಕ್ಷಿಸಿಕೊಳ್ಳಲು ಅಮೆರಿಕಾಕ್ಕೆ ಹೋದನು. ಜರ್ಮನಿಯ ಪುನಶ್ಚೇತನ ಮತ್ತು ಯೂಗೋಸ್ಲಾವಿಯಾ, ಅಲ್ಬೇನಿಯಾ ಮತ್ತು ಪೂರ್ವ ಯೂರೋಪಿನ ಇತರ ಯಾವುದೇ ಭಾಗಗಳಲ್ಲಿ ಅಮೆರಿಕಾದ ಭಾಗವಹಿಸುವಿಕೆಯಿಂದ ಹೆದರಿದ ಅವನು ಅಮೆರಿಕಾದೊಂದಿಗೆ ಒಪ್ಪಂದಕ್ಕೆ ಬರಲು ಬಯಸಿದನು. ಸಾಮ್ರಾಜ್ಯಶಾಹಿಗಳೊಂದಿಗೆ ಕಮ್ಯುನಿಸ್ಟ್ ನಾಯಕರ ಮಾತುಕತೆಗಳು ಕಲ್ಪನೆಯ ಚೀನೀಯರಿಗೆ ಒಂದು ಶಾಪವಾಗಿತ್ತು. ಕೃಶ್ಚೇವನು ಅಮೆರಿಕಾದಿಂದ ನೇರವಾಗಿ ಪೀಕಿಂಗ್‌ಗೆ ಪ್ರಯಾಣ ಮಾಡಿ ತನ್ನ ಶಾಂತಿಯುತ ಸಹಬಾಳ್ವೆಯ ಕಲ್ಪನೆಯನ್ನು ತಿಳಿಸಲು ಪ್ರಯತ್ನಿಸಿದನು. ಆದರೆ ಬಂದೂಕದ ಬಲದಿಂದಲೇ ಎಲ್ಲಾ ದೇಶಗಳೂ ಪ್ರಬಲವಾಗಬಲ್ಲವೆಂದು ನಂಬಿಕೆ ಹೊಂದಿದ್ದ ಮಾವೆ ಅವನಿಗೆ ನೀರಸ ಸ್ವಾಗತ ನೀಡಿದನು.

### *146.2.7 ಟಿಬೆಟ್ ಬಗ್ಗೆ ರಷ್ಯಾದ ತಟಸ್ಥತೆ*

ಕಾಲಕ್ರಮೇಣ ಮಾರ್ಚ್ 1959 ರಲ್ಲಿ ಟಿಬೆಟ್ಟಿನಲ್ಲಿ ಚೀನೀ ವಿರೋಧಿ ದಂಗೆಯುಂಟಾಯಿತು. ದಂಗೆಯನ್ನು ಕ್ರೂರವಾಗಿ ಅಡಗಿಸಲಾಯಿತು. ಟಿಬೆಟಿಯನ್ನರ ನಾಯಕ ದಲೈಲಾಮನು ಭಾರತದಲ್ಲಿ ಆಶ್ರಯವನ್ನು ಕೋರಿದನು. ಪಂಡಿತ ಜವಹಾರಲಾಲ್ ನೆಹರು ಪತ್ರಿಕೆಗಳು ಮತ್ತು ಸಂಸತ್ತುಗಳು ಚೀನೀಯರ ಕ್ರಮವನ್ನು ಖಂಡಿಸಿದವು. ಪೀಕಿಂಗ್ ಭಾರತಕ್ಕೆ ತೀವ್ರವಾದ ಎಚ್ಚರಿಕೆಯನ್ನು ನೀಡಿತು. ಕೃಶ್ಚೇವನು ಯಾವ ಪಕ್ಷವನ್ನು ವಹಿಸಲು ನಿರಾಕರಿಸಿದನು. ಜೂನ್ 20, 1959 ರಂದು ಅವನು ಚೀನಾದೊಂದಿಗೆ ಮಾಡಿಕೊಂಡಿದ್ದ 1957 ರ ಅಣ್ವಸ್ತ್ರ ಒಪ್ಪಂದ ರದ್ದಾಗಿರುವುದಾಗಿ ಘೋಷಿಸಿದನು. ಚೀನಾದ ಅನಾವಶ್ಯಕ ಹಠಗನದ ನೀತಿಯು ತಟಸ್ಥ ಬಣದೊಂದಿಗೆ ಉತ್ತಮ ಸಂಬಂಧಗಳನ್ನು ಬೆಳೆಸಿಕೊಳ್ಳುವ ಕೃಶ್ಚೇವನ ಪ್ರಯತ್ನಗಳನ್ನು ನಿಷ್ಫಲಗೊಳಿಸಿತು.

### *146.2.8 ಹೆಚ್ಚಿದ ಅಂತರ*

ಚೀನಾದ ಅಮೆರಿಕಾದ ಮೇಲಿನ ದಾಳಿಗೆ ಕೊನೆಯೇ ಇರಲಿಲ್ಲ ಮತ್ತು ಅದು ಅಮೆರಿಕಾವನ್ನು ವಿಶ್ವಶಾಂತಿಯ ಪ್ರಬಲ ಶತೃವೆಂದು ತಿರಸ್ಕರಿಸಿತು. ಚೀನಿಯರು ಸಾಮ್ರಾಜ್ಯಷಾಹಿಗಳ ಬಹುಮುಖ ತಪ್ಪುಗಳನ್ನು ಎಣಿಸ ತೊಡಗಿದರು. ಅಮೆರಿಕಾದೊಂದಿಗೆ ನಿಜವಾದ ಸಂಬಂಧ ಸುಧಾರಣೆ ಸಾಧ್ಯವಾರಲಿಲ್ಲ. ಯು- 2 ಘಟನೆಯು (ಮೇ, 1960) ರಷ್ಯನ್ನರ ಮುನಿಸಿಗೆ ಚೀನೀಯರ ಅಭಿಪ್ರಾಯವನ್ನು

ಬಲಪಡಿಸಿತು. ಇದರಿಂದ ಕೃಶ್ಚೇವನಿಗೆ ಆಘಾತವಾದರೂ ಪ್ಯಾರಿಸ್ ಸಮ್ಮೇಳನವನ್ನು ಮುರಿಯಲು ಅವನಿಗೆ ಇಷ್ಟವಿರಲಿಲ್ಲ. ಆದ್ದರಿಂದ ಅವನು ಚೀನಾದಿಂದ ಸೋವಿಯತ್ ಪರಿಣಿತರನ್ನು ಹಿಂದಿರುಗಿ ಬರುವಂತೆ ಆಜ್ಞಾಪಿಸಿದನು. ಅಲ್ಲದೆ ಅವನು ಎಲ್ಲಾ ಆರ್ಥಿಕ ನೆರವನ್ನು ರದ್ದುಪಡಿಸಿ, ಮಹಾ ಮುನ್ನಡೆ ಜಿಗಿತ ಮತ್ತು ಕಮ್ಯೂನ್‌ಗಳ ವಿಫಲತೆಯಿಂದ ಕುಂಠಿತವಾಗಿದ್ದ ಚೀನಾದ ಆರ್ಥಿಕ ವ್ಯವಸ್ಥೆಯನ್ನು ಛಿದ್ರಗೊಳಿಸಿದನು. ಇದರೊಂದಿಗೆ ಚೀನ-ಸೋವಿಯತ್ ಒಡಕು ಪೂರ್ಣಗೊಂಡಿತು. ಒಂದು ಮತ್ತೊಂದರ ಸೈದ್ಧಾಂತಿಕ ವಿಮುಖತೆಯನ್ನು ಖಂಡಿಸಿತು. ಅವು ಯುದ್ಧ ಮತ್ತು ಶಾಂತಿ, ನಿಶ್ಶಸ್ತ್ರೀಕರಣ, ಅಲಿಪ್ತ ಮತ್ತು ತಟಸ್ಥ ನೀತಿಯ ವಿಷಯಗಳಲ್ಲಿ ಪರಸ್ಪರ ವಿರೋಧಿಗಳಾದವು. ಮಾವೋಗೆ 'ಯಾವುದೇ ಮೂರನೇ ಮಾರ್ಗವಿರಲಿಲ್ಲ' ಶತ್ರು ಮತ್ತು ಮಿತ್ರನ ನಡುವೆ ಯಾವುದೇ ಮಧ್ಯದ ಮಾರ್ಗವಿರಲಿಲ್ಲ. ಪಂಡಿತ್ ನೆಹರೂ ಮತ್ತು ಕರ್ನಲ್ ನಾಸ್ಸೆರ್‌ರ ಅವಿಪ್ತತೆ ಕೇವಲ ನಟನೆಯಾಗಿತ್ತು.

### *146.2.9 ತಾತ್ಕಾಲಿಕ ಶಾಂತಿ*

ನವೆಂಬರ್ 1960 ರಲ್ಲಿ ನಡೆದ ಅಕ್ಟೋಬರ್ ಮಹಾಕ್ರಾಂತಿಯ 43 ನೇ ವಾರ್ಷಿಕೋತ್ಸವವು ತಾತ್ಕಾಲಿಕ ಶಾಂತಿಯನ್ನು ನೀಡಿತು. 1961 ರ ಫೆಬ್ರವರಿ 11 ರಂದು ಪೀಪಲ್ಸ್ ಡೈಲಿ ಪತ್ರಿಕೆಯಲ್ಲಿ "ಮಹಾ ಚೀನೀ - ಸೋವಿಯತ್ ಜನರ ಐಕ್ಯತೆ ಬಹುಕಾಲ ಉಳಿಯುವುದು ಮತ್ತು ಉಲ್ಲಂಘಿಸಲು ಸಾಧ್ಯವಿಲ್ಲವೆಂದು" ಬರೆಯಿತು. ಇದೆಲ್ಲವೂ ಕೇವಲ ತಾತ್ಕಾಲಿಕವಾಗಿತ್ತು. ಚೀನಾ-ಸೋವಿಯತ್ ಭಿನ್ನಾಭಿಪ್ರಾಯಗಳನ್ನು ಅಷ್ಟು ಸುಲಭವಾಗಿ ತೇಪೆ ಹಾಕಲು ಸಾಧ್ಯವಿರಲಿಲ್ಲ. ದೇಶದಲ್ಲಿ ಆರ್ಥಿಕ ಸಂಕಷ್ಟದಿಂದಾಗಿ ಚೀನಾಕ್ಕೆ ತೀವ್ರವಾದ ಹಿನ್ನಡೆಯುಂಟಾಯಿತು. ಅದು ಏಪ್ರಿಲ್ 7, 1961 ರಂದು ಸೋವಿಯತ್ ರಷ್ಯಾದೊಂದಿಗೆ ವ್ಯಾಪಾರ ಒಪ್ಪಂದವೊಂದಕ್ಕೆ ಸಹಿ ಹಾಕಿತು.

### *146.2.10 ಅಲ್ಬೇನಿಯಾಕ್ಕೆ ಚೀನಾದ ಬೆಂಬಲ*

ಅಮೆರಿಕಾದ ಅಧ್ಯಕ್ಷನಾಗಿ ಅಧಿಕಾರ ವಹಿಸಿಕೊಂಡ (ಫೆಬ್ರವರಿ 1, 1961) ಕೆನಡಿಗೆ ಕೃಶ್ಚೇವ್ ಅಭಿನಂದನೆಯ ಸಂದೇಶವನ್ನು ಕಳುಹಿಸಿದನು. ಇದರಿಂದ ಚೀನಿಯರು ಕೋಪಗೊಂಡರು. ಕೆನಡಿಯೊಂದಿಗೆ ಹದಗೆಟ್ಟಿದ್ದ ಸಂಬಂಧಗಳನ್ನು ಸುಧಾರಿಸುವ ಕೃಶ್ಚೇವನ ಪ್ರಯತ್ನಗಳನ್ನು ಶಾಂತಿಯುತ ಸಹಬಾಳ್ವೆಯನ್ನು ವಿರೋಧಿಸುವುದನ್ನು ಮುಂದುವರಿಸಿದ ಚೀನಿಯರು ಒಪ್ಪಲಿಲ್ಲ. ಚೀನಾದ ಪ್ರಬಲ ಮಿತ್ರನಾಗಿದ್ದ ಅಲ್ಬೇನಿಯಾದ ಮೇಲೆ ಸೋವಿಯತ್ ಒಕ್ಕೂಟ ಆಕ್ರಮಣ ಮಾಡಿತು. ಇದಕ್ಕೆ ವಿರುದ್ಧವಾಗಿ ಚೀನ ಯುಗೋಸ್ಲಾವಿಯಾವನ್ನು ಹಿಂಬಾಲಕನೆಂದು ಆಪಾದಿಸಿತು. ಅಲ್ಬೇನಿಯನ್ನರು ಸೋವಿಯತ್ ವಿರೋಧಿ ಅಬಿಪ್ರಾಯಗಳಲ್ಲಿ ಪ್ರೇರಣೆ ನೀಡಿದರು. ರಷ್ಯದೊಂದಿಗೆ ಅಲ್ಬೇನಿಯಾದ ಸಂಬಂಧಗಳು ಸುಧಾರಿಸಿದವು. ಅಲ್ಬೇನಿಯಾಕ್ಕೆ ರಷ್ಯ ತನ್ನ ನೆರವನ್ನು ನಿಲ್ಲಿಸಿದಾಗ, ಚೀನಿಯರು ಅದಕ್ಕೆ ಆರ್ಥಿಕ ಮತ್ತು ನೈತಿಕ ನೆರವನ್ನು ನೀಡಲು ಮುಂದೆ ಬಂದರು.

## 146.3 1962 ರಿಂದ ಚೀನ-ಸೋವಿಯತ್ ಸಂಬಂಧಗಳು

### *146.3.1 ಕ್ಯೂಬಾ ಬಿಕ್ಕಟ್ಟು*

ಚೀನಾ-ಸೋವಿಯತ್ ಸಂಬಂಧಗಳ 1962 ರಲ್ಲಿ ಮತ್ತಷ್ಟು ಹದಗೆಟ್ಟವು. ಇದಕ್ಕೆ ಅನೇಕ ಕಾರಣಗಳಿದ್ದವು. ಚೀನಿಯರು ಪುರಿಷ್ಕರಣಕಾರರೆಂದು ಪರಿಗಣಿಸಿದ್ದ ಯೂಗೋಸ್ಲಾವಿಯನ್ನರೊಂದಿಗೆ ರಷ್ಯ ನಿಕಟ ಸಂಬಂಧವನ್ನು ಬೆಳೆಸಿಕೊಂಡಿತು. ಚೀನಾ-ಸೋವಿಯತ್ ಘರ್ಷಣೆಗೆ ಭಾರತ ಮತ್ತೊಂದು ನೆಪವಾಯಿತು. ಚೀನಾ ಭಾರತ ಗಡಿ ಘರ್ಷಣೆ ನಡೆಯುತ್ತಿರುವಾಗಲೇ ರಷ್ಯ ಭಾರತಕ್ಕೆ ಜೆಟ್ ಹೋರಾಟದ ಮುಜುಗಗವುಂಟುಮಾಡಿತು. ಅಕ್ಟೋಬರ್ 20, 1962 ರಂದು ಭಾರತದ ಮೇಲೆ ಚೀನಾ ಆಕ್ರಮಣವನ್ನು ಆರಂಭಿಸಿತು. ಇದೇ ಸಮಯದಲ್ಲಿ (ಅಕ್ಟೋಬರ್ 1962) ಕ್ಯೂಬಾದ ವಿಷಯದಲ್ಲಿ ಅಮೆರಿಕಾ, ಸೋವಿಯತ್ ಸಂಬಂಧಗಳ ಪ್ರಪಂಚವನ್ನು ಉಸಿರುಗಟ್ಟುವಂತೆ ಮಾಡಿತು. ಅಧ್ಯಕ್ಷ ಕೆನೆಡಿಯು ಕ್ಯೂಬಾಕ್ಕೆ ಸೈನ್ಯ ಸಲಕರಣೆಗಳನ್ನು ಸಾಗಿಸುವ ಎಲ್ಲಾ ನೌಕೆಗಳ ಮೇಲೆ ದಿಗ್ಬಂದವನ್ನು ಘೋಷಿಸಿದನು. ಕ್ಯೂಬಾದಲ್ಲಿ ನೆಲೆಗೊಳಿಸಲಾಗಿದ್ದ ರಷ್ಯಾದ ಕ್ಷಿಪಣಿಗಳನ್ನು ನಾಶಪಡಿಸದಿದ್ದರೆ ಮತ್ತು ಹಿಂದಕ್ಕೆ ಪಡೆಯದಿದ್ದರೆ ಕ್ರಮಕೈಗೊಳ್ಳುವ ಬೆದರಿಕೆ ಹಾಕಲಾಯಿತು. ಕ್ಷಿಪಣಿಗಳನ್ನು ತೆಗೆದು ಹಾಕಲು ಒಪ್ಪುವ ಮೂಲಕ ಕೃಶ್ಚೇವ್ ಶಾಂತಿಯನ್ನು ಬಯಸಿದನು ಮತ್ತು ಇದಕ್ಕೆ ಪ್ರತಿಯಾಗಿ ಅಮೆರಿಕಾ ಕ್ಯೂಬಾದ ವಿರುದ್ಧ ಕ್ರಮ ಕೈಗೊಳ್ಳದಿರುವ ಭರವಸೆ ನೀಡಿತು. ಕ್ಯೂಬಾದಿಂದ ಸೋವಿಯತ್ ನಿರ್ಗಮನದಿಂದ ಚೀನಾ ಕೋಪಗೊಂಡಿತು. ಚೀನಾ ಭಾರತ ಗಡಿಯ ಬಗ್ಗೆ ಸೋವಿಯತ್ ರಷ್ಯಾದ ಹೇಳಿಕೆಗಳೂ ಚೀನಾ ಸೋವಿಯತ್ ಸಂಬಂಧಗಳನ್ನು ಕೆಡಿಸಿದವು. ಭಾರತದಲ್ಲಿ ಚೀನಾದ ಕ್ರಮಗಳನ್ನು ರಷ್ಯಾ ಸಾಹಸ

### 146.3.2 ಆರೋಪ ಮತ್ತು ಪ್ರತ್ಯಾರೋಪ (ದೂಷಣೆ ಮತ್ತು ಪ್ರತಿದೂಷಣೆಗಳು)

ಈಗ ಚೀನಾ-ಸೋವಿಯತ್ ಸಂಬಂಧಗಳು ಗಂಭೀರ ಸ್ವರೂಪವನ್ನು ಪಡೆದವು. ಪ್ರತಿಯೊಂದು ವಿಷಯದಲ್ಲಿಯೂ ಚೀನಾ ಸೋವಿಯತ್ ರಷ್ಯಾದ ಅಭಿಪ್ರಾಯವನ್ನು ತಿರಸ್ಕರಿಸಿತು. ಅದು ರಷ್ಯವನ್ನು ಅಕ್ಟೋಬರ್ ಕ್ರಾಂತಿಯನ್ನು ವಿರುಪಗೊಳಿಸಿದ 'ಆಧುನಿಕ ಪರಿಷ್ಕರಣಕಾರ' ನೆಂದು ಕರೆಯಿತು. ಇಂಗ್ಲೆಂಡ್, ಅಮೆರಿಕಾ ಮತ್ತು ರಷ್ಯಾಗಳು ಮಾಸ್ಕೋದಲ್ಲಿ ಸಹಿ ಹಾಕಿದ ' ಅಣ್ವಸ್ತ್ರ ಪ್ರಯೋಗ ನಿಶೇಧ ಒಪ್ಪಂದ' ವನ್ನು ಚೀನಿಯರ ಖಂಡಿಸಿದರು. 1963 ರಲ್ಲಿ ಬೆಳೆ ವಿಫಲತೆಯಿಂದ ಕೃಶ್ಚೇವನ ಬಗ್ಗೆ ಉಂಟಾಗಿದ್ದ ಅಸಮಾಧಾನವನ್ನು ಚೀನಿಯರು ಬಳಸಿಕೊಂಡರು. ಉತ್ತರ ಕೊರಿಯಾ, ಉತ್ತರ ವಿಯಟ್ನಾಂ, ಜಪಾನ್, ಇಂಡೋನೇಷ್ಯ, ಬರ್ಮಾ, ಥಾಯ್ಲೆಂಡ್ ಮತ್ತು ಮಲಯಗಳ ಕಮ್ಯುನಿಸ್ಟ್ ಪಕ್ಷಗಳು ಚೀನಾಕ್ಕೆ ಹತ್ತಿರವಾದವು. ಮಾವೋ ಪಂಥವನ್ನು ಅಭಿವೃದ್ಧಿಪಡಿಸುವ ಮತ್ತು ಲೆನಿನ್ನನ ಸಿದ್ಧಾಂತಕ್ಕೆ ಬದಲಾಗಿ ಮಾವೋ ಸಿದ್ಧಾಂತವನ್ನು ಆಯ್ಕೆ ಮಾಡಿಕೊಳ್ಳುವ ಚೀನಿಯರ ಪ್ರಯತ್ನಗಳನ್ನು ರಷ್ಯ ಖಂಡಿಸಿತು. ತನ್ನ ನಾಯಕತ್ವವನ್ನು ಸ್ಥಾಪಿಸುವ ಉದ್ದೇಶದಿಂದ ಚೀನಾ ಅಂತರರಾಷ್ಟ್ರೀಯ ಉದ್ವಿಘ್ನತೆಯನ್ನು ಸೃಷ್ಟಿಸುತ್ತಿದೆಯೆಂದು ಅದು ಆಪಾದಿಸಿತು. ಏಷ್ಯಾದಲ್ಲಿ ರಾಷ್ಟ್ರೀಯ ಸ್ವಾತಂತ್ರ ಚಳುವಳಿಗೆ ಚೀನಾದ ಬೆಂಬಲವನ್ನು ಜನಾಂಗೀಯ ಪರಿಗಣನೆಯ ಮೇಲೆ ಹೊರಹೊಮ್ಮಿದುದೆಂದು ಅದು ಆಪಾದಿಸಿತು. ಸೋವಿಯತ್ ರಷ್ಯಾದ ದೃಷ್ಟಿಯಲ್ಲಿ ಚೀನಾ-ಭಾರತದ ಗಡಿ ವಿವಾದದಲ್ಲಿ ಪೀಕಿಂಗ್ ತನ್ನ ನಿಲುವಿನ ಮೂಲಕ ಭಾರತವನ್ನು ಸಾಮ್ರಾಜ್ಯಶಾಹಿಗಳ ಗುಂಪಿಗೆ ತಳ್ಳಲು ಸಹಾಯ ಮಾಡಿತು. ಚೀನಿಯರು ರಷ್ಯನ್ನರನ್ನು ಏಷ್ಯಾ, ಆಫ್ರಿಕ ಮತ್ತು ಲ್ಯಾಟಿನ್ ಅಮೆರಿಕಾದಲ್ಲಿ ಹೊಸ ವಸಾಹತುಶಾಹಿವಾದದ ಎಂದು ವರ್ಣಿಸಿದರು.

*ಮುಂದುವರಿದ ಅಮೆರಿಕ ರಷ್ಯ ಸಂಬಂಧ ಸುಧಾರಣೆ ಪ್ರಯತ್ನಗಳು*

ಅಕ್ಟೋಬರ್ 15, 1964 ರಂದು ಕೃಶ್ಚೇವನನ್ನು ಅಧಿಕಾರದಿಂದ ಉಚ್ಚಾಟಿಸಲಾಯಿತು. ಅವನ ಉಚ್ಚಾಟನೆಯ ಚೀನಾದಿಂದ ಅಣುಬಾಂಬಿನ ಸ್ಫೋಟದೊಂದಿಗೆ ಸಮೀಕರಣಗೊಂಡಿತು. ಚೀನಾ ಅಣ್ವಸ್ತ್ರ ಏಕಸ್ವಾಮ್ಯದ ಹೆಬ್ಬಾಗಿಲನ್ನು ಒಡೆಯಿತು ಮತ್ತು ಸಮಾಜವಾದಿ ಬಣ ಮತ್ತಷ್ಟು ಬಲವನ್ನು ಪಡೆಯಿತು. ಈಗ ಕೃಶ್ಚೇವ್ ಹೊರಹೋಗುವುದರೊಂದಿಗೆ ಚೀನೀಯರು ಹೆಚ್ಚಿದ್ದ ಅಂತರವನ್ನು ಪುನಃ ಕಡಿಮೆ ಮಾಡುವ ಮತ್ತು ಅಮೆರಿಕಾದ ಸಾಮ್ರಾಜ್ಯಶಾಹಿ ನೀತಿಯ ವಿರುದ್ಧ ಸಂಘಟಿತ ಪತ್ರಿಕೋದ್ಯಮವನ್ನೊಡ್ಡುವ ನಿರೀಕ್ಷೆಯನ್ನು ಹೊಂದಿದ್ದರು. ಸೋವಿಯತ್ ಒಕ್ಕೂಟಕ್ಕೆ ಅಂತಹ ಯಾವ ಉದ್ದೇಶಗಳೂ ಇರಲಿಲ್ಲ. ಪೂರ್ವ ಯೂರೋಪಿನಲ್ಲಿ ತಮ್ಮ ನಾಯಕತ್ವವನ್ನು ಉಳಿಸಿಕೊಳ್ಳುವುದು ಅವರ ಆಸಕ್ತಿಯಾಗಿತ್ತು. ಅವರು ಅಮೆರಿಕಾ-ಸೋವಿಯತ್ ಒಕ್ಕೂಟಗಳ ಹದಗೆಟ್ಟಿದ ಸಂಬಂಧಗಳ ಸುಧಾರಣೆಯಲ್ಲಿ ಮುನ್ನಡೆಯಿಟ್ಟರು ಮತ್ತು ಅಮೆರಿಕಾದಿಂದ ಪಶ್ಚಿಮ ಜರ್ಮನಿಗೆ ಅಣ್ವಸ್ತ್ರದ ಬಲವನ್ನು ನೀಡುವುದಿಲ್ಲವೆಂಬ ಭರವಸೆಯನ್ನು ಪಡೆದರು. ಈಗ ಚೀನ ದಾಳಿಯ ಹೊಸ ವಸ್ತುವನ್ನು ಬೆಳೆಸಿಕೊಂಡಿತು.

### 146.3.3 ರಷ್ಯ ವಿರೋಧಿ ಪ್ರಚಾರ

ಚೀನೀಯರು ಮತ್ತು ಆಲ್ಬೇನಿಯನ್ನರು ಸೋವಿಯತ್ ಒಕ್ಕೂಟದ ಕಮ್ಯುನಿಸ್ಟ್ ಪಕ್ಷದ 23 ನೇ ಸಭೆಯನ್ನು ಪರಿಷ್ಕರಣವಾದಿಗಳ ಸಮ್ಮೇಳನವೆಂದು (ಮಾರ್ಚ್ 1966) ವರ್ಣಿಸಿ, ಅದರಲ್ಲಿ ಭಾಗವಹಿಸಲು ನಿರಾಕರಿಸಿದರು. ವಿಯಟ್ನಾಂಗೆ ಸೋವಿಯತ್ ನೆರವನ್ನು ಚೀನಾ ಅಪಹಾಸ್ಯ ಮಾಡಿತು. ವಿಯಟ್ನಾಂಗೆ ವಾಯುಮಾರ್ಗ ರಕ್ಷಣೆಯನ್ನು ಒದಗಿಸಲು ರಷ್ಯಾದ ಅಧ್ಯಕ್ಷ ಕೊಸಿಗಿನ್ ದಕ್ಷಿಣ ಚೀನಾದಲ್ಲಿ ವಾಯು ಆವರಣ ಮತ್ತು ವಾಯು ನೆಲೆಗಳನ್ನು ಬಳಸಿಕೊಳ್ಳಲು ಮಾಡಿಕೊಂಡಿದ್ದ ಮನವಿಯನ್ನು ಚೀನಾ ತಿರಸ್ಕರಿಸಿತು. ಇದರಿಂದ ಚೀನೀ ನಾಯಕರ ದೃಷ್ಟಿಯಲ್ಲಿ ಅಮೆರಿಕಾಕ್ಕೆ ಬದಲಾಗಿ ಸೋವಿಯತ್ ರಷ್ಯ ಚೀನಾದ ಮುಖ್ಯ ಶತೃವಾಗಿತ್ತು. ಸೋವಿಯತ್ ಒಕ್ಕೂಟದ ಹೊಸ ವಿದೇಶಾಂಗ ನೀತಿಯ ಸಲಹೆಗಳು ಚೀನಾ-ಸೋವಿಯತ್ ವಿರಸವನ್ನು ಹೆಚ್ಚಿಸಿತು. ಥಾಷ್ಕೆಂಟ್ ಮಾತುಕತೆಗಳು ಮತ್ತು ಜಪಾನಿನೊಂದಿಗೆ ವ್ಯಾಪಾರ ಮತ್ತು ವಾಯುಮಾನ ಒಪ್ಪಂದಗಳು, ಥಾಷ್ಕೆಂಟ್ ಮಾತುಕತೆಗಳಿಗೆ ಅಮೆರಿಕಾದ ಆಶೀರ್ವಾದವನ್ನು ಏಷ್ಯಾದಲ್ಲಿ ಚೀನಾವನ್ನು ಸುತ್ತುವರಿಯಲು ಅಮೆರಿಕ-ಸೋವಿಯತ್ ಬೆಸುಗೆಯನ್ನು ಸಾಕ್ಷಿಯನ್ನು ನೀಡಲಾಯಿತು. ವಿಯಟ್ನಾಂಗೆ ಸೋವಿಯತ್ ಒಕ್ಕೂಟದ ಸರಬರಾಜನ್ನು ತಡೆಯುವ ಮೂಲಕ ಚೀನಾ ಅಮೆರಿಕಾದ ಸಾಮ್ರಾಜ್ಯಶಾಹಿ ನೀತಿಯ ವಿರುದ್ಧದ ಹೋರಾಟಕ್ಕೆ ಅಡ್ಡಿಯುಂಟುಮಾಡುತ್ತಿದೆಯೆಂದು ರಷ್ಯನ್ನರು ಆಪಾದಿಸಿದರು. ರಷ್ಯಾದ ವಿರುದ್ಧ ಚೀನಾ ಪ್ರಚಾರದ ಆಕ್ರಮಣವನ್ನು ಹೆಚ್ಚಿಸಿತು. ಚೀನೀಯರ ಅಪ ಪ್ರಚಾರವನ್ನು ಎದುರಿಸಲು ರಷ್ಯ ಶಾಂತಿ ಮತ್ತು ಪ್ರಗತಿಯ ಆಕಾಶವಾಣಿಯನ್ನು ಹೊಸ ಆಕಾಶವಾಣಿ ಕೇಂದ್ರವನ್ನು ಆರಂಭಿಸಿತು. (ಮಾರ್ಚ್ 1967) ಈ ಪ್ರಚಾರವು ಚೀನಾದಲ್ಲಿ ಅಲ್ಪ ಸಂಖ್ಯಾತರನ್ನು ಸರ್ಕಾರವು

ಪ್ರಚೋದಿಸಿತು. ಇದರಿಂದ ಮಾವೋ ಮತ್ತಷ್ಟು ಕೋಪಗೊಳ್ಳುವಂತೆ ಮಾಡಿತು. ಕೊಪಗಿನ್ ಅಮೇರಿಕಾದ ನೆಲದಲ್ಲಿ ಕಾಲಿಟ್ಟಿದ್ದರಿಂದ (ಜೂನ್ 1967) ಚೀನಿಯರು "ಸಾಮ್ರಾಜ್ಯ ಷಾಹಿ ವ್ಯವಸ್ಥೆಯನ್ನು ಎದುರಿಸಲು ಭಯೋತ್ಪಾದನೆಯನ್ನು ಬಯಸುವುದನ್ನು ನಿರೂಪಿಸಲು ಒಂದು ಥರ್ಮೋ ನ್ಯೂಕ್ಲಿಯರ್ ಬಾಂಬನ್ನು ಸ್ಫೋಟಿಸಿದರು.

### 146.3.4 ತೃತೀಯ ಜಗತ್ತಿನ ಬಗ್ಗೆ ಭಿನ್ನಾಭಿಪ್ರಾಯಗಳು

ಚೀನಾ-ಸೋವಿಯತ್ ಭಿನ್ನಾಭಿಪ್ರಾಯಗಳಿಗೆ ತೃತೀಯ ವಿಶ್ವದ ಬಗ್ಗೆ ಅನುಸರಿಸಿದ ನೀತಿಗಳು ಪೋಷಣೆ ನೀಡಿದವು. ತೃತೀಯ ಜಗತ್ತಿನ ವಿಶೇಷವಾಗಿ ಯು.ಎ.ಆರ್. ಬರ್ಮಾ, ಕ್ರುಮಾನ ಘಾನ, ಗ್ಯುನಿಯ, ಮಾಲಿ, ಬ್ರಸವಿಲ್ಲೆ, ಕಾಂಗೋ ಮತ್ತು ಬಾನ್ ಬೆಲ್ಲಾನ ಆಲ್ಜೀರಿಯಾಗಳನ್ನು ತನ್ನ ಕಡೆಗೆ ಸೆಳೆದುಕೊಳ್ಳುವ ಸೋವಿಯತ್ ಒಕ್ಕೂಟದ ಪ್ರಯತ್ನಗಳನ್ನು ಚೀನಾ ಭಯದಿಂದಲೇ ಗಮನಿಸುತ್ತಿದ್ದಿತು. ಚೀನಿಯರೂ ತೃತೀಯ ಜಗತ್ತಿನ ರಾಷ್ಟ್ರಗಳನ್ನು ಒಲಿಸಿಕೊಳ್ಳಲು ಬಹಳವಾಗಿ ಪ್ರಯತ್ನಿಸುತ್ತಿದ್ದಿತು. ಅವರು ಅಲಿಪ್ತ ರಾಷ್ಟ್ರಗಳ ಗುಂಪಿನಿಂದ ಟಿಬೆಟ್‌ನನ್ನು ಹೊರ ಹಾಕುವ ತಮ್ಮ ಪ್ರಯತ್ನದಲ್ಲಿ ವಿಫಲರಾದರು. ಇಂಡೊನೇಷಿಯಾದ ಬೆಂಬಲದಿಂದ ಅದು ರಷ್ಯ ಮತ್ತು ಯುಗೋಸ್ಲಾವಿಯಗಳಿಲ್ಲದೆ ಎರಡನೇ ಆಫ್ರೋ-ಏಷ್ಯಾ ಸಮ್ಮೇಳನವನ್ನು ನಡೆಸಲು ಪ್ರಯತ್ನಿಸಿತು. ಆದರೆ ಸಮ್ಮೇಳನದ ಸ್ಥಳವಾಗಿದ್ದ ಆಲ್ಜೀರ್ಸ್‌ನಲ್ಲಿ ನಡೆದ ಕ್ರಾಂತಿಯಿಂದಾಗಿ ಅದನ್ನು ರದ್ದುಪಡಿಸಬೇಕಾಯಿತು. ಇಂಡೋನೇಷ್ಯಾದಲ್ಲಿ ದಂಗೆಯುಂಟಾದುದು ಪರಿಸ್ಥಿತಿಯನ್ನು ಮತ್ತಷ್ಟು ಹದಗೆಡಿಸಿತು. ಪೀಕಿಂಗ್-ಜಕಾರ್ತ್ ಶತೃಕೂಟ ನಾಶದಲ್ಲಿ ಮುಕ್ತಾಯವಾಯಿತು. ಪೀಕಿಂಗ್‌ನ ಆಫ್ರಿಕಾ ನೀತಿಗೂ ಹಿನ್ನಡೆಯುಂಟಾಯಿತು. 1967 ರ ಸೆಪ್ಟೆಂಬರ್‌ನ ಕಡೆಯ ವೇಳೆಗೆ ಆಲ್ಜೀರಿಯಾ, ಇರಾಕ್, ಕೇನ್ಯಾ, ತಾಂಜೇನಿಯಾ, ಮೊರಾಕ್ಕೊ, ಸಿಲೋನ್, ಇಂಡಿಯಾ, ಇಂಡೋನೇಷ್ಯಾ, ತುನೀಷಿಯಾ, ಯು.ಎ.ಆರ್. ಜಾಂಬಿಯಾ, ಕ್ಯೂಬಾ, ಆಫ್ಘಾನಿಸ್ತಾನ, ನೇಪಾಳ, ಉತ್ತರ ಕೊರಿಯಾ, ಸಿಂಗಪುರ ಮೊದಲಾದವುಗಳು ಸೇರಿದಂತೆ ಚೀನಾ ಮೂವತ್ತೆರಡು ದೇಶಗಳೊಂದಿಗೆ ಘರ್ಷಣೆಯಲ್ಲಿ ತೊಡಗಿತ್ತು. ಮಾವೋನ ನೀತಿಗಳು "ಮಾರ್ಕ್ಸ್‌ನ ಮತ್ತು ಲೆನಿನ್ನ ಸಿದ್ಧಾಂತಕ್ಕೆ ವಿರುದ್ಧ" ವಾಗಿದ್ದುದರಿಂದ ರಷ್ಯ ತನ್ನ ದಾಳಿಯನ್ನು ಮುಂದುವರಿಸಿತು.

### 146.3.5 ಚೀನಾ-ಸೋವಿಯತ್ ಘರ್ಷಣೆಗಳು

1969 ರಲ್ಲಿ ಚೀನಾ-ಸೋವಿಯತ್ ಗಡಿ ಬಂದೂಕುಗಳ ಆರ್ಭಟದೊಂದಿಗೆ ಒಂದು ಜೀವಂತ ಗಡಿಯಾಯಿತು. ಮಾರ್ಚ್ 2, 1969 ರಂದು ಉಸ್ಸೂರಿ ಗಡಿಯಾಚೆ ಪರಸ್ಪರ ಗುಂಡಿನ ದಾಳಿ ನಡೆಯಿತು. ಸೋವಿಯತ್ ಒಕ್ಕೂಟದೊಂದಿಗೆ ತನ್ನ ದೀರ್ಘವಾದ ಗಡಿಯಿಂದ ಚೀನಿಯರು ಗಂಭೀರ ಚಿಂತನೆಗೊಳಗಾದರು. ರಷ್ಯನ್ನರು ಚೀನಾದ 1.5 ಮಿಲಿಯನ್ ಚದರ ಮೈಲಿಗಳ ಪ್ರದೇಶವನ್ನು ನ್ಯಾಯಬಾಹಿರವಾಗಿ ಆಕ್ರಮಿಸಿಕೊಂಡಿರುವುದಾಗಿ ಚೀನಾ ಆಪಾದಿಸಿತು.

### 146.3.6 ಚೀನಾ-ಅಮೆರಿಕ ಸಂಬಂಧ ಸುಧಾರಣೆ

ಈ ನಂತರ ಸೋವಿಯತ್ ಒಕ್ಕೂಟದ ಭಯ ಮತ್ತು ಜಪಾನಿನ ಸೈನಿಕ ಪುನಶ್ಚೇತನಗಳು ಚೀನಾದ ನೀತಿಯ ಮೇಲೆ ಮುಖ್ಯವಾಗಿ ಪ್ರಭಾವ ಬೀರಿದವು. ಚೀನಾದ ಮುಖ್ಯ ಪ್ರತಿಸ್ಪರ್ಧಿ ರಷ್ಯಾದ ವಿರುದ್ಧ ಹೋರಾಡಲು ಅಮೇರಿಕಾದ ಟೇಬಲ್ ಟೆನಿಸ್ ತಂಡವನ್ನು (ಏಪ್ರಿಲ್ 1971) ಆಹ್ವಾನಿಸುವ ಮೂಲಕ ಚೀನಾ ಮೊದಲ ಹೆಜ್ಜೆಯನ್ನಿಟ್ಟಿತು. "ಪಿಂಗ್ ಪಾಂಗ್ ರಾಜತಂತ್ರ ನೈಪುಣ್ಯತೆಯ ಮೂಲಕ ಚೀನಾ ಅಮೇರಿಕಾದ ಕೈಯನ್ನು ಕುಲುಕಲು ಪ್ರಯತ್ನಿಸಿತು. ಅಮೇರಿಕಾ ವ್ಯಾಪಾರದ ಸರಕುಗಳನ್ನು ಕಳುಹಿಸಿಕೊಟ್ಟಿತು. ಅಮೇರಿಕಾದ ವಿದೇಶಾಂಗ ಕಾರ್ಯದರ್ಶಿಯಾಗಿದ್ದ ಡಾ. ಕಿಸಿಂಜರ್ ಪೀಕಿಂಗ್‌ಗೆ ಪ್ರಯಾಣ ಬೆಳೆಸುವ ಮೂಲಕ ಸ್ನೇಹದ ಕಾಲ ಆರಂಭವಾಯಿತು. ಚೀನಾ-ಅಮೇರಿಕಾ ಸಂಬಂಧಗಳು ಸುಧಾರಿಸತೊಡಗಿದಂತೆ, ಚೀನಾ-ರಷ್ಯ ಸಂಬಂಧಗಳು ಹದಗೆಟ್ಟವು. ಪೀಕಿಂಗ್-ವಾಷಿಂಗ್ಟನ್ ಶತೃಕೂಟದ ವಿರುದ್ಧ ತನ್ನನ್ನು ಬಲಪಡಿಸಿಕೊಳ್ಳುವ ದೃಷ್ಠಿಯಿಂದ ರಷ್ಯ ತನ್ನ ಇಚ್ಛಕನುಗುಣವಾಗಿ ಭಾರತದೊಂದಿಗೆ ಶಾಂತಿ ಮತ್ತು ಸ್ನೇಹದ ಒಂದು ಒಪ್ಪಂದವನ್ನು ಮಾಡಿಕೊಂಡಿತು. ಇಂದು ಚೀನಾ ಮತ್ತು ರಷ್ಯಗಳು ಪರಸ್ಪರ ಕೆಸರೆರಚುವ ಕೆಲಸದಲ್ಲಿ ನಿರತವಾಗಿವೆ. ಎಲ್ಲಾ ಪ್ರಶ್ನೆಗಳ ಮೇಲೆ ಅವುಗಳ ಧೋರಣೆಗಳು ಸಂಪೂರ್ಣವಾಗಿ ವಿರುದ್ಧವಾಗಿವೆ. ಪತ್ರಿಕೆಗಳು, ವಿಶ್ವದ ವೇದಿಕೆಗಳು ಮತ್ತು ಎಲ್ಲಾ ಕಡೆಗಳಲ್ಲೂ ಅವು ಪರಸ್ಪರರನ್ನೂ ವಿಸ್ತಾರಣಾವಾದಿಗಳು ಮತ್ತು ಮಾರ್ಕ್ಸ್-ಲೆನಿನ್ ಸಿದ್ಧಾಂತದ ಹಂತಕರೆಂದು ಆಪಾದಿಸತೊಡಗಿವೆ.

## 146.4 ಚೀನಾ ಮತ್ತು ಪಾಶ್ಚಿಮಾತ್ಯ ರಾಷ್ಟ್ರಗಳು

ಕಮ್ಯುನಿಸ್ಟ್ ಚೀನಾವು ಪಾಶ್ಚಿಮಾತ್ಯ ರಾಷ್ಟ್ರಗಳಾದ ಅಮೆರಿಕಾ, ಇಂಗ್ಲೆಂಡ್ ಮತ್ತು ಫ್ರಾನ್ಸ್‌ಗಳನ್ನು ಸಾಮ್ರಾಜ್ಯಶಾಹಿಗಳೆಂದು ಮತ್ತು ಚೀನಾದ ಪ್ರಮುಖ ಶತೃಗಳೆಂದು ವಿಂಗಡಿಸಿದೆ. ಅಮೆರಿಕಾವನ್ನು ಚೀನಾದ ಅಸಮರ್ಥ ಮತ್ತು ಸ್ಥಿರವಾದ ಶತೃ ಮಾತ್ರವಲ್ಲದೆ ಎಲ್ಲಾ 'ಸ್ವತಂತ್ರ ಜನರ' ಶತೃವೆಂದು ಅದು ಚಿತ್ರಿಸಿದೆ. ಏಷ್ಯಾದಲ್ಲಿ ಅದರಲ್ಲೂ ವಿಶೇಷವಾಗಿ ಚೀನಾದ ಸುತ್ತ ಜಪಾನ್, ಫಾರ್ಮೋಸಾ, ದಕ್ಷಿಣ ಕೊರಿಯಾ ಮತ್ತು ದಕ್ಷಿಣ ವಿಯಟ್ನಾಂನಲ್ಲಿ ಅಮೆರಿಕಾದ ಉಪಸ್ಥಿತಿಯು ಏಷ್ಯಾದಲ್ಲಿ ಪ್ರಾಬಲ್ಯ ಸ್ಥಾಪಿಸುವ ಚೀನಾದ ಬಯಕೆಯ ವಿರುದ್ಧ ಒಂದು ತಡೆಯಾಗಿದೆ. ಏಷ್ಯಾದಿಂದ 'ಬಿಳಿಯರ ಹಾವಳಿ' ಕೊನೆಗೊಳಿಸುವ ಮತ್ತು ಅಮೆರಿಕಾವನ್ನು ದ್ವೇಷಿಸುವ ಪ್ರಚಾರದಲ್ಲಿ ಮೊದಲ ಹೆಜ್ಜೆಯಿಡುವ ಒಂದು ಸವಾಲಿನಲ್ಲಿ ಚೀನಾ ತನ್ನ ರಾಜತಾಂತ್ರಿಕ ಪ್ರತಿನಿಧಿಗಳನ್ನು ಹಿಂದಕ್ಕೆ ಕರೆಸಿಕೊಳ್ಳುವುದೂ ಸೇರಿದಂತೆ ಅಮೆರಿಕಾದೊಂದಿಗೆ ತನ್ನೆಲ್ಲಾ ಸಂಬಂಧಗಳನ್ನು ಕರೆದುಕೊಂಡಿತು. ಸಾಮ್ರಾಜ್ಯಷಾಹಿ ಗುಂಪಿನ ನಾಯಕನನ್ನು ಸೋಲಿಸಿದಲ್ಲಿ, ಬ್ರಿಟನ್ ಮತ್ತು ಫ್ರಾನ್ಸ್‌ನಂತಹ ಎಲ್ಲಾ ಸಾಮ್ರಾಜ್ಯಷಾಹಿಗಳನ್ನು ಸುಲಭವಾಗಿ ಒಕ್ಕಲೆಬ್ಬಿಸಬಹುದೆಂಬುದು ಕಮ್ಯುನಿಸ್ಟರ ವಾದವಾಗಿದೆ.

## 146.5 ಚೀನಾ-ಅಮೆರಿಕಾ ಸಂಬಂಧಗಳು

ಚೀನಾ-ಅಮೆರಿಕಾ ಸಂಬಂಧಗಳಲ್ಲಿ ಐದು ವಿಭಿನ್ನ ಹಂತಗಳಿವೆ. ಬಾಲವನ್ನು ಹೆಚ್ಚಿಸಿಕೊಳ್ಳುವುದರಿಂದ ಮತ್ತು ಘರ್ಷಣೆಯ ನೀತಿಯಿಂದ ಹಿಡಿದು, ಪಿಂಗ್-ಪಾಂಗ್ ರಾಜತಂತ್ರ ನಿರ್ವಹಣೆ ಮತ್ತು ಶೃಂಗಸಭೆಗಳವರೆಗಿನ ನೀತಿಗಳವರೆಗೆ ಚೀನಾ-ಅಮೆರಿಕಾ ಸಂಬಂಧಗಳು ಒಂದು ಆಕರ್ಶಕ ಪಕ್ಷಿನೋಟವನ್ನು ಒದಗಿಸುತ್ತವೆ. ಸಂಬಂಧಗಳ ಒಂದು ರೇಖಾಚಿತ್ರವನ್ನು ಗುರುತಿಸಿದಲ್ಲಿ ಅದು ತಿರುವುಗಳು, ಏರುಗಳ ಮತ್ತು ಇಳಿತಗಳನ್ನು ತೋರಿಸುತ್ತದೆ. ಅಮೆರಿಕಾದ ಬಗ್ಗೆ ಚೀನಾದ ವಿದೇಶಾಂಗ ನೀತಿಯು ಐದು ವಿಭಿನ್ನ ಹಂತಗಳನ್ನು ಪ್ರತಿನಿಧಿಸುತ್ತದೆ.

1) ಚೀನಾ-ಸೋವಿಯತ್ ಮೈತ್ರಿ ಮತ್ತು ಅಮೆರಿಕಾಕ್ಕೆ ವಿರೋಧ. ಜಪಾನ್, ಫಾರ್ಮೋಸಾ ಮತ್ತು ದಕ್ಷಿಣ ಕೋರಿಯಾಗಳಿಗೆ ಆರ್ಥಿಕ ಮತ್ತು ಸೈನಿಕ ನೆರವಿನ ಮೂಲಕ ಅಮೆರಿಕ ಅದಕ್ಕೆ ಪ್ರತಿಕ್ರಿಯೆ ನೀಡಿತು.

2) ಹೆಚ್ಚಿದ ಉದ್ವಿಘ್ನತೆ ಮತ್ತು ಏಷ್ಯಾದ ದೇಶಗಳನ್ನು ತಮ್ಮ ಹೋರಾಟದಲ್ಲಿ ಸೆಳೆಯಲು ಚೀನಾ-ಅಮೆರಿಕಾ ಪ್ರಯತ್ನಗಳು

3) ಬಾಂಡುಂಗ್ ಸಮ್ಮೇಳನದಲ್ಲಿ ಶಾಂತಿಯುತ ಸಹಬಾಳ್ವೆಯ ಕೂಗನ್ನು ಮೊಳಗಿಸುವ ಮೂಲಕ ಅಮೆರಿಕಾ ವಿರುದ್ಧದ ತನ್ನ ಹೋರಾಟದಲ್ಲಿ ಚೀನಾ ತೃತೀಯ ವಿಶ್ವದ ಸಹಾನುಭೂತಿಯನ್ನು ಗಳಿಸಲು ಪ್ರಯತ್ನಿಸಿತು.

4) ನಾಲ್ಕನೆ ಹಂತದಲ್ಲಿ ಆರ್ಥಿಕ-ಸೈನಿಕ ಪ್ರಗತಿ ಮತ್ತು ಸಾಮ್ರಾಜ್ಯಷಾಹಿ ವಿರುದ್ಧ ತನ್ನ ಹೋರಾಟವನ್ನು ತೀವ್ರಗೊಳಿಸುವ ಮೂಲಕ ಚೀನಾ ಕಮ್ಯುನಿಸ್ಟ್ ಬಣದಲ್ಲಿ ತನ್ನ ಸ್ಥಾನವನ್ನು ಕ್ರೋಡೀಕರಿಸಲು ಪ್ರಯತ್ನಿಸಿತು.

5) ಅಂತಿಮವಾಗಿ, ಚೀನಾ-ಸೋವಿಯತ್ ಸಂಬಂಧಗಳು ಮುರಿದು ಬೀಳುವ ಮಟ್ಟಿಗೆ ಹದಗೆಟ್ಟಾಗ, ಅದು ಚೀನಾ-ಅಮೆರಿಕಾ ಸಂಬಂಧಗಳನ್ನು ಪುನಃ ಸ್ಥಾಪಿಸಲು ಪ್ರಯತ್ನಿಸಿತು.

### *146.5.1 ಅಮೆರಿಕ ವಿರೋಧಿ ಸಿದ್ಧಾಂತ*

ಚೀನಾದ ಅಮೆರಿಕ ವಿರೋಧಿ ಸಿದ್ಧಾಂತವು ಐತಿಹಾಸಿಕ ಪರಿಕಲ್ಪನೆ ಮತ್ತು ಸೈದ್ಧಾಂತಿಕ ಭಿನ್ನಾಭಿಪ್ರಾಯಗಳಿಂದ ಹುಟ್ಟಿದುದು. ಕಮ್ಯುನಿಸ್ಟರ ವಿಜಯದಲ್ಲಿ ಕೊನೆಗೊಂಡ ಅಂತರ್ಯುದ್ಧದಲ್ಲಿ ಅಮೆರಿಕ ಚಿಯಾಂಗ್ ಕೈ ಷೆಕ್‌ನ ನ ಸರ್ಕಾರಕ್ಕೆ ಸಕ್ರಿಯ ಬೆಂಬಲ ನೀಡಿತು. ಇದು ಚೀನಿಯರ ಅಂತರ್ಯುದ್ಧದಲ್ಲಿ ಅಮೆರಿಕದ ದ್ವೇಷದಿಂದ ಕೂಡಿದ ಮಧ್ಯ ಪ್ರವೇಶವೆಂದು ಚೀನ ಆಪಾದಿಸಿತು. ಕಮ್ಯುನಿಸ್ಟರು ಅಧಿಕಾರಕ್ಕೆ ಬಂದ ತಕ್ಷಣವೇ ಅಮೆರಿಕಾದೊಂದಿಗೆ ತಮ್ಮ ಸಂಬಂಧಗಳನ್ನು ಕಡಿದುಕೊಳ್ಳಲಿಲ್ಲ. ಅವರು ಮಾನ್ಯತೆಯನ್ನು ಬೇಡಿದರು. ಆದರೆ ಅಮೆರಿಕ ಚಿಯಾಂಗ್ ಕೈ ಷೆಕ್‌ನ ಸರ್ಕಾರವನ್ನು ಕಾನೂನು ಬದ್ಧ ಸರ್ಕಾರವೆಂದು ಗೌರವಿಸಿತು. ಮಾನ್ಯತೆ ನೀಡಬೇಕೆಂಬ ತಮ್ಮ ಬೇಡಿಕೆಯನ್ನು ಈಡೇರಿಸದಿದ್ದರೆ ಗಂಭೀರ ಪರಿಣಾಮವನ್ನು ಎದುರಿಸಬೇಕಾಗುವುದೆಂದು ಕಮ್ಯುನಿಸ್ಟರು ಬೆದರಿಕೆ ಹಾಕಿದರು. ಚೀನಾದಲ್ಲಿ ಅಮೆರಿಕನ್ನರ ಮೇಲೆ ಕಠಿಣ ನಿರ್ಬಂಧಗಳನ್ನು ಹೇರಲಾಯಿತು. ಪೀಕಿಂಗ್‌ನಲ್ಲಿ ಅವರ ಆಸ್ತಿಪಾಸ್ತಿಗಳನ್ನು ಮುಟ್ಟುಗೋಲು

ಹಾಕಿಕೊಳ್ಳಲಾಯಿತು. ಹಗೆತನ ಬೆಳೆದು ಅಮೆರಿಕ ತನ್ನ ಕಡೆಯ ರಾಜತಾಂತ್ರಿಕ ಮತ್ತು ಸಲಹಾ ಅಧಿಕಾರಿಗಳನ್ನು ಚೀನಾದಿಂದ ಹಿಂದಕ್ಕೆ ಕರೆಸಿಕೊಳ್ಳುವಂತಾಯಿತು. (ಏಪ್ರಿಲ್ 1950). ಅಮೆರಿಕಾ ಕಮ್ಯುನಿಸ್ಟ್ ಚೀನಾದ ರಾಜತಾಂತ್ರಿಕ ಮಾನ್ಯತೆಯೊಂದಿಗೆ ತೈವಾನ್ ನೆಲೆಯ ರಾಷ್ಟ್ರೀಯ ಸರ್ಕಾರದ ಮಾನ್ಯತೆಯನ್ನು ರದ್ದು ಪಡಿಸಬೇಕೆಂದು ಕಮ್ಯುನಿಸ್ಟರು ಪಟ್ಟು ಹಿಡಿದರು. ನಂತರ ಅಮೆರಿಕಾ ವಿರೋಧಿ ಹಗೆತನದ ಪ್ರಚಾರ ಪ್ರಾರಂಭವಾಯಿತು. ಅಮೆರಿಕಾವನ್ನು ಕೊಳಕು ಸಾಮ್ರಾಜ್ಯಶಾಹಿ ರಾಷ್ಟ್ರ ವೆಂದು ಪ್ರತಿಗಾಮಿಯ ಅವಸಾನದ ಕೇಂದ್ರವೆಂದೂ ಮತ್ತು 'ಕಾಗದದ ಹುಲಿ' ಯೆಂದೂ ಚಿತ್ರಿಸಲಾಯಿತು.

### 146.5.2 *ಕೊರಿಯಾ ಯುದ್ಧ*

ಕೊರಿಯಾ ಯುದ್ಧದ ಆರಂಭವು ಕಮ್ಯುನಿಸ್ಟ್ ಚೀನಾದ ಬಗ್ಗೆ ಅಮೆರಿಕಾದ ಧೋರಣೆಯು ಸಕಾರಾತ್ಮಕ ಒಪ್ಪಿಗೆಯಿಂದ ಕ್ರಿಯಾತ್ಮಕ ಹಗೆತನಕ್ಕೆ ಬದಲಾಯಿತು. ಅಮೆರಿಕಾ ಚೀನಾವನ್ನು ಪೂರ್ವ ಮತ್ತು ಆಗ್ನೇಯ ಏಷ್ಯಾದ ಭದ್ರತೆಗೆ ಮತ್ತು ಆ ಪ್ರದೇಶದಲ್ಲಿ ಅಮೆರಿಕಾದ ಹಿತಾಸಕ್ತಿಗಳಿಗೆ ಒಂದು ಬೆದರಿಕೆಯೆಂದು ನೋಡತೊಡಗಿತು. ಅಮೆರಿಕಾ 'ಚೀನಾವನ್ನು ತಡೆಯುವ' ನೀತಿಯನ್ನು ಅನುಸರಿಸಲು ಬಯಸಿತು. ಕೊರಿಯಾದಲ್ಲಿ ಚೀನಾ ಮತ್ತು ಅಮೆರಿಕಾಗಳೆರಡೂ ಪರಸ್ಪರ ಎದುರಾಳಿಗಳಾಗಿದ್ದರಿಂದ ಚೀನಾ-ಅಮೆರಿಕ ಸಂಧಾನದ ಎಲ್ಲಾ ಸಾಧ್ಯತೆಗಳೂ ಮಾಯವಾದವು. ಚೀನಿಯರು ಮಂಚುರಿಯಾದ ಗಡಿಗೆ ನಿರಂತರ ಬೆದರಿಕೆಯೊಡ್ಡಿದ್ದ ಶತೃಗಳಾದ ಅಮೆರಿಕನ್ನರು ತಮ್ಮ ಬೆನ್ನ ಹಿಂದಿರುವುದನ್ನು ಖಂಡಿತವಾಗಿಯೂ ಇಷ್ಟಪಡಲಿಲ್ಲ. ಅಮೆರಿಕಾದ ಅಧ್ಯಕ್ಷ ಟ್ರೂಮನ್ನನು ಚೀನೀ ಕಮ್ಯುನಿಸ್ಟರ ದಾಳಿಯ ವಿರುದ್ಧ ತೈವಾನಿಗೆ ರಕ್ಷಣೆ ನೀಡುವಂತೆ 7 ನೇ ಅಮೆರಿಕಾದ ನೌಕಾಪಡೆಗೆ ಆದೇಶ ನೀಡಿದನು. ಚೀನಾದ ಪ್ರಧಾನಿ ಚೌ ಎನ್ ಲಾಯ್ ಟ್ರೂಮನ್ನನನ್ನು ದಿಕ್ಕರಿಸಿ ಅಮೆರಿಕಾದ ನೌಕಾ ಪಡೆಯ ಮಧ್ಯ ಪ್ರವೇಶವು ಚೀನಾದ ತೈವಾನ್ ಪ್ರದೇಶದ ವಿರುದ್ಧ ಅಮೆರಿಕಾದ ಸಶಸ್ತ್ರ ಆಕ್ರಮಣಕ್ಕೆ ಕಾರಣವಾಗುವುದೆಂದು ಘೋಷಿಸಿದನು.

### 146.5.3 *ತಡೆಯುವ ನೀತಿ*

ಚೀನಾವನ್ನು ತಡೆಯುವ ಉದ್ದೇಶದಿಂದ ಅಮೆರಿಕ ಏಷ್ಯಾದಲ್ಲಿ ಮೈತ್ರಿಗಳನ್ನು ಬೆಳೆಸುವ ನೀತಿಯನ್ನು ಅನುಸರಿಸಿತು. ಥಾಯ್ಲೆಂಡ್, ಪಾಕಿಸ್ಥಾನ ಮತ್ತು ಫಿಲಿಪ್ಪೈನ್ಸ್‌ಗಳು ಅಮೆರಿಕಾದ ಮೈತ್ರಿ ಕೂಟಗಳನ್ನು ಸೇರಿದವು. ಜಪಾನ್, ದಕ್ಷಿಣ ಕೊರಿಯಾ ಮತ್ತು ತೈವಾನ್‌ಗಳಲ್ಲಿ ಅಮೆರಿಕ ತನ್ನ ನೆಲೆಗಳನ್ನು ಹೆಚ್ಚಿಸಿತು. ತೈವಾನಿನ ಕುಮಿಂಟಾಂಗ್ ಸರ್ಕಾರವು ತನ್ನ ರಕ್ಷಣೆಗೊಳಪಡುವಂತೆ ಅದರೊಂದಿಗೆ ಪರಸ್ಪರ ರಕ್ಷಣಾ ಒಪ್ಪಂದಕ್ಕೂ ಸಹಿ ಹಾಕಿತು. ಅಮೆರಿಕಾದ ನೀತಿಯ ಸ್ಥಿತ್ಯಂತರಗಳು ಚೀನಿಯರ ಭಾವನೆಗಳನ್ನು ಮತ್ತಷ್ಟು ಕೆರಳಿಸಿದವು. ಅಮೆರಿಕವು ಜಪಾನಿನಲ್ಲಿ ಫ್ಯಾಸಿಸ್ಟ್ ಮಿಲಿಟರಿ ಸರ್ಕಾರವನ್ನು ಪುನರ್ ಸ್ಥಾಪಿಸಿ, ಏಷ್ಯಾದಲ್ಲಿ ಪ್ರಾಬಲ್ಯವನ್ನು ಸ್ಥಾಪಿಸಲು ಅದನ್ನು ಬಳಸಿಕೊಳ್ಳುತ್ತಿದೆಯೆಂದು ಚೀನಿಯರು ಆಪಾದಿಸಿದರು. ಚೀನೀಯರಿಗೆ ಕೊರಿಯಾ ಯುದ್ಧವು ಕೊರಿಯಾ, ಫಾರ್ಮೋಸಾ, ಇಂಡೋ-ಚೀನಾ ಮತ್ತು ಫಿಲಿಪ್ಪೀನ್ಸ್‌ಗಳ ಮೇಲೆ ಮತ್ತು ಅಂತಿಮವಾಗಿ ಇಡೀ ಏಷ್ಯಾದ ಮೇಲೆ ತನ್ನ ಹತೋಟಿಯನ್ನು ಸ್ಥಾಪಿಸುವ ಅಮೆರಿಕಾದ ಪಿತೂರಿಯ ಮೊದಲ ಹೆಜ್ಜೆಯೆಂದು ಕಂಡಿತು. ಆದ್ದರಿಂದ ಚೀನಾ ಅಮೆರಿಕಾ ಪ್ರಾಬಲ್ಯದ ನ್ಯಾಟೊ, ಸೀಟೋ, ಅನ್ಜುಸ್ ಮತ್ತು ಬಾಗ್ದಾದ್ ಒಪ್ಪಂದ (ಸೆಂಟೊ) ಗಳ ವಿರುದ್ಧ ತೀವ್ರ ವಾಗ್ದಾಳಿಯನ್ನು ಆರಂಭಿಸಿತು.

### 146.5.4 *ಇಂಡೋ ಚೀನ ಸಮಸ್ಯೆ*

ಕೊರಿಯಾ ಮತ್ತು ಫಾರ್ಮೋಸಾಗಳ ಜೊತೆಗೆ, ಇಂಡೋ-ಚೀನ ಸಮಸ್ಯೆಯು ಚೀನ-ಅಮೆರಿಕ ಸಂಬಂಧಗಳಿಗೆ ವಿಷವಿಕ್ಕಿದ ಮತ್ತೊಂದು ಕಾರಣವಾಯಿತು. 1954 ರಲ್ಲಿ ಡೀನ್, ಬೀನ್, ಫೂ ಪತನದೊಂದಿಗೆ ಫ್ರಾನ್ಸಿನ ಸೋಲು ನಿರ್ಣಾಯಕವಾಯಿತು. ಇಂಡೋ ಚೀನಾದಲ್ಲಿ ಫ್ರಾನ್ಸಿನ ನೆರವಿಗೆ (ಸಹಾಯಕ್ಕೆ) ಸೈನ್ಯವನ್ನು ಕಳುಹಿಸುವ ಅಮೆರಿಕಾದ ನಿರ್ಧಾರವು ಅಮೆರಿಕ ಮತ್ತು ಚೀನಗಳ ನಡುವೆ ನೇರ ಸಂಘರ್ಷಕ್ಕೆ ಕಾರಣವಾದ ಬೃಹತ್ ಬಿಕ್ಕಟ್ಟನ್ನು ಸೃಷ್ಟಿಸಿತು. ಅದೃಷ್ಟವಶಾತ್ ಜಿನೀವಾ ಒಪ್ಪಂದವು ಏಪ್ರಿಲ್-ಜುಲೈ 1954) ಬಿಕ್ಕಟ್ಟನ್ನು ತಡೆಯಿತು. ಬಿಕ್ಕಟ್ಟು ಕಳೆಯಿತಾದರೂ ಇಂಡೋಚೀನಾ ಸಮಸ್ಯೆ ಎಂದಿನಂತೆಯೇ ಗಟ್ಟಿಯಾಗಿ ಉಳಿಯಿತು. 1959 ರಲ್ಲಿ ಲಾವೋಸ್‌ನ ಗಲಭೆಗಳಿಗೆ ಅಮೆರಿಕ ಕಾರಣವೆಂದು ಚೀನಾ ಆಪಾದಿಸಿತು. ಅಮೆರಿಕಾದ ಮಧ್ಯ ಪ್ರವೇಶವು ವಿಯಟ್ನಾಂ ಮತ್ತು ಚೀನಾ ಜನತಾ ಆಪಾದಿಸಿತು. ಅಮೆರಿಕಾದ ಮಧ್ಯ ಪ್ರವೇಶವು ವಿಯಟ್ನಾಂ ಮತ್ತು ಚೀನಾ ಜನತಾ ಗಣರಾಜ್ಯಗಳ ಸುರಕ್ಷತೆಗೆ ಒಂದು ಪಿಡುಗಾಯಿತು. 1965 ರಿಂದ 1974 ರವರೆಗೆ ಇಂಡೋಚೀನಾ ಸಮಸ್ಯೆಯು ಬಗೆಹರಿಯದಾಯಿತು ಮತ್ತು ಚೀನ-ಅಮೆರಿಕ ಸಂಬಂಧಗಳನ್ನು ಹದಗೆಡಿಸಿತು.  ಚೀನಾದ ಸಕ್ರಿಯ ಬೆಂಬಲದೊಂದಿಗೆ ಉತ್ತರ ವಿಯಟ್ನಾಂ ತನಗೆ ಅನುಕೂಲಕರವಾದ ಒಂದನ್ನು

ಬಿಟ್ಟು ಉಳಿದೆಲ್ಲಾ ಶಾಂತಿ ಪ್ರಸ್ತಾವನೆಗಳಿಗೆ ಹಗೆತನದ ನಿಲುವನ್ನು ತಾಳಿತು. ನಿಕ್ಸನ್ನನ ಅಮೆರಿಕವು ವಿಯಟ್ನಾಂ ಯುದ್ಧದಿಂದ ಅಮೆರಿಕಾದ ಸಂಪನ್ಮೂಲಗಳ ಮೇಲಾದ ದುಷ್ಪರಿಣಾಮಗಳನ್ನು ಅರಿತುಕೊಂಡಿತು. ಅಮೆರಿಕಾದ ಸಂಪೂರ್ಣ ನೆರವಿನಿಂದ ದಕ್ಷಿಣ ವಿಯಟ್ನಾಂ ಉತ್ತರ ವಿಯಟ್ನಾಂನ ಸೈನಿಕ ಒತ್ತಡವನ್ನು ಎದುರಿಸಲು ವಿಫಲವಾಯಿತು. ಪಿಂಗ್ ಪಾಂಗ್ ರಾಜತಾಂತ್ರಿಕತೆ ಮತ್ತು ಶೃಂಗಸಭೆಗಳು ಪರಿಣಾಮವಾಗಿ ಚೀನಾ-ಅಮೆರಿಕಾ ಸಂಬಂಧಗಳ ಸುಧಾರಣೆಗಳು ಇಂಡೋಚೀನಾದಿಂದ ಅಮೆರಿಕಾದ ವಾಪಸಾತಿ ಸಾಧ್ಯವಾಗುವಂತೆ ಮಾಡಿದವು.

### *146.5.5 ಚೀನಾ-ಅಮೆರಿಕ ಸಂಬಂಧ ಸುಧಾರಣೆ*

1950 ರಿಂದ 1972 ರವರೆಗೆ ಚೀನ ಮತ್ತು ಅಮೆರಿಕಾಗಳು ಒಂದನ್ನೊಂದು ಅತ್ಯಂತ ತೀವ್ರವಾಗಿ ವಿರೋಧಿಸುತ್ತಿದ್ದವು. ಚೀನ-ಸೋವಿಯತ್ ಭಿನ್ನಾಭಿಪ್ರಾಯಗಳು ಚೀನಾ-ಅಮೆರಿಕ ಸಂಬಂಧ ಸುಧಾರಣೆಗೆ ತಕ್ಕ ಪರಿಸ್ಥಿತಿಯನ್ನು ಸೃಷ್ಠಿಸಿತು. ಮಧ್ಯಪ್ರಾಚ್ಯ ಮತ್ತು ಭಾರತದ ಉಪಖಂಡದಲ್ಲಿ ಹೆಚ್ಚುತ್ತಿದ್ದ ರಷ್ಯಾದ ಪ್ರಭಾವದ ಬಗ್ಗೆ ಅಮೆರಿಕಾ ಉತ್ಸುಕವಾಗಿತ್ತು. ಚೀನಾ-ಅಮೆರಿಕ ಸಂಬಂಧ ಸುಧಾರಣೆಯಿಂದ ವಿಯಟ್ನಾಂನಲ್ಲಿ ಯುದ್ಧದಿಂದ ಆಯಾಸವಾಗಿದ್ದ ಅಮೆರಿಕಾಕ್ಕೆ ಶಾಂತಿ ಮತ್ತು ಗೌರವಗಳು ದೊರೆಯುತ್ತಿದ್ದವು. ಅಲ್ಲದೆ ಸಂಬಂಧ ಸುಧಾರಣೆಯಿಂದ ಎರಡು ದೇಶಗಳ ನಡುವೆ ಅಗಾಧವಾದ ವ್ಯಾಪಾರ ಮತ್ತು ಆರ್ಥಿಕ ಪ್ರಗತಿಗೆ ಸಾಧ್ಯತೆಗಳು ಹೆಚ್ಚುತ್ತಿದ್ದವು. ಸೋವಿಯತ್ ರಷ್ಯಾದ ವಿರುದ್ಧದ ಹೋರಾಟದಲ್ಲಿ ಚೀನಾ ಅಮೆರಿಕಾದ ಬೆಂಬಲವನ್ನು ಪಡೆಯಬಹುದಾಗಿತ್ತು. ಈ ಉದ್ದೇಶಗಳು ಎರಡೂ ದೇಶಗಳನ್ನು ಹತ್ತಿರ ಬರುವಂತೆ ಮಾಡಿದವು. ಈ ಹಿನ್ನೆಲೆಯಲ್ಲಿ ಚೀನಾದ ಅಧ್ಯಕ್ಷ ಚೌ ಎನ್ ಲಾಯ್ ಮತ್ತು ಅಮೆರಿಕಾದ ಅಧ್ಯಕ್ಷ ನಿಕ್ಸನ್ನರು ಪರಸ್ಪರರನ್ನು ಭೇಟಿಯಾದರು. ಚೀನಾಕ್ಕೆ ವಿಶ್ವಸಂಸ್ಥೆಯ ಸದಸ್ಯತ್ವ ಮತ್ತು ಭದ್ರತಾ ಮಂಡಳಿಯಲ್ಲಿ ಖಾಯಂ ಸ್ಥಾನ ನೀಡಲು ಅಮೆರಿಕ ಬೆಂಬಲ ನೀಡಿತು. ಅಮೆರಿಕಾದ ಹಿಂದಿನ 'ಎರಡು ಚೀನಾ ನೀತಿ' ಸ್ವಯಂ ಸೋಲುಂಡಿತು. ಮುಟ್ಟಬೇಡ ಎನ್ನುವಂತಿದ್ದ ನಿನ್ನೆಯ ಶತೃಗಳು ಇಂದು ಪರಸ್ಪರ ತಬ್ಬಿಕೊಳ್ಳುವಂತಾದರು.

ಚೀನಾದ ವಿದೇಶಾಂಗ ನೀತಿಯಲ್ಲಾದ ಬದಲಾವಣೆಗಳು ಅಪೂರ್ವವಾಗಿದ್ದವು. ಚೀನಾದಲ್ಲಿ ಅಧಿಕಾರವನ್ನು ವಶಪಡಿಸಿಕೊಂಡ ನಂತರ ಕಮ್ಯುನಿಸ್ಟರು ವಿಶ್ವವು ಎರಡು ಗುಂಪುಗಳಾಗಿ ಒಡೆದುದನ್ನು ಕಂಡರು. ಅಮೆರಿಕಾ ನಾಯಕತ್ವದ ಬಂಡವಾಳಷಾಹಿ ಬಣ ಮತ್ತು ರಷ್ಯಾ ನಾಯಕತ್ವದ ಸಮಾಜವಾದಿ ಬಣ. ಸೋವಿಯತ್ ಒಕ್ಕೂಟದಿಂದ ಒಡಕಿನ ನಂತರ ಚೀನಾದ ವಿದೇಶಾಂಗ ನೀತಿಯ ನಿಲುವು ಬದಲಾವಣೆಗೊಂಡಿತು. ಅದು ಅಮೆರಿಕ, ರಷ್ಯ, ಬ್ರಿಟನ್ ಮತ್ತು ಫ್ರಾನ್ಸ್‌ಗಳನ್ನು ಬಂಡವಾಳಷಾಹಿಗಳೆಂದು ಚಿತ್ರಿಸಿತು. ಇದೇ ವೇಳೆಯಲ್ಲಿ ತಾನೇ ಅಮೆರಿಕಾದೊಂದಿಗೆ ಕೈಜೋಡಿಸಿತು. ಪ್ರವರ್ಧಮಾನಕ್ಕೆ ಬರುತ್ತಿದ್ದ ಏಷ್ಯಾ, ಆಫ್ರಿಕಾ ಮತ್ತು ಲ್ಯಾಟಿನ್ ಅಮೆರಿಕಾಗಳನ್ನೊಳಗೊಂಡ ತೃತೀಯ ವಿಶ್ವದೊಂದಿಗೆ ಸ್ನೇಹವನ್ನು ಮಾಡಿಕೊಳ್ಳಲು ಅದು ಪ್ರಾರಂಭಿಸಿತು.

## 146.6 ಚೀನಾ ಮತ್ತು ತೃತೀಯ ವಿಶ್ವ

ತೃತೀಯ ವಿಶ್ವದ ಏಷ್ಯ, ಆಫ್ರಿಕ ಮತ್ತು ಲ್ಯಾಟಿನ್ ಅಮೆರಿಕಾದ ಅಭಿವೃದ್ಧಿಶೀಲ ರಾಷ್ಟ್ರಗಳೊಂದಿಗೆ ಚೀನ ವಿಶೇಷ ಸಂಬಂಧವನ್ನು ವ್ಯಕ್ತಪಡಿಸಿತು. ಸಾಮ್ರಾಜ್ಯಷಾಹಿ ಮತ್ತು ನವ ವಸಾಹತುಷಾಹಿಗಳ ವಿರುದ್ಧದ ಹೋರಾಟ ಶಕ್ತಿಗಳನ್ನು ಬಲಪಡಿಸಲು ಚೀನಾ ತೃತೀಯ ಪ್ರಪಂಚದ ರಾಷ್ಟ್ರಗಳನ್ನು ಸ್ನೇಹಿತರಾಗಿ ಮಾಡಿಕೊಂಡಿತು. 1952 ರಿಂದ 1957 ರವರೆಗೆ ಚೀನಾ ತನ್ನ ಶಕ್ತಿಯನ್ನು ಮೂಡಿಪಾಗಿಟ್ಟಿತು. 1954-55 ರಲ್ಲಿ ಚೀನಾ ಆಫ್ರೋ-ಏಷ್ಯಾ ಪ್ರಪಂಚದ ಬಗ್ಗೆ ತನ್ನ ಧೋರಣೆಯನ್ನು ಬದಲಾಯಿಸಿತು. ಆಫ್ರೋ-ಏಷ್ಯಾ ರಾಷ್ಟ್ರಗಳ ಬಾಂಡುಂಗ್ ಸಮ್ಮೇಳನದಲ್ಲಿ ಚೌ ಎನ್ ಲಾಯ್‌ನು ತಟಸ್ಥ ರಾಷ್ಟ್ರಗಳಲ್ಲಿ ಸ್ನೇಹಿತರನ್ನು ಗಳಿಸಲು ಮಾತ್ರವಲ್ಲದೆ ಪಾಶ್ಚಿಮಾತ್ಯ ಪರವಾದ ರಾಷ್ಟ್ರಗಳ ಸ್ನೇಹವನ್ನು ಯಾಚಿಸಲು ತನ್ನ ಚಾಣಾಕ್ಷತೆಯನ್ನು ಬಳಸಿಕೊಂಡನು. ಹೀಗೆ ಆಫ್ರೋ-ಏಷ್ಯಾದ ಮತ್ತು ಇತರ ರಾಷ್ಟ್ರಗಳೊಂದಿಗೆ ಸ್ನೇಹ ಸಂಬಂಧಗಳನ್ನು ಏರ್ಪಡಿಸಿಕೊಳ್ಳಲು ಶಾಂತಿಯುತ ಸಹಬಾಳ್ವೆಯ ಐದು ತತ್ವಗಳನ್ನು ಆಧಾರವಾಗಿ ಅಳವಡಿಸಿಕೊಂಡನು. ಏಷ್ಯಾದಲ್ಲಿ ಸಾಮೂಹಿಕ ಸುರಕ್ಷತೆಯ ತತ್ವ ಮತ್ತು ಅಣ್ವಸ್ತ್ರಮುಕ್ತ ಶಾಂತಿ ವಲಯವಾದ ಸ್ಥಾಪನೆಗೂ ಚೀನ ಬೆಂಬಲ ನೀಡಿತು.

ಬಾಂಡುಂಗ್ ಉತ್ಸಾಹ ಬಹುಬೇಗನೆ ಮಾಯವಾಯಿತು. ಚೀನಾ ತೃತೀಯ ವಿಶ್ವದಲ್ಲಿ ಹಸ್ತಕ್ಷೇಪ ಮಾಡಿತಲ್ಲದೆ ಬುಡಮೇಲು ಕೃತ್ಯಗಳಲ್ಲಿ ತೊಡಗಿತ್ತು. ಚೀನೀಯರು ಅಲಿಪ್ತ ನೀತಿಯ ಮೇಲೆ ಗದಾಪ್ರಹಾರ ಮಾಡಿದರು. ಅದು ಭಾರತದೊಂದಿಗೆ ಗಡಿ ಘರ್ಷಣೆಯನ್ನು

ಪ್ರಚೋದಿಸಿತು. ಇದೇ ವೇಳೆಯಲ್ಲಿ ಚೀನಾದ ಸರ್ಕಾರ ಬರ್ಮಾ, ಲಾವೋಸ್, ಕಾಂಬೋರಿಯಾ, ಪಾಕಿಸ್ಥಾನ, ನೇಪಾಳ ಮತ್ತು ಇಂಡೋನೇಷ್ಯಾಗಳೊಂದಿಗೆ (1959-62) ಒಪ್ಪಂದಗಳು ಮತ್ತು ಕರಾರುಗಳಿಗೆ ಸಹಿ ಹಾಕಿತು. ಸೋವಿಯತ್ ಗಣರಾಜ್ಯದೊಂದಿಗೆ ಘರ್ಷಣೆಯು ತೃತೀಯ ವಿಶ್ವದ ರಾಷ್ಟ್ರಗಳ ಬಗ್ಗೆ ಚೀನಾದ ಧೋರಣೆಯಲ್ಲಿ ತೀಕ್ಷ್ಣವಾದ ಬದಲಾವಣೆಯ ಪ್ರಾರಂಭದ ಸೂಚನೆಯಾಗಿತ್ತು. ಜನತಾ ಹೋರಾಟದ ಸಿದ್ಧಾಂತವನ್ನು ಘೋಷಿಸಿದ ಮಾವೋ ಅದನ್ನು ನಡೆಸುವಂತೆ ಆಫ್ರೋ-ಏಷ್ಯಾ ಮತ್ತು ಲ್ಯಾಟಿನ್ ಅಮೆರಿಕಾದ ಜನರಿಗೆ ಕರೆ ನೀಡಿದನು. ಇಂಡೋನೇಷ್ಯಾ ಹಾಗೂ ಭಾರತದಲ್ಲಿ ಮಿಜೋ, ನಾಗ ಮತ್ತು ನಕ್ಸಲೀಯರ ಚಳುವಳಿಗಳು, ಫಿಲಿಪ್ಪೀನ್ಸ್ ಥಾಯ್ಲೆಂಡ್ ಮತ್ತು ಮಲೇಷ್ಯಾದ ಕ್ರಾಂತಿಕಾರಿಗಳಂತಹ ಪ್ರತ್ಯೇಕವಾದಿ ಚಳುವಳಿಗಳು ಮತ್ತು ವಿಚಿದ್ರಕಾರಿ ಚಳುವಳಿಗಳಿಗೆ ಬೆಂಬಲ ನೀಡುವ ಮೂಲಕ ಚೀನ ಹಸ್ತಕ್ಷೇಪ ನಡೆಸಿತು. ಈ ಚಟುವಟಿಕೆಗಳು ತೃತೀಯ ವಿಶ್ವದಲ್ಲಿ ಚೀನಾದ ಘನತೆಯ ಮೇಲೆ ವಿರುದ್ಧ ಪರಿಣಾಮ ಬೀರಿದವು.

ಚೀನಾ-ಸೋವಿಯತ್ ಘರ್ಷಣೆಯನ್ನು ಕೊನೆಗಾಣಿಸಲು ಸಾಧ್ಯವಿರಲಿಲ್ಲ. ಇದು ಗಡಿ ಘರ್ಷಣೆಗಳಿಗೆ ಕಾರಣವಾಯಿತು. ಇದರಿಂದ ಚೀನಾ, ಅಮೆರಿಕಾ ಮತ್ತು ತೃತೀಯ ವಿಶ್ವದ ಕಡೆಗೆ ತಿರುಗಿತ್ತು. ರಷ್ಯಾದ ವಿರುದ್ಧದ ತನ್ನ ಹೋರಾಟ ಮತ್ತು ತನ್ನದೇ ಆದ ನಾಯಕತ್ವದ ಯೋಜನೆಗಳಿಂದ ಚೀನಾ ತೃತೀಯ ವಿಶ್ವವನ್ನು ಪ್ರಮುಖ ಮೀಸಲನ್ನಾಗಿ ಪರಿವರ್ತಿಸಲು ಪ್ರಯತ್ನಿಸಿತು. ವಿಶ್ವ ಸಮತೋಲನವನ್ನು ತನ್ನ ಪೀಕಿಂಗ್ ಪರವಾಗಿ ತಿರುಗಿಸಲು ಅದು ತೃತೀಯ ಜಗತ್ತಿನ ಅಗಾಧವಾದ ಮಾನವ ಮತ್ತು ಆರ್ಥಿಕ ಸಂಪನ್ಮೂಲಗಳನ್ನು ಶೋಷಿಸಲು ಅದು ಪ್ರಯತ್ನಿಸಿತು. ಚೀನ ತನ್ನನ್ನು ತೃತೀಯ ವಿಶ್ವದ ನಾಯಕನೆಂದು ಘೋಷಿಸಿಕೊಂಡಿತು. ಅದು ಸೋವಿಯತ್ - ಅಮೆರಿಕ ಯುಗದ ಕೊನೆಯನ್ನು ಸಾರಿತು. ಆದರೆ ಇಂದು ಚೀನ ತೃತೀಯ ವಿಶ್ವದಲ್ಲಿ ತನ್ನ ನಾಯಕತ್ವವನ್ನು ಮುಂದೊಡ್ಡಲು ಪ್ರಯಾಸದ ಹೋರಾಟವನ್ನು ನಡೆಸಿದೆ.

## 146.7 ಚೀನ ಮತ್ತು ವಿಶ್ವಸಂಸ್ಥೆ

ವಿಶ್ವಸಂಸ್ಥೆಯ ಸ್ಥಾಪನೆಯ ಪ್ರಾರಂಭದಿಂದಲೂ ಅದರ ಸದಸ್ಯ ರಾಷ್ಟ್ರವಾಗಿರುವ ಚೀನಾದ ವಿಶ್ವಸಂಸ್ಥೆಯ ಪ್ರವೇಶವು ಅದರ ಪ್ರವೇಶದಿಂದಲ್ಲದೆ ಅದರ ಪ್ರಾತಿನಿಧ್ಯದ ದೃಷ್ಟಿಯಿಂದ ಪ್ರಶ್ನಾರ್ಥಕವಾಗಿದೆ. ವಿಶ್ವಸಂಸ್ಥೆಯಲ್ಲಿ ಚೀನೀ ಜನತಾ ಗಣರಾಜ್ಯ ಅಥವಾ ತೈವಾನಿನಲ್ಲಿ ನೆಲೆಯನ್ನು ಹೊಂದಿದ್ದ ಚೀನಾದ ಗಣರಾಜ್ಯ ಸರ್ಕಾರಗಳಲ್ಲಿ ಯಾವುದು ದೇಶವನ್ನು ಪ್ರತಿನಿಧಿಸಬೇಕೆಂಬುದೇ ಪ್ರಶ್ನೆಯಾಗಿತ್ತು. ಚೀನಾವನ್ನು ಸೇರಿಸಿಕೊಳ್ಳುವ ಪ್ರಸ್ತಾವನೆಯನ್ನು ಪದೇ ಪದೇ ವಿಶ್ವಸಂಸ್ಥೆಯ ಮುಂದಿಡಲಾಯಿತು. ಆದರೆ ಅಮೆರಿಕಾದ ವಿರೋಧದಿಂದಾಗಿ ವಿಷಯವನ್ನು ತಡೆಹಿಡಿಯಲಾಯಿತು. 1960 ರ ದಶಕದಲ್ಲಿ ವಿಶ್ವಸಂಸ್ಥೆಯಲ್ಲಿನ ಪೀಕಿಂಗ್ ಮತ್ತು ಉತ್ತರ ವಿಯಟ್ನಾಂನ ಅನುಪ ಸ್ಥಿತಿಯಿಂದ ವಿಯಟ್ನಾಂ ಯುದ್ಧದಲ್ಲಿ ಶಾಂತಿಯನ್ನು ಏರ್ಪಡಿಸುವ ತನ್ನ ಪಾತ್ರಕ್ಕೆ ವಿಶ್ವ ಸಂಘಟನೆಗೆ ಅಡಚಣೆಯಾಗುವುದೆಂದು ಅಮೆರಿಕ ಅರಿತುಕೊಂಡಿತು. ಎಡ್ವರ್ಡ್ ಕೆನಿಡಿಯು ವಿಶ್ವಸಂಸ್ಥೆಗೆ ಚೀನಾದ ಪ್ರವೇಶಕ್ಕೆ ಅಮೆರಿಕಾ ತನ್ನ ವಿರೋಧವನ್ನು ಹಿಂದಕ್ಕೆ ಪಡೆಯುವುದಕ್ಕೆ ಬೆಂಬಲ ನೀಡಿದನು. ಕೊರಿಯಾ ಯುದ್ಧದಿಂದ ವಿಶ್ವಸಂಸ್ಥೆಗೆ ತನ್ನ ಪ್ರವೇಶದವರೆಗೂ ವಿಶ್ವಸಂಸ್ಥೆಯನ್ನು "ಸಾಮ್ರಾಜ್ಯಶಾಹಿ ಹಿತಾಸಕ್ತಿಗೆ ಶ್ರಮಿಸಲು ಇರುವ ಅಮೆರಿಕಾದ ಕೈಗೊಂಬೆ" ಎಂಬುದಾಗಿ ಪ್ರಬಲವಾಗಿ ಟೀಕಿಸಿತು. ಚೀನಾ-ಸೋವಿಯತ್ ಸಂಘರ್ಷದ ನಂತರ ಚೀನಾ ವಿಶ್ವಸಂಘಟನೆಯನ್ನು ಅಮೆರಿಕ ಮತ್ತು ಸೋವಿಯತ್ ಒಕ್ಕೂಟಗಳ ನಡುವೆ ವ್ಯವಹರಿಸುವ ಷೇರು ವಿನಿಮಯ ಕೇಂದ್ರ" ವೆಂದು ಬಹಿರಂಗವಾಗಿ ಖಂಡಿಸಿತು. ಚೀನಾವನ್ನು ವಿಶ್ವಸಂಸ್ಥೆಯಿಂದ ಹೊರಗಿಟ್ಟುದುದು ಪ್ರಪಂಚದೊಂದಿಗೆ ಅದರ ಸಂಬಂಧಗಳಲ್ಲಿ ಅದು ಬೇಜವಬ್ದಾರಿಯಿಂದಿರುವಂತೆ ಮಾಡಿತ್ತು. ಅದು ಇತರ ರಾಷ್ಟ್ರಗಳೊಂದಿಗೆ ತನ್ನ ವ್ಯವಹಾರಗಳಲ್ಲಿ ಮಿತಿಮೀರಿ ಮೇಳೈಸಲು ಅವಕಾಶ ಮಾಡಿಕೊಡಲಾಗಿತ್ತು.

***ಚೀನಾದ ವಿಶ್ವಸಂಸ್ಥೆ ಯ ಪ್ರವೇಶ***

1968 ರ ನಂತರ ಚೀನಾ ತೃತೀಯ ಜಗತ್ತಿನ ಅನೇಕ ರಾಷ್ಟ್ರಗಳೊಂದಿಗೆ ಮತ್ತು ಚೀನಾ ವಿಶ್ವಸಂಸ್ಥೆಯನ್ನು ಪ್ರವೇಶಿಸಲು ಬೆಂಬಲ ನೀಡುವ ಯಾವುದೇ ಸರ್ಕಾರದೊಂದಿಗೆ ಸೌಹಾರ್ದ ಸಂಬಂಧಗಳನ್ನು ಏರ್ಪಡಿಸಿಕೊಳ್ಳಲು ಬಹಳವಾಗಿ ಶ್ರಮಿಸಿತು. ತನ್ನ ಬೆಂಬಲವನ್ನು ಪಡೆಯುವ ತಂತ್ರದಲ್ಲಿ ವಿರುದ್ಧ ಪಾಕಿಸ್ಥಾನಕ್ಕೆ ಬೆಂಬಲ ನೀಡಿತು. ಕಮ್ಯನಿಸ್ಟ್ ದಂಗೆಯ ವಿರುದ್ಧ ಜನರಲ್ ನುಮೇರಿಯ ಸರ್ಕಾರಕ್ಕೆ ಬೆಂಬಲ ನೀಡಿತು. ಯುವ ಕ್ರಾಂತಿಕಾರಿಗಳಿಂದ ಮಾವೋ ಮಾದರಿಯ ಚಳುವಳಿಯ ವಿರುದ್ಧ ಸಿಲೋನಿಗೆ ಬೆಂಬಲ ನೀಡಿತು. ಯುಗೋಸ್ಲಾವಿಯಾದ ವಿದೇಶಾಂಗ ಮಂತ್ರಿಯನ್ನು ಸ್ವಾಗತಿಸಿತು. ಚೀನಾದ ಖರ್ಚಿನಲ್ಲಿ ಸುಟ್ಟು ಹೋಗಿದ್ದ ಬ್ರಿಟಿಷ್ ರಾಯಭಾರಿ

ಕಛೇರಿಯನ್ನು ಪುನರ್ ನಿರ್ಮಿಸುವ ಮೂಲಕ ಬ್ರಿಟಿಷರ ಭಾವನೆಯನ್ನು ಸಮಾಧಾನಪಡಿಸಿತು; ಅನೇಕ ರಾಷ್ಟ್ರಗಳಿಗೆ ನೆರವನ್ನು ನೀಡಿತು ಮತ್ತು ಅಧ್ಯಕ್ಷ ನಿಕ್ಸನ್ನನೊಂದಿಗೆ ಮಾತುಕತೆ ನಡೆಸಿತು. ಅಮೆರಿಕಾದೊಂದಿಗೆ ಸಂಬಂಧವನ್ನು ಸುಧಾರಿಸಿಕೊಳ್ಳುವ ಮೂಲಕ ಚೀನಾ ಮೂರು ವಿಶಿಷ್ಟ ಅನುಕೂಲಗಳನ್ನು ಪಡೆಯಿತು.

1) ಚೀನಾದ ಮೇಲೆ ಅಮೆರಿಕ ಮತ್ತು ಸೋವಿಯತ್ ಒಕ್ಕೂಟಗಳ ಜಂಟಿ ಆಕ್ರಮಣದ ಸಾಧ್ಯತೆಗಳನ್ನು ಶಮನಗೊಳಿಸಿತು. ಚೀನಾದ ನೀತಿ ನಿರ್ಮಾಪಕರಿಗೆ ಇದು ಒಂದು ಗಂಭೀರ ದುಸ್ವಪ್ನವಾಗಿತ್ತು.

2) ತೈವಾನನ್ನು ಚೀನಾದೊಂದಿಗೆ ಸೇರಿಸಿಕೊಳ್ಳಲು ಇದು ಹಾದಿಯನ್ನು ಸುಗಮಗೊಳಿಸಿತು ಮತ್ತು

3) ಅನೇಕ ಆರ್ಥಿಕ ಅನುಕೂಲಗಳ ಜೊತೆಗೆ, ಅದು ವಿಶ್ವಸಂಸ್ಥೆಯಲ್ಲಿ ಚೀನಾದ ಸದಸ್ಯತ್ವಕ್ಕೆ ಹಾದಿಯನ್ನು ಸುಗಮಗೊಳಿಸಿತು. ಅಕ್ಟೋಬರ್ 1971 ರಲ್ಲಿ ಚೀನಾ ಭದ್ರತಾ ಸಮಿತಿಯಲ್ಲಿ ಖಾಯಂ ಸದಸ್ಯತ್ವ ಮತ್ತು ವಿಟೋ ಅಧಿಕಾರದೊಂದಿಗೆ ವಿಶ್ವಸಂಸ್ಥೆಯನ್ನು ಪ್ರವೇಶಿಸಿತು. ವಿಶ್ವಸಂಸ್ಥೆಗೆ ಚೀನಾದ ಪ್ರವೇಶದಿಂದ ವಿಶ್ವ ಸಂಘಟನೆಗೆ ಜ್ಞಾನೋದಯವಾಯಿತು ಮತ್ತು ಅದುವರೆಗೆ ಪ್ರಲೋಭಿಯಾಗಿದ್ದ, ಕೆಟ್ಟ ವಿಶದಂತಿದ್ದ ಮತ್ತು ಬೇಜವಾಬ್ದಾರಿಯುತವಾಗಿದ್ದ ಚೀನಾದ ಮೇಲೆ ಶಿಸ್ತು ಮತ್ತು ಜವಾಬ್ದಾರಿಯನ್ನು ಹೇರಿತು.

## 146.8 ಮುಕ್ತಾಯ

1. ಹೊಸದಾಗಿ ಆವಿಷ್ಕರಿಸಲಾದ ವಿವಿಧ ಕಾಲದಲ್ಲಿ, ವಿವಿಧ ರಾಷ್ಟ್ರಗಳೊಂದಿಗೆ ತನ್ನ ಸಮೀಕರಣ ಸಿದ್ಧಾಂತದೊಂದಿಗೆ ಅಂತರರಾಷ್ಟ್ರೀಯ ಸಂಬಂಧಗಳೆಲ್ಲ ತನ್ನ ಪ್ರಾಬಲ್ಯಕ್ಕೆ ಪ್ರಯತ್ನಿಸಿದ್ದರಿಂದ ಕಮ್ಯುನಿಸ್ಟ್ ಚೀನಾದ ಏಳಿಗೆ, ವಿಶ್ವ ರಾಜಕೀಯದಲ್ಲಿ ಅದರ ಪ್ರವೇಶವು ತನ್ನದೇ ಆದ ಭಿನ್ನತೆಯಿಂದ ಕೂಡಿದೆ.

2. ಚೀನಾ-ಸೋವಿಯತ್ ಸಂಬಂಧಗಳು ಪ್ರಾರಂಭದಿಂದಲೂ ಊಹಾತೀತವಾದ ಏರಿಳಿತಗಳಿಂದ ಮಹತ್ವಪೂರ್ಣವಾಗಿವೆ. ಅಲ್ಪಕಾಲದ ಮಧುಚಂದ್ರದ ನಂತರ ತೀವ್ರವಾದ ಭಿನ್ನಾಭಿಪ್ರಾಯಗಳು ಅವುಗಳ ನಡುವೆ ಅಂತರವನ್ನು ಹೆಚ್ಚಿಸಿದವು.

3. 1962 ರಿಂದ ಚೀನಾ-ಸೋವಿಯತ್ ಹಗೆತನ ತೀವ್ರಗೊಂಡು ಅವು ಪರಸ್ಪರ ದೋಷಾರೋಪಣೆ ಮತ್ತು ಪ್ರತ್ಯಾಪಾಧನೆಯಲ್ಲಿ ತೊಡಗಿದವು. ಇದು ಅಂತಿಮವಾಗಿ 1965 ರಲ್ಲಿ ಗಡಿ ಘರ್ಷಣೆ ಮತ್ತು ಗುಂಡಿನ ಚಕಮಕಿಗೆ ಕಾರಣವಾಯಿತು.

4. ಪಾಶ್ಚಿಮಾತ್ಯ ದೇಶಗಳನ್ನು. ಚೀನಾ ಸಾಮ್ರಾಜ್ಯಷಾಹಿಗಳೆಂದು ಬಹಿರಂಗವಾಗಿ ಖಂಡಿಸಿತು.

5. ಅಮೆರಿಕಾವನ್ನು 'ಬಿಳಿಯ ಗಂಡಾಂತರ' ವೆಂದು ಬಹಿರಂಗವಾಗಿ ಖಂಡಿಸುವ ಮೂಲಕ ಚೀನಾ ಅಮೆರಿಕಾದ ಮೇಲೆ ತೀವ್ರವಾದ ವಾಗ್ದಾಳಿಯನ್ನು ನಡೆಸಿತು. ತಡೆಯುವ ಮತ್ತು ಸಂಘರ್ಷದ ನೀತಿಯಿಂದ ಪಿಂಗ್ ಪಾಂಗ್ ರಾಜತಂತ್ರ ನೈಪುಣ್ಯದ ನೀತಿಯವರೆಗೆ ಚೀನಾ-ಸೋವಿಯತ್ ಸಂಬಂಧಗಳ ಆಸಕ್ತಿದಾಯಕ ಪಕ್ಷಿನೋಟವನ್ನು ಒದಗಿಸುತ್ತದೆ. 1950 ರಿಂದ 1972 ರವರೆಗೆ ಅವು ಎರಡು ವಿರುದ್ಧ ಧೃವಗಳಂತಿದ್ದವು. 1972 ರ ನಂತರ ಚೀನ-ಅಮೆರಿಕಾ ಸಂಬಂಧ ಸುಧಾರಣೆಯು ಸಂಬಂಧಗಳಲ್ಲಾದ ಬದಲಾವಣೆಯನ್ನು ಸೂಚಿಸುತ್ತದೆ.

6. ತೃತೀಯ ಜಗತ್ತಿನ ರಾಷ್ಟ್ರಗಳ ಬಗ್ಗೆ (ಏಷ್ಯಾ, ಆಫ್ರಿಕಾ ಮತ್ತು ಲ್ಯಾಟಿನ್ ಅಮೆರಿಕಾ) 1952 ರಿಂದ 1957 ರ ನಡುವೆ ಚೀನ ವಿಶೇಷ ರಕ್ತಸಂಬಂಧವನ್ನು ವ್ಯಯಕ್ತಪಡಿಸಿತು ಮತ್ತು ಬಾಂಡುಂಗ್ ಸಮ್ಮೇಳನದಲ್ಲಿ ಅದನ್ನು ಸಮರ್ಥಿಸಿಕೊಂಡಿತು. ಆದರೆ ನಂತರ ತನ್ನ ವಿಚಿತ್ರಕಾರಿ ಚಟುವಟಿಕೆಗಳಿಂದ ತೃತೀಯ ಜಗತ್ತಿನ ರಾಷ್ಟ್ರಗಳಲ್ಲಿ ಅದರ ಘನತೆಗೆ ಭಂಗವುಂಟಾಯಿತು.

7. ಕಡೆಯದಾಗಿ, ಚೀನಾದ ವಿಶ್ವಸಂಸ್ಥೆಯ ಪ್ರವೇಶ ಮಹತ್ವದ ವಿಷಯವಾಗಿತ್ತು. ವಿಶ್ವಸಂಸ್ಥೆಯ ಮಾನ್ಯತೆಯಿಂದ ಅದನ್ನು 1960 ರ ದಶಕದವರೆಗೆ ಅಮೆರಿಕ ತಡೆಯಿತು. ನಂತರ ಅಮೆರಿಕಾದ ಧೋರಣೆಯಲ್ಲಾದ ಬದಲಾವಣೆ ಮತ್ತು ತೃತೀಯ ಜಗತ್ತಿನ ರಾಷ್ಟ್ರಗಳ ಬೆಂಬಲದಿಂದ ಚೀನಾ ಅಕ್ಟೋಬರ್ 1971 ರಲ್ಲಿ ವಿಶ್ವಸಂಸ್ಥೆಗೆ ಪ್ರವೇಶವನ್ನು ಪಡೆಯಿತು.

## 146.9 ಮಾದರಿ ಪ್ರಶ್ನೆಗಳು

1. 1962 ರವರೆಗಿನ ಚೀನಾ-ಸೋವಿಯತ್ ಸಂಬಂಧಗಳನ್ನು ಸವಿಸ್ತರವಾಗಿ ವಿವರಿಸಿ.
2. 1962 ರಿಂದ ಚೀನಾ-ಸೋವಿಯತ್ ಸಂಬಂಧಗಳ ಬೆಳವಣಿಗೆಯನ್ನು ಗುರುತಿಸಿ.
3. ಚೀನಾ-ಅಮೆರಿಕಾ ಸಂಬಂದಗಳ ವಿವಿಧ ಹಂತಗಳನ್ನು ಪರಿಶೀಲಿಸಿ.
4. ತೃತೀಯ ಜಗತ್ತಿನ (ವಿಶ್ವದ) ರಾಷ್ಟ್ರಗಳ ಬಗ್ಗೆ ಚೀನಾದ ವಿದೇಶಾಂಗ ನೀತಿಯ ಸ್ವರೂಪವನ್ನು ನಿರೂಪಿಸಿ.
5. "ಚೀನಾ ಮುಂದಿನ ಐದು ವರ್ಷಗಳ ಕಾಲ ವಿಶ್ವದ ರಾಜಕೀಯದ ಕೀಲಿಕೈಯನ್ನು ಹೊಂದಿರುತ್ತದೆ" ಈ ಹೇಳಿಕೆಯನ್ನು ಪರಿಶೀಲಿಸಿ.

## 146.10 ಹೆಚ್ಚಿನ ಅಧ್ಯಯನಕ್ಕೆ ಗ್ರಂಥಗಳು


1. Barnett Doak : Communist China and Asia (1964)
2. Benjamin Sehwartz : Chinese Communism and the rise of Mao (1967)
3. Claude Buss : The Far East (1955)
4. Clubb .O. Edmond : Twenteeth Century China (1966)
5. Croft and Buchanan : A History of the Far East (1961)
6. Deutschar Issacs : Russia China and the west (1970)
7. Dr. Devendra Kaushik : China and the Third World (1975)

## ಟಿಪ್ಪಣಿಗಳು

# ಘಟಕ - 147

## ಚೀನ - ಭಾರತ ಸಂಬಂಧಗಳು

147.0 ಉದ್ದೇಶಗಳು

147.1 ಪೀಠಿಕೆ

147.2 ಗಡಿ ಸಮಸ್ಯೆ

147.2.1 ನೆಹರು ಪ್ರಯತ್ನ

147.2.2 ಟಿಬೆಟ್‌ನ ವಶ

147.3 ಪಥದ ಬದಲಾವಣೆ

147.3.1 ದೂರವಾದ ಸಂಬಂಧ ಸುಧಾರಣೆ

147.3.2 ಭಾರತದ ವಿರುದ್ಧ ಕಾರ್ಯಾಚರಣೆ

147.3.3 ಕಾಶ್ಮೀರ ಸಮಸ್ಯೆ

147.3.4 1964-65 ರಲ್ಲಿದ್ದಂತೆ ಭಾರತ

147.4 ಭಾರತದಲ್ಲಿ ಕ್ರಾಂತಿಯ ಬಗ್ಗೆ ಚೀನಿಯರ ತಪ್ಪು ಕಲ್ಪನೆ

147.4.1 ಚೀನ ಮತ್ತು ಶ್ರೀಮತಿ ಇಂದಿರಾ ಗಾಂಧಿ

147.4.2 ಹೆಚ್ಚಿದ ಘರ್ಷಣೆಗಳು

147.4.3 ಭಾರತದಲ್ಲಿ ಹೆಚ್ಚಿನ ಕೋಪಾಗ್ನಿ

147.5 ಕರಗಿದ ಭರವಸೆಗಳು

147.5.1 ಮಾವೋನ ಭಂಗಿ

147.5.2 ಬಾಂಗ್ಲಾ ದೇಶದ ಘಟನೆ

147.6 ಬಾಂಗ್ಲಾ ದೇಶದ ಬಿಕ್ಕಟ್ಟು ಮತ್ತು ಚೀನ-ಭಾರತ ಸಂಬಂಧ

147.6.1 ಪಾಕಿಸ್ಥಾನಕ್ಕೆ ನೆರವು

147.6.2 ಚೀನಿಯರ ಅಸಹಾಯಕತೆ

147.6.3 ಭಾರತದ ಅಣ್ವಸ್ತ್ರ ಸ್ಫೋಟ

147.6.4 ಸಿಕ್ಕಿಂ ಘಟನೆ (ಪ್ರಕರಣ)

147.7 ಪಿಂಗ್ ಪಾಂಗ್ ರಾಜತಂತ್ರ ನೀತಿ

147.7.1 ಸಾಮಾನ್ಯ ಸ್ಥಿತಿಗೆ ತರುವ ಪ್ರಯತ್ನಗಳು ( ಸಹಜ ಸ್ಥಿತಿಗೆ ತರವು ಪ್ರಯತ್ನಗಳು)

147.7.2 ಬೆಂಬತ್ತಿದ ಸಮಸ್ಯೆಗಳು

147.7.3 ದಲ್ಲೈಲಾಮ ಸಮಸ್ಯೆ

147.8 1977 ರ ನಂತರ ಸಹಜ ಸ್ಥಿತಿಯ ಕಡೆಗೆ ಹಾದಿ

147.8.1 ಮಾವೋನ ನಂತರ

147.8.2 ರಾಜತಾಂತ್ರಿಕರ ವಿನಿಮಯ

147.8.3 ಜಾಡು ಹಿಡಿಯುವುದು

147.8.4 ಬದಿಗಿರಿಸಿದ ಗಡಿ ಸಮಸ್ಯೆ

147.9 ಉತ್ತರ - ದಕ್ಷಿಣ ಸಮ್ಮೇಳನದ ನಂತರ (ಮೈಕ್ಸಿಕೊ 1981)

147.9.1 ವಿಸ್ತರಿಸಿದ ಸಂಬಂಧಗಳು

147.9.2 1981 ರ ಒಪ್ಪಂದ ಮತ್ತು ನಂತರ

147.10 ಅಂತರವನ್ನು ಇಳಿಸುವ ಕಡೆಗೆ

147.10.1 ಅಡ್ಡಗೋಡೆ

147.10.2 ದಕ್ಷಿಣ ಏಷ್ಯಾದ ರಂಗಭೂಮಿ

147.11 ಧೋರಣೆಯ ಬದಲಾವಣೆಯ ಕಡೆಗೆ

147.12 ಮುಕ್ತಾಯ/ಪರಿಸಮಾಪ್ತಿ

147.13 ಮಾದರಿ ಪ್ರಶ್ನೆಗಳು

147.14 ಹೆಚ್ಚಿನ ಅಧ್ಯಯನಕ್ಕೆ ಪುಸ್ತಕಗಳು

## 147.0 ಉದ್ದೇಶಗಳು

ಈ ಘಟಕದ ಅಧ್ಯಯನದಿಂದ ನೀವು ಕೆಳಕಂಡ ಅಂಶಗಳ ಬಗ್ಗೆ ಸೂಕ್ತ ಅರಿವನ್ನು ಪಡೆಯಲು ಸಾಧ್ಯವಾಗುತ್ತದೆ.

1. ಚೀನಾ ಮತ್ತು ಭಾರತಗಳ ನಡುವೆ ಸಂಬಂಧಗಳು ಹದಗೆಡಲು ಕಾರಣವಾದ ಗಂಭೀರ ಗಡಿ ವಿವಾದ
2. ಪಾಕಿಸ್ಥಾನ, ಸಿಕ್ಕಿಂ, ಟಿಬೆಟ್ ಮತ್ತು ಬಾಂಗ್ಲಾ ದೇಶಗಳನ್ನೊಳಗೊಂಡ ಸಮಸ್ಯೆಗಳಲ್ಲಿ ಭಾರತದ ವಿರುದ್ಧ ಚೀನಾದ ಹಗೆತನದ ಧೋರಣೆ
3. 1970 ರ ನಂತರ ಘರ್ಷಣೆಗಳನ್ನು ಕಡಿಮೆ ಮಾಡಲು ಪೀಕಿಂಗ್‌ನ ಪ್ರಯತ್ನ, ಪಿಂಗ್-ಪಾಂಗ್ ರಾಜತಂತ್ರ ನೀತಿಯ ಬಳಕೆ, ದ್ವಿಪಕ್ಷೀಯ ಮಾತುಕತೆಗಳನ್ನು ಪುನರಾರಂಭ, ರಾಜತಾಂತ್ರಿಕ ವಿನಿಮಯ ಮತ್ತು ಸಂಬಂಧಗಳ ವಿಸ್ತರಣೆ
4. 1981 ರ ಸುಮಾರಿನಲ್ಲಿ ಕುದಿಯುತ್ತಿದ್ದ ಅಸಮಧಾನ ಮತ್ತು ದಕ್ಷಿಣ ಏಷ್ಯಾ, ಆಗ್ನೇಯ, ಏಷ್ಯಾ ಹಾಗೂ ಮಧ್ಯ ಏಷ್ಯಗಳಲ್ಲಿ ಭಾರತದ ಸ್ಥಾನಮಾನದ ಬಗ್ಗೆ ಚೀನಾದ ಕಲ್ಪನೆ

## 147.1 ಪೀಠಿಕೆ

ಭಾರತ ಮತ್ತು ಚೀನ, ಏಷ್ಯಾದ ಎರಡು ದೈತ್ಯ ಶಕ್ತಿಗಳು, ಜನಸಂಖ್ಯೆ ಮಾನವ ಸಂಪನ್ಮೂಲಗಳು ಮತ್ತು ಅವಕಾಶಗಳಲ್ಲಿ (ಸಾಮರ್ಥ್ಯಗಳಲ್ಲಿ) ಅವು ಏಷ್ಯಾದ ಇತರ ಎಲ್ಲಾ ರಾಷ್ಟ್ರಗಳನ್ನು ಮೀರಿಸುತ್ತವೆ. ಅವು ನೆರೆಹೊರೆಯ ರಾಷ್ಟ್ರಗಳೂ ಆಗಿದ್ದು, ಅವುಗಳ ಅಗಮ್ಯ ಹಿಮಾಲಯದ ಗಡಿಗಳನ್ನು ಆಧುನಿಕ ತಂತ್ರಜ್ಞಾನದಿಂದ ಕ್ರಮಿಸಲು ಸ್ವಲ್ಪಮಟ್ಟಿಗೆ ಸುಲಭ ಸಾಧ್ಯವಾಗಿದೆ.

## 147.2 ಗಡಿ ಸಮಸ್ಯೆ

ಭೌಗೋಳಿಕವಾಗಿ ಚೀನ ಕೆಲವು ಸ್ವಾಭಾವಿಕ ಅನುಕೂಲಗಳನ್ನು ಹೊಂದಿದೆ. ಅದು ನೈಜವಾಗಿಯೂ ತನ್ನ ಟಿಬೆಟ್ ಮತ್ತು ಸಿಂಕಿಯಾಂಗ್‌ನ ಎತ್ತರದ ಪರ್ವತಗಳಿಂದ ಕೆಳಗಿರುವ ಬೆಟ್ಟಗಳು ಮತ್ತು ಬಯಲುಗಳನ್ನು ನೋಡಬಹುದಾಗಿದೆ. ಅದು ಪ್ರಾರಂಭದಿಂದಲೂ ಗಡಿಯ ಪೂರ್ವ ಮತ್ತು ಪಶ್ಚಿಮ ವಲಯಗಳೆರಡರಲ್ಲೂ ತನ್ನ ಸ್ಥಾನವನ್ನು ಭದ್ರಪಡಿಸಿಕೊಳ್ಳಲು ಅಪಾರ ಶ್ರಮ ವಹಿಸಿದೆ. ತನ್ನದೆಂದು ಹೇಳಿಕೊಳ್ಳುವ ಆದರೆ ಭಾರತದೊಂದಿಗೆ ವಿವಾದದಲ್ಲಿರುವ ಗಡಿಯಲಿ ತನ್ನ ಸೈನಿಕ ಸ್ಥಾನವನ್ನು ಬಲಪಡಿಸಿಕೊಳ್ಳಲು ಪ್ರಯತ್ನಿಸುತ್ತಾ ಬಂದಿದೆ. ಕ್ರಮೇಣ ಭಾರತದ ಕಾಶ್ಮೀರ ಪ್ರದೇಶಗಳಲ್ಲಿ ಹಾದು ಹೋಗುವ ಸಿಂಕಿಯಾಂಗ್ ಅನ್ನು ಪಾಕಿಸ್ಥಾನದೊಂದಿಗೆ ಕೂಡಿಸುವ ಕರಾಕೊರಾನ್ ಹೆದ್ದಾರಿಯ ನಿರ್ಮಾಣವು ಭೌಗೋಳಿಕ ಅನುಕೂಲತೆಯನ್ನು ಪೀಕಿಂಗ್‌ನ ಪರವಾಗಿ ಗಮನಾರ್ಹವಾಗಿ ತಿರುಚಿದೆ.

ಚೀನಾದ ಹಕ್ಕು ಚಲಾವಣೆಯಿಂದಾಗಿ ಭಾರತ ಗಡಿ ಪ್ರದೇಶಗಳಲ್ಲಿ ತನ್ನ ಇರುವಿಕೆಯನ್ನು ಸಾಬೀತುಪಡಿಸಲು ಕಷ್ಟಪಡಬೇಕಾಗಿದ್ದಿತು. ಹೊಸ ಪ್ರಾದೇಶಿಕ ಮತ್ತು ಅಂತರ ರಾಷ್ಟ್ರೀಯ ಸನ್ನಿವೇಶದಲ್ಲಿ ನೆಹರೂರವರಿಗೆ ಸಂಬಂಧಗಳಲ್ಲಿ ಅಡಗಿದ್ದ ಸಂಭವನೀಯ ಸಮಸ್ಯೆಗಳ ರಾಜಕೀಯ ಅರಿವಿನ ಕೊರತೆಯಿರಲಿಲ್ಲ. ಚೀನಾದಲ್ಲಿ ಬಲಿಷ್ಠ ಕೇಂದ್ರ ಸರ್ಕಾರವಿದ್ದಾಗಲೆಲ್ಲ ಅದು ತನ್ನ ಗಡಿಗಳನ್ನು ವಿಸ್ತರಿಸಲು ಪ್ರಯತ್ನಿಸಿದ್ದುದನ್ನು ಅವರು ಗಮನಿಸಿದ್ದರು. ಜವಹರಲಾಲ್ ನೆಹರೂರವರು ಚೀನಾದಲ್ಲಿ ನಡೆದುದು ಕೇವಲ ಅರಮನೆಯ ದಂಗೆಯಲ್ಲಿ ಬದಲಾಗಿ ಬಡಮಟ್ಟದ ಕ್ರಾಂತಿಯೆಂಬುದನ್ನು ಮನಗಂಡರು.

### *147.2.1 ನೆಹರೂರವರ ಪ್ರಯತ್ನ*

ಇತಿಹಾಸದಿಂದ ಪಾಠ ಕಲಿತ ನೆಹರೂ ಚೀನಾದ ಕ್ರಾಂತಿಯೊಂದಿಗೆ ಸ್ನೇಹ ಬೆಳೆಸುವ, ಹೊಸ ಚೀನಾವನ್ನು ವಿಶ್ವ ಸಮುದಾಯದ ಮುಖ್ಯವಾಹಿನಿಯಲ್ಲಿ ತರುವ, ಸಂಪರ್ಕಗಳನ್ನು ಪ್ರೋತ್ಸಾಹಿಸುವ, ಘರ್ಷಣೆಗಳನ್ನು ಮತ್ತು ಸಂಶಯಗಳನ್ನು ಕಡಿಮೆ ಮಾಡುವ ಸಾಮಾನ್ಯ ಸಂಬಂಧಗಳನ್ನು ಸ್ಥಾಪಿಸುವ ನೀತಿಯನ್ನು ಪ್ರತಿಪಾದಿಸಿದರು. ಆ ಮೂಲಕ ನೆಹರೂ ಚೀನಾದೊಂದಿಗೆ ಘರ್ಷಣೆಯನ್ನು ತಡೆಯುವ ಉತ್ತರದ ಗಡಿಗಡಿಗಳಲ್ಲಿ ಸುರಕ್ಷತೆ ಮತ್ತು ಶಾಂತಿಯನ್ನು ಕಾಪಾಡುವ ಭರವಸೆಯನ್ನು ಹೊಂದಿದ್ದರು. ಆದರೆ ಚೀನಾದ

ಅನೇಕ ಉದ್ದೇಶಗಳನ್ನು ಈಡೇರಿಸುವುದು ನೆಹರೂ ಕೈಯಲ್ಲಿರಲಿಲ್ಲ. ಪ್ರಬಲ ರಾಷ್ಟ್ರಗಳಲ್ಲಿ ಒಂದೆಂದು ಚೀನಾವನ್ನು ಮಾನ್ಯ ಮಾಡಿದುದು. ವಿಶ್ವಸಂಸ್ಥೆಯಲ್ಲಿ ಮತ್ತು ಭದ್ರತಾ ಸಮಿತಿಯಲ್ಲಿ ವಿಟೋ ಅಧಿಕಾರದೊಂದಿಗೆ ಅದರ ಸ್ಥಾನ ಮತ್ತು ಏಷ್ಯಾದ ಸಮಸ್ಯೆಗಳ ನಿರ್ಣಯಗಳಲ್ಲಿ ಅದಪ ಪಾತ್ರ, ಮುಖ್ಯ ಭೂಮಿಯೊಂದಿಗೆ ತೈವಾನಿನ ಏಕೀಕರಣ, ಬಂಡವಾಳ ಮತ್ತು ತಂತ್ರಜ್ಞಾನ-ಇವುಗಳೆಲ್ಲವೂ ನಿಜವಾಗಿಯೂ ನೆಹರೂರವರ ಕೈಯಲ್ಲಿರಲಿಲ್ಲ. ಇದರಲ್ಲಿ ಅಮೆರಿಕಾದ ಧೋರಣೆ ಮತ್ತು ನಿಲುವಿನ ಪಾತ್ರ ಮುಖ್ಯವಾಗಿತ್ತು. ವಾಷಿಂಗ್‌ಟನ್ ನಿರ್ದಯವಾದ ಹಗೆತನ ಮತ್ತು ವಿನೋದಗಳ ಮುಂದೆ ನೆಹರೂರವರ ಪ್ರಯತ್ನಗಳು ಮುರಿದು ಬಿದ್ದವು.

### *147.2.2 ಟಿಬೆಟ್ ಆಕ್ರಮಣ*

ಚೀನಾದೊಂದಿಗೆ ಸಾಮಾನ್ಯ ಸಂಬಂಧಗಳನ್ನು ಬೆಳೆಸುವ ಭಾರತದ ವಿಫಲ ಪ್ರಯತ್ನಗಳು ಬಹಳ ವರ್ಷಗಳವರೆಗೆ ಮುಂದುವರಿದವು. ವಿಶ್ವ ಶಾಂತಿಯ ಹಿತಾಸಕ್ತಿಯಿಂದ ಜವಹರಲಾಲ್ ನೆಹರೂ ಕೆಲವು ದ್ವಿಪಕ್ಷೀಯ ಸಮಸ್ಯೆಗಳಲ್ಲಿ ಹೊಂದಾಣಿಕೆ ಮಾಡಿಕೊಂಡಿದ್ದರು. ಸ್ವಾತಂತ್ರ್ಯಾನಂತರ ಟಿಬೆಟ್ ಭಾರತ-ಚೀನಾ ಸಂಬಂಧಗಳ ಮೇಲೆ ಮೋಡವನ್ನು ಕವಿಸಿತು. ಟಿಬೆಟ್ಟಿನ ಮೇಲೆ ಚೀನಾದ ಪಡೆಗಳ ದಾಳಿ ಭಾರತ-ಚೀನಾ ದೃಷ್ಯದ ಮೇಲೆ ಪರಿಣಾಮ ಬೀರಿತು. ಆದರೆ ನೆಹರೂ ಅತ್ಯಲ್ಪವಾದುದನ್ನು ಮಾಡಲು ಮಾತ್ರವೇ ಸಾಧ್ಯವಾಯಿತು. ಟಿಬೆಟ್ ತನ್ನ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಲು ಅದರಲ್ಲಿ ಮಧ್ಯ ಪ್ರವೇಶಿಸಲು ಮತ್ತು ಸಹಾಯ ಮಾಡಲು ಭಾರತದ ಬಳಿ ಸೈನ್ಯದ ಬಲವಿರಲಿಲ್ಲ. ಟಿಬೆಟ್ಟಿನ ವಿಷಯದಲ್ಲಿ ಭಾರತ ಎರಡು ರೀತಿಯಲ್ಲಿ ಭಿನ್ನಾಭಿಪ್ರಾಯಗಳನ್ನು ಬಗೆಹರಿಸಲು ಪ್ರಯತ್ನಿಸಿತು.

1. ಟಿಬೆಟ್ಟಿನ ಮೇಲೆ ಚೀನಾದ ಸಾರ್ವಭೌಮಾಧಿಕಾರವನ್ನು ಒಪ್ಪಿಕೊಳ್ಳುವುದು ಮತ್ತು

2. ಟಿಬೆಟ್ಟಿನ ಸ್ವಾಯತ್ತತೆಯನ್ನು ಕಾಪಾಡುವುದು. ಒಂದು ಸಾರಿ ಚೀನಿಯರು ಟಿಬೆಟ್ಟನ್ನು ಪ್ರವೇಶಿಸಿದ ನಂತರ ಟಿಬೆಟ್ಟಿನ ಸ್ವಾಯತ್ತತೆಯ ಭರವಸೆಯ ಮಾರ್ಗವೇ ಇರಲಿಲ್ಲ. ಗಡಿ ಹೊಂದಾಣಿಕೆಯಲ್ಲಿ ರಿಯಾಯಿತಿಗಳನ್ನು ಪಡೆಯುವುದಕ್ಕೆ ಪ್ರತಿಯಾಗಿ ಚೀನಾದ ಸಾರ್ವಭೌಮಾಧಿಕಾರವನ್ನು ಸಂಪೂರ್ಣವಾಗಿ ಒಪ್ಪಿಕೊಳ್ಳುವುದೇ ಭಾರತಕ್ಕೆ ಅತ್ಯುತ್ತಮವಾಗಬಹುದಿದ್ದಿತು. ಚೀನಾ ಪ್ರಸ್ತಾವನೆಯನ್ನು ತಿರಸ್ಕರಿಸಿದಲ್ಲಿ ಭಾರತ ನಂತರದ ಘರ್ಷಣೆಗೆ ಉತ್ತಮವಾಗಿಯೇ ಸಿದ್ಧವಾಗಿದ್ದಿತು.

ಆದಾಗ್ಯೂ ಭಾರತ ಮತ್ತು ಚೀನಾಗಳ ನಡುವಿನ ಶಾಂತಿ ವಿಶ್ವಶಾಂತಿಯ ಹಿತದೃಷ್ಟಿಯಿಂದ ಕೊರಿಯಾ ಯುದ್ಧದ ಕಾಲದಲ್ಲಿ ಮತ್ತು ಟಿಬೆಟ್ಟಿನ ಸಮಸ್ಯೆಯಲ್ಲಿ ಚೀನಾದೊಂದಿಗೆ ಸ್ನೇಹ ಸೇತುವೆಯನ್ನು ನಿರ್ಮಿಸುವ ಪ್ರಮುಖ ಗುರಿಯನ್ನು ಮುಂದುವರಿಸಿದರು. ಕೆಲವು ಕಾಲ ಈ ಪ್ರದೇಶದಲ್ಲಿ ಭಾರತ ಮತ್ತು ಚೀನಾದ ನೀತಿಗಳಲ್ಲಿ ಗಣನೀಯ ಹೋಲಿಕೆಯಿದ್ದಿತು (ಹೊಂದಾಣಿಕೆ) ಆಗ ಚೀನ ಅಮೆರಿಕಾದ ಸುತ್ತುವರಿಕೆಯನ್ನು ಮರೆಯಲು ಮತ್ತು ಈ ಉದ್ದೇಶದಿಂದ ಸಾಧ್ಯವಾದಷ್ಟೂ ಏಷ್ಯಾ-ಆಫ್ರಿಕಾದ ದೇಶಗಳೊಂದಿಗೆ ಹೊಂದಾಣಿಕೆ ಮಾಡಿಕೊಳ್ಳಲು ಪ್ರಬಲವಾದ ಪ್ರಯತ್ನವನ್ನು ಮಾಡಿತು. ಶಾಂತಿ ವಲಯದ ಮಾರ್ಗದ ಪ್ರತಿಪಾದನೆಯ ಮೂಲಕ ಭಾರತ ಏಷ್ಯಾದಲ್ಲಿ ಸೈನಿಕ ಒಕ್ಕೂಟ ರಚನೆಯ ಅಮೆರಿಕಾದ ನೀತಿಯನ್ನು ವಿರೋಧಿಸಿತು. ವಾಷಿಂಗ್‌ಟನ್ನಿನ ಅಸಮಧಾನದ ಅಪಾಯವಿದ್ದಾಗ್ಯೂ ವಿಶ್ವಸಂಸ್ಥೆ ಮತ್ತು ಇನ್ನಿತರ ಕರೆಗಳಲ್ಲಿ ಭಾರತ ಅನೇಕ ವಿಷಯಗಳಲ್ಲಿ ಚೀನಾಕ್ಕೆ ಬೆಂಬಲ ನೀಡಿದ್ದುದು ಈ ಹೊಂದಾಣಿಕೆಯಲ್ಲಿ ಒಂದು ಚಿಕ್ಕ ಅಂಶವಾಗಿರಲಿಲ್ಲ. ಭಾರತ ಮತ್ತು ಚೀನಾಗಳ ನಡುವೆ ಸಂಬಂಧಗಳು ಅಭಿವೃದ್ಧಿಹೊಂದಿದವು ಮತ್ತು ಕೆಲವು ವರ್ಷಗಳ ಕಾಲ ಅತ್ಯಂತ ನಿಕಟ ಹಾಗೂ ಸೌಹಾರ್ಧಯುತವಾಗಿದ್ದವು.

## 147.3 ಪಥ ಬದಲಾವಣೆ

### *147.3.1 ದೂರವಾದ ಸಂಬಂಧ ಸುಧಾರಣೆ*

ಆದಾಗ್ಯೂ ಅಮೆರಿಕಾದ ಪ್ರಾಬಲ್ಯಕ್ಕೊಳಪಟ್ಟ ಅಂತರರಾಷ್ಟ್ರೀಯ ಸಮುದಾಯದೊಂದಿಗೆ ಚೀನಾ ಬಹುಬೇಗನೆ ವಿರಸಗೊಂಡಿತು. ತನ್ನ ರಾಷ್ಟ್ರೀಯ ಗುರಿಗಳು ಸಾಕಾರಗೊಳ್ಳದಿದುಕ್ಕಾಗಿ ಅದು ಸಂಬಂಧ ಸುಧಾರಣೆ ಮತ್ತು ಶಾಂತಿಯುತ ಸಹಬಾಳ್ವೆಯಿಂದ ದೂರ ಸರಿಯಿತು. ಈ ನಂತರ ಪೀಕಿಂಗ್ ಭಿನ್ನಾಭಿಪ್ರಾಯಗಳು ಮತ್ತು ಅಂತರ ರಾಷ್ಟ್ರೀಯ ಉದ್ವಿಘ್ನತೆಗಳನ್ನು ಹೆಚ್ಚಿಸುವ ನೀತಿಯನ್ನು ಅನುಸರಿಸತೊಡಗಿತು. ಚೀನಾ ಮತ್ತು ಭಾರತದ ವಿದೇಶಾಂಗ ನೀತಿಗಳ ವಿರುದ್ಧ ಹಾದಿಯಲ್ಲಿ ಸಾಗಿದವು. ವಾಷಿಂಗ್ಟನ್ ಮತ್ತು

ಮಾಸ್ಕೋಗಳೆರಡರೊಂದಿಗೂ ಭಾರತದ ಸಂಬಂಧಗಳು ನಿಕಟವಾದವು. ಭಾರತ ಅಂತರ ರಾಷ್ಟ್ರೀಯ ಸಂಬಂಧಗಳ ಸುಧಾರಣೆ ಮತ್ತು ಉದ್ವಿಗ್ನತೆಯನ್ನು ಶಮನಗೊಳಿಸಲು ಶ್ರಮಿಸಿತು. ಟಿಬೆಟ್ಟಿನ ಬೆಳವಣಿಗೆಗಳು ಉದಾಹರಣೆಗೆ ಖಂಪಾ ದಂಗೆ, ಹಲ್ಕೆಲಾಮಾನ ಪಲಾಯನ ಮತ್ತು ಭಾರತಕ್ಕೆ ಟಿಬೆಟ್ಟಿನ ಸಂತ್ರಸ್ಥರ ಭಾರೀ ಪ್ರಮಾಣದ ವಲಸೆ ಮುಂತಾದವು ಭಾರತ-ಚೀನಾ ಸಂಬಂಧಗಳನ್ನು ಶಮನಗೊಳಿಸಲು ಅಪಾರ ಅಡ್ಡಿಯುಂಟು ಮಾಡಿದವು. ಇದು ಸಂಬಂಧಗಳು ತೀವ್ರವಾಗಿ ಹದಗೆಡಲು ಕಾರಣವಾದವು ಇದರ ಜಿನ್ನಲ್ಲಿಯೇ ಗಡಿ ವಿವಾದ ಮತ್ತು 1962 ರ ಯುದ್ಧಗಳು ನಡೆದವು. ಚೀನಾದ ಬಗ್ಗೆ ನೆಹರೂ ನೀತಿ ವಿಫಲವಾಯಿತು. ಆದಾಗ್ಯೂ ಉದ್ದೇಶಗಳಿಂದ ಅದನ್ನು ಸ್ಥಾಪಿಸಲಾಗಿದ್ದಿತೋ ಅದರಲ್ಲಿ ತಪ್ಪಿರಲಿಲ್ಲ ಮತ್ತು ಇಂದಿಗೂ ಪ್ರಸ್ತುತವಾಗಿವೆ. ನೆಹರೂ ಚೀನಾದ ವಿದೇಶಾಂಗ ನೀತಿಯ ಬದಲಾವಣೆ ಮತ್ತು ಅದರ ನಿಜಾರ್ಥವನ್ನು ಸಂಪೂರ್ಣವಾಗಿ ಗ್ರಹಿಸಿರಲಿಲ್ಲ.

ಈ ಘರ್ಷಣೆಯು ಬಿಟ್ಟುಹೋದ ಕಹಿ ನೆನಪಿನ ಕುರುಹನ್ನು ಅವುಗಳ ಸಂಬಂಧಗಳಲ್ಲಿ ಈಗಲೂ ಉಳಿದಿವೆ. ಅನೇಕ ವರ್ಷಗಳವರೆಗೆ ಅವುಗಳ ಪರಸ್ಪರ ಹಗೆತನವು ಅವುಗಳ ವಿದೇಶಾಂಗ ನೀತಿಯನ್ನು ನಿರ್ಧರಿಸಿದವು. ಅನೇಕ ವರ್ಷಗಳವರೆಗೆ ಅವುಗಳ ರಾಜಧಾನಿಗಳಲ್ಲಿ ಪರಸ್ಪರರ ರಾಯಭಾರಿಗಳಾಗಿರಲಿಲ್ಲ. ಅವುಗಳ ನಡುವೆ ನಿಜವಾಗಿಯೂ ಸಂಪರ್ಕವೇ ಇರಲಿಲ್ಲ. ಅಂತರ ರಾಷ್ಟ್ರೀಯವಾಗಿ ಅವು ವಿರುದ್ಧ ನಿಲುವುಗಳನ್ನು ತಾಳಿದ್ದವು. ಭಾರತದ ವಿಷಯದಲ್ಲಿ ಆಂತರಿಕ ಎಡರು ತೊಡರುಗಳೇ ಅತ್ಯಂತ ಹೆಚ್ಚಾಗಿದ್ದವು. ಆದರೆ ಅಪಾರವಾದ ಪರಸ್ಪರ ತಪ್ಪು ಅಭಿಪ್ರಾಯಗಳಿಂದ ಉಭಯ ದೇಶಗಳು ಸಾಮಾನ್ಯ ಪರಿಸ್ಥಿತಿಗೆ ಹಿಂದಿರುಗುವುದು ಅವಶ್ಯಕವಾಗಿಯೂ ಒಂದು ನೋವಿನ ಮಾತು ದೀರ್ಘ ಪ್ರತಿಕ್ರಿಯೆಯಾಯಿಗಿದೆ.

### *147.3.2. ಭಾರತದ ವಿರುದ್ಧದ ಪ್ರಚಾರ*

ಚೀನಾ ಭಾರತದ ವಿರುದ್ಧ ಪೂರ್ಣ ಪ್ರಮಾಣದ ಪ್ರಚಾರದಲ್ಲಿ ತೊಡಗಿತ್ತು. ಭಾರತವು ಇನ್ನೂ ಅಲಿಪ್ತ ರಾಷ್ಟ್ರವಾಗಿ ಉಳಿದಿಲ್ಲವೆಂದೂ ಮತ್ತು ಅದು ಅಮೆರಿಕಾದ ಬಣದಲ್ಲಿದೆಯೆಂದು ಆಪಾದಿಸುವುದೇ ಅದರ ಮುಖ್ಯ ಉದ್ದೇಶವಾಗಿತ್ತು. ಅದು ಭಾರತಕ್ಕೆ ತನ್ನ ನೆರವನ್ನು ನಿಲ್ಲಿಸುವಂತೆ ಮಾಸ್ಕೋವನ್ನು ಒತ್ತಾಯಿಸುವ ಸಹಜವಾದ ನಿರೀಕ್ಷೆಯನ್ನು ಹೊಂದಿದ್ದರು. ಆದರೆ ಅದು ವಿಫಲವಾದಾಗ ವಾಷಿಂಗ್ಟನ್ ಮತ್ತು ಮಾಸ್ಕೋಗಳೊಂದಿಗೆ ಭಾರತದ ಸಂಬಂಧಗಳನ್ನು ಚೀನಾ ಬಹಿರಂಗವಾಗಿ ಖಂಡಿಸಿತು. ಆಫ್ರೋ-ಏಷ್ಯಾದ ಸಮುದಾಯದಲ್ಲಿ ಭಾರತದ ಸ್ಥಾನ ಮತ್ತು ಘನತೆಯನ್ನು ತಟಸ್ಥಗೊಳಿಸುವ ದಿಕ್ಕಿನಲ್ಲಿ ಚೀನಾ ಸ್ಪಷ್ಟವಾಗಿ ಶ್ರಮಿಸುತ್ತಿದ್ದಿತು. ಆದಾಗ್ಯೂ ಟಿಬೆಟ್ ಮತ್ತು ತೈವಾನ್‌ಗಳ ಬಗ್ಗೆ ತನ್ನ ನಿಲುವನ್ನು ಭಾರತ ಪುನರ್ ಪರಿಶೀಲಿಸಲಿಲ್ಲ.

### *147.3.3 ಕಾಶ್ಮೀರ ಸಮಸ್ಯೆ*

ಕಾಶ್ಮೀರದ ಮೇಲೆ ಚೀನಾ ತನ್ನ ನಿಲುವನ್ನು ಬದಲಾಯಿಸಿತು. ಪಾಕಿಸ್ಥಾನಕ್ಕೆ ಹತ್ತಿರವಾಗತೊಡಗಿತು. ಪಾಕಿಸ್ಥಾನಕ್ಕೆ ಬಾಯಿಮಾತಿನ ಮತ್ತು ಗಟ್ಟಿಯಾದ ಬೆಂಬಲವನ್ನು ನೀಡಿತು. ಕ್ರಮೇಣ ಚೀನಾ ಇಸ್ಲಾಮಾಬಾದಿಗೆ ಸೈನಿಕ ಮತ್ತು ಆರ್ಥಿಕ ನೆರವಿನ ಪ್ರಮುಖ ಮೂಲವಾಯಿತು. ಭಾರತ ಮತ್ತು ಇತರ ನೆರೆಹೊರೆಯ ರಾಷ್ಟ್ರಗಳ ನಡುವೆ ಭಿನ್ನಾಭಿಪ್ರಾಯಗಳನ್ನು ಸೃಷ್ಟಿಸುವ ಇಂತಹುದೇ ನೀತಿಯನ್ನು ಅದು ಅಳವಡಿಸಿಕೊಂಡಿತು. ಉದಾಹರಣೆಗೆ, ನೇಪಾಳ ಮತ್ತು ಸಿಲೋನಿನ ಸಂಬಂಧಗಳಲ್ಲಿ ಭಾರತದ ಈಶಾನ್ಯ ಪ್ರದೇಶಗಳಲ್ಲಿ ಚೀನ ದಂಗೆಗಳನ್ನು ಪ್ರಚೋದಿಸಿತು. ನಾಗಾಗಳು ಮತ್ತು ಇತರ ಬುಡಕಟ್ಟು ಜನಾಂಗಗಳಿಗೆ ಚೀನಾ ಶಸ್ತ್ರಾಸ್ತ್ರಗಳನ್ನು ಒದಗಿಸಿತು ಮತ್ತು ದಂಗೆಕೋರ ಶಕ್ತಿಗಳಿಗೆ ತರಬೇತಿಯನ್ನು ನೀಡಿತು.

ಭಾರತದ ಹಿರಿಮೆಯನ್ನು ತೀವ್ರವಾಗಿ ಘಾಸಿಗೊಳಿಸಲಾಯಿತು. ಭಾರತ ಚೀನಾವನ್ನು ವಿಶ್ವಾಸಘಾತುಕನೆಂದು ಭಾವಿಸಿತು. ಈಗ ಭಾರತ ಚೀನಾದ ಉದ್ದೇಶಗಳು ಮತ್ತು ಕುತಂತ್ರಗಳ ಬಗ್ಗೆ ಗಾಢವಾದ ಸಂಶಯವನ್ನು ಬೆಳೆಸಿಕೊಂಡಿತು. ಏಷ್ಯಾದ ಮೇಲೆ ಪ್ರಾಬಲ್ಯವನ್ನು ಸ್ಥಾಪಿಸುವುದು ಚೀನಾದ ಉದ್ದೇಶವೆಂದು ಭಾರತ ನಂಬಿತ್ತು. ಲಾಲ್ ಬಹದ್ದೂರ್ ಶಾಸ್ತ್ರೀಯವರು "ಏಷ್ಯಾದಲ್ಲಿ ತನಗೆ ಪ್ರಾಬಲ್ಯದ ಸ್ಥಾನವನ್ನು ಪಡೆಯುವುದೇ ಚೀನಾದ ಮೂಲ ಧ್ಯೇಯವಾಗಿದೆ. ಅದನ್ನು ಏಷ್ಯಾದ ಯುವ ಸ್ವಾಭಿಮಾನವಿರುವ ರಾಷ್ಟ್ರವೂ ಒಪ್ಪಿಕೊಳ್ಳಲು ಸಿದ್ಧವಿಲ್ಲ" ಎಂದಿದ್ದಾರೆ.

### 147.3.4 1964-65 ರಲ್ಲಿದ್ದಂತೆ ಭಾರತ

1964-65 ರಲ್ಲಿ ಚೀನಿಯರ ಉದ್ದೇಶಗಳ ಬಗ್ಗೆ ಭಾರತದ ಕಲ್ಪನೆಗಳನ್ನು ಹೀಗೆ ಹೇಳಬಹುದು. ಚೀನಿಯರ ಸೈದ್ಧಾಂತಿಕ ದೃಷ್ಟಿಯಲ್ಲಿ, ಏಷ್ಯಾ, ಆಫ್ರಿಕಾ, ಲ್ಯಾಟಿನ್ ಅಮೇರಿಕಾದ ವಿಶಾಲವಾದ "ಮಧ್ಯವರ್ತಿ ವಲಯ" ದಲ್ಲಿ ಭಾರತ ಪ್ರಮುಖ ಸ್ಥಾನದಲ್ಲಿತ್ತು. ಏಷ್ಯಾದಲ್ಲಿ ಭಾರತವನ್ನು ದ್ವಿತೀಯ ಶಕ್ತಿಯ ಸ್ಥಾನಕ್ಕಿಳಿಸುವುದು ಚೀನಾದ ಉದ್ದೇಶವಾಗಿತ್ತು. ಅದು "ಭಾರತಕ್ಕೆ ಏಷ್ಯಾದ ಮತ್ತು ಆಫ್ರಿಕಾದ ಪ್ರಪಂಚದಲ್ಲಿ ಗೌರವ ಮತ್ತು ಘನತೆಯನ್ನು ತಂದುಕೊಟ್ಟಿದ್ದ" ಅಲಿಪ್ತ ನೀತಿಯನ್ನು ನಾಶಪಡಿಸಲು ಪ್ರಯತ್ನಿಸಿತು. ಪಾಕಿಸ್ತಾನದೊಂದಿಗೆ ಸೇರಿಕೊಂಡು ಚೀನ ಭಾರತದ ವಿದೇಶಾಂಗ ಮತ್ತು ಆಂತರಿಕ ನೀತಿಗಳಿಗೆ ಮಸಿ ಬಳಿಯುವ ಪ್ರಚಾರದಲ್ಲಿ ತೊಡಗಿತು. ಭಾರತದ ರಕ್ಷಣಾ ನಿರ್ಮಾಣಗಳು ಏಷ್ಯಾದ ಪುಟ್ಟ ರಾಷ್ಟ್ರಗಳಿಗೆ ಬೆದರಿಕೆಯಾಗಿದೆಯೆಂದೂ ಚೀನ ಆಪಾದಿಸಿತು.

## 147.4 ಭಾರತದಲ್ಲಿ ಕ್ರಾಂತಿಯ ಬಗ್ಗೆ ಚೀನಾದ ತಪ್ಪು ಕಲ್ಪನೆಗಳು

### 147.4.1 ಚೀನ ಮತ್ತು ಶ್ರೀಮತಿ ಇಂದಿರಾಗಾಂಧಿ

ಇಂದಿರಾಗಾಂಧಿ ಭಾರತದ ಪ್ರಧಾನಿಯಾದಾಗ ಎರಡು ವಿಷಯಗಳಲ್ಲಿ ಭಾರತದ ನೀತಿ ಸ್ಪಷ್ಟವಾಗಿ ಮತ್ತು ಸ್ಥಿರವಾಗಿ ಉಳಿದಿದ್ದಿತು. ಯಾವುದೇ ತೊಡಕಿನ ಮೈತ್ರಿ ಇಲ್ಲದಿರುವುದು. ಅಲಿಪ್ತ ನೀತಿಯನ್ನು ತ್ಯಜಿಸದಿರುವುದು ಮತ್ತು ಚಿಕ್ಕ ರಾಷ್ಟ್ರಗಳೊಂದಿಗೂ ಸೇನಾ ವ್ಯವಸ್ಥೆಗಳನ್ನು ಮಾಡಿಕೊಳ್ಳದಿರುವುದು. ಈ ನೀತಿಯು ನಿಜವಾಗಿಯೂ ಚೀನಾದ ಸವಾಲನ್ನು ಎದುರಿಸಲು ಭಾರತಕ್ಕೆ ನೆರವಾಯಿತು. ಈ ನೀತಿಯಿಂದಾಗಿಯೇ ಭಾರತ ಇಡೀ ಬಣವನ್ನಲ್ಲದೇ ಕೇವಲ ಚೀನಾವನ್ನು ಮಾತ್ರವೇ ಎದುರಿಸಿತೆಂದು ಶ್ರೀಮತಿ ಇಂದಿರಾಗಾಂಧಿ ಸಂಸತ್ತಿಗೆ ತಿಳಿಸಿದರು. ಎರಡನೆಯದಾಗಿ ಭಾರತದ ದೃಷ್ಟಿಯಲ್ಲಿ ಆರ್ಥಿಕ ಅಭಿವೃದ್ಧಿ ಮತ್ತು ಸಾಮಾಜಿಕ ಹೊಂದಾಣಿಕೆಗಳೆ ಏಷ್ಯಾದ ದೇಶಗಳ ಉತ್ತಮ ರಕ್ಷಣೆಯಾಗಿದ್ದಿತು. ಚೀನಾದ ಅವಿರತ ಹಗೆತನಕ್ಕೆ ಪ್ರತಿಕ್ರಿಯೆಯಾಗಿ ಭಾರತ ಟಿಬೆಟ್ ಮತ್ತು ತೈವಾನ್‌ಗಳ ಬಗ್ಗೆ ತನ್ನ ನೀತಿಯನ್ನು ಬದಲಾಯಿಸಲಿಲ್ಲ. ಟಿಬೆಟ್ ಮತ್ತು ತೈವಾನ್‌ಗಳು ಚೀನಾದ ಭಾಗಗಳೆಂದು ಪರಿಗಣಿಸುವ ತನ್ನ ನೀತಿಗೆ ತಾನು ಬದ್ಧವೆಂದು ಭಾರತ ಸ್ಪಷ್ಟಪಡಿಸಿತು.

### 147.4.2 ಹೆಚ್ಚಿನ ಘರ್ಷಣೆಗಳು

ಆದಾಗ್ಯೂ ಭಾರತ-ಚೀನ ಸಂಬಂಧಗಳು ಇನ್ನೂ ಹದಗೆಡತೊಡಗಿದ್ದವು ಮತ್ತು ಗಾಯಗೊಂಡವು. ಚೀನಾ-ಸೋವಿಯತ್ ಗಡಿ ವಿವಾದಗಳು ಚೀನೀಯರ ಸೂಕ್ಷ್ಮ ಭಾವನೆಗಳಿಗೆ ಬೆಂಕಿ ಹೊತ್ತಿಸಿದವು. ಆದರೆ ಭಾರತ-ಚೀನಾಗಳನ್ನು ಶಾಂತಪಡಿಸಲು ಅದು ಏನನ್ನು ಮಾಡಲಿಲ್ಲ. ಚೀನ-ಸೋವಿಯತ್ ಗಡಿಯಲ್ಲಿ ಚೀನಾ ಗಡಿ ಘಟನೆಗಳನ್ನು ಪ್ರಚೋದಿಸುತ್ತಿರುವ ಬಗ್ಗೆ ಭಾರತ ಚೀನಾವನ್ನು ಆಪಾದಿಸಿದಾಗ, ಪೀಕಿಂಗ್ "ನಿಮ್ಮನ್ನು ಮತ್ತೊಮ್ಮೆ ಹೀನಾಯವಾಗಿ ಹಿಮ್ಮೆಟ್ಟಿಸಲಾಗುವುದು. ನೀವು ಸ್ವತಃ ಅಥವಾ ನಿಮ್ಮ ಒಡೆಯರಾದ ಸೋವಿಯತಂ ಪರಿಷ್ಕರಣಕಾರರೊಂದಿಗಾಗಲಿ ಬಂದಲ್ಲಿ, ನಿಮ್ಮನ್ನು ಮತ್ತೊಮ್ಮೆ ಹೀನಾಯವಾಗಿ ಹಿಮ್ಮೆಟ್ಟಿಸಲಾಗುವುದೆಂದು" ಎಚ್ಚರಿಕೆ ನೀಡಿತು.

ಈ ವೇಳೆಯಲ್ಲಿ (1969) ಪಾಕಿಸ್ತಾನವು ಚೀನಾದ ನೆರವಿನಿಂದ ಪಾಕಿಸ್ತಾನದ ನ್ಯಾಯಬಾಹಿರ ಆಕ್ರಮಿತ ಪ್ರದೇಶವೆಂದು ಭಾರತ ಪರಿಗಣಿಸಿದ್ದ ಕಾಶ್ಮೀರ ಪ್ರದೇಶದಲ್ಲಿ ರಸ್ತೆಗಳನ್ನು ನಿರ್ಮಿಸತೊಡಗಿತ್ತು. ಇಡೀ ರಸ್ತೆಯ ಜೋಡಣೆಯು ಪಾಕಿಸ್ತಾನದ ವಶದಲ್ಲಿದ್ದ ಭಾರತದ ಪ್ರದೇಶದಲ್ಲಿ ಹಾದು ಹೋಗಿದ್ದಿತು. ವರದಿಯಂತೆ ಜನತಾ ವಿಮೋಚನಾ ಸೇನೆಯ 12,000 ಚೀನೀ ಸಿಬ್ಬಂದಿಯನ್ನು ರಸ್ತೆ ನಿರ್ಮಾಣದಲ್ಲಿ ನೆರವಾಗಲು ಆ ಪ್ರದೇಶಕ್ಕೆ ಕಳುಹಿಸಲಾಗಿತ್ತು ಮತ್ತು ಅವರು ಮೊರ್ ಖುನ್‌ನಲ್ಲಿ ಬೀಡುಬಿಟ್ಟಿದ್ದರು. ಭಾರತ ಸರ್ಕಾರವು ರಸ್ತೆಯ ಸೇನಾ ಪ್ರಾಮುಖ್ಯತೆಯನ್ನು ಗುರುತಿಸಿತು ಮತ್ತು "ಅದು ಈಶಾನ್ಯ ಕಾಶ್ಮೀರದಲ್ಲಿ ಚೀನಾದ ನ್ಯಾಯಬಾಹಿರ ವಶದಲ್ಲಿರುವ ಪ್ರದೇಶದಿಂದ ಮತ್ತು ಟಿಬೆಟ್‌ನಿಂದ ಕದನ ವಿರಾಮ ರೇಖೆಯ ಉತ್ತರಕ್ಕಿರುವ ಪಾಕ್ ಆಕ್ರಮಿತ ಗಿಲ್ಗಿಟ್ ಪ್ರದೇಶಕ್ಕೆ ಚೀನಾದ ಪಡೆಗಳಿಗೆ ಸುಲಭದ ಹಾದಿಯನ್ನು ಒದಗಿಸುವುದೆಂದು" ಅಭಿಪ್ರಾಯಪಟ್ಟಿತು. ಈ ಪ್ರದೇಶದ ಶಾಂತಿ ಮತ್ತು ಸುರಕ್ಷತೆಗೆ ಅದು ಬೆದರಿಕೆಯೊಡ್ಡಿದೆಯೆಂದು ವರ್ಣಿಸಿ ಚೀನಾ ಮತ್ತು ಪಾಕಿಸ್ತಾನಗಳೆರಡರ ವಿರುದ್ಧವು ಭಾರತ" ಬಲವಾದ ಪ್ರತಿಭಟನೆಗಳನ್ನು ಸಲ್ಲಿಸಿತು.

### *147.4.3 ಭಾರತದಲ್ಲಿ ಹೊತ್ತಿ ಉರಿದ ಜ್ವಾಲೆ*

ಈ ಸಮಯದಲ್ಲಿ ಚೀನಾ ಕೂಡ ಭಾರತದಲ್ಲಿನ ಕ್ರಾಂತಿಯ ಏರುತ್ತಿದ್ದ ಜ್ವಾಲೆಯ ಬಗ್ಗೆ ಭಾರೀ ಪ್ರಯತ್ನವನ್ನು ಮಾಡಿತು. 1969 ರಲ್ಲಿ ಚೀನ "ಭಾರತದ ಕಮ್ಯುನಿಸ್ಟ್ ಪಕ್ಷವು (ಮಾರ್ಕ್ಸ್‌ನ -ಲೆನಿನ್ನನ) ಭಾರತದ ಕ್ರಾಂತಿಗೆ ವಿಜಯದ ಹಾದಿಯನ್ನು ಕಂಡು ಹಿಡಿದಿದೆ" ಎಂದು ಘೋಷಿಸಿತು. ವಾಸ್ತವವೆಂದರೆ ಭಾರತದಲ್ಲಿ ಅಂತಹ ಯಾವುದೇ ಕ್ರಾಂತಿ ಇರಲಿಲ್ಲ.

## 147.5 ಕ್ಷೀಣಿಸಿದ ಭರವಸೆಗಳು

ಆದಾಗ್ಯೂ, ಕ್ರಮೇಣ 1969 ರ ಸುಮಾರಿನಲ್ಲಿ ಶ್ರೀಮತಿ ಇಂದಿರಾಗಾಂಧಿಯವರು ರಾಜಕೀಯ ಪರಿಸ್ಥಿತಿಯ ಮೇಲೆ ತನ್ನ ಹಿಡಿತವನ್ನು ಬಲಪಡಿಸುತ್ತದೆ ಮತ್ತು ಚೀನಾದ ಹೆಚ್ಚು ಅತ್ಯಂತ ಮೃದುವಾದ ಮತ್ತು ನೈಜವಾದ ಚಿತ್ರಣ ಸಾಧ್ಯವಾಯಿತು. 1966-67 ರ ಸಾಂಸ್ಕೃತಿಕ ಕ್ರಾಂತಿಯ ಬಿರುಗಾಳಿಯ ನಂತರ 1969-79 ರ ಕಾಲದಲ್ಲಿ ಚೀನಾ ಕೂಡ ಒಂದು ಬಗೆಯ ಸಾಮಾನ್ಯ ಸ್ಥಿತಿಯ ಕಡೆಗೆ ಹಿಂದಕ್ಕೆ ಜಿಗಿಯಿತು. ಈಗ ಚೀನಾದ ರಾಜತಂತ್ರ ನೀತಿ ಅಂತರ ರಾಷ್ಟ್ರೀಯ ಸಮುದಾಯವನ್ನು ಕದಡಿತು ಉಂಟುಮಾಡಿತು. ಸ್ವಾಭಾವಿಕವಾಗಿಯೇ ಭಾರತವೂ ಕೂಡ ರಾಜತಾಂತ್ರಿಕ ಪ್ರಯತ್ನದ ವಿಸ್ತರಣೆಯ ಕಕ್ಷೆಯಲ್ಲಿ ಬರತೊಡಗಿತು. ಪೀಕಿಂಗ್ ಸಂಬಂಧಗಳ ಸಾಮಾನ್ಯ ಸ್ಥಿತಿಯ ಸಾಧ್ಯತೆಗಳ ಬಗ್ಗೆ ಪರಿಶೀಲನೆ ನಡೆಸತೊಡಗಿತು. ನವದೆಹಲಿಯಲ್ಲಿ ಕಡಿಮೆ ಉದ್ವಿಘ್ನತೆಯ ಸಂಬಂಧಗಳ ಕಡೆಗೆ ಮುನ್ನಡೆಯಿಡುವ ಸಾಧ್ಯತೆಯ ಕೆಲವು ನಿರೀಕ್ಷೆಗಳನ್ನು ಎಬ್ಬಿಸಿತು.

### *147.5.1 ಮಾವೋನ ಸಂಜ್ಞೆ (ಸನ್ನೆ)*

ಈ ವಿಷಯದಲ್ಲಿ ಪ್ರಮುಖ ಉದಾಹರಣೆಯೆಂದರೆ ಮೇ, 1, 1970 ರಂದು ಪೀಕಿಂಗ್‌ನಲ್ಲಿ ನಡೆದ ಮೇ ದಿವಸದ ಕವಾಯಿತಿನಲ್ಲಿ ಕಾಲದಲ್ಲಿ ಮಾವೋ ಮಾಡಿದ ಸಂಜ್ಞೆ, ಭಾರತದ ವಿದೇಶಾಂಗ ಸಚಿವರನ್ನು ಸಾರ್ವಜನಿಕ ವೇದಿಕೆಗೆ ಬರಮಾಡಿಕೊಂಡ ಮಾವೋ ಅವರೊಂದಿಗೆ ಭಾರತ ಮತ್ತು ಚೀನಾದ ಜನರ ನಡುವಿನ ಸಾಂಪ್ರದಾಯಿಕ ಸ್ನೇಹದ ಬಗ್ಗೆ ಮಾತುಕತೆ ನಡೆಸಿದನು. ಸಾಮಾನ್ಯ ಸ್ಥಿತಿಗೆ ಹಿಂದಿರುಗಲು ಚೀನಿಯರು ಪ್ರಸ್ತಾಪಿಸಿದ ದೃಢ ಹೆಜ್ಜೆಗಳಿಂದ ಬರುವ ಪ್ರಕಟಣೆಗೆ ಭಾರತ ಸರ್ಕಾರ ಕಾಯತೊಡಗಿತು. ಆದರೆ ಈಗ ಪ್ರತಿಕ್ರಿಯೆ ನೀಡುವುದು ಭಾರತ ಸರ್ಕಾರಕ್ಕೆ ಸೇರಿದ್ದೆಂದು ಚೀನಿಯರ ಭಾವಿಸಿದರು. 1959-62 ರ ನಡುವಿನ ಅನುಭವಗಳಿಂದ ಕೈ ಸುಟ್ಟುಕೊಂಡಿದ್ದ ಭಾರತ ಸರ್ಕಾರ ಜಾಗೃತವಾಗಿತ್ತು ಮತ್ತು ನಂತರ ಸಾರ್ವಜನಿಕ ತಿರಸ್ಕಾರದ ಯಾವುದೇ ಸಾಧ್ಯತೆಯನ್ನು ತಡೆಯಲು ಹೆಚ್ಚಿನ ಖಾತ್ರಿಯನ್ನು ಬಯಸಿತು.

ಭಾರತ ಸರ್ಕಾರವು ಉದ್ವಿಘ್ನತೆಯಿಂದ ಮಾತ್ರವಲ್ಲದೆ ಭಿನ್ನಾಭಿಪ್ರಾಯದಿಂದಲೂ ಅಲ್ಲೋಲಕಲ್ಲೋಲಗೊಂಡಿತು. ಈ ಪ್ರತಿಕ್ರಿಯೆಯಿಂದ ವಿದೇಶಾಂಗ ಸಚಿವಾಲಯದಲ್ಲಿ ಒಡಕುಂಟಾಯಿತು. ಒಂದು ಗುಂಪು ಮುಳುಗಲು ಕಾತುರದಿಂದಿದ್ದರೆ ಮತ್ತೊಂದು ಗುಂಪು ಹೆಚ್ಚಿನ ಜಾಗ್ರತೆ ಮತ್ತು ಮಾತುಕತೆಗಳ ಬಗ್ಗೆ ಸಮಾಲೋಚನೆಯಲ್ಲಿ ತೊಡಗಿತು. ಒಂದು ಗುಂಪು ಮೊದಲ ಹೆಜ್ಜೆಯಿಡುವುದರ ಪರವಾಗಿದ್ದಿತು. ಮತ್ತೊಂದು ಗುಂಪು ಅಂದಿನ ಪರಿಸ್ಥಿತಿಯಲ್ಲಿ ರಾಯಭಾರಿಯನ್ನೂ ಕಳುಹಿಸುವುದು ಪ್ರಮುಖ ರಾಜಕೀಯ ಕ್ರಮವೆಂದು ಅಭಿಪ್ರಾಯ ಪಟ್ಟಿತು. ಆದ್ದರಿಂದ ಚೀನೀಯರೊಂದಿಗೆ ಕೆಲವು ಗಮನಾರ್ಹ ಮಾತುಕತೆಗಳನ್ನು

ಭಾರತದ ವಿದೇಶಾಂಗ ಮಂತ್ರಿಯಾಗಿದ್ದ ಸ್ವರ್ಣ ಸಿಂಗರು 1970 ರಲ್ಲಿ "ತನ್ನ ನೆರೆಹೊರೆಯವರ ಬಗ್ಗೆ ಚೀನಾದ ಧೋರಣೆ ಮತ್ತು ವಿರೋಧಿ ಪ್ರಚಾರದಲ್ಲಿ ನಾವು ಅಲ್ಪ ಬದಲಾವಣೆಯನ್ನು ಗಮನಿಸಿದ್ದೇವೆ" ಎಂದು ಹೇಳಿದ್ದರು. ಸಾಂಸ್ಕೃತಿಕ ಕ್ರಾಂತಿಯ ಮುಕ್ತಾಯದ ನಂತರ ವಿಶ್ವದ ಇತರ ಭಾಗಗಳೊಂದಿಗೆ ಚೀನಾದ ಧೋರಣೆಯಲ್ಲಿ ವಿಶೇಷ ಬದಲಾವಣೆಯುಂಟಾಗಿದೆ" ಎಂಬುದಾಗಿ ಬದಲಾದ ಪೀಕಿಂಗ್‌ನ ಧೋರಣೆಯ ಬಗ್ಗೆ ಶ್ರೀಮತಿ ಇಂದಿರಾ ಗಾಂಧಿಯವರು ಉಚ್ಚರಿಸಿದರು.

### *147.5.2 ಬೆಂಗಳೂರು ಪ್ರಕರಣ*

ಆದರೆ ಇತರ ಬೆಳವಣಿಗೆಗಳು ಈ ಸಕಾರಾತ್ಮಕ ಪ್ರಕ್ರಿಯೆಯನ್ನು ನಕಾರಾತ್ಮಕಗೊಳಿಸಲು ತ್ವರಿತವಾಗಿ ನಿರ್ಮಾಣವಾಗತೊಡಗಿದ್ದವು. ಬಾಂಗ್ಲಾ ದೇಶದಲ್ಲಿ ಒಂದು ಬಿಕ್ಕಟ್ಟು ಉಂಟಾಯಿತು. ಬಿಕ್ಕಟ್ಟು ಬಲಗೊಂಡು ಅಂತಿಮವಾಗಿ ಬಾಂಗ್ಲಾ ದೇಶದ ಸ್ವಾತಂತ್ರದಲ್ಲಿ ಸ್ಫೋಟಿಸುತ್ತಿದ್ದಂತೆ ಭಾರತ ಮತ್ತು ಚೀನಾಗಳು ಪರಸ್ಪರ ವಿರೋಧಿ ಗುಂಪುಗಳಲ್ಲಿದ್ದುದಲ್ಲದೆ ನಿಜವಾದ

ಶತೃಗಳಂತೆಯೇ ವರ್ತಿಸತೊಡಗಿದವು. ಪಾಕಿಸ್ಥಾನಕ್ಕೆ ಚೀನಾದ ಬದ್ಧತೆ ಅತ್ಯಂತ ಮೂಲಭೂತವಾಗಿದ್ದಂತೆ ಮತ್ತು ದೀರ್ಘಕಾಲದ್ದಾಗಿದ್ದಂತೆ ಕಂಡು ಬಂದಿತು. ಪೀಕಿಂಗ್ ಭಾರತದ ವಿರುದ್ಧ ತೀವ್ರವಾದ ಪ್ರಚಾರವನ್ನು ಕೈಗೊಂಡಿತು ಮತ್ತು ವಿಶ್ವಸಂಸ್ಥೆಯಲ್ಲಿ ಪಾಕಿಸ್ಥಾನದ ಬಾಯಿಮಾತಿನ ವಕ್ತಾರನಂತಾಯಿತು. ಅದು ಭಾರತವನ್ನು ವಿಸ್ತರಣಾವಾದಿಯೆಂದು ಮತ್ತು ಸೋವಿಯತ್ ಒಕ್ಕೂಟವನ್ನು ಅದರ ತೆರೆಮರೆಯ ಪ್ರಭುವೆಂದು ಆಪಾದಿಸಿತು.

## 147.6 ಬಾಂಗ್ಲಾ ದೇಶ ಬಿಕ್ಕಟ್ಟು ಮತ್ತು ಭಾರತ-ಚೀನ ಸಂಬಂಧ

ಡಾಕ್ಕಾದಲ್ಲಿ ಸಮಸ್ಯೆ ಆರಂಭವಾದ ಮೊದಲ ಹಂತದಲ್ಲಿ ಪೀಕಿಂಗ್ ಪೂರ್ವ ಬಂಗಾಳದ ಸಮಸ್ಯೆಯ ಬಗ್ಗೆ ಮೃದು ಧೋರಣೆಯನ್ನು ಅನುಸರಿಸುವಂತೆ ಪಾಕಿಸ್ಥಾನಕ್ಕೆ ಸಲಹೆ ಮಾಡಿದಂತೆ ಕಂಡುಬಂದಿತಾದರೂ ಬಿಕ್ಕಟ್ಟು ಸ್ಫೋಟದ ಪರಿಸ್ಥಿತಿಯ ಮಟ್ಟಕ್ಕೆ ಬೆಳೆದು ನಿಂತಾಗ ಚೀನಾ ಪೂರ್ವ ಬಂಗಾಳ ಮತ್ತು ಭಾರತದ ವಿರುದ್ಧದ ಪಾಕಿಸ್ಥಾನದ ಏಳಿಗೆ ಸಂಪೂರ್ಣ ಹಾಗೂ ಸೈನಿಕ ನೆರವನ್ನು ಪ್ರಕಟಿಸಿತು ಮತ್ತು ಆದರೂ ಅದು ನಿಜವಾದ ಮಧ್ಯ ಪ್ರವೇಶಕ್ಕೆ ಒಂದು ಹೆಜ್ಜೆ ಹಿಂದೆಯೇ ನಿಂತಿತು. ಪಾಕಿಸ್ಥಾನದ ಪ್ರಧಾನಿಯಾಗಿದ್ದ ಭುಟ್ಟೋ ಭಾರತ ಮತ್ತು ಪಾಕಿಸ್ಥಾನಗಳ ನಡುವೆ ಯುದ್ಧ ನಡೆದಲ್ಲಿ ಅದರಲ್ಲಿ ಚೀನಾದ ಬೆಂಬಲವನ್ನು ಪಡೆಯುವ ಉದ್ದೇಶದಿಂದ ಉನ್ನತ ಮಿಲಿಟರಿ ಅಧಿಕಾರಿಗಳನ್ನೊಳಗೊಂಡ ಒಂದು ಉನ್ನತ ಮಟ್ಟದ ನಿಯೋಗದೊಂದಿಗೆ ಚೀನಾಕ್ಕೆ ಹೋದನು. ಚೀನಾ ಭೌತಿಕ ಮಧ್ಯ ಪ್ರವೇಶವನ್ನು ತಿರಸ್ಕರಿಸಿತೆಂದು ನಂಬಲಾಗಿದೆ. ಬಹುಶಃ ಅದೇ ವರ್ಷ ಆಗಸ್ಟ್‌ನಲ್ಲಿ ಮಾಡಿಕೊಳ್ಳಲಾಗಿದ್ದ ಭಾರತ-ಸೋವಿಯತ್ ಒಪ್ಪಂದದಿಂದ ಚೀನಾ ಮತ್ತು ಅಮೆರಿಕಾಗಳು ಹೆದರಿದ್ದುದು ಇದಕ್ಕೆ ಕಾರಣವಾಗಿರಬಹುದಾಗಿತ್ತು.

### *147.6.1 ಪಾಕಿಸ್ಥಾನಕ್ಕೆ ನೆರವು*

ಆದಾಗ್ಯೂ ನಿಜವಾದ ಮಧ್ಯ ಪ್ರವೇಶಕ್ಕೆ ಎಷ್ಟೇ ಕಡಿಮೆಯಾಗಿದ್ದರೂ, ಪಾಕಿಸ್ಥಾನಕ್ಕೆ ಬೆಂಬಲವನ್ನು ನೀಡಲು ಪೀಕಿಂಗ್ ಹಿಂದೆ ಬೀಳಲಿಲ್ಲ. ವಿಶ್ವಸಂಸ್ಥೆಯಲ್ಲಿ ಚೀನಾದ ಖಾಯಂ ಸದಸ್ಯನಾಗಿದ್ದ ಹುವಾಂಗ್ ಹುವ ಭಾರತದ ವಿಷಯವನ್ನು "ಗುಂಪುಗಾರಿಕೆಯೂ ಪಾಕಿಸ್ಥಾನದ ಆಂತರಿಕ ವ್ಯವಹಾರವೆಂದು ಅವನು ಸಮರ್ಥಿಸಿದನು. ಅವನು ಪೂರ್ವ ಬಂಗಾಳದ ನಿರಾಶ್ರಿತರ ಬಗ್ಗೆಯ ವಾದವನ್ನು ಟಿಬೆಟ್ ನಿರಾಶ್ರಿತರ ದುಸ್ಥಿತಿಯೊಂದಿಗೆ ಹೋಲಿಸಿದನು. ಅವನು ಚೀನಾದ ಪ್ರತಿ ಕ್ರಾಂತಿಕಾರಿ ದಂಗೆಯ ನಾಯಕನಾದ ದಲೈ ಲಾಮಾನನ್ನು ಭಾರತ ಎತ್ತಿ ಕಟ್ಟುತ್ತಿರುವುದಾಗಿಯೂ ಆಪಾದಿಸಿದನು. ಅಲ್ಲದೆ ಚೀನ "ಭಾರತದ ಪ್ರತಿಗಾಮಿಗಳು" ಅತ್ಯಂತ ಮಿತಿ ಮೀರಿದ್ದರೆ ಏಕೆಂದರೆ ರಾಜಕೀಯ, ಆರ್ಥಿಕ ಮತ್ತು ಸೈನಿಕರಂತ ವಲಯಗಳಲ್ಲಿ ಅವರಿಗೆ ಸಾಮಾಜಿಕ-ಸಾಮ್ರಾಜ್ಯಶಾಹಿ ಸಿದ್ಧಾಂತದ ಬೆಂಬಲವಿದೆ ಎಂದು ಆಪಾದಿಸಿತು.

### *147.6.2 ಚೀನಿಯರ ಅಸಾಹಾಯಕತೆ*

ಬಹುಶಃ ಚೀನಾದ ಅಸಾಹಾಯಕತೆ ಅದರ ಕೋಪವನ್ನು ತೀವ್ರವಾಗಿ ಬಿರುಸಾಗುವಂತೆ ಹೆಚ್ಚುವಂತೆ ಮಾಡಿತು. ಬಾಂಗ್ಲಾ ದೇಶದ ಉದಯವನ್ನು ತಡೆಯಲು ಸಾಧ್ಯವಾಗಲಿಲ್ಲ. ಆದರೆ ಇಸ್ಲಾಮ್ ಬಾದಿನೊಂದಿಗೆ ತನ್ನ ಉದ್ದೇಶಗಳನ್ನು ಸಮನ್ವಯಗೊಳಿಸುವುದನ್ನು ಚೀನಾ ಮುಂದುವರಿಸಿತು. ಅದು ಶಿಮ್ಲಾ ಒಪ್ಪಂದದ ತೀರ್ಮಾನವನ್ನು ಸ್ವಾಗತಿಸಿತು (ಜೂನ್ 1972). ಆದರೆ ಭದ್ರತಾ ಸಮಿತಿಯಲ್ಲಿ ಚೀನ ತನ್ನ ವಿಟೋ ಅಧಿಕಾರದಿಂದ ವಿಶ್ವಸಂಸ್ಥೆಗೆ ಬಾಂಗ್ಲಾ ದೇಶದ ಪ್ರವೇಶವನ್ನು ತಡೆಯಿತು. ಪಶ್ಚಿಮ ಪಾಕಿಸ್ಥಾನದ ವಿಶ್ವಸಂಸ್ಥೆಗೆ ಬಾಂಗ್ಲಾ ದೇಶದ ಪ್ರವೇಶವನ್ನು ತೆಡಿಯಿತು. ಪಶ್ಚಿಮ ಪಾಕಿಸ್ಥಾನದ ಸ್ಥಿರತೆ ಮತ್ತು ಉಳಿವಿನ ಸಾಮರ್ಥ್ಯಗಳು ಚೀನಾದ ಅತ್ಯಂತ ಮುಖ್ಯ ಕಾಳಜಿಯಾಗಿದ್ದುದು ನಿಚ್ಚಳವಾಗಿತ್ತು. ಪಾಕಿಸ್ಥಾನವು ತನ್ನ ಅಸ್ತಿತ್ವಕ್ಕೆ ತಕ್ಷಣದ ಯಾವುದೇ ಅಪಾಯವಿಲ್ಲದೆ, ವಿಭಜನೆಯ ನೋವಿನಿಂದ ಸುಧಾರಿಸಿಕೊಂಡ ನಂತರ ಪೀಕಿಂಗ್‌ನ ಧೋರಣೆಯಲ್ಲಿ ಬಿಗಿ ಸ್ವಲ್ಪ ಮಟ್ಟಿಗೆ ಕಡಿಮೆಯಾಯಿತು. ಭಾರತ-ಚೀನಾ ಸಂಬಂಧಗಳಲ್ಲಿ ಸುಧಾರಣೆಗೆ ಪ್ರಯತ್ನಗಳು ಪುನಃ ಪ್ರಾರಂಭವಾದವು. ಆದರೆ ನಂತರವೂ ಭಾರತದ ಬಗ್ಗೆ ಕಠಿಣವಾದ ಟೀಕೆ ನಿಲ್ಲಲಿಲ್ಲ.

### *147.6.3 ಭಾರತದ ಅಣ್ವಸ್ತ್ರ ಸ್ಫೋಟ*

ಭಾರತದ ಅಣ್ವಸ್ತ್ರ ಸ್ಫೋಟಕ್ಕೆ (ಮೇ, 1974) ಚೀನಾದ ಪ್ರತಿಕ್ರಿಯೆಯು ಚೀನಾದ ಪ್ರಚಲಿತ ವಿದ್ಯಮಾನಗಳು ಮತ್ತು ಎರಡೂ ದೇಶಗಳ ಸಂಬಂಧದ ನಿರಾಶೆಯ ಸ್ಥಿತಿಯ ದ್ಯೋತಕವಾಗಿತ್ತು. ಪಾಕಿಸ್ಥಾನ ಮೇಲೆ ಅದರ ಪರಿಣಾಮ ಅಂತಹ ಚಿಂತನೆಯ ಒಂದು

ಭಾಗವಾಗಿತ್ತು. ಭಾರತ ತನ್ನ ಅಣ್ವಸ್ತ್ರ ಕಾರ್ಯಕ್ರಮವನ್ನು ಸಂಪೂರ್ಣವಾಗಿ ಶಾಂತಿ ಮತ್ತು ಅಭಿವೃದ್ಧಿಗಳಿಗೆ ಬಳಸಿಕೊಳ್ಳಲಾಗುವುದೆಂದು ಘೋಷಿಸಿತು. ಅಣ್ವಸ್ತ್ರ ಶಸ್ತ್ರಾಸ್ತ್ರಗಳನ್ನು ತಯಾರಿಸುವುದು ತನ್ನ ಉದ್ದೇಶವಲ್ಲವೆಂದೂ ಅದು ಘೋಷಿಸಿತು. ಆದರೆ ಅಣುಸ್ಫೋಟವು ನೆರೆಹೊರೆಯ ಸಣ್ಣಪುಟ್ಟ ರಾಷ್ಟ್ರಗಳನ್ನು ಬೆದರಿಸುವ ತಂತ್ರವೆಂದು ಚೀನಾ ಭಾವಿಸಿತು. ಅಣು ಕಾರ್ಯಕ್ರಮವನ್ನು ಸಂಪೂರ್ಣವಾಗಿ ಅಣ್ವಸ್ತ್ರಗಳ ಉತ್ಪಾದನೆಗೆ ಬಳಸುತ್ತಿದ್ದುದು ಚೀನಾವೇ ಹೊರತು ಭಾರತವಲ್ಲವೆಂಬುದು ಗಮನಿಸಬೇಕಾದ ಅಂಶವಾಗಿದೆ. ಭಾರತದ ಅಣು ಬೆದರಿಕೆಯ ವಿರುದ್ಧ ಚೀನಾ ಪಾಕಿಸ್ಥಾನಕ್ಕೆ ಭರವಸೆಯನ್ನು ನೀಡಿತು ಮತ್ತು ಕಾಶ್ಮೀರ ಸಮಸ್ಯೆಯಲ್ಲಿ ಪಾಕಿಸ್ಥಾನಕ್ಕೆ ತನ್ನ ಬೆಂಬಲವನ್ನು ಪುನರುಚ್ಛರಿಸಿತು.

### *147.6.4 ಸಿಕ್ಕಿಂ ಪ್ರಕರಣ*

ಸಿಕ್ಕಿಂನಲ್ಲಿ 1974 ರ ಕಡೆಯಲ್ಲಿ ಮತ್ತು 1975 ರ ಪ್ರಾರಂಭದಲ್ಲಾದ ಬೆಳವಣಿಗೆಗಳಿಗೆ ಚೀನಾದ ಪ್ರತಿಕ್ರಿಯೆಯಲ್ಲಿ ಇಂತಹುದೇ ಉದ್ವೀಗ್ನತೆಯನ್ನು ಗಮನಿಸಬಹುದಾಗಿದೆ. ಒಂದು ದಂಗೆ ನಡೆದು ಸಿಕ್ಕಿಂ ಅನ್ನು ಭಾರತದೊಂದಿಗೆ ವಿಲೀನಗೊಳಿಸಲು ವ್ಯಾಪಕವಾದ ಒತ್ತಾಯ ತಲೆಯೆತ್ತಿತ್ತು (ವಾಸ್ತವವಾಗಿ ಇದು ಹೊಸ ಬೇಡಿಕೆಯಾಗಿರಲಿಲ್ಲ). ಚೀನಾದ ಪ್ರತಿಕ್ರಿಯೆ ತೀಕ್ಷ್ಣವೂ ಕೋಪಯುಕ್ತವೂ ಆಗಿತ್ತು. ಈ ಸಮಸ್ಯೆಗೆ ಚೀನ ಭಾರತವನ್ನು ದೂಷಿಸಿತು. ಭಾರತವನ್ನು 'ವಿಸ್ತರಣಾ ನೀತಿ' ಯನ್ನು ಅನುಸರಿಸುತ್ತಿದೆಯೆಂದೂ ಆಪಾದಿಸಿತು ಮತ್ತು ನವದೆಹಲಿಯ ತನ್ನ ನೆರೆಹೊರೆಯವರ ಮೇಲೆ ಬೆದರಿಕೆ ಹಾಕುತ್ತಿದೆಯೆಂದು ಟೀಕಿಸಿದ ಚೀನ ಭಾರತಕ್ಕೆ ತೀವ್ರವಾದ ಎಚ್ಚರಿಕೆಯನ್ನು ನೀಡಿತು. ಸಿಕ್ಕಿಂನ ಪಕ್ಷಾಂತರವನ್ನು ತಾನು 'ಸಂಪೂರ್ಣವಾಗಿ ಮಾನ್ಯ ಮಾಡುವುದಿಲ್ಲ' ವೆಂಬುದನ್ನು ಚೀನ ಖಚಿತವಾಗಿ ಸ್ಪಷ್ಟಪಡಿಸಿತು. ಅಲ್ಲದೆ "ಮಾಸ್ಕೋದ ಬೆಂಬಲದಿಂದ ಬೃಹತ್ ಭಾರತೀಯ ಸಾಮ್ರಾಜ್ಯವನ್ನೇ" ಸೃಷ್ಟಿಸಲು ಭಾರತ ಪ್ರಯತ್ನಿಸುತ್ತಿಯೆಂದು ಪೀಕಿಂಗ್ ಹೇಳಿತು.

ಭಾರತದ ಉತ್ತರವೂ ಅಷ್ಟೇ ಕಠಿಣವೂ ಮತ್ತು ದೃಢವಾದುದೂ ಆಗಿತು. ಸಿಕ್ಕಿಂ ಜನರ ಆಸೆ ಆಕಾಂಕ್ಷೆಗಳನ್ನು ಪೀಕಿಂಗ್ ಅರ್ಥಮಾಡಿಕೊಳ್ಳಲಿಲ್ಲವೆಂದು ಅಥವಾ ಉದ್ದೇಶಪೂರ್ವಕವಾಗಿಯೇ ಹಾಗೆ ಮಾಡಿತು. ಅದು ಕೇವಲ ದಕ್ಷಿಣ ಏಷ್ಯಾದ ರಾಷ್ಟ್ರಗಳಲ್ಲಿ ಸಂಶಯವನ್ನು ಬಿತ್ತಲು ಮತ್ತು ತನ್ನದೇ ಆದ ಉದ್ದೇಶಗಳಿಗನುಗುಣವಾಗಿ ಅಸ್ಥಿರತೆಯನ್ನು ಬೆಳೆಸಲು ಬಯಸಿದ್ದಿತು. ಅದು ಟಿಬೆಟ್ಟಿನಲ್ಲಿ ತನ್ನದೇ ಆದ ದಾಖಲೆಯ ಬೆಳಕಿನಲ್ಲಿ ಒಂದು ಪದವನ್ನು ಉಚ್ಛರಿಸಲು ಇಷ್ಟಪಡದಿದ್ದಾಗ ಸಿಕ್ಕಿಂನ ಬಗ್ಗೆಯೂ ಮಾತನಾಡಲು ಅದಕ್ಕೆ ಯಾವ ಹಕ್ಕೂ ಇಲ್ಲವೆಂದು ಶ್ರೀಮತಿ ಇಂದಿರಾ ಗಾಂಧಿ ಯೋಚಿಸಲಿಲ್ಲ.

## 147.7 ಪಿಂಗ್ ಪಾಂಗ್ ರಾಜತಂತ್ರ ನೀತಿ

ಭಾರತದಲ್ಲಿ ತುರ್ತು ಪರಿಸ್ಥಿತಿಯ ಘೋಷಣೆಯ ಬಗ್ಗೆಯೂ ಪೀಕಿಂಗ್ ಯಾವುದೇ ಕೂತುಹಲವನ್ನು ತೋರಿಸಲಿಲ್ಲ. ಆದರೆ ಪ್ರತಿಕ್ರಿಯೆ ಸಾಕಷ್ಟು ಗಂಭೀರವಾಗಿತ್ತು. ಪೀಕಿಂಗ್ ಸರ್ಕಾರದ ಜನತೆಯಿಂದ ಜನತೆಗೆ ರಾಜತಂತ್ರ ನೈಪುಣ್ಯತೆಯ ನೀತಿಯ ಕೆಲವು ಸಾರ್ವಜನಿಕ ಕಸರತ್ತಿನ ಜೊತೆಗೆ, ಸಂಬಂಧವನ್ನು ಸಹಜಸ್ಥಿತಿಗೆ ತರುವ ಬಗ್ಗೆ ವಿಚಾರ ನಡೆಸುವ ನಿಶ್ಶಬ್ಧ ಪ್ರಕ್ರಿಯೆಯೂ ನಡೆಯುತ್ತಿದ್ದಿತು. ಭಾರತ ಮತ್ತು ಚೀನಾಗಳೆರಡು ಪಿಂಗ್ ಪಾಂಗ್ ರಾಜತಂತ್ರ ನೈಪುಣ್ಯತೆಯ ನೀತಿಯ ಬಗ್ಗೆ ತಮ್ಮದೇ ಆದ ವರದಿಯನ್ನು ಹೊಂದಿದ್ದವು. ಚೀನಾದ ಒಂದು ಟೇಬಲ್ ಟೆನಿಸ್ ತಂಡವು ಚೀನಾದ ಉಪಸಚಿವರೊಂದಿಗೆ ಫೆಬ್ರವರಿ 1975 ರಲ್ಲಿ ಭಾರತಕ್ಕೆ ಬಂದಿತು. ಚೀನಾದ ಪತ್ರಿಕೆಗಳು ತಂಡದ ಭಾರತ ಪ್ರವಾಸ ಮತ್ತು ಅದಕ್ಕೆ ನೀಡಿದ ಸ್ನೇಹಪೂರ್ಣ ಸ್ವಾಗತಕ್ಕೆ ಗಮನಾರ್ಹವಾದ ಪ್ರಚಾರವನ್ನು ನೀಡಿದವು. ತಂಡದ ನಾಯಕರು ಚೀನಾ ಮತ್ತು ಭಾರತದ ನಡುವೆ ಸಾಂಪ್ರದಾಯಿಕ ಸ್ನೇಹದ ವಿಷಯವನ್ನು ಪುನರುಚ್ಛರಿಸಿದರು. ಮತ್ತೊಂದು ಸಾರ್ವಜನಿಕ ಸತ್ಕಾರದಲ್ಲಿ ಮಾರ್ಷಲ್ ಚೆನ್ ಹಿಸ್-ಲೀನ್ ಎರಡು ದೇಶಗಳ ನಡುವಿನ ಪ್ರಮುಖ ಸಮಸ್ಯೆಗಳ ಬಗ್ಗೆ ಭಾರತದೊಂದಿಗೆ ಮಾತುಕತೆ ನಡೆಸಲು ಚೀನಾ ಸಿದ್ಧವಿರುವುದನ್ನು ದೃಢಪಡಿಸಿದನು. ಅವನು ಸಾಂಪ್ರದಾಯಿಕ ಸ್ನೇಹವನ್ನು ಪುನರ್ ಸ್ಥಾಪಿಸುವ ಭರವಸೆಯನ್ನು ವ್ಯಕ್ತಪಡಿಸಿದನು.

ಚೀನ ಮತ್ತು ಭಾರತಗಳು ಸದ್ದಿಲ್ಲದೆ ಸಂಬಂಧಗಳನ್ನು ಸಹಜ ಸ್ಥಿತಿಗೆ ತರುವ ಬಗ್ಗೆ ಮಾತುಕತೆಗಳಲ್ಲಿ ತೊಡಗಿದವು. ಚೀನಾಕ್ಕೆ ರಾಯಭಾರಿಯನ್ನು ಕಳುಹಿಸಲು ಭಾರತ ನಿರ್ಧರಿಸಿರುವುದಾಗಿ ಮತ್ತು ವಿದೇಶಾಂಗ ಇಲಾಖೆಯ ಹಿರಿಯ ಅದಿಕಾರಿ ಕೆ.ಆರ್. ನಾರಾಯಣನ್ ರನ್ನು ಈ ಹುದ್ದೆಗೆ ನೇಮಕಮಾಡಿರುವ ಶೀಘ್ರ ಪ್ರಕಟಣೆಯಿಂದ ಇದು ಸ್ಪಷ್ಟವಾಗಿದೆ (15, ಏಪ್ರಿಲ್ 1975). ಚೀನಾ

ಇದಕ್ಕೆ ಪ್ರತಿಯಾಗಿ ತನ್ನ ರಾಯಭಾರಿಯನ್ನು ಸಹ ಕಳುಹಿಸುವುದೆಂದು ಭಾರತ ನಿರೀಕ್ಷಿಸಿತ್ತು. ಈ ವಿಷಯದಲ್ಲಿ ಈಗಾಗಲೇ ಒಪ್ಪಂದಕ್ಕೆ ಬರಲಾಗಿತ್ತೆಂಬುದರಲ್ಲಿ ಯಾವುದೇ ಅನುಮಾನವಿರಲಿಲ್ಲ. ಭಾರತವು ಹೆಚ್ಚು ಮೃದುವಾದ ಸಂಬಂಧಗಳಿಗಾಗಿ ಪ್ರಕ್ರಿಯೆಯನ್ನು ಆರಂಭಿಸುವ ಮೊದಲ ಹೆಜ್ಜೆಯಿಡಲು ಒಪ್ಪಿಗೆಯನ್ನು ಪ್ರದರ್ಶಿಸಿದ್ದಿತು. ಸ್ವಲ್ಪ ಕಾಲದ ನಂತರ ಪೀಕಿಂಗ್ ಕೂಡ ನವ ದೆಹಲಿಯಲ್ಲಿ ರಾಯಭಾರಿಯೊಬ್ಬನನ್ನು ನೇಮಕ ಮಾಡುವ ತನ್ನ ನಿರ್ಧಾರವನ್ನು ಪ್ರಕಟಿಸಿತು. ರಾಯಭಾರಿಗಳ ಈ ವಿನಿಮಯದೊಂದಿಗೆ ಕಡೆಪಕ್ಷ ರಾಜತಾಂತ್ರಿಕ ಸಂಬಂಧಗಳನ್ನು ಸಾಮಾನ್ಯ ಸ್ಥಿತಿಗೆ ಪುನಃ ತರಲಾಯಿತು.

### *147.7.1 ಸಹಜಸ್ಥಿತಿಗೆ ತರುವ ಪ್ರಯತ್ನ*

ರಾಯಭಾರಿಗಳ ವಾಪಸಾತಿಯು ಚೀನಾ-ಭಾರತ ಸಂಬಂಧಗಳಲ್ಲಿ ಇನ್ನೂ ಹೆಚ್ಚಿನ ಸುಧಾರಣೆಗೆ ಭಾರತದ ಬಯಕೆ ಮತ್ತು ಈ ವಿಷಯದಲ್ಲಿ ಮತ್ತಷ್ಟು ಮುಂದುವರಿಯಲು ಒಪ್ಪಿಗೆಯನ್ನು ಸೂಚಿಸಿತು. ರಾಯಭಾರಿಗಳ ಈ ವಿನಿಮಯವೇ ಹದಗೆಟ್ಟಿದ್ದ ಸಂಬಂಧಗಳ ಸುಧಾರಣೆಯನ್ನು ಸೂಚಿಸಲಿಲ್ಲ. ಆದರೆ ಸಹಜ ಸ್ಥಿತಿಗೆ ಮರಳಲು ಒಂದು ಪ್ರಮುಖ ರಾಜಕೀಯ ಹೆಜ್ಜೆಯನ್ನು ಪ್ರತಿನಿಧಿಸಿತು. ಈ ಹಂತದಲ್ಲಿ ಭಾರತ ಇತರ ಸಂಬಂಧಗಳು ಮತ್ತು ಹಿತಾಸಕ್ತಿಗಳನ್ನು ಬಲಿಕೊಡದೆ ಚೀನಾದೊಂದಿಗೆ ಸಂಬಂಧವನ್ನು ಉಳಿಸಿಕೊಳ್ಳಲು ಅತ್ಯಂತ ಎಚ್ಚರಿಕೆಯಿಂದ ಮುಂದುವರಿಯಿತು.

ಇದೇ ಸಮಯದಲ್ಲಿ ಭಾರತ ದೀನತೆಯಿಂದ ಬೇಡುತ್ತಿದೆ ಮತ್ತು ಸಂಪೂರ್ಣವಾಗಿ ಶರಣಾಗಿದೆಯೆಂಬ ಅಭಿಪ್ರಾಯವನ್ನು ಕೊಡುವಂತಿರಲಿಲ್ಲ. ಸಂಬಂಧವು ಸಮಾನತೆ ಮತ್ತು ಪರಸ್ಪರ ಹಿತದ ಒಪ್ಪಿಗೆಯ ಆಧಾರದ ಮೇಲೆ ಎಂದು ಭಾರತ ಒತ್ತಿ ಹೇಳಿ ಪಟ್ಟು ಹಿಡಿಯಿತು. ಸಹಜ ಸ್ಥಿತಿಗೆ ಮರಳುವ ಕಡೆಗೆ ಮೊದಲ ಹೆಜ್ಜೆಯನ್ನು ಅಷ್ಟು ಸುಲಭವಾಗಿ ತೆಗೆದುಕೊಳ್ಳಲು ಸಾಧ್ಯವಿರಲಿಲ್ಲ. ಎರಡು ದೇಶಗಳ ಇತ್ಯರ್ಥವೆಂಬುದರ ಗ್ರಹಿಕೆಯೂ ಏಕರೀತಿಯಾಗಿರಲಿಲ್ಲ. ಪೀಕಿಂಗ್ "ವಾತಾವರಣದ ಸುಧಾರಣೆಯನ್ನು" ಇಷ್ಟಪಟ್ಟಿತು. ಆದರೆ ಭಾರತಕ್ಕೆ ಹೆಚ್ಚಿನ ದೃಢವಾದ ಹೆಜ್ಜೆಯ ಅಗತ್ಯವಿತ್ತು. ಭಾರತ ತಾನೇ ತೊಂದರೆಗೊಳಗಾದ ದೇಶವೆಂದು ಭಾವಿಸಿತು. ಆದ್ದರಿಂದ ಹೆಚ್ಚಿನ ರಿಯಾಯಿತಿಗಳನ್ನು ತೋರಿಸುವುದು ಚೀನಾಕ್ಕೆ ಸೇರಿದ್ದೆಂದು ಭಾರತ ನಂಬಿತ್ತು.

### *147.7.2 ಬೆನ್ನು ಹತ್ತಿದ ಸಮಸ್ಯೆಗಳು*

ಅನೇಕ ವರ್ಷಗಳಿಂದಲೂ ಸಮಸ್ಯೆಯು ಮತ್ತಷ್ಟು ಬೃಹತ್ ಸಮಸ್ಯೆಯಾಗಿ ಕವಲೊಡೆಯಿತು. ಗಡಿ ಒಂದು ಗಂಭೀರ ಸಮಸ್ಯೆಯಾಗಿದ್ದು, ಇತರ ಅನೇಕ ಸಮಸ್ಯೆಗಳೂ ಇದ್ದವು. ಪಶ್ಚಿಮ ವಲಯದ (ಅಕ್ಸಾಯ್ ಚಿನ್ ಪ್ರದೇಶ) ನಿಯಂತ್ರಣ ರೇಖೆ ಬಹಳ ಕಾಲ 1959 ಅಥವಾ 1962 ರಲ್ಲಿದ್ದಂತೆ ಉಳಿದಿರಲಿಲ್ಲವಾದ್ದರಿಂದ ಗಡಿ ಪ್ರಶ್ನೆಯೂ ಸಹ ಅತ್ಯಂತ ಜಟಿಲವಾಗಿದ್ದಿತು. ಅಂದಿನಿಂದ ಚೀನಿಯರು ತಮ್ಮ ಹತೋಟಿಯನ್ನು ವಿಶಾಲ ಪ್ರದೇಶದ ಮೇಲೆ ವಿಸ್ತರಿಸಿದ್ದರು. ಆದರೆ ಸಮಸ್ಯೆಯ ಇಡೀ ಸಾರಾಂಶವು ಭಾರತ ಮತ್ತು ಚೀನಾಗಳನ್ನು ಈಗ ಒಡೆದು ಹಾಕಿದ್ದಿತು. ಕಾಶ್ಮೀರದ ಸಮಸ್ಯೆ ಮತ್ತು ಪಾಕಿಸ್ತಾನದೊಂದಿಗೆ ಸಂಬಂಧಗಳು ಒಂದು ನಿರ್ಣಾಯಕ ಸಮಸ್ಯೆಯಾಗಿತ್ತು. ಕಳೆದ ಒಂದೂವರೆ ದಶಕಗಳಿಂದ ಚೀನಾ ಪಾಕಿಸ್ತಾನಕ್ಕೆ ಶಸ್ತ್ರಾಸ್ತ್ರಗಳ ಪ್ರಮುಖ ಸರಬರಾಜುದಾರನಾಗಿತ್ತು. ಗಡಿಯಲ್ಲದೆ ಅವುಗಳ ನಡುವೆ ಇದ್ದ ಅತ್ಯಂತ ಗಂಭೀರ ಸಮಸ್ಯೆಚೀನ-ಸೋವಿಯತ್ ಅಥವಾ ಭಾರತ-ಸೋವಿಯತ್ ಸಂಬಂಧಗಳಾಗಿರಲಿಲ್ಲ. ಆದರೆ ಪಾಕಿಸ್ತಾನ-ಚೀನ ಮತ್ತು ಪಾಕಿಸ್ತಾನ-ಭಾರತ ಸಂಬಂಧಗಳಾಗಿದ್ದವು. ವಿಶೇಷವಾಗಿ ಭಾರತದೊಂದಿಗಿನ ಪಾಕಿಸ್ತಾನದ ಎಲ್ಲಾ ರಾಷ್ಟ್ರೀಯ ಸಮಸ್ಯೆಗಳಿಗೂ ಪೀಕಿಂಗ್ ಪಾಕಿಸ್ತಾನಕ್ಕೆ ಪ್ರಬಲ ಬೆಂಬಲ ನೀಡಿತು. ಚೀನ ಭಾರತದ ರಾಜಕೀಯದ ಮೇಲೆ ಮತ್ತು ಅದರ ಮೂಲಭೂತ ಮೌಲ್ಯಗಳ ಮೇಲೆ ಪ್ರಬಲವಾದ ಪ್ರಭಾವ ಬೀರುವುದೆಂದು ಭಾರತ ನಂಬಿದ್ದಿತು. ಭಾರತ ಮತ್ತು ಚೀನಾಗಳ ನಡುವೆ ಸಂಬಂಧ ಸುಧಾರಣೆ ಈ ವಿಷಯದಲ್ಲಿ ಪೀಕಿಂಗ್‌ನ ನಿಲುವಿನಲ್ಲಿ ಗಮನಾರ್ಹ ಬದಲಾವಣೆಯಾಗದೆ ಕಲ್ಪನಾತೀತವಾಗಿತ್ತು.

ಇತರ ಅನೇಕ ಅತೃಪ್ತಿಯ ವಿಷಯಗಳೂ ಇದ್ದವು. ಭಾರತಕ್ಕೆ ಸೇರಿದ ಪ್ರದೇಶದಲ್ಲಿ ಹಾದು ಹೋಗುವುದೆಂದು ಭಾರತೀಯರು ನಂಬಿದ್ದ ನ್ಯಾಯಬಾಹಿರವಾಗಿ ನಿರ್ಮಿಸಲಾಗಿದ್ದ ಕಾರಕೊರಮ್ ಹೆದ್ದಾರಿ ಅದರಲ್ಲಿ ಒಂದು. ಏನೇ ಇದ್ದರೂ ಈ ಹೆದ್ದಾರಿಯ ಸೈನಿಕ ಮತ್ತು ಆಯಕಟ್ಟಿನ ಪ್ರಾಮುಖ್ಯತೆಯನ್ನು ಕಡೆಗಣಿಸುವಂತಿಲ್ಲ. ಈ ಹೆದ್ದಾರಿಯ ಬಳಕೆಯು ಮಾತುಕತೆ ಮತ್ತು ಒಂದು ಬಗೆಯ ಹೊಂದಾಣಿಕೆಯ ಒಳಪಡಿಸಬೇಕಾಗಿತ್ತು. ಮತ್ತೊಂದು ವಿಷಯವೆಂದರೆ ಸಿಕ್ಕಿಂ ಮತ್ತು ಭೂತಾನ್‌ಗಳೊಂದಿಗೆ ಭಾರತದ ಸಂಬಂಧವನ್ನು

ಪೀಕಿಂಗ್ ಮಾನ್ಯಮಾಡಿತ್ತೆ ಎಂಬುದು. ಭಾರತ ಮತ್ತು ಭೂತಾನ್‌ಗಳ ನಡುವೆ ಒಂದು ವಿಶೇಷ ಸಂಬಂಧವಿತ್ತು. ಇಲ್ಲಿ ಏರ್ಪಟ್ಟಿದ್ದ ಪರಿಸ್ಥಿತಿಯ ಅಂತಿಮ ನಿರ್ಧಾರಕ್ಕೆ ಚೀನಾ ತನ್ನ ಒಪ್ಪಿಗೆಯನ್ನು ಸೂಚಿಸಬೇಕಾಗಿತ್ತು. ಇದಕ್ಕಿಂತಲೂ ಹೆಚ್ಚಾಗಿ ಭಾರತದ ಈಶಾನ್ಯ ಭಾಗದಲ್ಲಿ ವಿಚಿತ್ರಕಾರಿ ಬುಡಮೇಲು ಮತ್ತು ದಂಗೆಕೋರ ಶಕ್ತಿಗಳ ಬಗ್ಗೆ ಚೀನಾದ ಧೋರಣೆ ಇನ್ನೂ ಡೋಲಾಯಮಾನವಾಗಿತ್ತು. 60 ರ ದಶಕ ಮತ್ತು 70 ರ ದಶಕದ ಪ್ರಾರಂಭದಲ್ಲಿ ಚೀನ ಅವುಗಳಿಗೆ ನೀಡುತ್ತಿದ್ದ ನೆರವಿನ ಪ್ರಮಾಣ ಗಮನಾರ್ಹವಾಗಿ ಕಡಿಮೆಯಾಗಿತ್ತಾದರೂ ಸಂಪೂರ್ಣವಾಗಿ ನಿಂತಿರಲಿಲ್ಲ ಇಲ್ಲವೆ ಮುಂದಿನ ಧೋರಣೆ ಇನ್ನೂ ಸ್ಪಷ್ಟವಾಗಿರಲಿಲ್ಲ.

### *147.7.3 ದಲೈಲಾಮಾನ ಸಮಸ್ಯೆ*

ದಲೈಲಾಮ ಮತ್ತು ಟಿಬೆಟ್ಟಿನ ನಿರಾಶ್ರಿತರಿಗೆ ಭಾರತ ಆಶ್ರಯ ನೀಡಿದ್ದುದರ ಬಗ್ಗೆ ಪೀಕಿಂಗ್‌ಗೆ ಅಸಮಧಾನವಿತ್ತು. ಭಾರತವು ಟಿಬೆಟ್ಟಿನಲ್ಲಿ ಅಶಾಂತಿಯನ್ನು ಪ್ರಚೋದಿಸುತ್ತಿದೆಯೆಂದು ಮತ್ತು ನಿರಾಶ್ರಿತರನ್ನು ಟಿಬೆಟ್ಟಿನಲ್ಲಿ ವಿಚಿತ್ರಕಾರಿ ಉದ್ದೇಶಗಳಿಗೆ ಬಳಸಿಕೊಳ್ಳುತ್ತಿದೆಯೆಂದು ಪೀಕಿಂಗ್ ಆಗಿಂದಾಗ್ಗೆ ಆಪಾದಿಸಿತು. ಆದರೆ ಈ ಸಮಸ್ಯೆಯನ್ನು ಚೀನಾ ಶಾಂತವಾಗಿ ಪರಿಶೀಲಿಸಿದಲ್ಲಿ ಅದು ಜವಹರಲಾಲ್ ನೆಹರು ನಿರಾಶ್ರಿತರ ಸಮಸ್ಯೆಯನ್ನು ಪರಿಣಾಮಕಾರಿಯಾಗಿ ಪ್ರತ್ಯೇಕಿಸಿದ್ದರು ಮತ್ತು ನಿಷ್ಕ್ರಿಯಗೊಳಿಸಿದರು ಮತ್ತು ಅವರು ಭಾರತದ ಒಳಗಾಗಲಿ ಅಥವಾ ಹೊರಗಾಗಲಿ ಯಾವುದೇ ರಾಜಕೀಯ ಪಾತ್ರವನ್ನು ವಹಿಸಲು ಅವಕಾಶ ನೀಡಲಿಲ್ಲವೆಂದು ತೀರ್ಮಾನಕ್ಕೆ ಬರುವುದರಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ.

ಪ್ರಬಲ ರಾಷ್ಟ್ರಗಳೊಂದಿಗೆ ಸಂಬಂಧಗಳು ಮತ್ತು ಧೋರಣೆಗಳು ಎರಡು ದೇಶಗಳ ನಡುವೆ ಭಿನ್ನಾಭಿಪ್ರಾಯಗಳನ್ನು ಮತ್ತಷ್ಟು ಹೆಚ್ಚಿಸಿದವು. ಬಾಂಗ್ಲಾದೇಶದ ಬಿಕ್ಕಟ್ಟಿನ ನಂತರ ಭಾರತ-ಅಮೆರಿಕ ಸಂಬಂಧಗಳು ವಿನಾಶಕಾರಿಯಾಗಿ ಕ್ಷೀಣಿಸಿದವು. ಆದರೆ ಈ ಕಾಲದಲ್ಲಿ ಚೀನಾ ಅಮೆರಿಕಾಕ್ಕೆ ಅತ್ಯಂತ ನಿಕಟವಾಯಿತು. ಇನ್ನೊಂದು ಕಡೆ, ಕಳೆದ ಈ ಎರಡು ದಶಕಗಳಲ್ಲಿ ಪೀಕಿಂಗ್ ಮಾಸ್ಕೋವನ್ನು ತನ್ನ ಪ್ರಮುಖ ಶತೃವೆಂದು ಪರಿಗಣಿಸಿತು. ಆದಾಗ್ಯೂ ಭಾರತ ರಷ್ಯದೊಂದಿಗೆ ನಿಕಟವಾದ ಸೌಹಾರ್ದ ಸಂಬಂಧಗಳನ್ನು ಉಳಿಸಿಕೊಂಡಿತು. ಚೀನಾ-ಸೋವಿಯತ್ ಸಮೀಕರಣವನ್ನು ಬದಲಾಯಿಸಲು ಭಾರತಕ್ಕೆ ಸಾಧ್ಯವಾಗಲಿಲ್ಲ. ನವ ದೆಹಲಿಯು ಜಾರಿಯಲ್ಲಿರುವ ಪ್ರಚಲಿತದಲ್ಲಿರುವ ಸ್ನೇಹ ಸಂಬಂಧಗಳನ್ನು ತ್ಯಜಿಸಬೇಕೆಂದು ಪೀಕಿಂಗ್ ನಿರೀಕ್ಷಿಸಲು ಸಾಧ್ಯವಿರಲಿಲ್ಲ.

## 147.8 1977 ರ ನಂತರ ಸಹಜ ಸ್ಥಿತಿಯ ಕಡೆಗೆ ಹಾದಿ

### *147.8.1 ಮಾವೋನ ನಂತರ*

ಚೀನಾದಲ್ಲಿ ಸೆಪ್ಟೆಂಬರ್ 1976 ರಲ್ಲಿ ಮಾವೋತ್ಸೇತುಂಗ್ ಮರಣ ಹೊಂದಿದನು. ಭಾರತದಲ್ಲಿ ಮಾರ್ಚ್ 1977 ರಲ್ಲಿ ಸರ್ಕಾರದ ಬದಲಾವಣೆಯಾಯಿತು. ಮಾರ್ಚ್ 1977 ರಲ್ಲಿ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ ಶ್ರೀಮತಿ ಇಂದಿರಾಗಾಂಧಿ ಪರಾಭವಗೊಂಡರು. ನಂತರ ಅಧಿಕಾರಕ್ಕೆ ಬಂದ ಜನತಾ ಸರ್ಕಾರವು ಸೋವಿಯತ್ ಒಕ್ಕೂಟದಿಂದ ಗಮನಾರ್ಹವಾಗಿ ದೂರ ಸರಿಯುವುದೆಂದು ಮತ್ತು ವಾಷಿಂಗ್ಟನ್ ಹಾಗೂ ಪೀಕಿಂಗ್‌ಗಳೊಂದಿಗೆ ಹೊಸ ಸಂಬಂಧಗಳ ಕಡೆಗೆ ಮುಂದುವರಿಯುವುದೆಂದು ಚೀನಿಯರು ವಿಶ್ವಾಸದಿಂದ ನಿರೀಕ್ಷಿಸಿದ್ದರು. ಆದಾಗ್ಯೂ ಸೋವಿಯತ್ ಒಕ್ಕೂಟದೊಂದಿಗೆ ಸಂಬಂಧಗಳು ಭೌತಿಕವಾಗಿ ಹಾಳಾಗಲಿಲ್ಲ. ಮಾಸ್ಕೋ ಮತ್ತು ನವದೆಹಲಿಗಳ ನಡುವೆ ಹೊಸ ಆರ್ಥಿಕ ಒಪ್ಪಂದಗಳು ಏರ್ಪಟ್ಟವು. ಕ್ರಮೇಣ ಪಥ ಬದಲಾವಣೆಯಲ್ಲಿ ನವದೆಹಲಿಯ ವಿಫಲತೆಯ ಬಗ್ಗೆ ಒಂದು ಬಗೆಯ ನಿರಾಶೆಯನ್ನು ಗುರುತಿಸಬಹುದಾಗಿದೆ. ಆದಾಗ್ಯೂ ಸಹಜ ಸ್ಥಿತಿಯನ್ನು ಏರ್ಪಡಿಸುವ ಪ್ರಕ್ರಿಯೆಯನ್ನು ಮುಂದುವರಿಸಲು ಕ್ರಮಗಳನ್ನು ಕೈಗೊಳ್ಳಲಾಯಿತು.

### *147.8.2 ರಾಜತಾಂತ್ರಿಕರ ವಿನಿಮಯ*

ವಿದೇಶಗಳೊಂದಿಗೆ ಸ್ನೇಹಸಂಬಂಧದ ಚೀನಾದ ಸಂಘದ ಅಧ್ಯಕ್ಷರಾದ ಹಿರಿಯ ರಾಜತಾಂತ್ರಿಕ ಪಿಂಗ್-ನಾನ್ (ವಾಂಗ್ ಚಿಂಗ್‌ನಾನ್) ಅಕ್ಟೋಬರ್ 1977 ರಲ್ಲಿ ಒಂದು ಸ್ನೇಹ ನಿಯೋಗದ ನಾಯಕತ್ವದಲ್ಲಿ ಚೀನಾ-ಭಾರತ ಸಂಬಂಧಗಳ ಸುಧಾರಣೆಯ ಉದ್ದೇಶದಿಂದ ಉನ್ನತ ಮಟ್ಟದ ಮಾತುಕತೆಯ ವಿನಿಮಯಕ್ಕಾಗಿ ಭಾರತಕ್ಕೆ ಬಂದನು.

ವಾಂಗ್ ಪಿಂಗ್ ನಾನನು ಪ್ರಧಾನಮಂತ್ರಿ ಮೊರಾರ್ಜಿ ದೇಸಾಯಿ ಮತ್ತು ವಿದೇಶಾಂಗ ಸಚಿವರನ್ನು ಭೇಟಿಯಾಗಿ, ಅಟಲ್ ಬಿಹಾರಿ ವಾಜಪೇಯಿಯವರಿಗೆ ಚೀನಾಕ್ಕೆ ಬರುವಂತೆ ಅಧಿಕೃತ ಆಮಂತ್ರಣವನ್ನು ತಲುಪಿಸಿದನು. ಸ್ವಾಭಾವಿಕವಾಗಿ ವಾಸ್ತವವಾಗಿ ಎರಡೂ ಪಕ್ಷಗಳು ಆಯ್ಕೆಯನ್ನು ತೆರೆದಿಟ್ಟನು. ಆದಾಗ್ಯೂ ಮೊರಾರ್ಜಿ ದೇಸಾಯಿಯವರು ತಮಗೆ ಗಡಿ ಸಮಸ್ಯೆ ಪ್ರಮುಖ ಆದ್ಯತೆಯಾಗಿದ್ದು, ಗಡಿ ಸಮಸ್ಯೆಯನ್ನು ತೃಪ್ತಿಕರವಾಗಿ ಬಗೆಹರಿಸಿಕೊಳ್ಳದೆ ಸಹಜ ಸ್ಥಿತಿಯನ್ನು ಸಾಧಿಸಲು ಸಾಧ್ಯವಿಲ್ಲವೆಂಬುದನ್ನು ಸ್ಪಷ್ಟಪಡಿಸಿದರು.

ಅನೇಕ ಭಾರಿ ಮುಂದೂಡಲ್ಪಟ್ಟು ಮತ್ತು ಗಮನಾರ್ಹ ಆಂತರಿಕ ಭಿನ್ನಾಭಿಪ್ರಾಯಗಳ ನಡುವೆ ವಿದೇಶಾಂಗ ಸಚಿವರ ಭೇಟಿ ಅಂತಿಮವಾಗಿ ನಡೆಯಿತು. (12, ಫೆಬ್ರವರಿ 1979) ಅಶುಭಕರವಾಗಿ ವಿಯಟ್ನಾಂನ ವಿರುದ್ಧ ಚೀನಾದ ದಾಳಿಯಿಂದಾಗಿ ಅದನ್ನು ಮೊಟಕುಗೊಳಿಸಬೇಕಾಯಿತು. ಆದಾಗ್ಯೂ ಈ ಭೇಟಿಯಿಂದ ಭಾರತ ಅನೇಕ ಲಾಭಗಳನ್ನು ಗಳಿಸಿತು. ವಿರಸವನ್ನು ಕೊನೆಗೊಳಿಸುವ ಕಡೆಗೆ ಪ್ರಾರಂಭದ ಹೆಜ್ಜೆಯನ್ನು ಇಡಲಾಯಿತೆಂದು ವ್ಯಾಪಕವಾಗಿ ನಂಬಲಾಯಿತು.

ವಿಯಟ್ನಾಂನ ಬೆಳವಣಿಗೆಗಳು ಭಾರತ-ಚೀನ ಸಂಬಂಧಗಳ ಭವಿಷ್ಯದ ಮೇಲೆ ಕಪ್ಪು ನೆರಳನ್ನು ಮುಸುಕಿದವು. ಆದಾಗ್ಯೂ ನಿಧಾನಗತಿಯ ಬೆಳವಣಿಗೆಗಳು ಮುಂದುವರಿದವು. ಅದು ಅಂತರ ರಾಷ್ಟ್ರೀಯ ಪರಿಸ್ಥಿತಿಯನ್ನು ಬಹಳವಾಗಿ ಬದಲಾಯಿಸಿತು. ವಿಶೇಷವಾಗಿ 1981-83 ರ ನಡುವೆ ಅಧಿಕಾರಿಗಳು, ವಿಜ್ಞಾನಿಗಳು, ಅರ್ಥಶಾಸ್ತ್ರಜ್ಞರು, ವಿದ್ವಾಂಸರು ಮತ್ತು ವಿಶ್ವಾಸವನ್ನು ಬೆಳೆಸುವ ನಿಯೋಗಗಳು ಭೇಟಿಯ ವಿನಿಮಯ ಮಾಡಿಕೊಂಡವು.

### *147.8.3 ಎಳೆಯನ್ನು ಎತ್ತಿಕೊಳ್ಳುವುದು (ಜಾಡನ್ನು ಹಿಡಿಯುವುದು)*

ಶ್ರೀಮತಿ ಇಂದಿರಾ ಗಾಂಧಿಯವರು ಪುನಃ ಅಧಿಕಾರಕ್ಕೆ ಬಂದಾಗ, ಅವರ ಸರ್ಕಾರದೊಂದಿಗೆ ಮಾತುಕತೆಗಳನ್ನು ಮುಂದುವರಿಸಲು ಪೀಕಿಂಗ್ ಮಾನಸಿಕವಾಗಿ ಸಿದ್ಧವಾಯಿತು. ವಾಸ್ತವವಾಗಿ ಎರಡೂ ದೇಶಗಳು ಸಾಧ್ಯತೆಗಳು ಮತ್ತು ಊಹೆಗಳು ದೀರ್ಘಕಾಲ ಬಾಳಬಲ್ಲ ಸ್ನೇಹ ಸಂಬಂಧಗಳ ಬಗ್ಗೆ ಹೆಚ್ಚು ನೈಜವಾದ ಅರಿವನ್ನು ಹೊಂದಿದ್ದವು.

ಶ್ರೀಮತಿ ಇಂದಿರಾ ಗಾಂಧಿಯವರು ಬೆಲ್‌ಗ್ರೇಡ್‌ನಲ್ಲಿ ಚೀನಾದ ಪ್ರಧಾನಿಯನ್ನು ಭೇಟಿ ಮಾಡಿದಾಗ (ಮೇ, 8, 1980) ಸಂಬಂಧ ಸುಧಾರಣೆಯ ಎಳೆಯನ್ನು ಹಿಡಿಯಲಾಯಿತು. 1961 ರಲ್ಲಿ ಚೌ ಎನ್ ಲಾಯ್ ಭೇಟಿಯ ನಂತರ ಇದು ಎರಡು ದೇಶಗಳ ನಡುವೆ ಪ್ರಧಾನ ಮಂತ್ರಿಗಳ ಮಟ್ಟದ ಮೊದಲ ಭೇಟಿಯಾಗಿತ್ತು. ಇಬ್ಬರೂ ಸಮಸ್ಯೆಗಳನ್ನು ಬಗೆಹರಿಸುವ ಮತ್ತು ಸಂಬಂಧಗಳನ್ನು ಸುಧಾರಿಸುವ ಪ್ರಕ್ರಿಯೆಯನ್ನು ಮುಂದುವರಿಸಲು ಒಪ್ಪಿದರು.

ಚೀನಾದ ಉಪ ಪ್ರಧಾನಿ ಮತ್ತು ವಿದೇಶಾಂಗ ಸಚಿವ ಹುವಾಂಗ್ ಭಾರತ ಭೇಟಿ (ಜೂನ್ 26, 1981) ಈ ದಿಸೆಯಲ್ಲಿ ಮತ್ತೊಂದು ಪ್ರಮುಖ ಹೆಜ್ಜೆಯಾಗಿತ್ತು. ಹೆಚ್ಚಿನ ರಿಯಾಯಿತಿಗಳನ್ನು ನೀಡದೆ ಮತ್ತು ಪಾಕಿಸ್ಥಾನ, ನೇಪಾಳ, ಬಾಂಗ್ಲಾದೇಶ ಮತ್ತು ಇತರ ಭಾರತದ ನೆರೆಹೊರೆಯವರೊಂದಿಗೆ ಸಂಬಂಧಗಳನ್ನು ಹಾಳು ಮಾಡಿಕೊಳ್ಳದೆ ಪೀಕಿಂಗ್ ಭಾರತದೊಂದಿಗೆ ತನ್ನ ಸಂಬಂಧವನ್ನು ಮೇಲ್ದರ್ಜೆಗೇರಿಸಲು ಬಯಸಿತು.

### *147.8.4 ಕಡೆಗಣಿಸಲಾದ ಗಡಿ ಸಮಸ್ಯೆ (ಬದಿಗಿರಿಸಲಾದ)*

ಪ್ರಾರಂಭದಲ್ಲಿ ಚೀನಾ ಗಡಿ ಸಮಸ್ಯೆಯಲ್ಲಿ ಅದರಷ್ಟಕ್ಕೆ ಬಿಟ್ಟುಬಿಡುವ ನಿಲುವನ್ನು ಅಳವಡಿಸಿಕೊಂಡಿತು. ಎರಡೂ ದೇಶಗಳ ಇತರ ಆರ್ಥಿಕ, ವ್ಯಾಪಾರ, ಸಾಂಸ್ಕೃತಿಕ, ಸಾಮಾಜಿಕ ಮತ್ತು ಸರ್ಕಾರದ ಸಂಬಂಧಗಳ ರಚನೆಗಳನ್ನು ನಿರ್ಮಿಸಿದವು. ಗಡಿ ಸಮಸ್ಯೆ ಅತ್ಯಂತ ಸಂಕೀರ್ಣವೂ, ಭೀಕರವೂ ಆಗಿದ್ದು ಅವನ್ನು ಕಡೆಗಿರಿಸಲಾಯಿತು; ಅದೇ ವೇಳೆಯಲ್ಲಿ ಗಡಿಯಲ್ಲಿ ಅಂದಿನ ಭೌತಿಕ ಸ್ಥಾನದ ಸ್ಥಿರತೆಯನ್ನು ಉಳಿಸಿಕೊಳ್ಳಲಾಯಿತು. ಇದನ್ನು ಒಪ್ಪಿಕೊಳ್ಳಲು ಭಾರತಕ್ಕೆ ಸಾಧ್ಯವಿರಲಿಲ್ಲ. ಯತಾಸ್ಥಿತಿಯ ಅನಿರ್ದಿಷ್ಟ ಮುಂದುವರಿಕೆಯಿಂದ ಭಾರತದ ಹಿತಾಸಕ್ತಿಗೆ ಯಾವ ಅನುಕೂಲವು ಇರಲಿಲ್ಲ. ಕೆಂಗ್ ಕ್ಸಿಯಾವೊಪಿಂಗನು ಸೂಚಿಸಿದೆ.

ಹುವಾಂಗ್ ಹುವಾನ ಭೇಟಿಯ ಕಾಲದಲ್ಲಿ ಗಡಿ ಸಮಸ್ಯೆಯ ಬಗೆ ಯಾವುದೇ ಮಹತ್ವದ ಪ್ರಗತಿಯಾಗಲಿಲ್ಲ. ಆದರೆ ಈ ನಿಧಾನವಾದ ಹೊಂದಾಣಿಕೆ ಮತ್ತು ಅನುಸರಣೆಯಿಂದ ಕೆಲವು ಅನುಕೂಲಗಳು ದೊರೆತವು. ಗಡಿ ಸಮಸ್ಯೆ ಅತ್ಯಂತ ಮಹತ್ವದ ಸಮಸ್ಯೆಯಾಗಿದ್ದು ಅದನ್ನು ಬಗೆಹರಿಸಬೇಕೆಂದು ಮತ್ತು ಮುಚ್ಚಿಡಬಾರದೆಂದು ಚೀನಾ ಒಪ್ಪಿಕೊಂಡಿತು. ಎರಡೂ ಪಕ್ಷಗಳು ಸಮಸ್ಯೆಗಳನ್ನು ಕೈಗೆತ್ತಿಕೊಂಡು ನಿಯತವಾದ ಮತ್ತು ನಿರಂತರವಾದ ಚರ್ಚೆಗಳ ಮೂಲಕ ಪರಿಹಾರವನ್ನು ಹುಡುಕಲು ದೃಢ ನಿರ್ಧಾರ ಮಾಡಿದವು.

## 147.9 ಉತ್ತರ - ದಕ್ಷಿಣ ಮೆಕ್ಸಿಕೊ ಸಮ್ಮೇಳನದ (1981) ನಂತರ

ಉತ್ತರ-ದಕ್ಷಿಣ ಸಮ್ಮೇಳನದಲ್ಲಿ ಭಾಗವಹಿಸಿದ ಸಂದರ್ಭದಲ್ಲಿ ಶ್ರೀಮತಿ. ಗಾಂಧಿಯವರು ಚೀನಾದ ಹೊಸ ಪ್ರಧಾನಿ ಚಾವೋ ತ್ಸೆ-ಯಾಂಗ್‌ರನ್ನು ಮೆಕ್ಸಿಕೋದ ಕ್ಯಾನ್‌ಕುನ್‌ನಲ್ಲಿ ಭೇಟಿಯಾದರು. (28, ಅಕ್ಟೋಬರ್ 1981) ನಂತರ ಹುವಾಂಗ್ ಸುತ್ತಿನ ಮಾತುಕತೆಗಳಲ್ಲಿ ವಿಶೇಷವಾಗಿ ಗಡಿ ಇತ್ಯರ್ಥದ ಪ್ರಶ್ನೆಯ ಮೇಲೆ ಅಲ್ಪ ಪ್ರಗತಿಯನ್ನು ಸಾಧಿಸಲಾಯಿತು. ನವದೆಹಲಿಯಲ್ಲಿ ನಡೆದ ನಾಲ್ಕನೇ ಸುತ್ತಿನ ಮಾತುಕತೆಯಲ್ಲಿ ಗಡಿ ಸಮಸ್ಯೆಯನ್ನು ಚರ್ಚಿಸುವ ವಿಧಿವಿಧಾನಗಳ ಮೇಲೆ ಒಪ್ಪಂದಕ್ಕೆ ಬರಲಾಯಿತು. ಉಭಯ ಪಕ್ಷಗಳು ಎರಡು ದೇಶಗಳ ಮಾರ್ಗಗಳಲ್ಲಿ ಗೊಂದಲವನ್ನು ಸೃಷ್ಟಿಸಲು ಪ್ರಯತ್ನಿಸಿದವು. ಚೀನಿಯರು ಕಡೆಗೆ ಭಾರತೀಯರ ಅಭಿಪ್ರಾಯವನ್ನೇ ಅನುಮೋದಿಸಿ ಇತ್ಯರ್ಥಕ್ಕೆ ಗಡಿ ವಿವಾದವನ್ನು ವಲಯದ ನಂತರ ವಲಯದ ಬಗ್ಗೆ ಚರ್ಚಿಸಬೇಕೆಂದು ಅಭಿಪ್ರಾಯ ಪಟ್ಟರು. ಸಮಸ್ಯೆಗಳ ಸಮಗ್ರ ಪರಿಹಾರಕ್ಕೆ ಇದನ್ನು ಅಂತಿಮವಾಗಿ ಸೇರಿಸಬೇಕೆಂಬ ಚೀನಾದ ಸಲಹೆಯನ್ನು ಭಾರತ ಒಪ್ಪಿಕೊಂಡಿತು.

### *147.9.1 ಸಂಬಂಧಗಳ ವಿಸ್ತರಣೆ*

ಇದರ ಜೊತೆಗೆ ಉಭಯ ದೇಶಗಳು ಇತರ ಕ್ಷೇತ್ರಗಳಲ್ಲೂ ಸಂಬಂಧಗಳ ವಿಸ್ತರಣೆ ಮತ್ತು ವಿಜ್ಞಾನ, ತಂತ್ರಜ್ಞಾನ, ಶಿಕ್ಷಣ, ಕಲೆ, ಕ್ರೀಡೆ ಮುಂತಾದ ರಂಗಗಳಲ್ಲೂ ಹೆಚ್ಚಿನ ವಿನಿಮಯಕ್ಕೂ ಒಪ್ಪಿದವು. ಆದಾಗ್ಯೂ ನವದೆಹಲಿ-ಪೀಕಿಂಗ್ ಸಂಬಂಧಗಳು ಪರಿಮಿತಗಳಿಂದ ವಿಶಿಷ್ಟವಾಗಿದ್ದವು.

### *147.9.2 1981 ರ ಒಪ್ಪಂದ ಮತ್ತು ನಂತರ*

ಮಾತುಕತೆಗಳಲ್ಲಿ ಭಾರತ ಆಗಿಂದಾಗ್ಗೆ ಚೀನ ತನ್ನ ಪ್ರದೇಶಗಲನ್ನು ಕಾನೂನು ಬಾಹಿರವಾಗಿ ಆಕ್ರಮಿಸಿಕೊಂಡಿದೆಯೆಂದು ತನ್ನ ನಿಲುವನ್ನು ಪುನರುಚ್ಚರಿಸಿತು. ಕೆಲವು ವೇಳೆ ಆಂತರಿಕ ಪರಿಸ್ಥಿತಿಯಿಂದಾಗಿ ಸರ್ಕಾರ ಹಾಗೆ ಮಾಡಬೇಕಾಯಿತು. ಕಾರಕೊರಂ ಹೆದ್ದಾರಿಯಲ್ಲಿ ಖುಂಜೆರಾಬ್ ಕಣಿವೆಯನ್ನು ತೆರೆಯುವ ಬಗ್ಗೆ ಚೀನಾ ಮತ್ತು ಪಾಕಿಸ್ಥಾನಗಳ ಮಾಡಿಕೊಳ್ಳಲಾದ ವಿರುದ್ಧವಾಗಿಯೂ ಭಾರತ - ಚೀನಾಕ್ಕೆ ಪ್ರತಿಭಟನೆಯನ್ನು ವ್ಯಕ್ತಪಡಿಸಿತು. ಆಗಸ್ಟ್ 22, 1987 ರಲ್ಲಿ ಸಹಿ ಮಾಡಲಾದ ಈ ಪಾಕ್ ಆಕ್ರಮಿತ ಕಾಶ್ಮೀರದ ಹಾದಿಯಲ್ಲಿ ಗಡಿಠಾಣೆಗಳನ್ನು ಸ್ಥಾಪಿಸಲು ಅವಕಾಶ ಕಲ್ಪಿಸಿತು.

ಎರಡೂ ಕಡೆಗಳ ಅಧಿಕಾರಿಗಳ ನಡುವೆ ಆರು ಸುತ್ತಿನ ಮಾತುಕತೆಗಳು ನಡೆದವು. ಕಡೆಯ ಸುತ್ತಿನ ಮಾತುಕತೆ ಡಿಸೆಂಬರ್ 1985 ರಲ್ಲಿ ಯಾವುದೇ ಮಹತ್ವದ ನಿರ್ಧಾರವಿಲ್ಲದೆ ಕೊನೆಗೊಂಡಿತು. ಸಂಬಂಧಗಳ ಸುಧಾರಣೆ ಮುಂದುವರಿಯಿತಾದರೂ ಭಾರತದ ಮೂಲಭೂತ ಸಮಸ್ಯೆಯಾದ ಗಡಿ ಪ್ರಶ್ನೆಗೆ ಹತ್ತಿರದ ಪರಿಹಾರವಿರಲಿಲ್ಲ. ಉಭಯ ಪಕ್ಷಗಳು ಗಡಿಯ ಮೇಲಿನ ಮಾತುಕತೆಗಳಿಗೆ ರೂಪುರೇಖೆಗಳನ್ನು ರೂಪಿಸಲು ಒಪ್ಪಿದವು. ಆದರೆ ಅಸ್ತಿತ್ವದ ಸಮಸ್ಯೆಯ ಬಗ್ಗೆಯೇ ಅವು ಹಿಂದಿನಂತೆಯೇ ದೂರವುಳಿದವು. ಚೀನ ತನಗೆ ಬೇಕಾದುದೆಲ್ಲವನ್ನು ಪಡೆದಿತ್ತು. ಆದರೆ ಭಾರತ ನಷ್ಟ ಹೊಂದಿದ ಮತ್ತು ತೊಂದರೆಗೊಳಗಾದ ಪಕ್ಷವಾಗಿತ್ತು. ಸ್ವಾಭಾವಿಕವಾಗಿಯೇ ತನಗೆ ಗಣನೀಯ ರಿಯಾಯಿತಿಗಳನ್ನು ನೀಡಲು ಯಾವ ಒತ್ತಡವೂ ಇಲ್ಲವೆಂದು ಭಾವಿಸಿತು. ಚೀನೀಯರು ಇಡೀ ಸಮಸ್ಯೆಯನ್ನು ಬಚ್ಚಿಡಲು ಬಯಸಿದ್ದರೂ ಭಾರತದ ಒತ್ತಡದಿಂದ ಹುವಾನ್ ಹೂವಾನ ಭೇಟಿಯ ಕಾಲದಲ್ಲಿ ಅದನ್ನು ದ್ವಿಪಕ್ಷೀಯ ಮಾತುಕತೆಯ ಕಾರ್ಯಸೂಚಿಯಲ್ಲಿ ಸೇರಿಸಲು ಒಪ್ಪಿದರು. ಆದರೆ ಅವರು ಸಮಸ್ಯೆ ಬೇಗನೆ ಬಗೆಹರಿಯಬಹುದೆಂಬ ಯಾವುದೇ ಭ್ರಮೆಗೆ ಸಮರ್ಥನೆಯನ್ನು ನೀಡಲಿಲ್ಲ. ಅಕ್ಟೋಬರ್ 1982 ರಲ್ಲಿ ಚೀನ ಗಡಿ ಸಮಸ್ಯೆಯನ್ನು ಹಿಮದ ಮೇಲಿರಿಸಿ ಸಂಬಂಧಗಳ ಸುಧಾರಣೆಗಳ ಬಗ್ಗೆ ಕೇಂದ್ರೀಕರಿಸುವುದೇ ಉತ್ತಮವೆಂದು ಅಭಿಪ್ರಾಯಪಟ್ಟಿತು. ಚೀನಾ ಮತ್ತು ಭಾರತಗಳ ನಡುವೆ ಸಮಸ್ಯೆಯ ಬಗ್ಗೆ ಯಾವುದೇ ತಕ್ಷಣದ ಒಪ್ಪಂದವನ್ನು ನಿರೀಕ್ಷಿಸಬಾರದೆಂದು ಚೀನಾ ಸ್ಪಷ್ಟಪಡಿಸಿತು.

ಇದು ಸಂಬಂಧ ಸುಧಾರಣೆ ಮತ್ತು ಸಂಪರ್ಕಗಳ ವಿಸ್ತರಣೆಯಲ್ಲಿ ಅಡ್ಡಿಯಾಗದೆಂದು ಚೀನಿಯರು ಆಗಿಂದಾಗ್ಗೆ ತಿಳಿಸಿದರು. ವಾಸ್ತವವಾಗಿ ಸಂಪರ್ಕಗಳು ಗಣನೀಯವಾಗಿ ವಿಸ್ತರಿಸಿದವು. ವಿಜ್ಞಾನಿಗಳ, ಅರ್ಥಶಾಸ್ತ್ರಜ್ಞರ, ಕೃಷಿತಜ್ಞರ, ಇತಿಹಾಸಕಾರರ, ಸಮಾಜಶಾಸ್ತ್ರಜ್ಞರ, ಪತ್ರಿಕೋದ್ಯಮಿಗಳ, ಭಾಷಾ ತಜ್ಞರ ಮತ್ತು ಸಾಹಿತಿಗಳ ಹಾಗೂ ಇತರರ ಭೇಟಿಯ ವಿನಿಮಯವೂ ನಡೆಯಿತು. ವಿದ್ಯಾರ್ಥಿಗಳ ಕಾರ್ಯಕ್ರಮಗಳ ಮಾದರಿ ವಿನಿಮಯವೂ ನಡೆಯಿತು ಮತ್ತು ಸುಮಾರು ಮೂವತ್ತು ವರ್ಷಗಳ ವಿರಾಮದ ನಂತರ ಪೀಕಿಂಗ್‌ನಲ್ಲಿ ವ್ಯಾಪಾರ ಒಪ್ಪಂದಕ್ಕೆ (15, ಆಗಸ್ಟ್ 1984) ಸಹಿ ಹಾಕಲಾಯಿತು. ಆದಾಗ್ಯೂ ನಿಜವಾದ ವ್ಯಾಪಾರ ಅತ್ಯಂತ ಕಡಿಮೆ ಇದೆ. ವಾಸ್ತವವಾಗಿ ಕಡೆಯ ಸುತ್ತಿನ ಮಾತುಕತೆಗಳಲ್ಲಿ ಭಾರತದ ಪಕ್ಷ ಅಪಾರ ಪ್ರಮಾಣದ ಶೈಕ್ಷಣಿಕ ಅಂತಹ ಸಲಹೆ ಮಾಡಿತು.

## 147.10 ಅಂತರವನ್ನು ಇಳಿಸುವ ಕಡೆಗೆ

ಇತರ ಅನೇಕ ವಿಷಯಗಳಲ್ಲಿ ಭಾರತ ಮತ್ತು ಚೀನಾಗಳ ನಡುವೆ ಭಿನ್ನಾಭಿಪ್ರಾಯಗಳನ್ನು ಕಡಿಮೆ ಮಾಡಲಾಗಿದ್ದರೂ, ಪೂರ್ಣವಾಗಿ ಬಗೆಹರಿಸಲು ಸಾಧ್ಯವಾಗಲಿಲ್ಲ. ಅವುಗಳಲ್ಲಿ ಕೆಲವು ಗಂಭೀರವಾಗಿಯೇ ಉಳಿದಿವೆ. ಅರಿವಿನ ಅಂತರ ದೊಡ್ಡದಾಗಿದ್ದು ನೋವಿನ ಮತ್ತು ಸುತ್ತುಬಳಸಿನ ಹಾದಿಯಿಂದ ಮಾತ್ರವೇ ಮಾತುಕತೆಯ ಸ್ಥಳವನ್ನು ತಲುಪಬಹುದಾಗಿದೆ. ಚೀನಾಕ್ಕೆ ಸಂಬಂಧ ಸುಧಾರಣೆ ಒಂದು ಭ್ರಮೆಯಾಗಿದೆ.

ಭಾರತವು ಸಂಬಂಧ ಸುಧಾರಣೆ, ಶಸ್ತ್ರಾಸ್ತ್ರ ಮಿತಿ, ಮತ್ತು ನಿಶ್ಶಸ್ತ್ರೀಕರಣಕ್ಕೆ ಬದ್ಧವಾಗಿದೆ. ಅಂತರ ರಾಷ್ಟ್ರೀಯವಾಗಿ ಅದರ ಪ್ರಮುಖ ಪ್ರಯತ್ನವು ಉದ್ವಿಘ್ನತೆಯನ್ನು ಕಡಿಮೆ ಮಾಡುವ ಮತ್ತು ಯುರೋಪಿನಿಂದ ಪ್ರಪಂಚದ ಇತರ ರಾಷ್ಟ್ರಗಳಿಗೆ ಸಂಬಂಧ ಸುಧಾರಣೆಯನ್ನು ವಿಸ್ತರಿಸುವ ಕಡೆಗೆ ತಿರುಗಿದೆ. ಅದು ಸೋವಿಯತ್ ಒಕ್ಕೂಟದ ಬಗ್ಗೆ ಚೀನಾದ ದೃಷ್ಟಿಯನ್ನು ತಿರಸ್ಕರಿಸಿದೆ ಮತ್ತು ಮಾಸ್ಕೋವನ್ನು ಸಮತೋಲನದಿಂದ ಶಾಂತಿಗೆ ಪ್ರಮುಖ ಅಂಶವೆಂದು ಪರಿಗಣಿಸಿದೆ. ಅದು ಅಲಿಪ್ತ ರಾಷ್ಟ್ರಗಳು ಮತ್ತು ಅಭಿವೃದ್ಧಿಶೀಲ ರಾಷ್ಟ್ರಗಳ ಹಿತಗಳನ್ನು ಬಲಿಕೊಡದೆ, ರಾಜಕೀಯ ಪರಿಹಾರಗಳ ಹುಡುಕಾಟ ಮತ್ತು ವಿಶ್ವದ ವಿವಿಧ ಶಕ್ತಿಗಳು ಮತ್ತು ದೇಶಗಳ ನಡುವೆ ಸೌಹಾರ್ದದ ಸೇತುವೆಯನ್ನು ನಿರ್ಮಿಸುವ ಕಾರ್ಯದಲ್ಲಿ ಸಕ್ರಿಯವಾಗಿ ತೊಡಗಿದೆ.

ಅಂತರವು ಅನಾನುಕೂಲಕರವಾಗಿ ವಿಸ್ತಾರವಾಗಿದೆ. ಆದರೆ ಚೀನಾ ವಿಶ್ವದ ಬಗ್ಗೆ ಮತ್ತು ಎರಡು ಬೃಹತ್ ರಾಷ್ಟ್ರಗಳ ಬಗ್ಗೆ ಹೆಚ್ಚಿನ ವಿವೇಚನಾಯುಕ್ತ ಮತ್ತು ಸಮತೋಲನದ ದೃಷ್ಟಿಯ ಕಡೆಗೆ ಮುಂದುವರಿಯುತ್ತಿರುವುದರಿಂದ, ದೊಡ್ಡ ಬಿರುಕು ಸ್ವಲ್ಪಮಟ್ಟಿಗೆ ಕಡಿಮೆಯಾಗಿದೆ. ಸಂಬಂಧ ಸುಧಾರಣೆಗೆ ಚೀನ ತನ್ನ ಮಾಗ್ದಾಳಿಯ ವಿರೋಧವನ್ನು ತ್ಯಜಿಸಿದೆ. ಅಂತೆಯೇ ಸೋವಿಯತ್ ಒಕ್ಕೂಟದ ವಿರುದ್ಧ ವಿಶ್ವವ್ಯಾಪಿ ಸಂಯುಕ್ತ ರಂಗದ ಕೂಗನ್ನು ನಿಲ್ಲಿಸಿದೆ. ಇಂದು ಚೀನ-ಸೋವಿಯತ್ ವಿನಿಮಯಗಳು ಭಾರತ ಮತ್ತು ಚೀನಾಗಳ ನಡುವಿನ ವಿನಿಮಯಗಳಿಗಿಂತಲೂ ಹೆಚ್ಚಿನ ಸಂಖ್ಯೆಯಲ್ಲಿವೆ.

### *147.10.1 ಅಡೆತಡೆ*

ಚೀನ-ಭಾರತಗಳ ಸಂಬಂಧಗಳನ್ನು ಸಹಜ ಸ್ಥಿತಿಗೆ ತರುವಲ್ಲಿ ಸೋವಿಯತ್ ಒಕ್ಕೂಟದೊಂದಿಗೆ ಭಾರತದ ಸಂಪರ್ಕಗಳು ಪ್ರಮುಖ ತಡೆಯೆಂದೆ ವಾದಿಸುವವರು. ಘಟನೆಗಳಿಂದ ಚಕಿತರಾಗಿದ್ದಾರೆ. ಇದಕ್ಕೆ ಯಾವುದೇ ದೇಶಗಳಿಗಿಂತಲೂ ಪಾಕಿಸ್ಥಾನಕ್ಕೆ ಚೀನಾದ ಬದ್ಧತೆ ಗಾಢವಾದೂದೂ ಮತ್ತು ಮೂಲಭೂತವಾದುದಾಗಿದೆ. ಸಮಕಾಲೀನ ಇತಿಹಾಸದಲ್ಲಿ ಅಣ್ವಸ್ತ್ರ ಕ್ಷೇತ್ರದಲ್ಲಿ ಕೆಲವೇ ದೇಶಗಳು ಮತ್ತೊಂದು ದೇಶಕ್ಕೆ ನೆರವನ್ನು ನೀಡಿದೆ. ಅಂತಹ ಕೇವಲ ಮೂರು ಉದಾಹರಣೆಗಳಿವೆ. ಮೊದಲನೆಯದು, ಅಮೇರಿಕಾ ಮತ್ತು ಬ್ರಿಟನ್‌ಗಳ ನಡುವಿನದು ಎರಡನೆಯದು ಚೀನಾಕ್ಕೆ ಸೋವಿಯತ್ ಒಕ್ಕೂಟದ ನೆರವು. ಮೂರನೆಯ ಉದಾಹರಣೆಯೆಂದರೆ ಪಾಕಿಸ್ಥಾನದ ಅಣ್ವಸ್ತ್ರ ಸಾಮರ್ಥ್ಯವನ್ನು ಪಡೆಯುವ ದಾಹಕ್ಕೆ ಚೀನಾದ ನೆರವು. ಈ ವಿಷಯದಲ್ಲಿ ನೀಡಲಾಗಿರುವ ನೆರವಿನ ನಿರ್ದಿಷ್ಟ ರೂಪ ಮತ್ತು ಪ್ರಮಾಣದ ಬಗ್ಗೆ ತಿಳಿದಿಲ್ಲ. ಆದರೆ ಅಣ್ವಸ್ತ್ರ ಸಾಮರ್ಥ್ಯವನ್ನು ಪಡೆಯುವ ಪಾಕಿಸ್ಥಾನದ ಸಾಧನೆಯಲ್ಲಿ ಚೀನಾದ ನೆರವು ನಿರ್ಣಯಾತ್ಮಕವಾದುದೆಂದು ನಂಬಲು ಅಮೇರಿಕಾ ಸಾಕಷ್ಟು ಪುರಾವೆಯನ್ನು ಒದಗಿಸಿದೆ.

### *147.10.2 ದಕ್ಷಿಣ ಏಷ್ಯಾದ ರಂಗಭೂಮಿ*

ಎರಡು ದೇಶಗಳ ನಡುವೆ ಇರುವ ಮತ್ತೊಂದು ಪ್ರಮುಖಅಡ್ಡ ಗೋಡೆಯೆಂದರೆ ದಕ್ಷಿಣ ಏಷ್ಯಾದಲ್ಲಿ ಅವುಗಳ ಪಾತ್ರ ಮತ್ತು ಹಿತಾಸಕ್ತಿಗಳ ಪರಿಕಲ್ಪನೆ. ಸ್ವಾತಂತ್ರ್ಯದ ಕಾಲದಿಂದ ಭಾರತವು ಈ ಪ್ರದೇಶದಲ್ಲಿ ವಿದೇಶೀಯರ ಪಾತ್ರ ಮತ್ತು ಮಧ್ಯ ಪ್ರವೇಶವನ್ನು ತೊಡೆದು ಹಾಕುವ ಪ್ರಯತ್ನದಲ್ಲಿ ನಿರತವಾಗಿದೆ. ಈ ಪ್ರದೇಶದಲ್ಲಿ ಚೀನಾ ಉಪಸ್ಥಿತಿಯನ್ನು ಪ್ರಮುಖವಾಗಿ ನೆಲೆಗೊಳಿಸಲು ಸಾಧ್ಯವಾಗುವಂತೆ ಪೀಕಿಂಗ್‌ನ ನೀತಿಗಳನ್ನು ರೂಪಿಸಲಾಗಿದೆ. ದಕ್ಷಿಣ ಏಷ್ಯಾದ ರಾಷ್ಟ್ರಗಳೊಂದಿಗೆ ಚೀನಾದ ಸಂಬಂಧಗಳು ಬೆಳವಣಿಗೆಯನ್ನು ಭಾರತದ ವಿರುದ್ಧ ಗುರಿ ಮಾಡಲಾಗಿದೆ. 50 ರ ದಶಕದ ಕಡೆಯ ಭಾಗದಿಂದ 70 ರ ದಶಕದ ಕಡೆಯ ಭಾಗದವರೆಗೆ ಚೀನಾ ದಕ್ಷಿಣ ಏಷ್ಯಾದಲ್ಲಿ ಭಾರತದ ನೆರೆಹೊರೆಯ ದೇಶಗಳು ನವದೆಹಲಿಯ ಬಗ್ಗೆ ಹಗೆತನದ ನಿಲುವನ್ನು ಅಳವಡಿಸಿಕೊಳ್ಳುವಂತೆ ಪ್ರೋತ್ಸಾಹಿಸಿತು.

## 147.11 ದೃಷ್ಟಿಕೋನದ ಬದಲಾವಣೆ (ಬದಲಾದ ಧೋರಣೆ)

ಇದರ ಹೊರತಾಗಿಯೂ ಕಳೆದ ಕೆಲವು ವರ್ಷಗಳಿಂದ ಬದಲಾವಣೆಯನ್ನು ಕಾಣಬಹುದಾಗಿದೆ. ಈಗ ಪೀಕಿಂಗ್ ದಕ್ಷಿಣ ಏಷ್ಯಾದಲ್ಲಿ ಭಾರತದ 'ವಿಸ್ತರಣಾಷಾಹಿ' ಯ ಬಗ್ಗೆ ತನ್ನ ದಾಳಿಯ ತೀವ್ರತೆಯನ್ನು ಕಡಿಮೆ ಮಾಡಿದೆ. ಈ ಭಾಗದಲ್ಲಿ ಚೀನಾದ ಸಂಬಂಧಗಳ ಸಾಮಾನ್ಯ ಉದ್ದೇಶವು ಭಾರತ ವಿರೋಧಿ ನೀತಿಯಿಂದ ದೂರ ಉಳಿದಿದೆ.

ಆದಾಗ್ಯೂ ಸಕಾರಾತ್ಮಕವಾಗಿ ಕೆಲವು ಸಾಮಾನ್ಯ ಅನುಸರಣಾ ವಿಧಾನಗಳನ್ನು ಗುರುತಿಸಬಹುದು. 'ತೃತೀಯ ಜಗತ್ತಿನ' ಅನೇಕ ಸಮಸ್ಯೆಗಳಲ್ಲಿ ಎರಡು ದೇಶಗಳು ಅಭಿವೃದ್ಧಿಶೀಲ ರಾಷ್ಟ್ರಗಳು ಒಟ್ಟಾಗಿ ತೆಗೆದುಕೊಂಡ ನಿರ್ಣಯಗಳನ್ನು ಬೆಂಬಲಿಸುವ ಸಾಮಾನ್ಯ ನಿಲುವನ್ನು ಅಂಗೀಕರಿಸಿದೆ. ಭಾರತದ ಅಲಿಪ್ತತೆಯ ಸೋವಿಯತ್ ವಿರೋಧಿ ದೇಶಗಳ ಕಡೆಗೆ ಹೊರಳುವ ಚೀನಾದ ಕ್ರಮದ ಹೊರತಾಗಿಯೂ ಒಂದು ಸಾಮಾನ್ಯ ಭೇಟಿಯ ನೆಲೆಯ ಹುಡುಕಾಟವನ್ನು ಪ್ರೋತ್ಸಾಹಿಸುತ್ತದೆ. ಉಭಯ ದೇಶಗಳೂ ತಮ್ಮನ್ನು ವಿಶ್ವದ ವ್ಯವಹಾರಗಳಲ್ಲಿ ಭಾಗವಹಿಸುವ ಹಕ್ಕುಳ್ಳ ಸ್ವತಂತ್ರ ರಾಷ್ಟ್ರಗಳೆಂದು ಪರಿಗಣಿಸಿದೆ. ಆದಾಗ್ಯೂ, ನಿರಂತರವಾದ ಮತ್ತು ಸಹನೆಯ ರಾಜತಂತ್ರ ನೈಪುಣ್ಯತೆ ಅವುಗಳ ನಡುವೆ ನಿಜವಾಗಿಯೂ ಸಂಬಂಧ ಸುಧಾರಣೆಗೆ, ಕನಿಷ್ಠ ನಿಯಮಿತವಾದ ರಾಜಕೀಯ ನಂಬಿಕೆ ಹಾಗೂ ದಕ್ಷಿಣ ಏಷ್ಯ, ಆಗ್ನೇಯ ಏಷ್ಯ ಮತ್ತು ಪಶ್ಚಿಮ ಏಷ್ಯಗಳ ಬಗ್ಗೆ ದ್ವಿಪಕ್ಷೀಯವಾಗಿ

ನವದೆಹಲಿ ಮತ್ತು ಪೀಕಿಂಗ್‌ಗಳು ಸದ್ಯದಲ್ಲಿ ಗಡಿ ಸಮಸ್ಯೆಯ ಬಗ್ಗೆ ಮಾತ್ರವೇ ಗಂಭೀರವಾದ ಮಾತುಕತೆಯಲ್ಲಿ ತೊಡಗಿವೆ. ದೀರ್ಘವಾದ ಮತ್ತು ನಿಷ್ಠುರವಾದ ಮಾತುಕತೆಗಳು (ಚರ್ಚೆ) ನಡೆಯಬೇಕಾಗಿದೆ. ಅಂತರರಾಷ್ಟ್ರೀಯ ವಾತಾವರಣ ಮತ್ತು ಈ ಪ್ರದೇಶದಲ್ಲಿ ಉಲ್ಬಣಗೊಂಡಿರುವ ಸಮಸ್ಯೆಗಳು ಅವುಗಳ ಮೇಲೆ ಮೋಡದ ಶೇಖರಣೆಯಿಂದ ಪ್ರಭಾವ ಬೀರಬಹುದು. ಹಗೆತನದಿಂದ ಕೂಡಿರುವ ಅಂತರರಾಷ್ಟ್ರೀಯ ವಾತಾವರಣದಿಂದ ಸಂಬಂಧಗಳು ಮತ್ತೊಮ್ಮೆ ಹಾಳಾಗದಂತೆ ತಡೆಯಲು ಎರಡೂ ಕಡೆಗಳಿಂದ ಉನ್ನತ ದರ್ಜೆಯ ನಾಯಕತ್ವದ ಅಗತ್ಯವಿದೆ. ಅಂತಿಮವಾಗಿ ಸಮಸ್ಯೆಗಳ ಇತ್ಯರ್ಥಕ್ಕೆ ಒಂದು ರಾಜಕೀಯ ಆಧಾರವನ್ನು ಕಂಡುಹಿಡಿಯಬೇಕಾಗಿದೆ. ಎರಡೂ ರಾಷ್ಟ್ರಗಳು ರಾಷ್ಟ್ರೀಯ ಹಿತಾಸಕ್ತಿಗಳನ್ನು ಸಮರ್ಥಿಸುವ ಒಂದು ಒಪ್ಪಬಹುದಾದ ಪರಿಹಾರೋಪಾಯವನ್ನು ಕಂಡುಕೊಳ್ಳಲು ಸಾಧ್ಯವೇ ಎಂಬುದು ನಿರ್ಣಾಯಕ ಪ್ರಶ್ನೆಯಾಗಿದೆ. ತಾಂತ್ರಿಕವಾಗಿ ಗಡಿಯ ಜೊತೆಗೆ ಅನೇಕ ಸಮಸ್ಯೆಗಳು ಅಂತಹ ಒಡಂಬಡಿಕೆಯಲ್ಲಿ ಸೇರಿರಬೇಕು. ಕಾಶ್ಮೀರದಲ್ಲಿ ನಮ್ಮ ಸ್ಥಾನ. ಈ ವಿಷಯದಲ್ಲಿ ಪಾಕಿಸ್ಥಾನದ ಹಾಗೂ ಚೀನಾದ ಬದ್ಧತೆ, ಕಾರಕೊರಂ ಹೆದ್ದಾರಿ, ಭಾರತದೊಂದಿಗೆ ವಿಶೇಷ ಸಂಬಂಧ, ದಕ್ಷಿಣ ರಷ್ಯಾ ಮತ್ತು ಆಗ್ನೇಯ ಏಷ್ಯಕ್ಕೂ ಅವುಗಳ ನಿಲುವು .

ಭಾರತ ಮತ್ತು ಚೀನಾಗಳೆರಡು ತಮ್ಮ ಭೌಗೋಳಿಕ ರಚನೆಯ ಮೇಲೆ ತಮ್ಮ ಬೆನ್ನು ತಿರುಗಿಸಲು ಸಾಧ್ಯವಿಲ್ಲವೆಂದು ಹೇಳಬಹುದಾಗಿದೆ. ಅವುಗಳು ನೆರೆಹೊರೆಯವರ ಬೃಹತ್ ರಾಷ್ಟ್ರಗಳು ವಿಶಾಲ ಭೂಭಾಗಗಳನ್ನು ಪ್ರಾಚೀನ ನಾಗರೀಕತೆ, ಆಧುನಿಕ, ಸ್ವತಂತ್ರ, ರಾಷ್ಟ್ರೀಯ ದೇಶಗಳು ಅವುಗಳು ಒಂದಾಗಿ ಬಾಳಬೇಕು ಮತ್ತು ಬಾಳಲು ಕಲಿಯಬೇಕು.

1) ಏಷ್ಯಾದ ಎರಡು ದೈತ್ಯಗಳಾದ ಚೀನಾ ಮತ್ತು ಭಾರತಗಳು ಚೀನಿಯರು ಭಾರತದ ಗಡಿ ಪ್ರದೇಶಗಳನ್ನು ಅಕ್ರಮವಾಗಿ ವಶಪಡಿಸಿಕೊಂಡಂದಿನಿಂದಲೂ ಪರಸ್ಪರ ವಿರುದ್ಧವಾಗಿದ್ದವು.

2) ನೆಹರು ಕಾಲದಲ್ಲಿ ಭಾರತದ ಪ್ರಯತ್ನಗಳು ಭಾರೀ ನಿರಾಶೆಯಲ್ಲಿ ಕೊನೆಗೊಂಡು 1962 ರ ಯುದ್ಧಕ್ಕೆ ಕಾರಣವಾಯಿತು. ತಕ್ಷಣವೇ ಚೀನ ಅವಹೇಳನಕಾರಿ ಪ್ರಚಾರದಲ್ಲಿ ತೊಡಗಿ ಅನೇಕ ವರ್ಷಗಳವರೆಗೆ ಪರಸ್ಪರ ಹಗೆತನವನ್ನು

3) ಅನೇಕ ಸಮಸ್ಯೆಗಳಲ್ಲಿ ಚೀನಾದ ಭಾರತ ವಿರೋಧಿ ನಿಲುವು (ಪಾಕಿಸ್ಥಾನ, ಸಿಕ್ಕಿಂ, ಟಿಬೆಟ್ ಮತ್ತು ಬಾಂಗ್ಲಾದೇಶದಂತಹ ಸಮಸ್ಯೆಗಳು) ಪರಿಸ್ಥಿತಿಯನ್ನು ಮತ್ತಷ್ಟು ಹದಗೆಡಿಸಿತು.

4) 1970 ರ ನಂತರ ಚೀನಾದ ಸಹಜವಾದ ಪ್ರತಿಕ್ರಿಯೆಯಿಂದಾಗಿ ಪೀಕಿಂಗ್ ಮತ್ತು ನವದೆಹಲಿಗಳ ನಡುವೆ ರಾಜತಾಂತ್ರಿಕ ಪ್ರಯತ್ನಗಳ ಮೂಲಕ ಸಂಬಂಧಗಳನ್ನು ಸಹಜ ಸ್ಥಿತಿಗೆ ತರುವ ಸಾಧ್ಯತೆಗಳನ್ನು ಕಂಡು ಹಿಡಿಯಲಾಯಿತು.

5) ಮಾವೋನ ಮರಣಾನಂತರ, 1977 ರಲ್ಲಿ ಆರ್ಥಿಕ ಒಪ್ಪಂದಗಳಿಗೆ ಸಹಿ ಹಾಕಲಾಯಿತು. 1981 ಮತ್ತು 1983 ರ ನಡುವೆ ಚೀನ-ಭಾರತ ಸಂಬಂಧ ಸುಧಾರಣೆಯ ಸಾಧ್ಯತೆಗಳು ಮತ್ತಷ್ಟು ಸುಧಾರಿಸಿದವು.

6) ಆದಾಗ್ಯೂ ಚೀನ-ಭಾರತ ಸಂಬಂಧಗಳನ್ನು ಸಹಜ ಸ್ಥಿತಿಗೆ ತರುವ ಪ್ರಕ್ರಿಯೆಯಲ್ಲಿ ಇನ್ನೂ ಕೆಲವು ತಡೆಗೋಡೆಗಳು ಇವೆ. ಪ್ರತಿಯೊಂದು ತನ್ನದೇ ಆದ ಹಾದಿಯಲ್ಲಿ ಅಂತರವನ್ನು ತಗ್ಗಿಸಲು ಉತ್ತಮ ಅರಿವು ಹಾಗೂ ಅವುಗಳ ನಡುವೆ ಇರುವ ದೀರ್ಘಕಾಲದ ಸಮಸ್ಯೆಗಳನ್ನು ಸೌಹಾರ್ದಯುತವಾಗಿ ಇತ್ಯರ್ಥಪಡಿಸಿಕೊಳ್ಳುವ ಸಾಧ್ಯತೆಗಳನ್ನು ಕಂಡುಕೊಳ್ಳಬೇಕಾಗಿದೆ.

## 147.13 ಮಾದರಿ ಪ್ರಶ್ನೆಗಳು

1. 1949 ರಿಂದ ಚೀನ-ಭಾರತದ ಸಂಬಂಧಗಳನ್ನು ವಿಮರ್ಷಿಸಿ.
2. ಚೀನ-ಭಾರತ ಸಂಬಂಧಗಳನ್ನೊಳಗೊಂಡ ಪ್ರಮುಖ ಸಮಸ್ಯೆಗಳನ್ನು ವಿವರಿಸಿ.
3. ಚೀನಾ ಮತ್ತು ಭಾರತಗಳ ನಡುವೆ ಸಂಬಂಧಗಳನ್ನು ಸಹಜಸ್ಥಿತಿಗೆ ತರಲು ಕೈಗೊಳ್ಳಲಾಗಿರುವ ಪ್ರಯತ್ನಗಳನ್ನು ವಿಮರ್ಶಾತ್ಮಕವಾಗಿ ಪರಿಶೀಲಿಸಿ.
4. ಚೀನ-ಭಾರತ ಸಂಬಂಧಗಳಲ್ಲಿರುವ ಪ್ರಮುಖ ಅಡೆತಡೆಗಳು ಯಾವುವು. ಅವುಗಳನ್ನು ಬಗೆಹರಿಸಲು ಮಾರ್ಗೋಪಾಯಗಳನ್ನು ಸೂಚಿಸಿ.
5. "ಕೆಂಪು ಚೀನಾದ ಕ್ರಾಂತಿ ಮತ್ತು ವಿಸ್ತರಣೆಯ ಸಿದ್ಧಾಂತವು ಚೀನ-ಭಾರತದ ಸಂಬಂಧಗಳಲ್ಲಿ ಭಿನ್ನಾಭಿಪ್ರಾಯದ ಕೇಂದ್ರ ಬಿಂದುವಾಗಿ ಉಳಿದಿದೆ" ಚರ್ಚಿಸಿ.

## 147.14 ಹೆಚ್ಚಿನ ಅಧ್ಯಯನಕ್ಕೆ ಗ್ರಂಥಗಳು


| | | | |
|---|---|---|---|
| 1. | B.N. Mulik | : | The Chinese Betrayal, 1971 |
| 2. | Devendra Kaushik | : | China and the Third World (1975) |
| 3. | Rowlond | : | A History of Since Indian Relation 1971 |
| 4. | R.S. Charan | : | Chinese Foreign Policy 1979. |



ಆದೇಶ ಸಂಖ್ಯೆ : ಕರಾಮುವಿ/ಅಸಾವಿ/4-060/2013-2014 ದಿನಾಂಕ : 24-09-2013
ಒಳಪುಟ : 60 GSM ವೆಸ್ಟ್‌ಕೋಸ್ಟ್ ಪೇಪರ್ ಮತ್ತು ಹೊರಪುಟ : 220 GSM ಆರ್ಟ್‌ಕಾರ್ಡ್
ಮುದ್ರಕರು : ಪೂರ್ಣಿಮಾ ಪ್ರಿಂಟರ್ಸ್, ಬೆಂಗಳೂರು. ಪ್ರತಿಗಳು : 5000

# Karnataka State Open University

**Mukthagangotri, Mysore - 570 006**

The Open University system has been initiated in order to augment opportunities for higher education and as an instrument of democratizing education.


*National Education Policy 1986*




♣ **REGIONAL CENTRES**

Bangalore
Davanagere
Gulbarga
Dharwad
Shimoga
Mangalore
Tumkur
Hassan
Chamarajanagar
Bellary
Mandya
Kolar
Bijapur
Belagaum
Ramanagar
Bangalore (another one)
Chikmagalur
Udupi
Karwar
Bidar
Mysore

| | | |
|---|---|---|
| ● | **HEAD QUARTERS** | |
| ★ | **Total Study Centres :** | **123** |
| ♣ | **Regional Centres :** | **21** |
| ❄ | **B.Ed Study Centres :** | **10** |
| ✦ | **M.Ed Study Centres :** | **06** |


Multimedia learning material
STUDENT
INSTRUCTIONAL SYSTEM